ಮಂಗಳೂರು

ಮಂಗಳವಾರ, 5 ಮೇ 2026

ಸಂಪುಟ 48, ಸಂಚಿಕೆ 47 ಪುಟಗಳು 14+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕೇರಳ ವಿಧಾನಸಭೆಗೆ ಈ ಬಾರಿ ಮೂವರು ಬಿಜೆಪಿ ಶಾಸಕರ ಪ್ರವೇಶ

ಬಿಜೆಪಿ ದೊಡ್ಡ ಹೆಜ್ಜೆ

ತಿರುವನಂತಪುರಂ: ಕೇರಳ ವಿಧಾನಸಭೆಗೆ ಇದೇ ಮೊದಲ ಬಾರಿಗೆ ಮೂವರು ಬಿಜೆಪಿ ಶಾಸಕರ ಪ್ರವೇಶವಾಗಲಿದ್ದು, ಪಕ್ಷದ ಪಾಲಿಗೆ ಇದೊಂದು ಐತಿಹಾಸಿಕ ಸಾಧನೆಯಾಗಿದೆ.ಕೇರಳದ ಮಾಧ್ಯಮ ವರ್ಗ ಮತ್ತು ವಿರೋಧಿ ಪಕ್ಷಗಳು ಬಿಜೆಪಿ ಕೇರಳದಲ್ಲಿ ಎಂದೂ ಒಂದು ಶಕ್ತಿಯಾಗಿ ಮೂಡಿಬರಲು ಸಾಧ್ಯವೇ ಇಲ್ಲ ಎಂದು ಸತತವಾಗಿ ಬಿಂಬಿಸುತ್ತಾ ಬಂದ ಹೊರತಾಗಿಯೂ ಬಿಜೆಪಿ ಈ ಬಾರಿ ಹಲವು ಕ್ಷೇತ್ರಗಳಲ್ಲಿ ಪ್ರಬಲ ಸ್ಪರ್ಧೆ ಒಡ್ಡಿ, ಮೂವರು ಅಭ್ಯರ್ಥಿಗಳನ್ನು ಗೆಲ್ಲಿಸಿ ವಿಧಾನಸಭೆಗೆ ಕಳುಹಿಸಲು ಶಕ್ತವಾಗಿರುವುದು ಪಕ್ಷದ ಪಾಲಿಗೆ ಭವಿಷ್ಯದ ದಿಕ್ಸೂಚಕವಾಗಿದೆ.

2016ರಲ್ಲಿ ನೇಮಮ್ ಕ್ಷೇತ್ರದಿಂದ ಹಿರಿಯ ನಾಯಕ ಓ.ರಾಜಗೋಪಾಲ್ ಅವರು ಆಯ್ಕೆಯಾಗಿ ಪ್ರಥಮ ಬಾರಿಗೆ ವಿಧಾನಸಭೆಗೆ ಪ್ರವೇಶಗೈದರೂ,2021ರ ಚುನಾವಣೆಯಲ್ಲಿ ಸೋಲುಣ್ಣಬೇಕಾಗಿ ಬಂದಿತ್ತು.ಆದರೆ ಈ ಬಾರಿ ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ನೇತೃತ್ವದಲ್ಲಿ ಎಲ್ಲ ಪ್ರತಿಕೂಲ ಸವಾಲುಗಳನ್ನು ಎದುರಿಸಿ ಬಿಜೆಪಿ ಕೇರಳದಲ್ಲಿ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿದೆ.

ಇತ್ತೀಚಿನ ಸ್ಥಳೀಯ ಚುನಾವಣೆಗಳಲ್ಲಿ ತಿರುವನಂತಪುರಂ ಮಹಾನಗರ ಪಾಲಿಕೆಯಲ್ಲಿ ಏಕಾಂಗಿಯಾಗಿ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳನ್ನು ಎದುರಿಸಿ ಅಧಿಕಾರಕ್ಕೆ ಬರುವ ಮೂಲಕ ಇತಿಹಾಸ ನಿರ್ಮಿಸಿದ್ದ ಬಿಜೆಪಿ ಈಗ ಇನ್ನೊಂದು ದೊಡ್ಡ ಹೆಜ್ಜೆ ಇಟ್ಟಿದೆ.

ಇದೀಗ ನೇಮಮ್ ಕ್ಷೇತ್ರದಿಂದ ಪಕ್ಷದ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಅವರು ಸಚಿವ ವಿ.ಶಿವನ್‌ಕುಟ್ಟಿ ಅವರನ್ನು 4,978ಮತಗಳ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ. ಅತ್ತ ಕಳಕೂಟಮ್ ಕ್ಷೇತ್ರದಿಂದ ಮಾಜಿ ಕೇಂದ್ರ ಸಚಿವ ವಿ.ಮುರಳೀಧರನ್ ಅವರು ಇನ್ನೊಬ್ಬ ಪ್ರಮುಖ ಸಿಪಿಎಂ ನಾಯಕ ಕಡಕಂಪಳ್ಳಿ ಸುರೇಂದ್ರನ್ ಅವರನ್ನು ತೀವ್ರ ಸ್ಪರ್ಧೆಯ ಮೂಲಕ 428 ಮತಗಳಿಂದ ಸೋಲಿಸಿ ಆಯ್ಕೆಯಾಗಿದ್ದಾರೆ. ಚಾತನ್ನೂರ್‌ನಲ್ಲಿ ಬಿಜೆಪಿ ನಾಯಕ ಬಿ.ಬಿ.ಗೋಪಕುಮಾರ್ ಅವರು ಎಲ್‌ಡಿಎಫ್‌ನ ಆರ್.ರಾಜೇಂದ್ರನ್ ಅವರನ್ನು 4,398ಮತಗಳ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ. ಈ ಗೆಲುವಿನ ಮೂಲಕ, ಬಿಜೆಪಿ ಕೇರಳದಲ್ಲಿ ಒಂದು ಸ್ಥಾನವನ್ನೂ ಗೆಲ್ಲಲು ಬಿಡಲಾರೆವು ಎಂಬ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಸಿಪಿಎಂ ನೇತೃತ್ವದ ಎಲ್‌ಡಿಎಫ್ ನಾಯಕರ ಘೋಷಣೆಗೆ ಪಕ್ಷ ಉತ್ತರ ನೀಡಿದಂತಾಗಿದೆ.



ಬಿಜೆಪಿ ಕಾರ್ಯಕರ್ತರ ತ್ಯಾಗ, ಪರಿಶ್ರಮದ ಫಲ

ಈ ಬಾರಿಯ ಕೇರಳ ಚುನಾವಣೆ ಸಿಪಿಎಂ ನೇತೃತ್ವದ ಎಡರಂಗ ವಿರೋಧಿ ಚುನಾವಣೆಯಾಗಿದೆ.ಕೇರಳದ ಜನತೆ ಸಿಪಿಎಂ ಆಡಳಿತದ ಭ್ರಷ್ಟಾಚಾರ, ಶಬರಿಮಲೆ ಚಿನ್ನ ಲೂಟಿಯಂತಹ ಪ್ರಕರಣಗಳಿಂದ ರೋಸಿಹೋಗಿದ್ದು , ಇದರ ಫಲ ಈ ಬಾರಿಯ ಫಲಿತಾಂಶವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.ಬಿಜೆಪಿ ಕಾರ್ಯಕರ್ತರ ತ್ಯಾಗ, ಹೋರಾಟ, ಪರಿಶ್ರಮದ ಫಲವಾಗಿ ಬಿಜೆಪಿ ಕೇರಳದಲ್ಲಿ ಪ್ರಬಲ ಶಕ್ತಿಯಾಗಿ ಮೂಡಿಬಂದಿದೆ ಎಂದು ಅವರು ಇಲ್ಲಿನ ಬಿಜೆಪಿ ಕೇಂದ್ರ ಕಾರ್ಯಾಲಯದಲ್ಲಿ ಪಕ್ಷೀಯರನ್ನುದ್ದೇಶಿಸಿ ನುಡಿದರು. ತಮಿಳ್ನಾಡು, ಪಶ್ಚಿಮ ಬಂಗಾಲ , ಅಸ್ಸಾಂ, ಪಾಂಡಿಚೇರಿ ಸೇರಿದಂತೆ ಎಲ್ಲೆಡೆ ಇಂಡಿಕೂಟದ ವಿರುದ್ಧ ಜನಾದೇಶ ವ್ಯಕ್ತವಾಗಿದೆ.ಕೇರಳದಲ್ಲಿ ಬಿಜೆಪಿ ಒಂದು ಸೀಟನ್ನೂ ಗೆಲ್ಲಲು ಸಾಧ್ಯವಿಲ್ಲ ಎಂಬುದಾಗಿ ಕಾಂಗ್ರೆಸ್ ಮತ್ತು ಸಿಪಿಎಂ ನಾಯಕರು ಹೇಳಿದ್ದರು. ಆದರೆ ಬಿಜೆಪಿ ಹಲವು ಕ್ಷೇತ್ರಗಳಲ್ಲಿ ತೀವ್ರ ಸ್ಪರ್ಧೆ ನೀಡಿ ದೊಡ್ಡ ಪ್ರಮಾಣದಲ್ಲಿ ಮತಗಳನ್ನು ಪಡೆಯುವ ಮೂಲಕ ಇದಕ್ಕೆ ಉತ್ತರ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ಕೇರಳದಲ್ಲಿ ಕಾಂಗ್ರೆಸ್ ಶೇ.28.79, ಸಿಪಿಎಂ ಶೇ.21.77, ಬಿಜೆಪಿ ಶೇ.11.42, ಐಯುಎಂಎಲ್ ಶೇ.11.01, ಸಿಪಿಐ ಶೇ.6.64ಮತಗಳನ್ನು ಗಳಿಸಿದ್ದು, ಹಿಂದಿನ ಚುನಾವಣೆಗಳಿಗೆ ಭಿನ್ನವಾಗಿ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಅನೇಕ ಕ್ಷೇತ್ರಗಳಲ್ಲಿ ಗಣನೀಯ ಪ್ರಮಾಣದ ಮತಗಳನ್ನು ಗಳಿಸಿ ಶಕ್ತಿಯುತ ಸ್ಪರ್ಧೆ ಒಡ್ಡಿರುವುದನ್ನು ರಾಜಕೀಯ ವಿಶ್ಲೇಷಕರು ಬೊಟ್ಟು ಮಾಡಿದ್ದಾರೆ.ಬಿಜೆಪಿ ನಾಯಕರಾದ ಶೋಭಾ ಸುರೇಂದ್ರನ್,ಮಂಜೇಶ್ವರದಲ್ಲಿ ಕೆ.ಸುರೇಂದ್ರನ್, ಕಾಸರಗೋಡಿನಲ್ಲಿ ಅಶ್ವಿನಿ ಪಜ್ವ, ತಿರುವನಂತಪುರಂನಲ್ಲಿ ಕರಮನ ಜಯನ್, ಶ್ರೀಲೇಖಾ, ಅನೂಪ್ ಆ್ಯಂಟನಿ (ತಿರುವಲ್ಲ), ಸಿ.ಸಿ.ಮುಕುಂದನ್ ಸೇರಿದಂತೆ ಅನೇಕ ಬಿಜೆಪಿ ಅಭ್ಯರ್ಥಿಗಳು ಪಡೆದ ಮತಗಳು ಗಮನ ಸೆಳೆದಿವೆ. ಕೇರಳದ ಬಹುತೇಕ ಜಿಲ್ಲೆಗಳಲ್ಲಿನ ಒಂದೆರಡು ವಿಧಾನಸಭಾ ಕ್ಷೇತ್ರಗಳಲ್ಲಾದರೂ ಬಿಜೆಪಿ ಬಲವಾದ ಸ್ಪರ್ಧೆ ನೀಡಿರುವುದು ಈ ಬಾರಿ ಎದ್ದು ಕಂಡಿರುವ ಬೆಳವಣಿಗೆಯಾಗಿದೆ.

ತಮಿಳು ಮತದಾರನ ಮೂರನೇ ಆಯ್ಕೆ!

ತಮಿಳುನಾಡಿನ ಮತ ಎಣಿಕೆ ಕೊಠಡಿಗಳಿಂದ ಸೋಮವಾರ ಹೊರಬಂದ ಸಂಖ್ಯೆಗಳು ಕೇವಲ ಒಂದು ಸರ್ಕಾರವನ್ನು ಬದಲಿಸುತ್ತಿಲ್ಲ, ಆರು ದಶಕಗಳಷ್ಟು ಹಳೆಯ ರಾಜಕೀಯ ವ್ಯಾಕರಣವನ್ನೇ ತಿದ್ದಿ ಬರೆದಿವೆ. ತಮಿಳಗ ವೆಟ್ರಿ ಕಳಗಂ(ಟಿವಿಕೆ) 106 ಕ್ಷೇತ್ರಗಳಲ್ಲಿ, ಎಐಎಡಿಎಂಕೆ 56 ಮತ್ತು ಡಿಎಂಕೆ 72 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ.

ವಿವರ ಪುಟ ೩


ಬಿ.ಸಿ. ರೋಡಿನಲ್ಲಿ


ಸುಳ್ಯದಲ್ಲಿ


ಬೆಳ್ತಂಗಡಿಯಲ್ಲಿ

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಜಯಭೇರಿ | ಚುರುಮುರಿ ಹಂಚಿ ಸಂಭ್ರಮಾಚರಣೆ

ದ.ಕ., ಉಡುಪಿ ಜಿಲ್ಲೆಗಳಲ್ಲಿ ವಿಜಯೋತ್ಸವ

ಮಂಗಳೂರು: ಪಂಚರಾಜ್ಯಗಳ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಬಿಜೆಪಿ ಗೆಲುವಿನ ಹಿನ್ನೆಲೆಯಲ್ಲಿ ನಗರದ ಪಿವಿಎಸ್ ವೃತ್ತ ಬಳಿಯ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಾಲಯದ ಮುಂಭಾಗ ಬಿಜೆಪಿ ಕಾರ್ಯಕರ್ತರು ಸೋಮವಾರ ವಿಜಯೋತ್ಸವ ನಡೆಸಿದರು.

ಪಶ್ಚಿಮ ಬಂಗಾಳದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರದ ಸಂದರ್ಭ ಜಲಮುರಿ ಅಂಗಡಿಗೆ ಭೇಟಿ ನೀಡಿ ಜಲಮುರಿ ಸವಿದಿರುವುದು ಚುನಾವಣಾ ಪ್ರಚಾರದಲ್ಲಿ ವ್ಯಾಪಕ ಜನಪ್ರಿಯತೆ ಗಳಿಸಿದ ಹಿನ್ನೆಲೆಯಲ್ಲಿ ಬಿಜೆಪಿ ವಿಜಯೋತ್ಸವ ಸಂದರ್ಭದಲ್ಲೂ ಕಾರ್ಯಕರ್ತರು ಚುರುಮುರಿ ಹಂಚಿ ಸಂಭ್ರಮಿಸಿದರು.

ಬಿಜೆಪಿಗೆ ಬಂಗಾಳ...ಮಮತಾ ದೀದಿ ಕಂಗಾಲು..., ಅಸ್ಸಾಂ, ಬಂಗಾಳ, ಪುದುಚೇರಿ.. ಬಿಜೆಪಿಗೆ ಜಯಭೇರಿ... ಮುಂತಾದ ಘೋಷಣೆಗಳನ್ನು ಕೂಗಿ ವಿಜಯೋತ್ಸವ ಆಚರಿಸಿದರು. ಮಹಿಳಾ ಕಾರ್ಯಕರ್ತರು ಕುಣಿದು ಸಂತಸ ಹಂಚಿಕೊಂಡರು. ಪಟಾಕಿ ಸಿಡಿಸಿ, ಸಿಹಿ ಹಂಚಿ ಪರಸ್ಪರ ಖುಷಿಪಟ್ಟರು.

ಈ ವೇಳೆ ಮಾತನಾಡಿದ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಹಿಂದು ವಿರೋಧಿ ವರ್ತನೆ ತೋರಿದವರಿಗೆ ಈ ಚುನಾವಣಾ ಫಲಿತಾಂಶದಲ್ಲಿ ಜನತೆ ತಕ್ಕ ಉತ್ತರ ನೀಡಿದ್ದಾರೆ. ಅಸ್ಸಾಂನಲ್ಲಿ ಬಿಜೆಪಿ ಮತ್ತೆ ಬಹುಮತ ಪಡೆದಿದೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಅವರ ನೇತೃತ್ವದಲ್ಲಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತಿದೆ. ಹಿಂದುತ್ವದ ವಿರುದ್ಧ ಅಧಿಕಾರ ಚಲಾಯಿಸಿದ್ದ ಮಮತಾ ಬ್ಯಾನರ್ಜಿ ಅವರ ಪಕ್ಷ ಸೋತಿದೆ. ತಮಿಳುನಾಡಿನಲ್ಲಿ ಹಿಂದುತ್ವದ ವಿರುದ್ಧ ಮಾತನಾಡುತ್ತಿದ್ದ ಸ್ಟಾಲಿನ್, ಉದಯನಿಧಿ ಸ್ಟಾಲಿನ್ ಅವರ ಸರಕಾರಕ್ಕೆ ಮತದಾರರು ಸರಿಯಾದ ಪಾಠ ಕಲಿಸಿದ್ದಾರೆ ಎಂದರು.

ಸಂಸದ ಬ್ರಿಜೇಶ್ ಚೌಟ ಮಾತನಾಡಿ, ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಗೆಲುವು ನಮ್ಮ ಸೈದ್ಧಾಂತಿಕ ನಿಲುವಿಗೆ ದೊರೆತ ಜನಮನ್ನಣೆಯಾಗಿದೆ. ಹಿಂದುತ್ವ, ಸನಾತನ ಧರ್ಮದ ವಿರುದ್ಧವಿದ್ದ ಟಿಎಂಸಿ ಮತ್ತು ಡಿಎಂಕೆ ಸೋತಿದೆ. ಬಿಜೆಪಿ ಜನಪರ ಪಕ್ಷ ಎಂಬುದು ಸಾಬೀತಾಗಿದೆ. ರಾಜ್ಯದ 2028ರ ಚುನಾವಣೆಗೆ ಈ ಗೆಲುವು ಶಕ್ತಿ ತುಂಬಲಿದೆ ಎಂದರು.

ಶಾಸಕ ವೇದವ್ಯಾಸ ಕಾಮತ್ ಮಾತನಾಡಿ, ಬಿಜೆಪಿ ಅಸ್ಸಾಂ, ಪುದುಚೇರಿ ಉಳಿಸಿಕೊಂಡು, ಪಶ್ಚಿಮ ಬಂಗಾಳದಲ್ಲಿ ಅಭೂತಪೂರ್ವ ಗೆಲುವು ಪಡೆದಿದೆ. ತಮಿಳುನಾಡಿನಲ್ಲಿ ಇಂಡಿ ಒಕ್ಕೂಟ ನೆಲಕಚ್ಚಿದೆ. ಮೋದಿ- ಅಮಿತ್ ಶಾ ಅವರ ನೇತೃತ್ವದಲ್ಲಿ ಪಕ್ಷದ ನಾಯಕರು, ಕಾರ್ಯಕರ್ತರ ಶ್ರಮದಿಂದ ಈ ಗೆಲುವು ಸಾಧ್ಯವಾಗಿದೆ. ಪ್ರಧಾನಿ ಅವರು ಜಲ್ ಮುರಿ ತಿಂದಿರುವುದನ್ನು ವಿರೋಧ ಪಕ್ಷಗಳು ಟೀಕೆ ಮಾಡಿದ್ದವು. ಈಗ ನಾವು ಚುರುಮುರಿ ತಿಂದು ವಿಜಯೋತ್ಸವ ಆಚರಿಸುತ್ತಿದ್ದೇವೆ ಎಂದರು.


ಮಂಗಳೂರಿನಲ್ಲಿ

ಹಿಂದೂ ವಿರೋಧಿಗಳಿಗೆ ತಕ್ಕ ಪಾಠ : ಸತೀಶ್ ಕುಂಪಲ

ಮಂಗಳೂರು: ಪಂಚರಾಜ್ಯಗಳ ಚುನಾವಣಾ ಫಲಿತಾಂಶಗಳು ದೇಶದ ರಾಜಕೀಯ ದಿಕ್ಕನ್ನು ಸ್ಪಷ್ಟವಾಗಿ ತೋರಿಸಿವೆ. ವಿಶೇಷವಾಗಿ ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಹಿಂದೂ ವಿರೋಧಿ ನೀತಿಗಳನ್ನು ಅನುಸರಿಸಿ ಕೊಂಡು ಬಂದಿದ್ದ ರಾಜಕೀಯ ಪಕ್ಷಗಳಿಗೆ ಮತದಾರರು ತಕ್ಕ ಪಾಠ ಕಲಿಸಿದ್ದಾರೆ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿದ್ದಾರೆ. ಪುದುಚೇರಿಯಲ್ಲಿ ಎನ್.ಡಿ.ಎ.ಮೈತ್ರಿ ಆಡಳಿತ ಸ್ಥಾಪನೆ ಯಾಗಲಿದೆ. ಕೇರಳದಲ್ಲಿಯೂ ಭಾರತೀಯ ಜನತಾ ಪಕ್ಷ ತನ್ನ ಮತಗಳಿಕೆ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿದ್ದು, ಅಲ್ಲಿನ ಕಮ್ಯುನಿಸ್ಟ್ ಸರ್ಕಾರದ ವಿರುದ್ಧ ಜನಾಭಿಪ್ರಾಯ ವ್ಯಕ್ತವಾಗಿದೆ. ಈ ಫಲಿತಾಂಶಗಳು ಆಪರೇಷನ್ ಸಿಂಧೂರ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರದ ಜನಪ್ರಿಯತೆ ದೇಶದಾದ್ಯಂತ ಸುನಾಮಿಯಂತೆ ವ್ಯಕ್ತವಾಗಿರುವುದು ಗೋಚರಿಸುತ್ತಿದೆ. ಜನತೆಯು ಮತ್ತೊಬ್ಬಾವ ಬಿಜೆಪಿ ಪರವಾಗಿ ರೂಪುಗೊಂಡಿರುವುದು ಈ ಚುನಾವಣಾ ಫಲಿತಾಂಶಗಳ ಮೂಲಕ ಸ್ಪಷ್ಟವಾಗಿದೆ. ಈ ಬಾರಿ ಫಲಿತಾಂಶಗಳು ಬಹುತೇಕ ಎಲ್ಲಾ ಎಕ್ಸಿಟ್ ಪೋಲ್‌ಗಳ ಅಂದಾಜುಗಳನ್ನು ಮೀರಿರುವುದು ಗಮನಾರ್ಹವಾಗಿದೆ. ಈ ಸಂದರ್ಭದಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಪಕ್ಷಕ್ಕೆ ಮತ ನೀಡಿದ ಎಲ್ಲಾ ಮತದಾರರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಅವರು ಹೇಳಿದ್ದಾರೆ.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಯತೀಶ್ ಆರ್ವಾರ್, ಪ್ರೇಮಾನಂದ ಶೆಟ್ಟಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಂಜುಳಾ ರಾವ್, ಯುವ ಮೋರ್ಚಾ ಜಿಲ್ಲಾಧ್ಯಕ್ಷ ನಂದನ್ ಮಲ್ಯ, ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ಮಹೇಶ್ ಜೋಗಿ, ಮಂಗಳೂರು ನಗರ ದಕ್ಷಿಣ ಮಂಡಲ ಅಧ್ಯಕ್ಷ ರಮೇಶ್ ಕಂಡೆಟ್ಟು, ಮುಖಂಡರಾದ ವಿಕಾಸ್ ಪುತ್ತೂರು, ರವಿಶಂಕರ್ ಮಿಜಾರ್, ರವೀಂದ್ರ ಶೆಟ್ಟಿ ಉಳಿದೊಟ್ಟು, ಪೂರ್ಣಿಮಾ, ಶಿಲ್ಪರಾಜ್ ಕೃಷ್ಣಾಪುರ, ಸುನೀಲ್ ಆಳ್ವ, ಕವಿತಾ ಸನಿಲ್, ಪ್ರಸಾದ್ ದರ್ಬೆ, ಮನಪಾ ಮಾಜಿ ಸದಸ್ಯರು ಉಪಸ್ಥಿತರಿದ್ದರು.

▶ ಬಿ.ಸಿ. ರೋಡಿನಲ್ಲಿ ಸಂಭ್ರಮಾಚರಣೆ

ಬಿ.ಸಿ.ರೋಡಿನಲ್ಲಿ ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು. ಬಿಜೆಪಿ ಬಂಟ್ವಾಳ ಮಂಡಲದ ವತಿಯಿಂದ ಬಿ.ಸಿ.ರೋಡಿನ ಫ್ಲೈಓವರ್ ತಳ್ಳಾಗದಲ್ಲಿ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ, ಚುರುಮುರಿ ಹಂಚಿ ವಿಜಯೋತ್ಸವ ಆಚರಿಸಿದರಲ್ಲದೆ ಪ್ರಧಾನಿ ಮೋದಿ, ಗೃಹಸಚಿವ ಅಮಿತ್ ಶಾ ಪರ ಜೈಕಾರ ಕೂಗಿದರು. ಈ ಸಂದರ್ಭದಲ್ಲಿ ಬಂಟ್ವಾಳ ಮಂಡಲ ಬಿಜೆಪಿ ಅಧ್ಯಕ್ಷ ಚೆನ್ನಪ್ಪ ಆರ್. ಕೋಟ್ಯಾನ್, ಪ್ರಧಾನ ಕಾರ್ಯದರ್ಶಿಗಳಾದರುವರಾಜ, ಶಿವಪ್ರಸಾದ್ ಶೆಟ್ಟಿ, ರಾಜ್ಯ ನಾಯಕ ಸುಲೋಚನಾ ಜಿ.ಕೆ.ಭಟ್, ಪಕ್ಷದ ಪ್ರಮುಖರಾದ ವಿಕಾಸ್ ಪುತ್ತೂರು, ದೇವಪ್ಪ ಪೂಜಾರಿ, ದಿನೇಶ್ ಅಮ್ಟೂರು, ರಾಮದಾಸ್ ಬಂಟ್ವಾಳ, ಪುರುಷೋತ್ತಮ ಶೆಟ್ಟಿ ವಾಮದಪದವು, ಮೋನಪ್ಪ ದೇವಸ್ಯ,ಪ್ರಭಾಕರ್ ಪ್ರಭು, ದಿನೇಶ್ ಶೆಟ್ಟಿ ದಂಬೆದಾರ್, ಗಣೇಶ್ ದಾಸ್, ಪ್ರಣಾಮ್ ಅಜ್ಜಿಬೆಟ್ಟು, ಮಹೇಶ್ ಶೆಟ್ಟಿ, ಭಾಸ್ಕರ ಟೈಲರ್, ಕಾರ್ತಿಕ್ ಬಲ್ಲಾಳ್, ಸದಾನಂದ ಹಳೇಗೇಟು, ಕೇಶವ ದೈಪಲ, ಮನೋಜ್ ಕಳ್ಳಗೆ, ಪ್ರೇಮನಾಥ ಶೆಟ್ಟಿ, ಸುನಿಲ್ ರೋಡ್ರಿಗಸ್, ಎಲಿಯಾಸ್ ಮತ್ತಿತರರು ಉಪಸ್ಥಿತರಿದ್ದರು.

▶ ಸುಳ್ಯದಲ್ಲಿ ಬಿಜೆಪಿ ವಿಜಯೋತ್ಸವ

ಸುಳ್ಯದ ಹಳೆ ಬಸ್ಸು ನಿಲ್ದಾಣ ಬಳಿಯಲ್ಲಿ ಬಿಜೆಪಿ ಸಿಹಿ ಹಂಚಿ ವಿಜಯೋತ್ಸವ ಸೋಮವಾರ ಆಚರಿಸಿತು. ವಿಜಯೋತ್ಸವ ಸಭೆಯಲ್ಲಿ ಶಾಸಕಿ ಭಾಗೀರಥಿ ಮುರುಳ್ಯ ಮಾತನಾಡಿ, ಪಂಚ ರಾಜ್ಯಗಳ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿಗೆ ಮತ ನೀಡಿದ ಮತದಾರರು ಮತ್ತೆ ಮೋದಿಯವರಿಗೆ ಬೆಂಬಲ ನೀಡಿದ್ದಾರೆ. ಯಾರಿಗೆ ಮತ ನೀಡಿದರೆ ಒಳ್ಳೆಯದು ಎಂದು ಅರಿತು ಮತದಾರ ಬಿಜೆಪಿಯನ್ನು ಗೆಲ್ಲಿಸಿದ್ದು ಜೊತೆಗೆ ನೆರಯ ಕೇರಳದಲ್ಲೂ ಬೆಜೆಪಿ ಉತ್ತಮ ಸಾಧನೆ ಮಾಡಿದ್ದು, ಈ ಗೆಲುವಿಗೆ ಕಾರಣರಾದ ಕಾರ್ಯಕರ್ತರು ಮತ್ತು ಅಭ್ಯರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು. ಮಂಡಲ ಸಮಿತಿ ಮಾಜಿ ಅಧ್ಯಕ್ಷ ಹರೀಶ್ ಕಂಜಿಪಿಲಿ ಮಾತನಾಡಿ, ಪಶ್ಚಿಮ ಬಂಗಾಳದ ಗೆಲುವು ಹಿಂದುತ್ವದ ಗೆಲುವಾಗಿದ್ದು ಮುಂದೆ ಕರ್ನಾಟಕದಲ್ಲಿಯೂ ಬೆಜೆಪಿ ಅಧಿಕಾರಕ್ಕೆ ಬರಲಿದೆ ಎಂದರು. ಮಂಡಲಾಧ್ಯಕ್ಷ ವೆಂಕಟ್ ವಳಲಂಬೆ ಮಾತನಾಡಿ, ನರೇಂದ್ರ ಮೋದಿಯವರ ಅಧಿಕಾರವನ್ನು ನೋಡಿದ ಜನರು ಪಶ್ಚಿಮ ಬಂಗಾಲದಲ್ಲಿ ಬಿಜೆಪಿಯನ್ನು ಗೆಲ್ಲಿಸಿದ್ದಾರೆ ಎಂದು ಹೇಳಿದರು.

ವಿಜಯೋತ್ಸವ ಸಭೆಯಲ್ಲಿ ಮಹಿಳಾ ಮೋರ್ಚಾ ಅಧ್ಯಕ್ಷೆ ಇಂದಿರಾ ಬಿ.ಕೆ., ರಾಕೇಶ್ ರೈ ಕೆಡೆಂಜಿ, ಸುಭೋದ್ ಶೆಟ್ಟಿ ಮೇನಾಲ, ರಾಜೇಶ್ ಶೆಟ್ಟಿ ಮೇನಾಲ, ವಿಕ್ರಂ ಎ.ವಿ. ಅಡ್ಪಂಗಾಯ, ಅವಿನಾಶ್ ಕುರುಂಜಿ, ಜಗನ್ನಾಥ ಜಯನಗರ, ಸೋಮನಾಥ ಪೂಜಾರಿ, ಸುನಿಲ್ ಕೇರ್ಪಳ, ವಿಜಯ ಆಲಡ್ಕ, ಬೂಡು ರಾಧಾಕೃಷ್ಣ ರೈ, ಕೃಷ್ಣ ಎಂ.ಆರ್. ಕಡಬ, ಕೃಷ್ಣಯ್ಯ ಮೂಲೆತೋಟ, ನಾರಾಯಣ ಶಾಂತಿನಗರ, ದಾಮೋದರ ಮಂಚಿ, ಅಶೋಕ್ ಅಡ್ಕಾರು, ಜಿನ್ನಪ್ಪ ಪೂಜಾರಿ ಕಲ್ಲುಮುಟ್ಲು, ಶಶಿಕಲಾ ನೀರಬಿದಿರೆ, ಪುಷ್ಪಾ ಮೇದಪ್ಪ, ಜಗದೀಶ್ ಸರಳಿಕುಂಜ, ಪ್ರಣೀತ್ ಕಣಕ್ಕೂರು, ವಿಜಯ ಕುಮಾರ್ ಕುರುಂಜಿಗುಡ್ಡೆ, ಚಂದ್ರಶೇಖರ ನೆಡಿಲು, ದಿವ್ಯಾ ಮಡಪ್ಪಾಡಿ, ಬಾಲಚಂದ್ರ ಕೂಟೇಲು, ಹರಿಣಾಕ್ಷಿ ನಾರಾಯಣ, ಶಿವರಾಮ ಕೇರ್ಪಳ, ಸುರೇಶ್ ನಾಯಕ್ ಜಯನಗರ, ಚೆನಿಯ ಕಲ್ತಡ್ಕ, ಗಂಗಾಧರ್ ಸವಣೂರು, ಜಗದೀಶ ಸರಳಿಕುಂಜ ಮತ್ತಿತರರು ಉಪಸ್ಥಿತರಿದ್ದರು. ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿನಯ ಕುಮಾರ್ ಕಂದಡ್ಕ ಸ್ವಾಗತಿಸಿ, ಪ್ರದೀಪ್ ರೈ ಮನವಳಿಕೆ ವಂದಿಸಿದರು.

‘ವಿಕಸಿತ ಭಾರತ’ದ ಸಂಕಲ್ಪಕ್ಕೆ ಸಂದ ಜಯ: ಸಂಸದ ಕ್ಯಾ. ಚೌಟ

ಮಂಗಳೂರು: ಪಶ್ಚಿಮ ಬಂಗಾಳದ ಚಾರಿತ್ರಿಕ ಗೆಲುವು ಬಿಜೆಪಿಯ ಸೈದ್ಧಾಂತಿಕ ನಿಲುವು ಮತ್ತು ಪ್ರಧಾನಿ ಮೋದಿಯವರ ‘ವಿಕಸಿತ ಭಾರತ’ದ ಸಂಕಲ್ಪಕ್ಕೆ ಸಂದ ಜಯ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದ್ದಾರೆ. ಪಶ್ಚಿಮ ಬಂಗಾಲದಲ್ಲಿ ಬಿಜೆಪಿಯ ಗೆಲುವು ಇಡೀ ದೇಶದಲ್ಲಿರುವ ಬಿಜೆಪಿ ಕಾರ್ಯಕರ್ತರಿಗೆ ಸಂದ ಗೆಲುವು. ಏಕೆಂದರೆ, ಪಶ್ಚಿಮ ಬಂಗಾಲದಲ್ಲಿ ತೃಣಮೂಲ ಕಾಂಗ್ರೆಸ್‌ನ ಗೂಂಡಾ ರಾಜ್ಯದಲ್ಲಿ ಕಮಲವನ್ನು ಅರಳಿಸುವುದು ಅಷ್ಟೊಂದು ಸುಲಭವಿರಲಿಲ್ಲ. ಈ ಗೆಲುವಿನ ಹಿಂದೆ ಬಿಜೆಪಿಯ ಕಾರ್ಯಕರ್ತರ ತ್ಯಾಗ-ಬಲಿದಾನ ಅಡಗಿದೆ. ಬಿಜೆಪಿಯ ಕಾರ್ಯಕರ್ತರ ಮೇಲೆ ಸಾಕಷ್ಟು ದೌರ್ಜನ್ಯ ನಡೆದರೂ ಎದೆಗುಂದದೆ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕೆಂಬ ಬಿಜೆಪಿ ಕಾರ್ಯಕರ್ತರ ಕಠಿಣ ಪರಿಶ್ರಮ, ಹೋರಾಟಕ್ಕೆ ಹಾಗೂ ಬಿಜೆಪಿ ಸೈದ್ಧಾಂತಿಕ ನಿಲುವಿಗೆ ಸಿಕ್ಕ ಐತಿಹಾಸಿಕ ಜಯ ಇದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಐದು ರಾಜ್ಯಗಳಲ್ಲಿನ ಬಿಜೆಪಿಯ ಅದ್ಭುತ ಸಾಧನೆಯ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಅಪ್ರತಿಮ ಕಾರ್ಯತಂತ್ರ ಹಾಗೂ ರಾಷ್ಟ್ರೀಯ ಏಕತೆಗೆ ಅವರ ಅಚಲ ಬದ್ಧತೆಯಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರ ಚೈತನ್ಯದಾಯಕ ಸಂಘಟನಾ ಶಕ್ತಿಯು ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ತುಂಬಿದೆ. ಈ ಐತಿಹಾಸಿಕ ಜನಾದೇಶ ನೀಡಿರುವ ಮತದಾರರಿಗೆ ಹಾಗೂ ಗೆಲುವಿಗಾಗಿ ಹಗಲಿರುಳು ಶ್ರಮಿಸಿದ ಸಮರ್ಪಿತ ಬಿಜೆಪಿ ಕಾರ್ಯಕರ್ತರಿಗೆ ಸಂಸದರು ಅಭಿನಂದನೆ ಸಲ್ಲಿಸಿದ್ದಾರೆ.

ದುರಾಡಳಿತ ಕೊನೆಗೊಂಡಿದೆ:ವೇದವ್ಯಾಸ ಕಾಮತ್

ಮಂಗಳೂರು: ಅಸ್ಸಾಂ, ಪುದುಚೇರಿ ಜೊತೆಗೆ ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯು ಚರಿತ್ರೆಯಲ್ಲಿ ದಾಖಲಾಗುವಂತಹ ಅದ್ಭುತ ಗೆಲುವು ಸಾಧಿಸಿದ್ದು ಟಿಎಂಸಿಯ ದುರಾಡಳಿತ ಕೊನೆಗೊಂಡಿದೆ ಎಂದು ಶಾಸಕ ವೇದವ್ಯಾಸ ಕಾಮತ್ ಹರ್ಷ ವ್ಯಕ್ತಪಡಿಸಿದ್ದಾರೆ. ಟಿಎಂಸಿ ಹಾಗೂ ಕಮ್ಯುನಿಸ್ಟ್ ಎಂಬ ಒಂದೇ ನಾಣ್ಯದ ಎರಡು ಮುಖಗಳು ಬಂಗಾಳದಲ್ಲಿ ಹಿಂದೂಗಳನ್ನು ಗುರಿಯಾಗಿಸಿಕೊಂಡು ನಡೆಸಿದ ಮಾರಣಹೋಮ, ಮಿತಿ ಮೀರಿದ ಓಲೈಕೆ, ದೇಶದ ಭದ್ರತೆಗೆ ಸವಾಲು ಇವೆಲ್ಲವೂ ಬಿಜೆಪಿ ಗೆಲುವಿನಿಂದ ಅಂತ್ಯಗೊಂಡಿದೆ. ಭಾರತೀಯ ಜನಸಂಘದ ಸಂಸ್ಥಾಪಕರಾಗಿದ್ದ ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ನಾಡಿನಲ್ಲಿ ಕಮಲ ಅರಳಿರುವುದು ಇಡೀ ದೇಶದ ಬಿಜೆಪಿ ಕಾರ್ಯಕರ್ತರಲ್ಲಿ ಹುಮ್ಮಸ್ಸು ತಂದಿದೆ ಎಂದು ಅವರು ಹೇಳಿದ್ದಾರೆ. ಈ ಅಭೂತಪೂರ್ವ ಜಯಕ್ಕೆ ಕಾರಣೀಭೂತ ರಾದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್, ನರೇಂದ್ರ ಮೋದಿ, ಅಮಿತ್ ಶಾ, ಸುವೆಂದು ಅಧಿಕಾರಿ ಸಹಿತ ಎಲ್ಲಾ ಬಿಜೆಪಿ ಪ್ರಮುಖರು, ಕಾರ್ಯಕರ್ತರು, ವಿಶೇಷವಾಗಿ ಬಂಗಾಳದ ಜನತೆ ಯಾವುದೇ ಭಯವಿಲ್ಲದೇ ಮತದಾನ ನಡೆಸಲು ಅವಕಾಶ ಮಾಡಿಕೊಟ್ಟ ಭದ್ರತಾ ಪಡೆಗಳಿಗೆ ವಿಶೇಷ ಅಭಿನಂದನೆಗಳು ಎಂದು ಕಾಮತ್ ಹೇಳಿದ್ದಾರೆ.

▶ ಬೆಳ್ತಂಗಡಿಯಲ್ಲಿ ವಿಜಯೋತ್ಸವ

ಬೆಳ್ತಂಗಡಿ ಬಿಜೆಪಿ ಮಂಡಲ ಸಮಿತಿ ವತಿಯಿಂದ ವಿಜಯೋತ್ಸವ ಬೆಳ್ತಂಗಡಿ ಬಿಜೆಪಿ ಕಚೇರಿ ಎದುರು ನಡೆಯಿತು. ಬೆಳ್ತಂಗಡಿ ಬಿಜೆಪಿ ಮಂಡಲ ಅಧ್ಯಕ್ಷ ಶ್ರೀನಿವಾಸ್ ರಾವ್, ಮಾತನಾಡಿ ಪಂಚ ರಾಜ್ಯಗಳಲ್ಲಿ ಅಭೂತಪೂರ್ವ ಕೆಲವು ಸಾಧಿಸಿದೆ. ಪಶ್ಚಿಮಬಂಗಾಳದಲ್ಲಿ ಭಯೋತ್ಪಾದನೆಯ 15 ವರ್ಷದ ಆಡಳಿತವನ್ನು ಜನಸಾಮಾನ್ಯರು ಕಿತ್ತು ಭಾರತೀಯ ಜನತಾ ಪಾರ್ಟಿಗೆ 200 ಸ್ಥಾನಗಳನ್ನು ಕೊಟ್ಟು ಗೆಲುವು ಸಾಧಿಸಿದ್ದಾರೆ. ಪುದುಚೇರಿ, ಅಸ್ಸಾಂ ರಾಜ್ಯದಲ್ಲಿ ಬಿಜೆಪಿ ಬಹುಮತ ಪಡೆದಿದೆ. ಪಂಚ ರಾಜ್ಯ ಚುನಾವಣೆಯಲ್ಲಿ ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್ ಎಂಬ ಮಂತ್ರ ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದೆ. ನರೇಂದ್ರ ಮೋದಿಯವರ ನಾಯಕತ್ವ ವಿಶ್ವಕ್ಕೆ ಮಾದರಿಯಾಗಿದೆ. ಐದು ರಾಜ್ಯಗಳಲ್ಲಿ ಮೂರು ರಾಜ್ಯದಲ್ಲಿ ಗರಿಷ್ಠ ಬಹುಮತ ಪಡೆದಿದೆ. ಈ ಚುನಾವಣೆಯನ್ನು ಬೆಳ್ತಂಗಡಿ ಮಂಡಲದ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚುವ ಮುಖಾಂತರ ಸಂಭ್ರಮಿಸುತ್ತಿದೆ. ಈ ಚುನಾವಣ ಫಲಿತಾಂಶವನ್ನು ಇಡೀ ದೇಶ ಸಂಭ್ರಮವನ್ನು ಆಚರಿಸುತ್ತಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಎಂ ಪಾರೆಂಕಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಬೆಳಾಲು, ಪಟ್ಟಣ ಪಂಚಾಯತ್ ಸ್ಥಾಯಿ ಸಮಿತಿ ನಿಕಟ ಪೂರ್ವ ಅಧ್ಯಕ್ಷ ಶರತ್, ಅರವಿಂದ್ ಲಾಯಿಲ, ಗಣೇಶ್ ಲಾಯಿಲ, ಜಗದೀಶ್, ಉಮೇಶ್ ಕುಲಾಲ್ ಪ್ರಮುಖರು ಉಪಸ್ಥಿತರಿದ್ದರು.

▶ ಮೂಡುಬಿದಿರೆ ಬಿಜೆಪಿ ವಿಜಯೋತ್ಸವ

ಬಿಜೆಪಿ ಕಾರ್ಯಕರ್ತರು ಬಸ್ ನಿಲ್ದಾಣದಲ್ಲಿ ಪಟಾಕಿ ಸಿಡಿಸಿ ಸಂಭ್ರಮಾಚರಿಸಿದರು. ಬಿಜೆಪಿ ಹಿರಿಯ ಮುಖಂಡ ಕೆ. ಆರ್. ಪಂಡಿತ್ ಮಾತನಾಡಿ, ಪಶ್ಚಿಮ ಬಂಗಾಲದಲ್ಲಿ ಮಮತಾ ಬ್ಯಾನರ್ಜಿ ದುರಾಡಳಿತದಿಂದ ಹಿಂದುಗಳು ಬದುಕುವುದೇ ಕಷ್ಟದ ಪರಿಸ್ಥಿತಿ ನಿರ್ಮಾಣವಾಗಿದ್ದು ಅಲ್ಲಿನ ಜನತೆ ದೀದಿಗೆ ತಕ್ಕ ಪಾಠ ಕಲಿಸಿದ್ದಾರೆ. ಕರ್ನಾಟಕದಲ್ಲಿಯೂ ಹಿಂದೂಗಳನ್ನು ಕಡೆಗಣಿಸಿ ಅಲ್ಪ ಸಂಖ್ಯಾತರ ತುಷ್ಟೀಕರಣ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೂ ಇದು ಎಚ್ಚರಿಕೆಯ ಗಂಟೆಯಾಗಿದೆ ಎಂದರು. ಮಂಡಲ ಕಾರ್ಯದರ್ಶಿ ದಿನೇಶ್ ಪುತ್ರನ್, ಕಾರ್ಯದರ್ಶಿ ರಂಜಿತ್ ಪೂಜಾರಿ, ಯುವ ಮೋರ್ಚಾ ಅಧ್ಯಕ್ಷ ಕುಮಾರ್ ಪ್ರಸಾದ್ ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.


ಉಡುಪಿಯಲ್ಲಿ


ಕುಂದಾಪುರದಲ್ಲಿ


ಮೂಡಬಿದಿರೆಯಲ್ಲಿ

ಉಡುಪಿ: ಉಡುಪಿ ಜಿಲ್ಲಾ ಬಿಜೆಪಿ ವತಿಯಿಂದ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ನೇತೃತ್ವ ದಲ್ಲಿ ಬಿಜೆಪಿ ಜಿಲ್ಲಾ ಕಚೇರಿಯ ಬಳಿ ಚೆಂಡೆ ವಾದನದೊಂದಿಗೆ ಪಟಾಕಿ ಸಿಡಿಸಿ, ಸಿಹಿ ತಿಂಡಿ ಹಂಚಿ ಸಂಭ್ರಮದಿಂದ ವಿಜಯೋತ್ಸವವನ್ನು ಆಚರಿಸಲಾಯಿತು.

ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಉಡುಪಿ ಶಾಸಕ ಯಶ್‌ಪಾಲ್ ಎ. ಸುವರ್ಣ, ಪ್ರಶಿಕ್ಷಣದ ಮಂಗಳೂರು ವಿಭಾಗ ಪ್ರಮುಖ್ ಕೆ.ಉದಯ ಕುಮಾರ್ ಶೆಟ್ಟಿ ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಸದಸ್ಯೆ ಶ್ಯಾಮಲಾ ಎಸ್. ಕುಂದರ್ ಅವರು ಮಾತನಾಡಿ ರಾಷ್ಟ್ರೀಯತೆಯನ್ನು ಮುಂದಿಟ್ಟುಕೊಂಡು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ನೀಡಿದ ಜನಪರ ಆಡಳಿತ, ದೇಶದ ಅಭಿವೃದ್ಧಿ, ಬಾಹ್ಯ ಹಾಗೂ ಆಂತರಿಕ ಭದ್ರತೆಗೆ ಕೈಗೊಂಡಿರುವ ಉಪಕ್ರಮಗಳು, 'ಸಬ್ಕೇ ಸಾತ್ ಸಬ್ ಕಾ ವಿಕಾಸ್' ತತ್ವದ ಜೊತೆಗೆ ನೂರಾರು ಜನೋಪಯೋಗಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಮುಂತಾದ ಜನಹಿತ ಕಾರ್ಯ ಚಟುವಟಿಕೆಗಳಿಂದ ಪಂಚ ರಾಜ್ಯಗಳ ಚುನಾವಣೆಯಲ್ಲಿ ಎನ್.ಡಿ.ಎ. ಮೈತ್ರಿ ಕೂಟ ಅಧ್ಭುತ ಯಶಸ್ಸನ್ನು ಕಂಡಿರುವುದು ಪ್ರಶಂಸನೀಯ . ಈ ಫಲಿತಾಂಶ ಮುಂದೆ ದೇಶಾದ್ಯಂತ ನಡೆಯಲಿರುವ ಎಲ್ಲಾ ಚುನಾವಣೆಗಳಿಗೂ ದಿಕ್ಸೂಚಿಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನಕರ ಶೆಟ್ಟಿ ಹೆರ್ಗ, ಶ್ರೀಕಾಂತ್ ನಾಯಕ್, ಮನೋಜ್ ಶೆಟ್ಟಿ, ದೇವಾನಂದ ನಾಯಕ್, ಕೋಶಾಧಿಕಾರಿ ಪ್ರವೀಣ್ ಕುಮಾರ್ ಶೆಟ್ಟಿ, ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಸದಸ್ಯೆ ಶ್ಯಾಮಲಾ ಕುಂದರ್, ಜಿಲ್ಲಾ ಉಪಾಧ್ಯಕ್ಷರಾದ ಕಿರಣ್ ಕುಮಾರ್, ನಳಿನೀ ಪ್ರದೀಪ್ ರಾವ್, ಸವಿತಾ ಶಿವಾನಂದ, ಅನಿತಾ ಡಿಸೋಜಾ, ಪ್ರಜ್ಞಾಶೆಟ್ಟಿ ಇಂದ್ರಾಳಿ, ರಾಜ್ಯ ಬಿಜೆಪಿ ಮಾಜಿ ಉಪಾಧ್ಯಕ್ಷೆ ನಯನಾ ಗಣೇಶ್, ಮಾಜಿ ಜಿಲ್ಲಾಧ್ಯಕ್ಷ ತಿಂಗಳೇ ವಿಕ್ರಮಾರ್ಜುನ ಹೆಗ್ಡೆ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀನಿಧಿ ಹೆಗ್ಡೆ, ಶಿವಕುಮಾರ್ ಅಂಬಲಪಾಡಿ, ಗಿರೀಶ್ ಎಂ ಅಂಚನ್, ಸತ್ಯಾನಂದ ನಾಯಕ್, ಅನಿತಾ ಶ್ರೀಧರ್, ಜಿಲ್ಲಾ ವಕ್ತಾರರಾದ ದಿನಕರಶೆಟ್ಟಿ, ಮಧುಕರ ಮುದ್ರಾಡಿ, ಮಾಧ್ಯಮ ಸಂಚಾಲಕ ಶಶಾಂಕ್ ಶಿವತ್ತಾಯ, ಜಿಲ್ಲಾ ಯುವಮೋರ್ಚಾ ಅಧ್ಯಕ್ಷ ಪೃಥ್ವಿ ರಾಜ್ ಶೆಟ್ಟಿ ಬಿಲ್ಲಾಡಿ, ಮಹಿಳಾ ಮೋರ್ಚಾ ಅಧ್ಯಕ್ಷೆ ಸಂಧ್ಯಾ ರಮೇಶ್, ಪ್ರಕೋಷ್ಠ ಸಂಯೋಜಕ ದಿಲ್ಲೇಶ್ ಶೆಟ್ಟಿ, ವಿಜಯ ಕೊಡವೂರು, ನಗರಸಭೆ ಮಾಜಿ ಅಧ್ಯಕ್ಷ ಪ್ರಭಾಕರ್ ಪೂಜಾರಿ, ಅಲ್ಪ ಸಂಖ್ಯಾತ ಮೋರ್ಚಾ ಅಧ್ಯಕ್ಷ ರುಡಾಲ್ಫ್ ಡಿಸೋಜಾ, ರೈತಮೋರ್ಚ ಅಧ್ಯಕ್ಷ ಕಮಲಾಕ್ಷ ಹೆಬ್ಬಾರ್, ನಗರ ಬಿಜೆಪಿ ಅಧ್ಯಕ್ಷ ದಿನೇಶ್ ಅಮೀನ್, ಪ್ರಧಾನ ಕಾರ್ಯದರ್ಶಿ ಜಗದೀಶ್ ಆಚಾರ್ಯ, ಕಾಪು ಮಂಡಲ ಅಧ್ಯಕ್ಷ ಜಿತೇಂದ್ರ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಶರತ್ ಕುಮಾರ್ ಮಟ್ಟು, ಕಾರ್ಕಳ ಮಂಡಲ ಪ್ರಧಾನ ಕಾರ್ಯದರ್ಶಿ ಸತೀಶ್ ಪೂಜಾರಿ ಬೋಳ, ಉಡುಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ರಾಜೀವ್ ಕುಲಾಲ್, ಎಸ್ ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೃಷ್ಣ ಡಿ.ಟಿ, ಎಸ್. ನಾರಾಯಣ್, ಪ್ರಮುಖರಾದ ರಾಜೇಶ್ ಕಾವೇರಿ, ಗುರುಪ್ರಸಾದ್, ಆನಂದ ಸುವರ್ಣ, ಕಿಶೋರ್ ಕರಂಬಳ್ಳಿ, ಹರಿಮಕ್ಕಿ, ರತ್ನಾಕರ ಶೆಟ್ಟಿ, ಅರುಣ್ ಕುಮಾರ್ ಬಾಣಾ, ಚಂದ್ರಶೇಖರ ಪ್ರಭು, ಶಿವರಾಮ ಕಾದಿಮಾರ್, ವೀಣಾ ಎಸ್ ಶೆಟ್ಟಿ, ಕೃಷ್ಣಪ್ಪ ಜತ್ತಣ್ಣ, ಸಲೀಂ ಅಂಬಾಗಿಲು, ಶ್ರೀವಾಸ್ತ, ಸುರೇಶ್ ಶೆಟ್ಟಿ, ರಾಘವೇಂದ್ರ ಉಪ್ಪೂರು, ಬಾಲಕೃಷ್ಣ ಶೆಟ್ಟಿ, ಆನಂದ ಖಾರ್ವಿ, ದೇವೇಂದ್ರ ಪ್ರಭು, ಆಸೀಫ್ ಕಟಪಾಡಿ ಸಹಿತ ಹಲವರು ಉಪಸ್ಥಿತರಿದ್ದರು.

ಡಾ.ಮುಖರ್ಜಿ ಕನಸು ನನಸು

ಪಶ್ಚಿಮ ಬಂಗಾಲವನ್ನು ಸುದೀರ್ಘ ಕಾಲದಿಂದ ಕಾಡುತ್ತಿದ್ದ ಅರಾಜಕತೆಗೆ ಕೊನೆಗೂ ಅಲ್ಲಿನ ಮತದಾರ ಅಂತ್ಯ ಹಾಡಿದ್ದಾರೆ. ಡಾ.ಶ್ಯಾಮ ಪ್ರಸಾದ್ ಮುಖರ್ಜಿಯವರ ಕನಸು ಇಂದು ನನಸಾಗಿದೆ. ಬಾಂಗ್ಲಾ ದೇಶದ ಮತಾಂಧರಿಗೆ ದೇಶದ ಹೆಬ್ಬಾಗಿಲು ತೆರೆದು ಸ್ವಾಗತಿಸಿ ಅವರನ್ನೇ ತನ್ನ ಮತಬ್ಯಾಂಕ್ ಆಗಿಸಿಕೊಂಡು ಕ್ರೂರ ದಬ್ಬಾಳಿಕೆ ನಡೆಸುತ್ತಿದ್ದ ಮಮತಾ ಬ್ಯಾನರ್ಜಿಯವರ ದುಷ್ಟ ಅಟ್ಟಹಾಸವನ್ನು ತೊಲಗಿಸುವಲ್ಲಿ ಬಿಸಾಡುವಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಮತ್ತು ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರ ನಿರಂತರ ಪ್ರಯತ್ನ ಅವರ್ಣನೀಯ. ತೃಣಮೂಲ ಕಾಂಗ್ರೆಸ್‌ನ ಗೂಂಡಾಗಿರಿ ರಾಜಕಾರಣಕ್ಕೆ ಕೊನೆ ಹಾಡಲಾಗಿದೆ. ಅದೇ ರೀತಿ ಅಸ್ಸಾಂನಲ್ಲಿ ಸತತ ಮೂರನೇ ಬಾರಿಗೆ ಬಿಜೆಪಿ ಗೆಲುವು ಸಾಧಿಸಿದೆ. ಪುದುಚೇರಿಯಲ್ಲಿ ಎನ್ ಡಿಎ ಗೆಲುವು ಅಭೂತಪೂರ್ವ. ಒಟ್ಟಾರೆ ಪಂಚರಾಜ್ಯಗಳ ಚುನಾವಣೆಯಲ್ಲಿ ಮೂರು ರಾಜ್ಯ ಗಳಲ್ಲಿ ಬಿಜೆಪಿ ಅಧಿಕಾರ ಹಿಡಿಯುವುದಕ್ಕೆ ಕಾರಣರಾದ ದೇವ ದುರ್ಲಬ ಕಾರ್ಯಕರ್ತರ ಅವಿಶ್ರಾಂತ ಶ್ರಮಕ್ಕೆ ವಂದನೆ – ಅಭಿನಂದನೆ.

■ ವಿ. ಸುನಿಲ್ ಕುಮಾರ್ , ಶಾಸಕರು, ಕಾರ್ಕಳ

▶ ಕುಂದಾಪುರದಲ್ಲಿ ವಿಜಯೋತ್ಸವ

ಕುಂದಾಪುರ ಭಾರತೀಯ ಜನತಾ ಪಾರ್ಟಿ ವತಿಯಿಂದ ಕುಂದಾಪುರದ ಶಾಸ್ತ್ರಿ ಸರ್ಕಲ್ ಬಳಿ ಸೋಮವಾರ ಸಂಜೆ ಕಾರ್ಯಕರ್ತರಿಗೆ (ಚುರುಮುರಿ) ನೀಡಿ ಸಿಡಿಮದ್ದು ಸಿಡಿಸಿ ವಿಜಯೋತ್ಸವನ್ನು ಆಚರಿಸಲಾಯಿತು.

ಕುಂದಾಪುರ ಬಿಜೆಪಿ ಕ್ಷೇತ್ರ ಅಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ಮಾತನಾಡಿ, ಪಂಚರಾಜ್ಯಗಳ ಚುನಾವಣೆಯಲ್ಲಿ ಅಸ್ಸಾಂ, ಪಾಂಡಿಚೇರಿ ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ್ದು. ಇದು ದೇಶದ ಕಾರ್ಯಕರ್ತರು ಗೆಲುವಾಗಿದೆ ಎಂದರು.

ಈ ಸಂದರ್ಭದಲ್ಲಿ ಕುಂದಾಪುರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸುಧೀರ್ ಕೆ. ಎಸ್., ಜಿಲ್ಲಾ ಉಪಾಧ್ಯಕ್ಷ ಸುರೇಶ್ ಶೆಟ್ಟಿ ಕಾಡೂರು, ಮಂಡಲ ಉಪಾಧ್ಯಕ್ಷ ಪ್ರಕಾಶ್ ಪೂಜಾರಿ, ಸುನೀಲ್ ಶೆಟ್ಟಿ ಹೇರಿಕುದ್ರು, ಕಾರ್ಯದರ್ಶಿ ರಾಜೇಶ್ ಶೆಟ್ಟಿ, ವಿವಿಧ ಮೋರ್ಚಗಳ ಅಧ್ಯಕ್ಷರಾದ ಕಿರಣ್ ಪೂಜಾರಿ ತೆಕ್ಕಟ್ಟೆ, ಸುರೇಂದ್ರ ಕಾಂಚನ ಸಂಗಮ್, ಸೌರಭಿ ಪೈ, ಪುರಸಭಾ ಮಾಜಿ ಸದಸ್ಯರಾದ ಸಂತೋಷ್ ಶೆಟ್ಟಿ, ಪ್ರಭಾಕರ ವಿ., ಶೇಖರ್ ಪೂಜಾರಿ, ರೋಹಿಣಿ ಉದಯ, ದಿವಾಕರ ಕಡ್ಗಿ, ರತ್ನಾಕರ ಶೇರಿಗಾರ್, ಪ್ರಮುಖರಾದ ಗಿರೀಶ್ ಕುಂದಾಪುರ, ಸತೀಶ್ ಕೆ. ಟಿ., ದೀಕ್ಷಿತ್ ಶೆಟ್ಟಿ, ರೋಹಿಣಿ ಪೈ, ನರೇಂದ್ರ ಮೋದಿ ಅಭಿಮಾನಿ ಸತೀಶ್ ಪ್ರಭು, ಪಕ್ಷದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಟಿಎಂಸಿ ಅಟ್ಟಹಾಸಕ್ಕೆ ಬ್ರೇಕ್-ಬಂಗಾಳದಲ್ಲಿ ಬಿಜೆಪಿ ಯುಗಾರಂಭ

ಉಡುಪಿ: ಪ್ರಧಾನಿ ನರೇಂದ್ರ ಮೋದಿಯವರ ಅಭಿವೃದ್ಧಿಯ ಆಡಳಿತಕ್ಕಾಗಿ ಹಾಗೂ ದೇಶದ ಸುಭದ್ರತೆಗಾಗಿ ಜನರು ಬಿಜೆಪಿಯನ್ನು ಗೆಲ್ಲಿಸಿದ್ದಾರೆ. ಬಿಜೆಪಿ ಸಂಘಟನಾ ಶಕ್ತಿಗೆ ಈ ಫಲಿತಾಂಶ ಹೊಸ ಹುಮ್ಮಸ್ಸು ನೀಡಲಿದೆ ಹಾಗೂ ಈ ಚುನಾವಣಾ ಫಲಿತಾಂಶದಿಂದ ದೇಶದಲ್ಲಿ ದೇಶ ದ್ರೋಹ ಶಕ್ತಿ ಕ್ಷೀಣಿಸುತ್ತಿರುವ ಲಕ್ಷಣ ಕಂಡುಬಂದಿದೆ ಎಂದು ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಶ್ರೀನಿಧಿ ಹೆಗ್ಡೆ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ರಾಜಕೀಯ ಕಳೆದ ಹಲವಾರು ಬಿಜೆಪಿ ಕಾರ್ಯಕರ್ತರು ಜೀವವನ್ನು ಪಣಕ್ಕಿಟ್ಟು ರಾಜಕೀಯ ಹೋರಾಟ ನಡೆಸಿದ್ದಾರೆ ಎಂಬುದು ನಿರಾಕರಿಸಲಾಗದ ವಾಸ್ತವ.

ಮನೆಗಳನ್ನು ಕಳೆದುಕೊಂಡ ಕುಟುಂಬ ಗಳು, ಊರು ಬಿಟ್ಟು ತೆರಳಬೇಕಾದ ಕಾರ್ಯಕರ್ತರು, ಭಯದ ವಾತಾವರಣ ದಲ್ಲೂ ಪಕ್ಷದ ಧ್ವಜ ಹಿಡಿದು ನಿಂತ ಸಾವಿರಾರು ಕಾರ್ಯಕರ್ತರ ತ್ಯಾಗವೇ ಇಂದು ಬಿಜೆಪಿಯ ಸಂಘಟನಾ ಬಲಕ್ಕೆ ಬೆನ್ನೆಲುಬಾಗಿದೆ. ಇದು ಕೇವಲ ಚುನಾವಣಾ ಪೈಪೋಟಿಯಲ್ಲ? ಅನೇಕ ಕಾರ್ಯಕರ್ತರಿಗೆ ಇದು ನಿಜಕ್ಕೂ ಜೀವನ್ಮರಣದ ಹೋರಾಟವಾಗಿತ್ತು.

ಪ್ರತಿಕೂಲ ವಾತಾವರಣದ ನಡುವೆಯೂ ಬಿಜೆಪಿ ಬೆಂಬಲ ಹೆಚ್ಚಿಸಿಕೊಂಡಿರುವುದು ಕೇವಲ ರಾಜಕೀಯ ಲೆಕ್ಕಾಚಾರದ ಫಲವಲ್ಲ. ನೆಲಮಟ್ಟದಲ್ಲಿ ಬೂತ್ ಮಟ್ಟದಿಂದ ಹಿಡಿದು ಗ್ರಾಮ ಮಟ್ಟದವರೆಗೆ ಕಾರ್ಯಕರ್ತರು ನಡೆಸಿದ ಸಂಘಟಿತ ಹೋರಾಟ, ಜನರ ಮಧ್ಯೆ ನಿರಂತರ ಸಂಪರ್ಕ, ಮತ್ತು ಪಕ್ಷದ ಪರವಾಗಿ ನಡೆದ ದೀರ್ಘಕಾಲದ ಶ್ರಮ ಇದಕ್ಕೆ ಪ್ರಮುಖ ಕಾರಣವಾಗಿದೆ.

ಇದರೊಂದಿಗೆ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಅಭಿವೃದ್ಧಿ ಅಜೆಂಡಾಗಳಿಗೂ ಜನರಿಂದ ಸ್ಪಂದನೆ ದೊರೆತಿದೆ. ಮೂಲಸೌಕರ್ಯ ಅಭಿವೃದ್ಧಿ, ಬಡವರ ಕಲ್ಯಾಣ ಯೋಜನೆಗಳು, ಡಿಜಿಟಲ್ ಸೌಲಭ್ಯಗಳ ವಿಸ್ತರಣೆ, ಗ್ರಾಮೀಣ ಸಂಪರ್ಕಾಭಿವೃದ್ಧಿ ಇವೆಲ್ಲವೂ ಜನಮನದಲ್ಲಿ ವಿಶ್ವಾಸ ಮೂಡಿಸಿರುವ ಅಂಶಗಳಾಗಿ ಕಾಣಿಸುತ್ತಿವೆ. ಹಿಂಸಾಚಾರ, ಮತಬ್ಯಾಂಕ್ ರಾಜಕೀಯ, ವಲಸೆ ವಿವಾದ ಮತ್ತು ಆಡಳಿತಾತ್ಮಕ ಸಂಘರ್ಷಗಳ ನಡುವೆಯೂ ಬಿಜೆಪಿ ಇಂದು ಬೆಂಬಲ ಗಳಿಸಿರುವುದು ಒಂದು ಸ್ಪಷ್ಟ ಸಂದೇಶ ನೀಡುತ್ತದೆ.

ಜನರು ಭಯದ ರಾಜಕಾರಣಕ್ಕಿಂತ ಭದ್ರತೆ, ಸ್ಥಿರತೆ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡಿದ್ದಾರೆ. ಈ ಎಲ್ಲಾ ಸವಾಲುಗಳ ನಡುವೆ, ಬಂಗಾಳದ ರಾಜಕೀಯದಲ್ಲಿ ಹೊಸ ಆಯಾಮವಾಗಿ ರಾಷ್ಟ್ರೀಯತೆಯ ಭಾವನೆ ಪ್ರಾಬಲ್ಯ ಪಡೆದಿದೆ. ದೇಶದ ಏಕತೆ, ಭದ್ರತೆ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡುವ ರಾಜಕೀಯದತ್ತ ಜನರು ತಿರುಗುತ್ತಿದ್ದಾರೆ ಎಂಬ ಸಂದೇಶ ಸ್ಪಷ್ಟವಾಗಿದೆ ಎಂದರು.


ಕಾಪು ಮಂಡಲ ಬಿಜೆಪಿ ವತಿಯಿಂದ ಸೋಮವಾರ ಕಾಪು ಮಂಡಲ ಬಿಜೆಪಿ ಕಚೇರಿ ಬಳಿ ನಡೆದ ವಿಜಯೋತ್ಸವದಲ್ಲಿ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರು ಭಾಗವಹಿಸಿ ಭಾರತೀಯ ಜನತಾ ಪಕ್ಷದ ಗೆಲುವಿಗೆ ಹಗಲಿರುಳು ಶ್ರಮಿಸಿದ ಕಾರ್ಯಕರ್ತರು, ಪಕ್ಷದ ವರಿಷ್ಠರು, ಮುಖಂಡ ರಿಗೆ ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಕಾಪು ಮಂಡಲ ಬಿಜೆಪಿ ಅಧ್ಯಕ್ಷ ಜಿತೇಂದ್ರ ಶೆಟ್ಟಿ, ಮಾಜಿ ಶಾಸಕರಾದ ಲಾಲಾಜಿ ಆರ್. ಮೆಂಡನ್, ಸೋಮಶೇಖರ ರೆಡ್ಡಿ, ಕಾಪು ಪುರಸಭೆಯ ಅಧ್ಯಕ್ಷರಾದ ಮೋಹಿನಿ ಶೆಟ್ಟಿ, ಉಪಾಧ್ಯಕ್ಷರಾದ ಸರಿತಾ ಶಿವಾನಂದ, ಕಾಪು ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಗೋಪಾಲಕೃಷ್ಣ ರಾವ್, ಶರಣ್ ಕುಮಾರ್ ಮಟ್ಟು, ಕಾಪು ಪುರಸಭೆಯ ಸದಸ್ಯರು ವಿವಿಧ ಮೋರ್ಚಾದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಮಮತಾ, ಸ್ಟಾಲಿನ್ ಸೋಲು: ಇಂಡಿ ಕೂಟದ ಅಸ್ತಿತ್ವಕ್ಕೇ ಸಂಚಕಾರ

• ಪುಟ ೬

ಪಂಚರಾಜ್ಯ ಫಲಿತಾಂಶ ವಿಶೇಷ


ಪುಟಗಳು ೪,೧೧

ಬಂಗಾಳದಲ್ಲಿ ಮಮತಾ ಗರ್ವಭಂಗ | ಅಸ್ಸಾಂನಲ್ಲಿ ಬಿಜೆಪಿ ಅಜೇಯ | ತ.ನಾಡಲ್ಲಿ ಜನನಾಯಕ ವಿಜಯ
ನಿತಿನ್‌ಗೆ ಮೊದಲ ಭರ್ಜರಿ ಜಯ | ಕೇರಳ, ಕರ್ನಾಟಕದಲ್ಲಿ ಕೈ ಕಹಳೆ | ಎನ್‌ಡಿಎ ಪಾಲಿಗೆ ಪುದುಚೆರಿ

ದೀದಿ ಜಾಲಮುರಿದ ಮೋದಿ



ಪಶ್ಚಿಮ ಬಂಗಾಳ		ತಮಿಳುನಾಡು		ಕೇರಳ		ಅಸ್ಸಾಂ		ಪುದುಚೇರಿ	
ಬಿಜೆಪಿ	ಟಿಎಂಸಿ	ಟಿವಿಕೆ	ಡಿಎಂಕೆ+	ಯುಡಿಎಫ್	ಎಲ್‌ಡಿಎಫ್	ಬಿಜೆಪಿ+	ಕಾಂಗ್ರೆಸ್+	ಬಿಜೆಪಿ+	ಕಾಂಗ್ರೆಸ್+
208	79	107	74	100	35	102	21	18	6
ಕಾಂಗ್ರೆಸ್	ಇತರೆ	ಎಐಎಡಿಎಂಕೆ+	ಇತರೆ	ಬಿಜೆಪಿ+	ಇತರೆ	ಎಐಯುಡಿಎಫ್	ಇತರೆ		ಇತರೆ
2	4	53	0	3	2	2	1		6
ಒಟ್ಟು ಸ್ಥಾನ 293, ಬಹುಮತಕ್ಕೆ 148		ಒಟ್ಟು ಸ್ಥಾನ 234, ಬಹುಮತಕ್ಕೆ 118		ಒಟ್ಟು ಸ್ಥಾನ 140, ಬಹುಮತಕ್ಕೆ 71		ಒಟ್ಟು ಸ್ಥಾನ 126, ಬಹುಮತಕ್ಕೆ 64		ಒಟ್ಟು ಸ್ಥಾನ 30, ಬಹುಮತಕ್ಕೆ 16	





ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ದಾಖಲೆ ಜಯ

ಪಶ್ಚಿಮ ಬಂಗಾಳದಲ್ಲಿ ಇದೇ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿರುವ ಬಿಜೆಪಿ ಇತಿಹಾಸವನ್ನೇ ಸೃಷ್ಟಿಸಿದೆ. ಮಮತಾ ಬ್ಯಾನರ್ಜಿಯ ಕೋಟೆಯನ್ನೇ ಛಿದ್ರಗೊಳಿಸಿ ರಾಜಕೀಯ ಇತಿಹಾಸದಲ್ಲಿ ಬಿಜೆಪಿ ಹೊಸ ಅಧ್ಯಾಯ ಆರಂಭಿಸಿದೆ. ಈ ನಡುವೆ, ಮುಖ್ಯಮಂತ್ರಿ ಪಟ್ಟಕ್ಕಾಗಿ ಪೈಪೋಟಿಯೂ ಜೋರಾಗಿದೆ. ಸುವೇಂದು ಅಧಿಕಾರಿ ಸಿಎಂ ಹುದ್ದೆಗೆ ಪ್ರಮುಖ ಅಭ್ಯರ್ಥಿಯಾಗಿ ಹೊರಹೊಮ್ಮಿದ್ದಾರೆ. ನಂದಿಗ್ರಾಮ್ ಹೋರಾಟದಿಂದಲೇ ರಾಜ್ಯ ರಾಜಕೀಯದಲ್ಲಿ ಭಾರೀ ಪ್ರಭಾವ ಬೀರಿದ ಅವರು, ತೃಣಮೂಲ ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದ ನಂತರ ಪಕ್ಷದ ವಿಸ್ತರಣೆಗೆ ಪ್ರಮುಖ ಶಕ್ತಿಯಾಗಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ, ದಿಲೀಪ್ ಘೋಷ್, ಮಾಜಿ ಕೇಂದ್ರ ಸಚಿವ ನಿಸಿತ್ ಪ್ರಮಾಣಿಕ್, ರಾಜ್ಯ ಉಪಾಧ್ಯಕ್ಷೆ ಅಗ್ನಿಮಿತ್ರ ಪಾಲ್, ರೂಪಾ ಗಂಗೂಲಿ ಹೆಸರುಗಳೂ ಸಿಎಂ ರೇಸ್‌ನ ಪಟ್ಟಿಯಲ್ಲಿವೆ. ➡ಪುಟ ೭

ಕೇರಳದಲ್ಲಿ ಯುಡಿಎಫ್

• **ತಿರುವನಂತಪುರಂ:** 2026ರ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಯುಡಿಎಫ್ ಭಾರೀ ಬಹುಮತ ಗಳಿಸಿದೆ. ಎಡಪಕ್ಷಗಳ ಒಕ್ಕೂಟದ ಹತ್ತು ವರ್ಷಗಳ ಆಳ್ವಿಕೆಗೆ ನಿರ್ಣಾಯಕ ವಿರಾಮ ಬಿದ್ದಿದೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಮರಳಿದೆ. ಇದು ಪ್ರಬಲ ನಾಯಕರ ಭವಿಷ್ಯ ಮತ್ತು ರಾಜಕೀಯ ಅಸ್ತಿತ್ವವನ್ನು ಬದಲಾಯಿಸುವ ಸೂಚನೆಯನ್ನು ನೀಡಿದೆ. ➡ಪುಟ ೭

ತ.ನಾಡಲ್ಲಿ ದಳಪತಿ ದರ್ಬಾರ್

ಚೊಚ್ಚಲ ಚುನಾವಣೆಯಲ್ಲೇ ತಮ್ಮ ಸಿನಿಮಾಗಳಂತೆ ಬ್ಲಾಕ್ ಬಸ್ಟರ್ ವಿಜಯವನ್ನು ದಳಪತಿ ಕಂಡಿದ್ದಾರೆ. ಎರಡೂ ಜಗಜಟ್ಟಿ ದ್ರಾವಿಡ ಪಕ್ಷಗಳ ಹಲವು ದಶಕಗಳ ಪಾರುಪತ್ಯವನ್ನು ವಿಜಯ್ ಕೊನೆಗೊಳಿಸಿದ್ದಾರೆ. 1962ರಲ್ಲಿ ಕಾಂಗ್ರೆಸ್‌ನಿಂದ ಕೆ.ಕಾಮರಾಜ್ ಗೆಲುವು ಸಾಧಿಸಿದ್ದು ಬಿಟ್ಟರೆ, ಡಿಎಂಕೆ-ಎಐಎಡಿಎಂಕೆ ಪಕ್ಷಗಳೇ ತಮಿಳುನಾಡಿನಲ್ಲಿ ಅಧಿಕಾರ ಹಂಚಿಕೊಂಡು ಬಂದಿದ್ದವು.



ಅಸ್ಸಾಂನಲ್ಲಿ ಅಚಲ ಬಿಸ್ವಾಸ

ಚಹಾ ತೋಟದ ನಾಡಲ್ಲಿ ಮತ್ತೊಮ್ಮೆ ಕಮಲ ಅರಳಿದ್ದು,



ಅಸ್ಸಾಂನಲ್ಲಿ ಸತತ ಮೂರನೇ ಬಾರಿಗೆ ಬಿಜೆಪಿ ಗದ್ದುಗೆ ಏರಿದೆ. ಎನ್‌ಡಿಎ ಸ್ಪಷ್ಟ ಬಹುಮತ ಸಾಧಿಸಿದೆ. ಸ್ಥಳೀಯ ಸಮಸ್ಯೆ, ನುಸುಳುಕೋರರಿಂದ ರಕ್ಷಣೆ, ಉದ್ಯೋಗ ಸೃಷ್ಟಿಯ ವಿಚಾರಗಳನ್ನಿಟ್ಟುಕೊಂಡು ಎನ್‌ಡಿಎ ಅಖಾಡಕ್ಕಿಳಿದಿತ್ತು. ಸತತ ಮೂರನೇ ಬಾರಿ ಬಿಜೆಪಿಯತ್ತ ಜನರು ಒಲವು ತೋರಿಸಿದ್ದು ಉತ್ತರ-ಪೂರ್ವ ಭಾರತದಲ್ಲಿ ಬಿಜೆಪಿ ತನ್ನ ಹಿಡಿತ ಇನ್ನಷ್ಟು ಗಟ್ಟಿಗೊಳಿಸಿದೆ. ಹಿಮಂತ್ ಬಿಸ್ವಾ ಶರ್ಮ ಜಾಲುಕ್‌ಬಾರಿಯಲ್ಲಿ ಭರ್ಜರಿ ಗೆಲುವು ದಾಖಲಿಸಿದ್ದಾರೆ. ➡ಪುಟ ೭

ಪುದುಚೇರಿಯಲ್ಲಿ ಎನ್‌ಡಿಎ ಜಯಭೇರಿ



ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಈ ಬಾರಿಯೂ ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತೆ ಗೆಲುವು ಸಾಧಿಸಿದೆ. 30 ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ 18 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಈ ಮೂಲಕ ಮತ್ತೊಮ್ಮೆ ಅಧಿಕಾರಕ್ಕೇರಲು ಸಜ್ಜಾಗಿದೆ. ಮುಖ್ಯಮಂತ್ರಿ ಎನ್.ರಂಗಸ್ವಾಮಿ ಅವರು ತತ್ತನಚವಾಡಿ ಕ್ಷೇತ್ರವನ್ನು ಗೆದ್ದು ಪ್ರಮುಖ ವಿಜೇತರಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ.

- ಸ್ಟಾಲಿನ್, ಮಮತಾಗೆ ಮುಖಭಂಗ, ಇಬ್ಬರೂ ಸಿಎಂಗಳಿಗೆ ಸೋಲು
- 22 ರಾಜ್ಯಗಳಲ್ಲಿ ಎನ್‌ಡಿಎ ಆಡಳಿತ
- ಚುನಾವಣಾ ಫಲಿತಾಂಶ ಹಿನ್ನೆಲೆಯಲ್ಲಿ 242 ಕೋಟಿ ರೂ. ಬೆಟ್ಟಿಂಗ್!

ಅರಳಿತು ತಾವರೆ

ಕಠಿಣ ಪರಿಶ್ರಮದಿಂದ ಕಮಲ ಅರಳಿಸಿದ ಕಾರ್ಯಕರ್ತರಿಗೆ ಅಭಿನಂದನೆ: ಮೋದಿ

• **ಹೊಸದಿಲ್ಲಿ:** ಅಹರ್ನಿಶಿ ನೀವು ಪಟ್ಟ ಅವಿಶ್ರಾಂತ ಪ್ರಯತ್ನಗಳಿಂದ ತಾವರೆ ಹೂ ಅರಳಿದೆ ಎಂದು ಪ.ಬಂಗಾಳ, ಅಸ್ಸಾಂ, ಪುದುಚೇರಿಗಳಲ್ಲಿ ಬಿಜೆಪಿಯ ಐತಿಹಾಸಿಕ ವಿಜಯವನ್ನು ಉಲ್ಲೇಖಿಸಿ ಬಿಜೆಪಿ ಕಾರ್ಯಕರ್ತರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಮೂರು ರಾಜ್ಯಗಳಲ್ಲಿ ಬಿಜೆಪಿಯ ಅಭೂತಪೂರ್ವ ಜಯಭೇರಿ ಬಗ್ಗೆ ಪ್ರಧಾನಿ ಮೋದಿ ತುಂಬು ಸಂತಸ ವ್ಯಕ್ತಪಡಿಸಿದ್ದಾರೆ. ದಿಲ್ಲಿಯ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಭಾರೀ ಸಂಖ್ಯೆಯಲ್ಲಿ ನೆರೆದಿದ್ದ ಕಾರ್ಯಕರ್ತರನ್ನು ಉದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು. ಇದೇ ವೇಳೆ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಹಾಕಿದ ಹಾರವನ್ನು ಮೋದಿ ಮರಳಿ ನಿತಿನ್ ನವೀನ್ ಅವರಿಗೇ ಹಾಕಿ ಇದು ನಿಮ್ಮ ಮೊದಲ ಗೆಲುವು ಎಂದು ಶ್ಲಾಘಿಸಿದರು. ಬಂಗಾಳ, ಅಸ್ಸಾಂ, ಪುದುಚೇರಿ, ತಮಿಳುನಾಡು ಮತ್ತು ಕೇರಳದ ಜನತೆಗೆ ನಾನಿಂದು ಗೌರವಪೂರ್ವಕ ತಲೆಬಾಗುತ್ತೇನೆ. ➡ಪುಟ ೭

ಡಾ.ಶ್ಯಾಮ್ ಪ್ರಸಾದ್ ಕನಸು ನನಸು

ಇಂದೀಗ ಬಿಜೆಪಿ ಕಾರ್ಯಕರ್ತನಾಗಿ ಮಗದೊಂದು ಚಿಂತನೆ ನನ್ನ ಮನಸ್ಸಲ್ಲಿ ಮೂಡಿದೆ. ಅದೆಂದರೆ ಇಂದು ಡಾ.ಶ್ಯಾಮ್ ಪ್ರಸಾದ್ ಮುಖರ್ಜಿಯವರ ಆತ್ಮಕ್ಕೆ ತುಂಬು ಶಾಂತಿ ಲಭಿಸಿರಬಹುದು ಎಂದು ಹೇಳಿರುವ ಪ್ರಧಾನಿ ಮೋದಿ, ಬಿಜೆಪಿ ವಿಜಯದ ಹಿನ್ನೆಲೆ ನಮ್ಮ ಗಮನ ಬದಲಾವಣೆಗಳತ್ತ ಇರಬೇಕು ವಿನಾ ದ್ವೇಷಸಾಧನೆಯತ್ತ ಅಲ್ಲ. ಭವಿಷ್ಯದತ್ತ ಆದ್ಯತೆ ವಿನಾ ಆತಂಕದತ್ತ ಅಲ್ಲ. ಇನ್ನಾದರು ಅಂತ್ಯರಹಿತ ಹಿಂಸೆಯ ಹಾದಿಯನ್ನು ಸಂಪೂರ್ಣ ತ್ಯಜಿಸಿಬಿಡೋಣ ಎಂದು ಎಲ್ಲಾ ಪಕ್ಷೀಯರನ್ನು ವಿನಂತಿಸಿದರು. ➡ಪುಟ ೭

ರಾಜ್ಯದಲ್ಲಿ ಕೈತಪ್ಪದ ಮತದಾರರ ವಿಶ್ವಾಸ

ಸಮರ್ಥ್ ಶಾಮನೂರು ಗೆಲುವು

• **ದಾವಣಗೆರೆ:** ಮುಸ್ಲಿಂ ಬಂಡಾಯದಿಂದ ತೀವ್ರ ಕುತೂಹಲ ಕೆರಳಿಸಿದ್ದ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪ್ರಯಾಸದ ಗೆಲುವು ಸಾಧಿಸಿದ್ದಾರೆ. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ವಿರುದ್ಧ 5,708 ಮತಗಳ ಅಂತರದಿಂದ ಜಯ ದಾಖಲಿಸಿದ್ದಾರೆ. ಡಾ. ಶಾಮನೂರು ಶಿವಶಂಕರಪ್ಪ ನಿಧನದಿಂದ ತೆರವಾಗಿದ್ದ ಕ್ಷೇತ್ರ ಉಳಿಸಿಕೊಳ್ಳುವಲ್ಲಿ ಮೊಮ್ಮಗ ಸಮರ್ಥ್ ಯಶಸ್ವಿಯಾದರೂ, ದಾಖಲೆ ಅಂತರದಲ್ಲಿ ಗೆಲುವು ಸಾಧ್ಯವಾಗಿಲ್ಲ. ➡ಪುಟ ೭

ಗೆದ್ದು ಬೀಗಿದ ಉಮೇಶ ಮೇಟಿ

• **ಬಾಗಲಕೋಟೆ:** ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ



ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಗೆದ್ದಿದ್ದಾರೆ. ಪ್ರತಿಸ್ಪರ್ಧಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರಿಗಿಂತ 22,332 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಉಮೇಶ ಮೇಟಿ 98,919 ಮತ ಪಡೆದು ಗೆಲುವು ಸಾಧಿಸಿದ್ದಾರೆ. ಬಾಗಲಕೋಟೆಯ ಮತಕ್ಷೇತ್ರದ ಅಭಿವೃದ್ಧಿಗೆ ನಮ್ಮ ತಂದೆ ಕಂಡಿದ್ದ ಕನಸನ್ನು ನನಸು ಮಾಡುವೆ ಎಂದು ಉಮೇಶ ಮೇಟಿ ಹೇಳಿದ್ದಾರೆ. ➡ಪುಟ ೭

ಮೇ 9ರಿಂದ ಲಕ್ನೋದಲ್ಲಿ ಟೆನ್ನಿಸ್ ಪಂದ್ಯಾವಳಿ

• **ಬೆಂಗಳೂರು:** ಉತ್ತರ ಪ್ರದೇಶದ ಲಕ್ನೋದಲ್ಲಿ ಮೇ 9ರಿಂದ 13ರವರೆಗೆ ನಡೆಯಲಿರುವ ಪ್ರತಿಷ್ಠಿತ 2ನೇ ಆಲ್ ಇಂಡಿಯಾ ಪೊಲೀಸ್ ಬ್ಯಾಡ್ಮಿಂಟನ್ ಕ್ಲಸ್ಟರ್ (ಬ್ಯಾಡ್ಮಿಂಟನ್ ಮತ್ತು ಟೇಬಲ್ ಟೆನ್ನಿಸ್)2025-26 ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಕರ್ನಾಟಕ ಪೊಲೀಸ್ ತಂಡವು ಸನ್ನದ್ಧವಾಗಿದೆ.

ಉತ್ತರ ಪ್ರದೇಶ ಪೊಲೀಸ್ ಕ್ರೀಡಾ ನಿಯಂತ್ರಣ ಮಂಡಳಿಯು ಆಲಿಂಡಿಯಾ ಪೊಲೀಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್ ಮಾರ್ಗದರ್ಶನದಲ್ಲಿ ಈ ಬೃಹತ್ ಕ್ರೀಡಾ ಹಬ್ಬವನ್ನು ಆಯೋಜಿಸಿದೆ. ಲಕ್ನೋದ ಬಿಬಿಡಿ ಬ್ಯಾಡ್ಮಿಂಟನ್ ಅಕಾಡೆಮಿ ಮತ್ತು 35ನೇ ಬೆಟಾಲಿಯನ್ ಪಿಎಸಿ ಮೈದಾನಗಳಲ್ಲಿ ಪಂದ್ಯಾವಳಿಗಳು ಜರುಗಲಿವೆ. ಈ ಕ್ರೀಡಾಕೂಟಕ್ಕೆ ತೆರಳಲಿರುವ ರಾಜ್ಯದ ಒಟ್ಟು 45 ಸದಸ್ಯರ ತಂಡಕ್ಕೆ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಜರ್ಸಿಗಳನ್ನು ವಿತರಿಸಿ, ರಾಷ್ಟ್ರೀಯ ಮಟ್ಟದ ಈ ಟೂರ್ನಿಯಲ್ಲಿ ಉತ್ತಮ ಸಾಧನೆ ಮಾಡುವಂತೆ ಹಾರೈಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ ಅವರು ಉಪಸ್ಥಿತರಿದ್ದು, ತಂಡದ ಕ್ರೀಡಾಪಟುಗಳಿಗೆ ಶುಭ ಕೋರಿದರು.

ಅರ್ಹತೆಯಿದ್ದರೆ ಮಾತ್ರ ಅವಕಾಶ: ದೇಶದ ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಹಾಗೂ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳ ಸೇರಿದಂತೆ ಒಟ್ಟು 53 ಪೊಲೀಸ್ ಸಂಸ್ಥೆಗಳಿಗೆ ಈ ಪಂದ್ಯಾವಳಿಯಲ್ಲಿ ಭಾಗವಹಿಸಲು ಆಹ್ವಾನ ನೀಡಲಾಗಿದೆ. ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ಕ್ರೀಡಾಪಟುವು ವೈದ್ಯಕೀಯ ಅರ್ಹತಾ ಪತ್ರವನ್ನು ಹೊಂದಿರುವುದು ಮತ್ತು ತಮ್ಮ ಸಂಸ್ಥೆಯಲ್ಲಿ ಕನಿಷ್ಠ ಮೂರು ತಿಂಗಳ ಸೇವೆಯನ್ನು ಪೂರೈಸಿರುವುದು ಕಡ್ಡಾಯವಾಗಿದೆ. ಗೆಜೆಟೆಡ್ ಅಧಿಕಾರಿಗಳು ಮತ್ತು ಗೆಜೆಟೆಡ್ ಅಲ್ಲದ ಅಧಿಕಾರಿಗಳು 35 ವರ್ಷ ಮೇಲ್ಪಟ್ಟವರಿರಬೇಕು.

ತಮಿಳು ಮತದಾರನ ಮೂರನೇ ಆಯ್ಕೆ!

- ಡಿಎಂಕೆ ಅಹಂಕಾರಕ್ಕೆ ವಿಜಯ್ ಪೆಟ್ಟು
- ಹಿಂದೂ ದೇವರು, ಧರ್ಮಕ್ಕೆ ಪದೇ ಪದೆ ಅವಮಾನ
- ಸಚಿವರು, ನಾಯಕರ ಅವಹೇಳನ ಖಂಡಿಸದ ಸ್ಟಾಲಿನ್
- ಡಿಎಂಕೆಗೆ ಪರ್ಯಾಯವಾಗಿ ಟಿವಿಕೆ ಸರ್ಕಾರ ಅಸ್ತಿತ್ವಕ್ಕೆ
- ಎಐಎಡಿಎಂಕೆಯ ನಾಯಕ ರಹಿತ ಪಕ್ಷ ಕೈಬಿಟ್ಟ ಜನ

ದಿಗಂತ ವಿಶ್ಲೇಷಣೆ

▸ ಸೋಮಶೇಖರ ಸಿ.ಜಿ.

ತಮಿಳುನಾಡಿನ ಮತ ಎಣಿಕೆ ಕೊಠಡಿಗಳಿಂದ ಸೋಮವಾರ ಹೊರಬಂದ



ಸಂಖ್ಯೆಗಳು ಕೇವಲ ಒಂದು ಸರ್ಕಾರವನ್ನು ಬದಲಿಸುತ್ತಿಲ್ಲ, ಆರು ದಶಕಗಳಷ್ಟು ಹಳೆಯ ರಾಜಕೀಯ ವ್ಯಾಕರಣವನ್ನೇ ತಿದ್ದಿ ಬರೆದಿವೆ. ತಮಿಳಗ ವೆಟ್ರಿ ಕಳಗಂ(ಟಿವಿಕೆ) 106 ಕ್ಷೇತ್ರಗಳಲ್ಲಿ, ಎಐಎಡಿಎಂಕೆ 56 ಮತ್ತು ಡಿಎಂಕೆ 72 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದು, ಇದು ಮುಗಿಯುತ್ತಿರುವ ಒಂದು ಯುಗದ ಮತ್ತು ಆರಂಭವಾಗುತ್ತಿರುವ ಮತ್ತೊಂದು ಯುಗದ ನಡುವಿನ ಗೆರೆಯನ್ನು ಎಳೆದಿದೆ. 234 ಸ್ಥಾನಗಳ ವಿಧಾನಸಭೆಯಲ್ಲಿ ಬಹುಮತಕ್ಕೆ ಬೇಕಿರುವ 118ರ ಗೆರೆಗೆ ಕೇವಲ 12 ಸ್ಥಾನಗಳ ಅಂತರದಲ್ಲಿ ಒಂದು ಇತ್ತೀಚೆಗಷ್ಟೇ ಹುಟ್ಟಿಕೊಂಡ ಪಕ್ಷ ನಿಂತಿದೆ. ➡ಪುಟ ೭

ಲಾಸ್ಟ್ ಮೊಘಲ್ ಆದ ಕಾಮ್ರೆಡ್ ವಿಜಯನ್

▸ ಸಂತೋಷ್ ತಮ್ಮಯ್ಯ

ಕೇರಳದಲ್ಲಿ ಎಲ್‌ಡಿಎಫ್ ಸೋಲುವುದರೊಂದಿಗೆ ಕಮ್ಯುನಿಸ್ಟರ ಶವಪೆಟ್ಟಿಗೆಗೆ ಕೊನೆ ಮೊಳೆ ಬಿದ್ದಂತಾಗಿದೆ. ಆ ಮೂಲಕ ಪಿಣರಾಯಿ ವಿಜಯನ್ ಕೊನೆಯ ಕಾಮ್ರೆಡ್ ಮುಖ್ಯಮಂತ್ರಿ ಎಂದು ಇತಿಹಾಸಕ್ಕೆ ಸಂದಿದ್ದಾರೆ. ಸಮಾನತೆ, ಕ್ರಾಂತಿಗಳ ಹೆಸರಿನಲ್ಲಿ

ಮಲಬಾರ್ ಪ್ರದೇಶದಲ್ಲೇ ಕಾಮ್ರೆಡ್‌ಗಳಿಗೆ ಹಿನ್ನಡೆ



ಹರತಾಳಗಳನ್ನು ನಡೆಸಿ ಜನರನ್ನು ದಿಕ್ಕುತಪ್ಪಿಸಬಹುದು ಎಂದುಕೊಂಡ ಚಿಂತನೆ ಕೊನೆಗೂ ಕೊನೆಯುಸಿರೆಳೆದಿದೆ. ಕೇರಳದಲ್ಲಿ ರಾಜಕೀಯ ಹತ್ಯೆಗಳ ಕರಾಳ ಅಧ್ಯಾಯಕ್ಕೆ ಮುನ್ನುಡಿ ಬರೆದಿದ್ದ ಮುಖ್ಯಮಂತ್ರಿಯೇ ಭಾರತದ ಕಟ್ಟಕಡೆಯ ಕಮ್ಯುನಿಸ್ಟ್ ಮುಖ್ಯಮಂತ್ರಿಯಾಗಿರುವುದು ವಿಶೇಷ. 2018ರಲ್ಲಿ ತ್ರಿಪುರಾ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ 20 ವರ್ಷಗಳ ದೀರ್ಘಕಾಲದ ಅಧಿಕಾರ ಕಳೆದುಕೊಂಡಾಗ ಅವರನ್ನು 'ಲಾಸ್ಟ್ ಮೊಘಲ್' ಎಂದು ಕರೆಯಲಾಗಿತ್ತು. ಅದಕ್ಕೆ ತಿರುವನಂತಪುರದಿಂದ ಹೇಳಿಕೆ ನೀಡಿದ್ದ ಪಿಣರಾಯಿ ವಿಜಯನ್, "ನಾನು ಜೀವಂತವಿರುವವರೆಗೆ ಭಾರತದಲ್ಲಿ ಕಮ್ಯುನಿಸಮ್ಮಿಗೆ ಕೊನೆ ಎಂಬುದಿಲ್ಲ" ಎಂದು ಗುಡುಗಿದ್ದರು. ➡ಪುಟ ೭

ಹಜ್ ಯಾತ್ರಿಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಭ ಹಾರೈಕೆ

ರಾಜ್ಯದ ಒಳಿತನ್ನೂ ಬಯಸಿರಿ: ಸಿಎಂ

• **ಬೆಂಗಳೂರು:** ಹಜ್ ಯಾತ್ರಿಗರು ಮಾಡುವ ಪ್ರಾರ್ಥನೆಯಲ್ಲಿ ರಾಜ್ಯದ ಒಳಿತನ್ನೂ ಬಯಸಿರಿ ಎಂದು ಕೋರುತ್ತಾ, ಹಜ್ ಯಾತ್ರೆಯು ಸುಖಕರವಾಗಿರಲೆಂದು ಪ್ರಾರ್ಥಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸೋಮವಾರ ಕರ್ನಾಟಕ ಹಜ್ ಸಮಿತಿ ವತಿಯಿಂದ ಹಜ್ -2026 ಹಜ್ ಯಾತ್ರಿಕರ ವಿಮಾನಯಾನ ಉಡಾವಣೆ ಗೆ ಚಾಲನೆ ನೀಡಿ ಮಾತನಾಡಿದರು. ಇಸ್ಲಾಂ ಧರ್ಮದ ಪ್ರಮುಖ ಐದು ಆಧಾರ ಸ್ತಂಭಗಳಲ್ಲಿ ಹಜ್ ಆಚರಣೆಯೂ ಒಂದಾಗಿದ್ದು, ಪ್ರತಿಯೊಬ್ಬ ಮುಸಲ್ಮಾನನೂ ತನ್ನ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಹಜ್ ಯಾತ್ರೆಯನ್ನು ಕೈಗೊಳ್ಳಲೇಬೇಕಾಗಿದೆ. ಹಜ್ ಯಾತ್ರೆ ಮಾಡುವುದರಿಂದ ಮನುಷ್ಯನ ಹಿಂದಿನ ಎಲ್ಲಾ ಪಾಪಗಳು ಕ್ಷಮಿಸಲ್ಪಡುತ್ತವೆ ಮತ್ತು ಆತ ಮರುಜನ್ಮ ಪಡೆದ ಮಗುವಿನಂತೆ ಪರಿಶುದ್ಧನಾಗುತ್ತಾನೆ ಎಂಬ ನಂಬಿಕೆಯಿದೆ ಎಂದರು

ಯಾರಾದರೂ ಒಬ್ಬ ಮನುಷ್ಯನನ್ನು (ಅಪರಾಧ ಮಾಡದಿದ್ದರೂ) ಕೊಂದರೆ, ಅವನು ಇಡೀ ಮಾನವಕುಲವನ್ನೇ ಕೊಂದಂತೆ; ಮತ್ತು ಯಾರಾದರೂ ಒಂದು ಜೀವವನ್ನು ಉಳಿಸಿದರೆ, ಅವನು ಇಡೀ ಮಾನವಕುಲವನ್ನೇ ಉಳಿಸಿದಂತೆ ಎಂದು ಜೀವದ ಬೆಲೆಯ ಬಗ್ಗೆ ಕುರಾನ್ ನೀಡುವ ಅತ್ಯುನ್ನತ ಸಂದೇಶವಾಗಿದೆ ಎಂದರು.

ಪ್ರತಿಯೊಬ್ಬ ಹಜ್ ಯಾತ್ರಿಗನು ನಿಷ್ಕಲ್ಮಶ ಮನದಿಂದ ಯಾತ್ರೆ ಕೈಗೊಳ್ಳಬೇಕು. ಯಾತ್ರೆಯ ಸಂದರ್ಭದಲ್ಲಿ ಮಾಡುವ ಪ್ರಾರ್ಥನೆಯಲ್ಲಿ ಸರ್ಕಾರದ ಒಳಿತನ್ನೂ ಬಯಸಿರಿ ಎಂದು ಯಾತ್ರಿಗರಿಗೆ ಕೋರಿದರು.



ಭ್ರಾತೃತ್ವ, ಸಮಾನತೆ, ಸೌಹಾರ್ದವೇ ಸಂವಿಧಾನದ ಮೂಲತತ್ತ್ವ

ಯಾವುದೇ ಧರ್ಮವೂ ಹಿಂಸೆಯನ್ನು ಬೋಧಿಸುವುದಿಲ್ಲ. ಆದರೆ ಮಾನವನು ಪರಸ್ಪರ ದ್ವೇಷವನ್ನು ಸಾಧಿಸುತ್ತಾನೆ. ಮಾನವೀಯತೆಯೇ ನಿಜವಾದ ಧರ್ಮ. ಪರರ ಒಳಿತನ್ನು ಬಯಸುವವರನ್ನು ದೇವರು ರಕ್ಷಿಸುತ್ತಾನೆ. ತನ್ನ ಧರ್ಮವನ್ನು ಪ್ರೀತಿಸಿ, ಆದರೆ ಇತರೆ ಧರ್ಮದ ಬಗ್ಗೆ ಸಹಿಷ್ಣುತೆ ಬೆಳೆಸಿಕೊಳ್ಳಬೇಕು. ಭ್ರಾತೃತ್ವ, ಸಮಾನತೆ ಮತ್ತು ಸೌಹಾರ್ದತೆಗಳೇ ನಮ್ಮ ಸಂವಿಧಾನದ ಮೂಲತತ್ತ್ವವಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಹೊಸ ದಿಗಂತ
ಮಂಗಳವಾರ, 5 ಮೇ 2026
ಮಂಗಳೂರು



ಪಂಚರಾಜ್ಯ ಫಲಿತಾಂಶ

ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಅಸ್ಸಾಂ, ಪುದುಚೇರಿ

ಶತಕ ಬಾರಿಸಿದ ಎನ್‌ಡಿಎ | ಡಬಲ್ ಇಂಜಿನ್ ಸರ್ಕಾರದತ್ತ ಜನರ ಭರವಸೆ

ಅಸ್ಸಾಂನಲ್ಲಿ ಬಿಜೆಪಿಗೆ ಹ್ಯಾಟ್ರಿಕ್

ಚಹಾ ತೋಟದ ನಾಡಲ್ಲಿ ಮತ್ತೊಮ್ಮೆ ಕಮಲ ಅರಳಿದ್ದು, ಅಸ್ಸಾಂನಲ್ಲಿ ಸತತ ಮೂರನೇ ಬಾರಿಗೆ ಬಿಜೆಪಿ ಗದ್ದುಗೆ ಏರಿದೆ. ಏ.9 ರಂದು 126 ವಿಧಾನಸಭಾ ಕ್ಷೇತ್ರಗಳಿಗಾಗಿ ಒಂದೇ ಹಂತದಲ್ಲಿ ನಡೆದಿದ್ದ ಚುನಾವಣೆಯಲ್ಲಿ ಎನ್‌ಡಿಎ ಸರಳ ಮತ್ತು ಸ್ಪಷ್ಟ ಬಹುಮತ(64) ಸಾಧಿಸಿದೆ.

ಎನ್‌ಡಿಎ ಮತ್ತು ಕಾಂಗ್ರೆಸ್ ನಡುವಿನ ಸಮರದಲ್ಲಿ ಎನ್‌ಡಿಎ 102 ಕ್ಷೇತ್ರಗಳಲ್ಲಿ ಗೆದ್ದುಕೊಂಡರೆ, ಕಾಂಗ್ರೆಸ್ 19 ಕ್ಷೇತ್ರದಲ್ಲಿ ಮಾತ್ರ ಗೆದ್ದಿದೆ. ಗಮನಿಸಬೇಕಾದ ವಿಷಯದಲ್ಲಿ 5 ಕಡೆ ಇತರೆ ಪಕ್ಷದ ಅಭ್ಯರ್ಥಿ ಗಳು ಗೆದ್ದಿದ್ದಾರೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ ಅವರ ನೇತೃತ್ವದಲ್ಲಿ ಸ್ಥಳೀಯ ಸಮಸ್ಯೆ, ನಸುಳುಕೋರರಿಂದ ರಕ್ಷಣೆ, ಉದ್ಯೋಗ ಸೃಷ್ಟಿಯ ವಿಚಾರಗಳನ್ನಿಟ್ಟುಕೊಂಡು ಎನ್‌ಡಿಎ ಅಖಾಡಕ್ಕಿಳಿದಿತ್ತು. ಇತ್ತ ಗೌರವ್ ಗೊಗೊಯ್ ನೇತೃತ್ವದಲ್ಲಿ ಕಾಂಗ್ರೆಸ್ ನೌಕರಿ, ಅಭಿವೃದ್ಧಿ ಜತೆಗೆ ವಿವಿಧ ಪ್ರಣಾಳಿಕೆಗಳೊಂದಿಗೆ ಕಣಕ್ಕಿಳಿದಿತ್ತು. ಚುನಾವಣೆಯಲ್ಲಿ 722 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಜನಾದೇಶ ಸತತ ಮೂರನೇ ಬಾರಿ ಬಿಜೆಪಿಯತ್ತ ಒಲವು ತೋರಿಸಿದ್ದು ಉತ್ತರ-ಪೂರ್ವ ಭಾರತದಲ್ಲಿ ಬಿಜೆಪಿ ತನ್ನ ಹಿಡಿತ ಇನ್ನಷ್ಟು ಗಟ್ಟಿಗೊಳಿಸಿದೆ. ವೈಯಕ್ತಿಕ ಪ್ರಮುಖ ಫಲಿತಾಂಶಗಳಲ್ಲಿ ಹಿಮಂತ್ ಬಿಸ್ವಾ ಶರ್ಮ ಜಾಲುಕ್‌ಬಾರಿಯಲ್ಲಿ ಭರ್ಜರಿ ಗೆಲುವು ದಾಖಲಿಸಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ನಾಯಕ ಗೌರವ್ ಗೊಗೊಯ್ ಜೋರ್ಹತ್‌ನಲ್ಲಿ ಸೋತರೆ, ಲುರಿಂಜ್ಯೋತಿ ಗೊಗೊಯ್ ಖೊವಾಂಗ್‌ನಲ್ಲಿ ಸೋತಿದ್ದಾರೆ.

ಉತ್ತರ-ಪೂರ್ವ ಭಾರತದಲ್ಲಿ ಮುಂದುವರಿದ ಬಿಜೆಪಿ ಪಾರುಪತ್ಯ

ಬಿಜೆಪಿ ಜಯಭೇರಿ: ಪಕ್ಷ ಲೆಕ್ಕಾಚಾರದಲ್ಲೂ ಬಿಜೆಪಿಗೆ ಸ್ಪಷ್ಟ ಬಹುಮತ ದೊರೆತಿದೆ. ಆಸೋಮ್ ಗಣ ಪರಿಷದ್ (ಎಜಿಪಿ) ಮತ್ತು ಬೋಡೋ ಪೀಪಲ್ಸ್ ಫ್ರಂಟ್‌ನೊಂದಿಗೆ ಮೈತ್ರಿ ಮಾಡಿಕೊಂಡಿದ್ದ ಬಿಜೆಪಿ 90 ಸ್ವಂತ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಎಜಿಪಿ 26 ಮತ್ತು ಬಿಪಿಎಫ್ 10 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿತ್ತು. ಬಿಜೆಪಿ 82 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ.

ಗೊಗೊಯ್‌ಗೆ ಭಾರೀ ಸೋಲು: ಅಸ್ಸಾಂ ಕಾಂಗ್ರೆಸ್ ಅಧ್ಯಕ್ಷ ಗೌರವ್ ಗೊಗೊಯ್ ಭಾರೀ ಸೋಲನುಭವಿಸಿದ್ದಾರೆ. ವಿಧಾನ ಸಭೆಗೆ ಇದೇ ಮೊದಲ ಬಾರಿ ಸ್ಪರ್ಧಿಸಿದ್ದ ಗೌರವ್ ಗೊಗೊಯ್ ವಿರುದ್ಧ ಬಿಜೆಪಿ ಅಭ್ಯರ್ಥಿ ಹಿತೇಂದ್ರನಾಥ್ ಗೋಸ್ವಾಮಿ ಗೆಲುವು ದಾಖಲಿಸಿದರು. ಬಿಜೆಪಿಯ ಗೋಸ್ವಾಮಿ 69,439 ಮತಗಳನ್ನು ಪಡೆದರೆ, ಗೊಗೊಯ್ 46,257 ಮತ ಗಳಿಸಿದರು. ಆಮ್ ಆದ್ಮಿ ಪಕ್ಷದ ಪ್ರಿಯಾಂಕುಶ್ ದತ್ತ 701 ಮತ ಪಡೆದರು. ಗೋಸ್ವಾಮಿ 23,182 ಮತಗಳ ಅಂತರದಿಂದ ದೊಡ್ಡ ಗೆಲುವು ಸಾಧಿಸಿದ್ದಾರೆ.



ಎನ್‌ಡಿಎ ಶತಕ, ಐತಿಹಾಸಿಕ ಫಲಿತಾಂಶ!

ಅಸ್ಸಾಂ ಇತಿಹಾಸದಲ್ಲಿ ಮೊದಲ ಬಾರಿಗೆ ಮೈತ್ರಿಕೂಟ ಶತಕ ಬಾರಿಸಿದೆ. ಇದಕ್ಕೂ ಮೊದಲು ಅಸ್ಸಾಂ ವಿಧಾನಸಭಾ ಇತಿಹಾಸದಲ್ಲಿ ಯಾವುದೇ ಪಕ್ಷ, ಮೈತ್ರಿ ಕೂಟವೂ 100ರ ಗಡಿ ದಾಟಿರಲೇ ಇಲ್ಲ. 2006 ರಲ್ಲಿ, ಕಾಂಗ್ರೆಸ್ ನೇತೃತ್ವದ ಬಣ 56 ಸ್ಥಾನಗಳನ್ನು ಹೊಂದಿತ್ತು. ಬಿಜೆಪಿ ಅಲ್ಲಿ 34 ಸ್ಥಾನಗಳನ್ನು ಗೆದ್ದಿತ್ತು. 2011ರಲ್ಲಿ, ಕಾಂಗ್ರೆಸ್ 78 ಸ್ಥಾನಗಳನ್ನು ಗಳಿಸಿತು, ಅಲ್ಲಿ ಬಿಜೆಪಿ + 27 ಕ್ಕೆ ಇಳಿಯಿತು. 2016 ರಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟವು 86 ಸ್ಥಾನಗಳಿಗೆ ವಿಸ್ತರಿಸಿತು. 2021ರಲ್ಲಿ ಬಿಜೆಪಿ+ 79 ಮತ್ತು ಕಾಂಗ್ರೆಸ್ 30 ಕ್ಷೇತ್ರದಲ್ಲಿ ಗೆದ್ದಿತ್ತು. ಈಗ ಬಿಜೆಪಿ + 102 ಸ್ಥಾನಗಳಲ್ಲಿ, ಕಾಂಗ್ರೆಸ್ 19 ಸ್ಥಾನಗಳಲ್ಲಿ ಗೆದ್ದಿದೆ.

ಬಿಜೆಪಿ ಗೆಲುವಿನ ಗುಟ್ಟೇನು?

ಹಿಮಂತ ವಿಶ್ವಾಸ ಶರ್ಮ

ಹಿಮಂತ ಬಿಸ್ವಾ ಶರ್ಮ ಅವರ ಆಡಳಿತ ಶೈಲಿ, ತ್ವರಿತ ನಿರ್ಧಾರ ಮತ್ತು ಅಭಿವೃದ್ಧಿ ತಂತ್ರ ಜನರ ವಿಶ್ವಾಸ ಸತತ ಮೂರನೇ ಬಾರಿ ಗಳಿಸಿದೆ. ಮದರಸಾ ವಿಚಾರಕ್ಕೆ ಸಂಬಂಧಿಸಿ ದಂತೆ ಸಿಎಂ ಹಿಮಂತ್ ಕಾರ್ಯತಂತ್ರ ದೇಶಾದ್ಯಂತ ಖ್ಯಾತಿ ಪಡೆದಿತ್ತು. ಅಸ್ಸಾಂನಲ್ಲೂ ಈ ಬಗ್ಗೆ ಪರ-ವಿರೋಧಗಳು ವ್ಯಕ್ತವಾಗಿದ್ದವು. ಅಷ್ಟೇ ಅಲ್ಲದೆ, ನಸುಳುಕೋರರನ್ನು ಬಗ್ಗುಬಡಿವಲ್ಲಿ ಜೆಸಿಬಿ ಕಾರ್ಯತಂತ್ರದ ಬಗ್ಗೆಯೂ ಚರ್ಚೆಗಳು ಹೊರ ಬಂದಿದ್ದವು. ಅಭಿವೃದ್ಧಿ ವಿಚಾರಕ್ಕೆ ಸಂಬಂಧಿಸಿದಂತೆ ಸಿಎಂ ಹಿಮಂತ್ ಸ್ಥಳೀಯ ಮತ್ತು ತ್ವರಿತ ಪರಿಹಾರಗಳ ಮೇಲೆ ಗಮನ ಹರಿಸಿದ್ದರು. ಈ ಎಲ್ಲಾ ಕಾರ್ಯತಂತ್ರಗಳು ಹಿಮಂತ್ ಅವರನ್ನು ಮತ್ತೊಮ್ಮೆ ಗೆಲ್ಲಿಸಿವೆ.

ಅಭಿವೃದ್ಧಿ: ಸಾರಿಗೆ ಮತ್ತು ಮೂಲಸೌಕರ್ಯಗಳಲ್ಲಿ ಹಿಮಂತ ಬಿಸ್ವಾ ಶರ್ಮ ತಂದ ಬದಲಾವಣೆಗಳು ಗ್ರಾಮೀಣ ಮತದಾರರನ್ನು ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿವೆ.



ಬಿಜೆಪಿ	ಐಎನ್‌ಸಿ	ಬಿಒಪಿಎಫ್	ಎಜಿಪಿ
82	19	10	10

ಎಐಯುಡಿಎಫ್	ಆರ್‌ಜೆಆರ್‌ಡಿ	ಎಐಟಿಸಿ
02	02	01



ಪ್ರಮುಖ ನಾಯಕರು ಮತ್ತು ಫಲಿತಾಂಶ

ಹಿಮಂತ್ ಬಿಸ್ವಾ ಶರ್ಮ(ಎನ್‌ಡಿಎ)	ಜುಲುಕ್‌ಬಾರಿ	ಬಿದಿಶಾ ನಿಯೋಗ್	ಗೆಲುವು
ಗೌರವ್ ಗೊಗೊಯ್(ಕಾಂಗ್ರೆಸ್)	ಜೋರ್ಹತ್	ಹಿತೇಂದ್ರನಾಥ್ ಗೋಸ್ವಾಮಿ	ಸೋಲು
ಅಖೀಲ್ ಗೊಗೊಯ್(ಕಾಂಗ್ರೆಸ್)	ಸಿಬ್ಸಾಗರ್	ಕುಶಾಲ್ ದೊವಾರಿ	ಗೆಲುವು
ರಿಪುನ್ ಬೋರಾ(ಕಾಂಗ್ರೆಸ್)	ಬರ್ಚಾಲ್ಲಾ	ರಿತು ಬಾರನ್	ಸೋಲು
ಪ್ರದ್ಯುತ್ ಬೊರ್ದೊಲೊಯ್(ಬಿಜೆಪಿ)	ದಿಸ್‌ಪುರ	ಮೀರಾ ಗೋಸ್ವಾಮಿ	ಗೆಲುವು

ಮತ್ತೆ ಮುಖ್ಯಮಂತ್ರಿಯಾಗಿ ರಂಗಸ್ವಾಮಿ ಅಧಿಕಾರಕ್ಕೆ?

ಪುದುಚೇರಿಯಲ್ಲಿ ಮತ್ತೆ ಎನ್‌ಡಿಎ ಜಯಭೇರಿ

ಕೇಂದ್ರಾಡಳಿತ ಪ್ರದೇಶ ಪುದುಚೇರಿ ವಿಧಾನಸಭಾ ಚುನಾವಣಾ ಫಲಿತಾಂಶ ಘೋಷಣೆಯಾಗಿದ್ದು, ಈ ಬಾರಿಯೂ ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತೆ ಗೆಲುವು ಸಾಧಿಸಿದೆ. 30 ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ 16 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಈ ಮೂಲಕ ಮತ್ತೊಮ್ಮೆ ಅಧಿಕಾರಕ್ಕೇರಲು ಸಜ್ಜಾಗಿದೆ. ಸಣ್ಣ ಗಾತ್ರದ ಹೊರತಾಗಿಯೂ, ಪುದುಚೇರಿ ವಿಧಾನಸಭಾ ಸ್ಪರ್ಧೆಯು ರಾಜಕೀಯವಾಗಿ ಮಹತ್ವದ್ದಾಗಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ತನ್ನ ಹಿಡಿತವನ್ನು ಬಲಪಡಿಸುವ ಗುರಿ ಹೊಂದಿದ್ದರೆ, ಇನ್ನೊಂದೆಡೆ ಕಾಂಗ್ರೆಸ್-ಡಿಎಂಕೆ ಮೈತ್ರಿಕೂಟವು ಕಳೆದುಹೋದ ಪ್ರದೇಶವನ್ನು ಮರಳಿ ಪಡೆಯಲು ಪ್ರಯತ್ನಿಸುತ್ತಿತ್ತು. ಈ ಮಧ್ಯೆ ಈ ಬಾರಿ ಮತದಾನದ ಭಾಗವಹಿಸುವಿಕೆ ಕೂಡ ದಾಖಲೆ ಮಟ್ಟದಲ್ಲಿ ನಡೆದಿದ್ದು, ಸುಮಾರು ಶೇ.90ದಷ್ಟು ಮತದಾನವು ಯಶಸ್ವಿಯಾಗಿ ನಡೆದಿದೆ. ಈ ಕೇಂದ್ರಾಡಳಿತ ಪ್ರದೇಶವು ಮೂವರು ನಾಮನಿರ್ದೇಶಿತ ಸದಸ್ಯರನ್ನು ಹೊಂದಿದ್ದು, ಮೈತ್ರಿಕೂಟಕ್ಕೆ ಬಹುಮತವನ್ನು ಪಡೆಯಲು 17 ಸ್ಥಾನಗಳ ಅಗತ್ಯವಿತ್ತು. ಎನ್‌ಡಿಎ ನೇತೃತ್ವದ ಆಲ್ ಇಂಡಿಯಾ ಎನ್.ಆರ್ ಕಾಂಗ್ರೆಸ್ (ಎಐಎನ್‌ಆರ್‌ಸಿ) ಈ ಬಾರಿ ಮತ್ತೆ ಅಧಿಕಾರಕ್ಕೆ ಏರಲು ಸಜ್ಜಾಗಿದೆ. ಕರ್ನಾಟಕದ ಬಿಜೆಪಿ ಮುಖಂಡ ನಿರ್ಮಲ್ ಕುಮಾರ್ ಸುರಾಣಾ ಅವರು ಪುದುಚೇರಿಯ ಚುನಾವಣಾ ಉಸ್ತುವಾರಿಯಾಗಿದ್ದರು.

ಎಐಎನ್‌ಆರ್‌ಸಿ	ಬಿಜೆಪಿ	ಕಾಂಗ್ರೆಸ್	ಟಿವಿಕೆ
12	04	01	02

ಡಿಎಂಕೆ	ಎಲ್‌ಜೆಕೆ	ಇತರೆ
05	01	05



ನಿರ್ಮಲ್ ಕುಮಾರ್ ಸುರಾಣ ಪರಿಶ್ರಮ



ಬಿಜೆಪಿ ರಾಷ್ಟ್ರೀಯ ನಾಯಕತ್ವವು ನಿರ್ಮಲ್ ಕುಮಾರ್ ಸುರಾಣ ಅವರನ್ನು ಪುದುಚೇರಿಯ ಪಕ್ಷದ ಚುನಾವಣಾ ಉಸ್ತುವಾರಿಯಾಗಿ ನಿಯೋಜನೆ ಮಾಡಿತ್ತು. ಬಿಜೆಪಿ ಪುದುಚೇರಿಯ ಪಕ್ಷದ ಉಸ್ತುವಾರಿಯಾಗಿ ನಿರ್ಮಲ್ ಕುಮಾರ್ ಸುರಾಣ ಅವರು ಬಿರುಸಿನಿಂದ ಸಂಚರಿಸಿ ಚುನಾವಣಾ ಕಾರ್ಯತಂತ್ರ ರೂಪಿಸಿದ್ದರು. ಅವರ ಪರಿಶ್ರಮದ ಪರಿಣಾಮವಾಗಿಯೇ 2026ರಲ್ಲಿ ಮತ್ತೊಮ್ಮೆ ಅಲ್ಲಿ ಎನ್‌ಡಿಎ ಅಧಿಕಾರದ ಗದ್ದುಗೆ ಏರುವಲ್ಲಿ ಯಶಸ್ವಿಯಾಗಿದ್ದು, ಇವರ ಅವಿರತ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕಿದೆ.

ರಂಗಸ್ವಾಮಿಗೆ ಭರ್ಜರಿ ಗೆಲುವು

ಮುಖ್ಯಮಂತ್ರಿ ಎನ್.ರಂಗಸ್ವಾಮಿ ಅವರು 4,441 ಮತಗಳ ಅಂತರದಿಂದ ತಟ್ಟನಚವಾಡಿ ಕ್ಷೇತ್ರವನ್ನು ಗೆದ್ದು ಪ್ರಮುಖ ವಿಜೇತರಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ. ಅವರು 10,024 ಮತಗಳನ್ನು ಪಡೆದು, 5,583 ಮತಗಳನ್ನು ಗಳಿಸಿದ ಇ. ವಿನಯಗಂ ಅವರನ್ನು ಸೋಲಿಸಿದ್ದಾರೆ. ಪಕ್ಷೇತರ ಅಭ್ಯರ್ಥಿ ಕೆ. ಸೇತು ಮೂರನೇ ಸ್ಥಾನದಲ್ಲಿದ್ದರೆ, ಹಿರಿಯ ಕಾಂಗ್ರೆಸ್ ನಾಯಕ ವಿ. ವೈತಿಲಿಂಗಂ ಹಿನ್ನಡೆ ಅನುಭವಿಸಿದ್ದಾರೆ. ಈ ಮೂಲಕ ರಂಗಸ್ವಾಮಿಯವರ ನಾಯಕತ್ವವು ಮೈತ್ರಿಕೂಟದ ಕಾರ್ಯಕ್ಷಮತೆಯನ್ನು ಮುಂದುವರಿಸುವುದರೊಂದಿಗೆ, ಎನ್‌ಡಿಎ ಬೆಂಬಲವನ್ನು ಸದುಪಯೋಗಪಡಿಸಿಕೊಂಡಿದೆ. 2021ರಲ್ಲಿ ಎಐಎನ್‌ಆರ್‌ಸಿ ನೇತೃತ್ವದ ಮೈತ್ರಿಕೂಟವು 16 ಸ್ಥಾನಗಳನ್ನು ಗೆದ್ದು ಪುದುಚೇರಿಯಲ್ಲಿ ಸರ್ಕಾರ ರಚಿಸಿತು.

ಪುದುಚೇರಿಗೆ ಧನ್ಯವಾದಗಳು!

ನಮ್ಮ ಉತ್ತಮ ಆಡಳಿತದ ದಾಖಲೆ ಮತ್ತು ಎನ್. ರಂಗಸ್ವಾಮಿ ನೇತೃತ್ವದ ಸರ್ಕಾರದ ಕಾರ್ಯಗಳ ಆಧಾರದ ಮೇಲೆ, ಪುದುಚೇರಿಯ ಜನರು ಎನ್‌ಡಿಎಗೆ ಮತ್ತೊಂದು ಅವಧಿಯ ಆಶೀರ್ವಾದ ನೀಡಿದ್ದಾರೆ. ಈ ಆಶೀರ್ವಾದಗಳು ಉತ್ತಮ ಆಡಳಿತ ಉತ್ತೇಜಿಸುವ ನಮ್ಮ ಪ್ರಯತ್ನಗಳಿಗೆ ವೇಗ ನೀಡುತ್ತವೆ.

■ ನರೇಂದ್ರ ಮೋದಿ, ಪ್ರಧಾನಿ

ದೇಶದ ಕೊನೆಯ ರಾಜ್ಯವೂ ಕಮ್ಯುನಿಸ್ಟ್ ಮುಕ್ತ | ಬಿಜೆಪಿಗೆ 3 ಸ್ಥಾನ

ಯುಡಿಎಫ್ ಕೈ ಹಿಡಿದ ಕೇರಳ

ಕೇರಳದ 140 ಸದಸ್ಯಬಲದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ -ಮುಸ್ಲಿಂ ಲೀಗ್ ಒಳಗೊಂಡ 9ಪಕ್ಷಗಳ ಕೂಟವಾದ ಯುಡಿಎಫ್, ಆಳುವ ಸಿಪಿಎಂ ನೇತೃತ್ವದ ಎಲ್‌ಡಿಎಫ್‌ನ್ನು ಸೋಲಿಸಿ ಜಯಭೇರಿ ಬಾರಿಸಿದೆ. ಯುಡಿಎಫ್ 102 ಸ್ಥಾನಗಳೊಂದಿಗೆ ಭರ್ಜರಿ ಜಯ ಸಾಧಿಸಿದರೆ, ಆಳುವ ಎಲ್‌ಡಿಎಫ್ 35 ಸ್ಥಾನಗಳಿಗೆ ಕುಸಿತ ಕಂಡು ಹೀನಾಯ ಸೋಲುಂಡಿದೆ. ಕೇರಳ ವಿಧಾನಸಭೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ 3 ಸ್ಥಾನಗಳನ್ನು ಪಡೆದು ವಿಧಾನಸಭೆಗೆ ಪ್ರವೇಶ ಪಡೆಯುವ ಜೊತೆಗೆ ಹಲವು ಕ್ಷೇತ್ರಗಳಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್ ಕೂಟಗಳಿಗೆ ಪ್ರಬಲ ಸ್ಪರ್ಧೆಯೊಡ್ಡಿದೆ. ಕೇರಳದಲ್ಲಿ ಅಧಿಕಾರ ಕಳೆದುಕೊಳ್ಳುವುದರೊಂದಿಗೆ ದೇಶದ ಕೊನೆಯ ರಾಜ್ಯವನ್ನೂ ಕಮ್ಯುನಿಸ್ಟರು ಕಳೆದುಕೊಂಡಿದ್ದಾರೆ.

1977ರಲ್ಲಿ ತುರ್ತು ಪರಿಸ್ಥಿತಿಯ ಬಳಿಕ ನಡೆದ ಚುನಾವಣೆಯಲ್ಲಿ 111 ಸ್ಥಾನಗಳನ್ನು ಗೆದ್ದುಕೊಂಡಿದ್ದ ಯುಡಿಎಫ್ ಇದೀಗ 2ನೇ ಅತಿದೊಡ್ಡ ಗೆಲುವು ದಾಖಲಿಸಿದೆ. 2021ರ ವಿಧಾನಸಭಾ ಚುನಾವಣೆಯಲ್ಲಿ 99 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದಿದ್ದ ಎಲ್‌ಡಿಎಫ್ 35 ಸ್ಥಾನಗಳಿಗೆ ತೃಪ್ತಿ ಪಟ್ಟುಕೊಂಡಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸಂಪುಟದ 13ಕ್ಕೂ ಅಧಿಕ ಸಚಿವರು ಸೋಲು ಕಂಡಿದ್ದಾರೆ. ಕೊಟ್ಟಾಯಂ, ಇಡುಕ್ಕಿ, ಎರ್ನಾಕುಳಂ, ಮಲಪ್ಪುರಂಗಳಲ್ಲಿ ಎಲ್‌ಡಿಎಫ್‌ಗೆ ಒಂದೂ ಸ್ಥಾನ ಸಿಗಲಿಲ್ಲ. ತ್ರಿಶೂರು, ಕಣ್ಣೂರಿನಂತಹ ಜಿಲ್ಲೆಗಳನ್ನು ಹೊರತುಪಡಿಸಿದರೆ ಯುಡಿಎಫ್ ಅಲೆಗೆ ಎಲ್‌ಡಿಎಫ್ ಕೊಚ್ಚಿಹೋಗಿದೆ. ಇದೇ ಮೊದಲ ಬಾರಿಗೆ ಕಮ್ಯುನಿಸ್ಟರಿಗೆ ಕೇರಳದಲ್ಲಿ ಇಂತಹ ಶೋಚನೀಯ ಸೋಲುಂಟಾಗಿದೆ. ಯುಡಿಎಫ್ ಕೂಟದಲ್ಲಿ ಕಾಂಗ್ರೆಸ್ 63 ಸ್ಥಾನಗಳನ್ನು ಗೆದ್ದರೆ, ಮುಸ್ಲಿಂ ಲೀಗ್ 22 ಸ್ಥಾನಗಳಲ್ಲಿ ಗೆದ್ದಿದೆ.

ಎಲ್‌ಡಿಎಫ್ ಎಂತಹ ಆಡಳಿತ ವಿರೋಧಿ ಅಲೆಗೆ ಸಿಲುಕಿತ್ತೆಂದರೆ ಸ್ವತಃ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಮ್ಮ ಭದ್ರಕೋಟೆ ಧರ್ಮಾಡಂನಲ್ಲಿ 6 ಸುತ್ತುಗಳಲ್ಲಿ ಹಿನ್ನಡೆ ಕಂಡಿದ್ದು, 7ನೇ ಸುತ್ತಿನ ಬಳಿಕವೇ ಅವರು ಮೇಲುಗೈ ಸಾಧಿಸುವಂತಾಗಿತ್ತು.

ಕಾಂಗ್ರೆಸ್	ಸಿಪಿಐ(ಎಂ)	ಮುಸ್ಲಿಂ ಲೀಗ್	ಸಿಪಿಐ	ಬಿಜೆಪಿ	ಇತರ
63	26	22	08	03	18

ಒಟ್ಟು ಕ್ಷೇತ್ರಗಳು 140, ಬಹುಮತ 71



ಮೊದಲ ಬಾರಿ ಬಿಜೆಪಿ 3 ಸ್ಥಾನಗಳಲ್ಲಿ ಗೆಲುವು

ಬಿಜೆಪಿ ನೇತೃತ್ವದ ಎನ್‌ಡಿಎ ಈ ಬಾರಿ 6 ಕ್ಷೇತ್ರಗಳಲ್ಲಿ ಪ್ರಬಲ ಪೈಪೋಟಿ ನೀಡಿದ್ದು, ಅಂತಿಮವಾಗಿ ನೇಮಮ್, ಕಳಕೂಟ್ಟಮ್ ಮತ್ತು ಚಾತನ್ನೂರ್‌ಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವಿನ ನಗೆ ಬೀರಿದರು. ನೇಮಮ್‌ನಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್, ಚಾತನ್ನೂರ್‌ನಲ್ಲಿ ಬಿ.ಬಿ.ಗೋಪಕುಮಾರ್, ಕಳಕೂಟ್ಟಮ್‌ನಲ್ಲಿ ವಿ.ಮುರಳೀಧರನ್ ಅವರು ಗೆಲುವು ಸಾಧಿಸಿದ್ದಾರೆ. ನೇಮಮ್‌ನಲ್ಲಿ ರಾಜೀವ್ ಚಂದ್ರಶೇಖರ್ ಅವರು ಸಚಿವ ವಿ.ಶಿವನ್‌ಕುಟ್ಟಿ ಅವರನ್ನು ಸೋಲಿಸಿದರೆ, ಮುರಳೀಧರನ್ ಅವರು ಮಾಜಿ ಎಲ್‌ಡಿಎಫ್ ಸಚಿವ ಕಡಕಂಪಳ್ಳಿ ಸುರೇಂದ್ರನ್‌ರನ್ನು ಸೋಲಿಸಿ ಆಯ್ಕೆಯಾದರು. ಗೋಪಕುಮಾರ್ ಅವರು ಎಲ್‌ಡಿಎಫ್ ನಾಯಕ ಆರ್.ರಾಜೇಂದ್ರನ್ ಅವರನ್ನು ಸೋಲಿಸಿ ಆಯ್ಕೆಯಾದರು.

ಮಂಜೇಶ್ವರದಲ್ಲಿ ಗೆದ್ದ ಅಶ್ರಫ್

ಮಂಜೇಶ್ವರದಲ್ಲೂ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ (67,696) ಆರಂಭಿಕ ಹಂತದಲ್ಲಿ ಮುನ್ನಡೆ ಸಾಧಿಸಿದರೂ ಅನಂತರ ಹಿಂದೆ ಬಿದ್ದರು. ಎಡರಂಗದ ಅಭ್ಯರ್ಥಿ ಡಮ್ಮಿ ಕ್ಯಾಂಡೇಟ್ ಎಂಬ ಮಾತು ಕೇಳಿಬಂದಿದ್ದ ಮಂಜೇಶ್ವರದಲ್ಲಿ ಎಡರಂಗ ಅಭ್ಯರ್ಥಿ ಕೆ.ಆರ್.ಜಯಾನಂದ (21,212) ಅವರು ನಿರೀಕ್ಷೆಗಿಂತ ತೀರಾ ಕಡಿಮೆ ಮತಗಳನ್ನು ಪಡೆಯುವ ಮೂಲಕ ಯುಡಿಎಫ್ ಅಭ್ಯರ್ಥಿ ಮುಸ್ಲಿಂ ಲೀಗಿನ ಎ.ಕೆ.ಎಂ.ಅಶ್ರಫ್ (96,948) ದೊಡ್ಡ ಅಂತರದ ಜಯ ಸಾಧಿಸುವಂತೆ ಮಾಡಿತು. ಕಾಸರಗೋಡಿನಲ್ಲಿ ಭಾರೀ ನಿರೀಕ್ಷೆ ಹುಟ್ಟಿಸಿದ್ದ ಬಿಜೆಪಿ ಅಭ್ಯರ್ಥಿ ಅಶ್ವಿನಿ ಎಂ.ಎಲ್ (53,698), ಮುಸ್ಲಿಂ ಲೀಗ್ ಪ್ರತಿಸ್ಪರ್ಧಿ ಕಲ್ಲಟ್ರ ಮಾಹಿನ್ ಹಾಜಿ (76,396) ವಿರುದ್ಧ ಸೋತಿದ್ದಾರೆ.

ಎನ್‌ಡಿಎ ಗೆಲುವಿನ ಹೆಜ್ಜೆಗೆ ಮುನ್ನುಡಿ

ಕೇರಳದಲ್ಲಿ ಬಹುಕಾಲದಿಂದ ನೆಲೆಗಟ್ಟಲು ಹೋರಾಟ ನಡೆಸುತ್ತಿದ್ದ ಬಿಜೆಪಿ, ಈ ಬಾರಿಯ ವಿಧಾನ ಸಭಾ ಚುನಾವಣೆಯಲ್ಲಿ ಸಣ್ಣದಾ ದರೂ ಗಮನಾರ್ಹ ಸಾಧನೆ ಮಾಡಿದ್ದು, ಇದರ ಹಿಂದೆ ರಾಜ್ಯ ಘಟಕದ ಅಧ್ಯಕ್ಷರಾದ ರಾಜೀವ್ ಚಂದ್ರ ಶೇಖರ್ ನೇತೃತ್ವ ಪ್ರಮುಖ ಕಾರಣವಾಗಿದೆ.

ಉದ್ಯಮಿ ಮತ್ತು ತಂತ್ರಜ್ಞನಾಗಿ ಆರಂಭಗೊಂಡ ಅವರ ರಾಜಕೀಯ ಪಯಣ, ಸಂಸದ ಸ್ಥಾನದಿಂದ ಕೇಂದ್ರ ಸಚಿವರ ಹುದ್ದೆಯವರೆಗೆ ಸಾಗಿದ್ದು, ಇದೀಗ ಕೇರಳ ಬಿಜೆಪಿ ಅಧ್ಯಕ್ಷರಾಗಿ ಹೊಸ ರಾಜಕೀಯ ಸವಾಲುಗಳನ್ನು ಎದುರಿಸುವ ಹಂತಕ್ಕೆ ತಲುಪಿದೆ. ಒಂದು ವರ್ಷ ಹಿಂದೆ ಪಕ್ಷದ ರಾಷ್ಟ್ರೀಯ ನಾಯಕತ್ವವು ಅವರಿಗೆ ಕೇರಳದಲ್ಲಿ ಬಿಜೆಪಿಯನ್ನು ಪ್ರಸ್ತುತಗೊಳಿಸುವ ಕಠಿಣ ಜವಾಬ್ದಾರಿ ನೀಡಿತ್ತು. ಅದರ ನಂತರ ರಾಜ್ಯದಲ್ಲಿ ಪಕ್ಷದ ಸ್ಥಿತಿಯಲ್ಲಿ ನಿಧಾನವಾಗಿ ಬದಲಾವಣೆ ಕಂಡುಬಂದಿದೆ. ನಾಲ್ಕು

» ರಾಜೀವ್ ಚಂದ್ರಶೇಖರ್ ನೇತೃತ್ವದಲ್ಲಿ ಬಿಜೆಪಿ ಯಶಸ್ಸು

ದಶಕಗಳ ಕಾಲ ಸಿಪಿಐ(ಎಂ) ಹಿಡಿತದಲ್ಲಿದ್ದ ತಿರುವನಂತಪುರಂ ಕಾರ್ಪೊರೇಷನ್ ಅನ್ನು ಬಿಜೆಪಿ ತನ್ನದಾಗಿಸಿಕೊಂಡದ್ದು ಮೊದಲ ಸೂಚನೆ ಯಾಗಿ ಕಾಣಿಸಿಕೊಂಡಿತು. ಈ ಬಾರಿ ಬಿಜೆಪಿ 3 ಸ್ಥಾನಗಳನ್ನು ಗೆದ್ದು, ಹಲವು ಕ್ಷೇತ್ರಗಳಲ್ಲಿ ತನ್ನ ವೋಟ್ ಶೇರ್ ಹೆಚ್ಚಿಸಿ ಕೊಳ್ಳುವಲ್ಲಿ ಯಶಸ್ವಿಯಾಯಿತು. ಹಿಂದಿನ ವಿಧಾನಸಭೆಯಲ್ಲಿ ಪ್ರತಿನಿಧಿತ್ವವಿಲ್ಲದ ಪಕ್ಷಕ್ಕೆ ಇದು ಮಹತ್ವದ ಹೆಜ್ಜೆಯಾಗಿದೆ. ಈ ಮೂರರಲ್ಲಿ ಚಂದ್ರಶೇಖರ್ ಸ್ವತಃ ಒಂದು ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದಾರೆ. ಸಂಘಟನಾ ಬಲವರ್ಧನೆ ಮತ್ತು ಅಭಿವೃದ್ಧಿ ಆಧಾರಿತ ರಾಜಕೀಯವನ್ನು ಒಟ್ಟುಗೂಡಿಸಿದ ಚಂದ್ರಶೇಖರ್ ಧೋರಣೆ ಫಲ ನೀಡಲು ಆರಂಭಿಸಿದೆ. ಆದರೆ, ಪಕ್ಷದ ಮುಂದಿನ ಪಯಣ ಇನ್ನೂ ಸವಾಲಿನದ್ದೇ ಆಗಿದೆ.

ಯಾರಾಗಲಿದ್ದಾರೆ ಸಿಎಂ?

ಯುಡಿಎಫ್ ಕೇರಳದಲ್ಲಿ ಭಾರೀ ಗೆಲುವು ಸಾಧಿಸಿದ್ದು, ಇದೀಗ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬ ಪ್ರಶ್ನೆ ಯುಡಿಎಫ್‌ನಲ್ಲಿ ತೀವ್ರ ಚರ್ಚೆಗೆ ಕಾರಣವಾಗುವ ಸಾಧ್ಯತೆ ಇದೆ. ರಮೇಶ್ ಚೆನ್ನಿತ್ತಲ, ವಿ.ಡಿ.ಸತೀಶನ್, ಕೆ.ಸಿ.ವೇಣುಗೋಪಾಲ್, ಚಾಂಡಿ ಉಮ್ಮನ್ ಮುಂತಾದ ನಾಯಕರು ಈ ಹುದ್ದೆಯ ಮೇಲೆ ಕಣ್ಣಿಟ್ಟಿರುವುದರಿಂದ ಯಾರಿಗೆ ಹೈಕಮಾಂಡ್ ಕೃಪೆಯಾಗಲಿದೆ ಎಂಬುದೀಗ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಬಿರುಕಿನಿಂದ ಎಡರಂಗಕ್ಕೆ ಹಿನ್ನಡೆ

ಆಳುವ ಎಡರಂಗದಲ್ಲಿ ಈ ಬಾರಿ ಉನ್ನತ ನಾಯಕರಲ್ಲೇ ಒಡಕು ಮೂಡಿದ್ದು, ಕಣ್ಣೂರಿನ ಪ್ರಮುಖ ನಾಯಕ ಜಿ. ಸುಧಾಕರನ್ ಎಡರಂಗದೊಂದಿಗಿನ 63 ವರ್ಷಗಳ ನಂಟನ್ನು ತೊರೆದು ಯುಡಿಎಫ್ ಪಾಳಯ ಸೇರಿ ಎಡರಂಗದ ಕೋಟೆಯಾಗಿದ್ದ ಅಂಬಲಪ್ಪುಳದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ದೊಡ್ಡ ಅಂತರದಲ್ಲಿ ಗೆಲುವು ಸಾಧಿಸಿದರು.

ಪತನವಾದ ದಶಕಗಳ ದ್ರಾವಿಡ ಪಾರುಪತ್ಯ | ಸೈಲೆಂಟಾದ ಸ್ಟಾಲಿನ್ ಪಡೆ

ತ.ನಾಡಲ್ಲಿ ದಳಪತಿ ಸರ್ಕಾರ್!

ಗೆಲುವಿನ ಇನ್ನೊಂದು ಹೆಸರೇ ವಿಜಯ್. ಆತನ ಪಕ್ಷದ ಹೆಸರಿಗೂ ತಮಿಳುನಾಡಿನ ಗೆಲುವಿನ ಕೂಟ ಎಂಬ ಅರ್ಥ ಬರುತ್ತದೆ. ಸಿನಿಮಾ ಕೂತ್ತಾಡಿ(ನೃತ್ಯಗಾರ) ಏನು ಮಾಡಬಲ್ಲ? ಎಂದು ಎಂಜಿಆರ್‌ಗೆ ಅವಮಾನಿಸಿದಂತೆ, ಈತನೂ ಸಿನಿಮಾ ನಟ, ಏನೋ ಎರಡು ಡೈಲಾಗ್ ಹೊಡೆದು ಸೋತ ನಂತರ ರಾಜಕೀಯ ಬಿಡುತ್ತಾನೆ ಅಂದುಕೊಂಡ ಡಿಎಂಕೆಗೆ ಸೋಮವಾರ ಆಘಾತ ಅನುಭವಿಸಿದೆ. ಚೊಚ್ಚಲ ಚುನಾವಣೆಯಲ್ಲೇ ಬ್ಲಾಕ್ ಬಸ್ಟರ್ ವಿಜಯವನ್ನು ದಳಪತಿ ಕಂಡಿದ್ದಾರೆ.

ಎರಡೂ ಜಗಜಟ್ಟಿ ದ್ರಾವಿಡ ಪಕ್ಷಗಳ ಹಲವು ದಶಕಗಳ ಪಾರುಪತ್ಯವನ್ನು ವಿಜಯ್ ಕೊನೆಗೊಳಿಸಿದ್ದಾರೆ. 1962ರಲ್ಲಿ ಕಾಂಗ್ರೆಸ್‌ನಿಂದ ಕೆ.ಕಾಮರಾಜ್ ಗೆಲುವು ಸಾಧಿಸಿದ್ದು ಬಿಟ್ಟರೆ, ಡಿಎಂಕೆ-ಎಐಎಡಿಎಂಕೆ ಪಕ್ಷಗಳೇ ತಮಿಳುನಾಡಿನಲ್ಲಿ ಅಧಿಕಾರ ಹಂಚಿಕೊಂಡು ಬಂದಿದ್ದವು. ಆ್ಯಕ್ಸಿಸ್ ಮೈ ಇಂಡಿಯಾ ಸಮೀಕ್ಷೆಯೊಂದೇ ಟಿವಿಕೆ 109 ಸ್ಥಾನಗಳನ್ನು ಗೆಲ್ಲುತ್ತದೆ ಎಂಬ ಫಲಿತಾಂಶ ನೀಡಿತ್ತು. ಸಾಮಾಜಿಕ ನ್ಯಾಯ ಮತ್ತು ಪಾರದರ್ಶಕ ಆಡಳಿತದ ಮೂಲಕ ಭ್ರಷ್ಟಾಚಾರ ಮತ್ತು ಮಾದಕದ್ರವ್ಯ ಮುಕ್ತ ತಮಿಳುನಾಡು ನಿರ್ಮಾಣ ಮಾಡುವುದಾಗಿ ಜನರಿಗೆ ವಿಜಯ್ ಆಶ್ವಾಸನೆ ನೀಡಿದ್ದಾರೆ. ಅದೇ ರೀತಿ ಸ್ಟಾಲಿನ್ ಆಡಳಿತದ ವಿರೋಧಿ ಮತಗಳು ಮತ್ತು ಯುವ ಜನತೆಯ ಮತವೂ ವಿಜಯ್ ಪಾಲಾಗಿವೆ. ಕೊನೆಯದಾಗಿ ಸಿನಿಮಾ ನಟರೊಬ್ಬರು ನೇರ ರಾಜಕೀಯ ಕಣಕ್ಕೆ ಇಳಿದಿದ್ದು, ಎಂ.ಜಿ.ರಾಮಚಂದ್ರನ್ 1977ರಲ್ಲಿ. ತಮಿಳುನಾಡಿಗೆ ಡಿಎಂಕೆ-ಎಐಎಡಿಎಂಕೆ ಬದಲಿಗೆ ಆಯ್ಕೆಯೊಂದು ಬೇಕಾಗಿದ್ದು, ವಿಜಯ್ ಆ ಆಯ್ಕೆಯನ್ನು ನೀಡಿದ್ದರು. 2009ರಿಂದಲೇ ವಿಜಯ್ ಮಕ್ಕಳ್ ಇಯಕ್ಕಂ ಮೂಲಕ ವಿಜಯ್ ಪೂರ್ವಸಿದ್ಧತೆ ನಡೆಸಿದ್ದರು. ಸನಾತನ ಧರ್ಮ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ವಿರೋಧಿ. ಡೆಂಗ್ಯೂ ಮತ್ತು ಮಲೇರಿಯಾ ಇದ್ದಂತೆ, ನಿರ್ಮೂಲನೆ ಮಾಡಬೇಕು ಎಂದು ಉದಯನಿಧಿ ಹಿಂದು ವಿರೋಧಿ ಹೇಳಿಕೆ ನೀಡಿದ್ದರು. ಡಿಎಂಕೆ ಆಡಳಿತದಲ್ಲಿ ಹಿಂದು ದೇಗುಲಗಳ ನಾಶ, ಅರ್ಚಕರ ಹತ್ಯೆ ಹೆಚ್ಚಾಗಿತ್ತು. ಸನಾತನ ಧರ್ಮವನ್ನು ತಮಿಳುನಾಡಿನಿಂದ ಕಿತ್ತೊಗೆಯುತ್ತೇವೆ ಎಂದಿದ್ದ ಕರುಣಾನಿಧಿ ಕುಟುಂಬ ಆಡಳಿತವನ್ನು ಕಿತ್ತೊಗೆಯಲು ಜೋಸೆಫ್ ಬರಬೇಕಾಯಿತು.

ತಮಿಳುನಾಡು ವಿಧಾನಸಭೆ	ಟಿವಿಕೆ	ಡಿಎಂಕೆ	ಎಐಎಡಿಎಂಕೆ	ಕಾಂಗ್ರೆಸ್	ಇತರೆ
	108	60	47	05	14

ಒಟ್ಟು ಕ್ಷೇತ್ರಗಳು 234, ಸರ್ಕಾರ ರಚನೆಗೆ ಅಗತ್ಯ ಸ್ಥಾನಗಳು 118



ಸನಾತನ ಅಳಿಸಿಹಾಕಲು ಹೊರಟವರ ಆಡಳಿತ ವೈಟ್ ವಾಶ್

ಜಗಜಟ್ಟಿಗಳ ಮಣಿಸಿದ ಆಟೋ ಚಾಲಕ!

1991ರಿಂದಲೂ ಎಐಎಡಿಎಂಕೆ ಕೋಟೆಯಾದ ರೋಯಪುರಂನಲ್ಲಿ ಟಿವಿಕೆ ಅಭ್ಯರ್ಥಿ ಆಟೋ ಚಾಲಕ ವಿಜಯ್ ದಾಮು ಗೆಲುವು ಸಾಧಿಸಿದ್ದಾರೆ. ಐದು ಬಾರಿಯ ಎಐಎಡಿಎಂಕೆ ಶಾಸಕ ಡಿ.ಜಯಕುಮಾರ್ ಮತ್ತು ಡಿಎಂಕೆಯ ಸುಬೈರ್ ಖಾನ್ ರನ್ನು ಸೋಲಿಸಿದ್ದಾರೆ.

ಸ್ಟಾಲಿನ್‌ಗೆ ಮುಖಭಂಗ, 8,284 ಮತಗಳ ಸೋಲು

2011ರಿಂದ ಎಂ.ಕೆ.ಸ್ಟಾಲಿನ್ (68,512) ಪ್ರತಿನಿಧಿಸುತ್ತಿರುವ ತಮ್ಮ ನೆಚ್ಚಿನ ಕೊಳತ್ತೂರ್ ಕ್ಷೇತ್ರದಲ್ಲೇ ಒಂದು ಕಾಲದಲ್ಲಿ ಸ್ಟಾಲಿನ್‌ಗೆ ಆಪ್ತನಾಗಿದ್ದ ಟಿವಿಕೆ ಅಭ್ಯರ್ಥಿ ವಿ.ಎಸ್. ಬಾಬು (76,796) ವಿರುದ್ಧ 8,284 ಮತಗಳಿಂದ ಸೋತು ಮುಖಭಂಗ ಅನುಭವಿಸಿದ್ದಾರೆ.

ವಿಜಯ್ ಕಾರು ಚಾಲಕನ ಪುತ್ರನಿಗೆ ಜಯ

ವಿಜಯ್ ತಮ್ಮ ಕಾರು ಚಾಲಕನ ಪುತ್ರ ಆರ್.ಶಬರೀನಾಥನ್‌ಗೆ ಟಿಕೆಟ್ ನೀಡಿದ್ದು, ವಿರುಗಂಪಾಕ್ಕಮ್ ಕ್ಷೇತ್ರದಲ್ಲಿ ಡಿಎಂಕೆ ಅಭ್ಯರ್ಥಿ ಪ್ರಭಾಕರ ರಾಜಾ ಎದುರು 17,427 ಮತಗಳ ಭಾರೀ ಮುನ್ನಡೆಯೊಂದಿಗೆ ಜಯ ಸಾಧಿಸಿದ್ದಾರೆ.



ಎನ್‌ಡಿಎ ಬೆಂಬಲಿಸಿದ ಮತದಾರರೆಲ್ಲರಿಗೂ ಕೃತಜ್ಞತೆಗಳು. ಪ್ರಭಾವಶಾಲಿ ಪ್ರದರ್ಶನ ನೀಡಿದ ಟಿವಿಕೆಗೆ ಅಭಿನಂದನೆಗಳು. ತಮಿಳುನಾಡಿನ ಪ್ರಗತಿ, ಜನರ ಯೋಗಕ್ಷೇಮಕ್ಕೆ ಕೊಡುಗೆ ನೀಡುವಲ್ಲಿ ಯಾವುದೇ ಅವಕಾಶವನ್ನು ನಾವು ಬಿಟ್ಟುಕೊಡುವುದಿಲ್ಲ.

■ ನರೇಂದ್ರ ಮೋದಿ, ಪ್ರಧಾನಿ



ಎಐಎಡಿಎಂಕೆ, ಸಣ್ಣ ಪಕ್ಷಗಳ ಜತೆ ಮೈತ್ರಿ?

ಸರ್ಕಾರ ರಚಿಸಲು 118 ಸ್ಥಾನಗಳ ಅಗತ್ಯವಿದ್ದು, ಟಿವಿಕೆ ಯಾರೊಂದಿಗೆ ಮೈತ್ರಿ ಮಾಡಲಿದೆ ಎಂಬ ಪ್ರಶ್ನೆ ಎದ್ದಿದೆ. ಎಐಎಡಿಎಂಕೆ ಜತೆ ಮೈತ್ರಿ ಮಾಡಬಹುದು. ಕಾಂಗ್ರೆಸ್ ಅಥವಾ ಇತರ ಸಣ್ಣ ಪಕ್ಷಗಳನ್ನು ಜತೆಗೂಡಿಸಿ ಸರ್ಕಾರ ರಚಿಸುವ ಸಾಧ್ಯತೆಯಿದೆ.

ಭವಿಷ್ಯ ನುಡಿದಿದ್ದ ಕಿಶೋರ್

ರಾಜಕೀಯ ತಂತ್ರಗಾರಿಕೆ ತಜ್ಞ ಪ್ರಶಾಂತ್ ಕಿಶೋರ್, ವಿಜಯ್ ಯಾವುದೇ ಮೈತ್ರಿ ಮಾಡಿಕೊಳ್ಳದೆ ಒಬ್ಬರೇ ಸ್ಪರ್ಧಿಸಿದರೆ ತಮಿಳುನಾಡನ್ನೇ ಗೆಲ್ಲುತ್ತಾರೆ ಎಂದು ಕಳೆದ ವರ್ಷ ಹೇಳಿದ್ದ ವಿಡಿಯೋ ವೈರಲ್ ಆಗಿದೆ. ಇದಲ್ಲದೆ, ವಿಜಯ್ ಗೆಲುವಿನ ಬಳಿಕ ರಾಜ್ಯದಲ್ಲಿ ಧೋನಿಗಿಂತ ಪ್ರಸಿದ್ಧ ಬಿಹಾರಿ ಆಗುತ್ತೇನೆ ಎಂದಿದ್ದರು.

ಕುಟುಂಬ ಆಡಳಿತ ಮತ್ತು ಮತ ಖರೀದಿಯನ್ನು ಜನ ವಿರೋಧಿಸಿದ್ದಾರೆ. ಹೊಸ ತಲೆಮಾರಿನ ನಾಯಕತ್ವಕ್ಕೆ ಜನ ಜೈಕಾರ ಹಾಕಿದ್ದಾರೆ. ಅದ್ಭುತ ಪದಾರ್ಪಣೆಗೈದ ವಿಜಯ್ ಮತ್ತು ಟಿವಿಕೆಗೆ ಅಭಿನಂದನೆಗಳು. ಭಗವಂತ ಸದಾ ನಿಮ್ಮ ಜತೆಗಿರಲಿ.

■ ಕೆ.ಅಣ್ಣಾಮಲೈ, ಬಿಜೆಪಿ ನಾಯಕ

ತಮಿಳುನಾಡು ವಿಧಾನ ಸಭೆ ಚುನಾವಣೆಯಲ್ಲಿ ವಿಜಯಶಾಲಿಯಾದ ಟಿವಿಕೆ ಅಧ್ಯಕ್ಷ ವಿಜಯ್‌ರಿಗೆ ನನ್ನ ಅಭಿನಂದನೆಗಳು.

■ ರಜನಿಕಾಂತ್, ಹಿರಿಯ ನಟ

ಆತನಲ್ಲಿ ಮುಖ್ಯಮಂತ್ರಿ ಆಗುತ್ತೇನೆಂಬ ನಂಬಿಕೆಯಿತ್ತು. ನಾಯಕನಾಗಿ ಅಲ್ಲದೆ, ಜನರು ಮನೆ ಮಗನಾಗಿ, ಯುವಕರು ಅಣ್ಣನಂತೆ ಕಾಣುತ್ತಾರೆ. ಜನರೊಂದಿಗಿನ ಸಂಬಂಧವೇ ವಿಜಯ್ ಗೆಲುವಿಗೆ ಕಾರಣ.

■ ಎಸ್.ಎ. ಚಂದ್ರಶೇಖರ್, ವಿಜಯ್ ತಂದೆ

ಬಿಜೆಪಿ ಹಿನ್ನಡೆಗೆ ಮುಖಂಡರ ಜತೆ ಚರ್ಚೆ: ವಿಜಯೇಂದ್ರ

• **ಬೆಂಗಳೂರು:** ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪ ಚುನಾವಣೆಯಲ್ಲಿನ ಹಿನ್ನಡೆ ಕುರಿತು ನಾವು ಮುಖಂಡರ ಜತೆಗೆ ಚರ್ಚೆ ಮಾಡುತ್ತೇವೆ




ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಉಪಚುನಾವಣೆಗಳ ಫಲಿತಾಂಶ ಕುರಿತು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಾಗಲಕೋಟೆಯಲ್ಲಿ 15 ದಿನ ಬೀಡು ಬಿಟ್ಟಿದ್ದರು. ಸಚಿವ ಸಂಪುಟದ ಸದಸ್ಯರೂ ಬೀಡು ಬಿಟ್ಟಿದ್ದರು. ಉಪ ಚುನಾವಣೆ ಗೆದ್ದಿದೆ ಎಂದರೆ ಕಾಂಗ್ರೆಸ್ ಪಕ್ಷದ ಕಡೆ ಒಲವಿದೆ ಎನ್ನಲು ಸಾಧ್ಯವಿಲ್ಲ ಎಂದರು. ಸಂಘಟಿತ ಕಾರ್ಯದ ಕುರಿತು ಕಾರ್ಯತಂತ್ರ ಮಾಡುತ್ತೇವೆ ಎಂದು ತಿಳಿಸಿದರು. ಎರಡೂ ಕ್ಷೇತ್ರದ ಮುಖಂಡರು ತಮ್ಮ ಸಮಸ್ಯೆಗಳನ್ನು ಬದಿಗಿಟ್ಟು ಪಕ್ಷದ ಅಭ್ಯರ್ಥಿ ಪರವಾಗಿ ಒಂದಾಗಿ ಎಲ್ಲರೂ ಶ್ರಮ ಹಾಕಿದ್ದಾರೆ ಎಂದರು.

ಮೋದಿಯವರ ನಾಯಕತ್ವಕ್ಕೆ ಬಲ ತಂದ ಫಲಿತಾಂಶ

ಪಶ್ಚಿಮ ಬಂಗಾಲ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಗೆಲುವು ನರೇಂದ್ರ ಮೋದಿ ಅವರ ನಾಯಕತ್ವಕ್ಕೆ ದೊಡ್ಡ ಶಕ್ತಿ ತುಂಬಿದಂತಾಗಿದೆ. ನಮ್ಮ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಮೊದಲ ಚುನಾವಣೆ ಇದಾಗಿದೆ. ಬಹುದೊಡ್ಡ ಸಂದೇಶವನ್ನು ನೀಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ಲೇಷಿಸಿದರು. ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಡೀ ದೇಶದಲ್ಲಿ ಅಮಿತ್ ಶಾ ಅವರು ಚುನಾವಣಾ ಚಾಣಕ್ಯ ಎಂದು ಪ್ರತಿಯೊಬ್ಬರು ಮಾತನಾಡುತ್ತಿದ್ದಾರೆ. ಅಮಿತ್ ಶಾ ಅವರ ತಂತ್ರಗಾರಿಕೆಯೂ ಈ ಗೆಲುವಿನ ಹಿಂದಿದೆ ಎಂದರು.

ಸಿಎಂಗೆ ಅಭಿನಂದನೆ



ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಶಾಸಕರಾದ ರಿಜ್ವಾನ್ ಅರ್ಷದ್ ಮತ್ತು ವಿಧಾನ ಪರಿಷತ್ ಮುಖ್ಯ ಸಚೇತಕರಾದ ಸಲೀಂ ಅಹ್ಮದ್ ಅವರು ಅಭಿನಂದಿಸಿದರು.

ಕಾಂಗ್ರೆಸ್‌ಗೆ ಭವಿಷ್ಯವಿಲ್ಲ: ಬಿಎಸ್‌ವೈ

• **ಬೆಂಗಳೂರು:** ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಧೂಳೀಪಟವಾದಂತೆ ರಾಜ್ಯದಲ್ಲೂ ಕಾಂಗ್ರೆಸ್ ಮುಂದಿನ ಚುನಾವಣೆಯಲ್ಲಿ ನೆಲಕಚ್ಚಲಿದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್‌ಗೆ



ಯಾವುದೇ ಭವಿಷ್ಯ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಪಂಚರಾಜ್ಯ ವಿಧಾನಸಭಾ ಚುನಾವಣೆ ಫಲಿತಾಂಶದ ಕುರಿತು ನಗರದಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿ, ಒಂದೆರಡು ಸ್ಥಾನಗಳನ್ನೂ ಗೆಲ್ಲಲೂ ಆಗದ ಕಾಂಗ್ರೆಸ್‌ಗೆ ಬಿಜೆಪಿ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ ಎಂದರು. ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದೆ. ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ಜನತೆಯ ವಿಶ್ವಾಸವನ್ನು ಮತ್ತೊಮ್ಮೆ ದೃಢಪಡಿಸಿದೆ. ಇದೊಂದು ಐತಿಹಾಸಿಕ ಫಲಿತಾಂಶ. ಇದಕ್ಕಾಗಿ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ನಿರಂತರ ಮಾರ್ಗದರ್ಶನ ನೀಡಿದ್ದಾರೆ ಮತ್ತು ಪಕ್ಷವನ್ನು ಸೂಕ್ತವಾಗಿ ಮುನ್ನಡೆಸಿದ್ದಾರೆ ಎಂದ ಅವರು, ರಾಷ್ಟ್ರೀಯ ಅಧ್ಯಕ್ಷರಿಗೆ ಅಭಿನಂದನೆ ತಿಳಿಸಿದರು.

ಅಭಿವೃದ್ಧಿ ಮತ್ತು ವಿಕಸಿತ ಭಾರತ ನಿರ್ಮಾಣ ಮಾಡಬೇಕು ಎಂಬ ಎನ್‌ಡಿಎ ಬದ್ಧತೆಗೆ ಮತದಾರರು ಆಶೀರ್ವಾದ ಮಾಡಿದ್ದಾರೆ ಎಂದು ಪ್ರಶಂಸಿಸಿದರು.



ಸಾರ್ವತ್ರಿಕ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ನೇತೃತ್ವದಲ್ಲಿ ಬಿಜೆಪಿ ಗೆಲುವು ಎನ್‌ಡಿಎ ಭಾಗವಾಗಿರುವ ನನಗೆ ಅತ್ಯಂತ ಖುಷಿ ಮತ್ತು ಹೆಮ್ಮೆ ತಂದಿದೆ. ಕೇರಳದಲ್ಲಿ ಬಿಜೆಪಿ ಸಂಖ್ಯೆ ಸಾಧಾರಣವಾದರೂ ಅದು ಐತಿಹಾಸಿಕ. ಬಿಜೆಪಿ ನಾಯಕರಿಗೆ ನನ್ನ ಅಭಿನಂದನೆ.

■ **ಎಚ್.ಡಿ. ದೇವೇಗೌಡ,** ಮಾಜಿ ಪ್ರಧಾನಿ

ಕಿರುಸುದ್ದಿ

ರೈಲ್ವೇ ಯೋಜನೆಗೆ ₹1300 ಕೋಟಿ ಬಿಡುಗಡೆ

• **ತುಮಕೂರು:** ತುಮಕೂರು–ದಾವಣಗೆರೆ ರೈಲು ಮಾರ್ಗ ಯೋಜನೆಗೆ ಆರಂಭದಲ್ಲಿ 1801 ಕೋಟಿ ರೂ. ಮಂಜೂರು ಮಾಡಲಾಗಿದ್ದು, ಈಗಾಗಲೇ 1300 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ನವದೆಹಲಿಯ ಕರ್ನಾಟಕ ರಾಜ್ಯ ವಿಶೇಷ ಪ್ರತಿನಿಧಿ ಹಾಗೂ ಶಿರಾ ಶಾಸಕ ಟಿ.ಬಿ. ಜಯಚಂದ್ರ ಹೇಳಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ನಡೆದ



ಸಭೆಯಲ್ಲಿ ಮಾತನಾಡಿ, ಅಮೃತ್ ಸರೋವರ ಯೋಜನೆ ಅಡಿಯಲ್ಲಿ ಶಿರಾ ಭಾಗದಲ್ಲಿ ಬರುವ 35 ಕೆರೆಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ ಸದನದಲ್ಲಿಯೂ ಪ್ರಸ್ತಾಪ ಮಾಡಲಾಗಿದೆ ಎಂದು ತಿಳಿಸಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಡಿ ನಡೆಯುತ್ತಿರುವ ಕಾಮಗಾರಿಗಳನ್ನು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಪೂರ್ಣಗೊಳಿಸುವುದು ಅತ್ಯಗತ್ಯವಾಗಿದ್ದು, ಈ ಮೂಲಕ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಎಲ್ಲರೂ ಸಹಕಾರ ನೀಡಬೇಕು ಎಂದು ಕರೆ ನೀಡಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಶ್ವಿಜ ಬಿ.ವಿ. ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಇದ್ದರು.

ಹಣ, ಹೆಂಡಕ್ಕೆ ಜಯ: ಬಸವರಾಜ ಬೊಮ್ಮಾಯಿ

• **ಬೆಂಗಳೂರು:** ಕರ್ನಾಟಕದಲ್ಲಿ ದಾವಣಗೆರೆ ಮತ್ತು ಬಾಗಲಕೋಟೆಯಲ್ಲಿ ಹಣ ಮತ್ತು ಹೆಂಡದ ಬಲದಿಂದ ಕಾಂಗ್ರೆಸ್‌ಗೆ ಜಯ ಆಗಿದೆ. ಆದರೆ, ರಾಜ್ಯದ ವಾಸ್ತವಿಕ ಸ್ಥಿತಿಯೇ ಬೇರೆ ಇದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಈ ಕುರಿತು ಎಕ್ಸ್ ಮಾಡಿರುವ ಅವರು, ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬಂದಿದೆ. ಅಲ್ಲಿನ ಜನರು ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತಾ ಅವರ ನಾಯಕತ್ವಕ್ಕೆ ಕೊಟ್ಟಿರುವ ಮನ್ನಣೆ ಮತ್ತು ಬೆಂಬಲ. ಹೀಗಾಗಿ ಅವರಿಬ್ಬರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಅಲ್ಲದೇ ಅಸ್ಸಾಂ ಮುಖ್ಯಮಂತ್ರಿ ಹೇಮಂತ್ ಬಿಸ್ವಾಸ್ ಶರ್ಮಾ, ಪಶ್ಚಿಮ ಬಂಗಾಳದ ಬಿಜೆಪಿ ನಾಯಕ ಸುವೆಂಧು ಅಧಿಕಾರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ವಿರುದ್ಧ ಹೋರಾಟ: ಅಶೋಕ

• **ಬೆಂಗಳೂರು:** ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಜೀವರಾಜ್ ಗೆಲುವಿನಿಂದ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡಲು ನಮಗೆ ಇನ್ನಷ್ಟು ಶಕ್ತಿ ಬಂದಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ವಿಶ್ಲೇಷಿಸಿದ್ದಾರೆ. ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲೂ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರು ಗೆಲುವು ಸಾಧಿಸಿದ್ದಾರೆ. ಅವರಿಗೆ ಅಭಿನಂದನೆಗಳು. ಶೃಂಗೇರಿಯಲ್ಲಿ ಕಾಂಗ್ರೆಸ್ ಪಕ್ಷ ವೋಟ್ ಚೋರಿ ಮಾಡಿತ್ತು. ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವ ರೀತಿ ಒತ್ತಡ ಹಾಕಿದ್ದರು. ಆದರೆ, ಅದಕ್ಕೆ ತಡೆ ಬಿದ್ದಿದೆ. ಮರು ಮತ ಎಣಿಕೆಯಲ್ಲಿ ಅಂತಿಮವಾಗಿ ಜೀವರಾಜ್ ಅವರು ಗೆಲುವು ಸಾಧಿಸಿದ್ದಾರೆಂದು ವಿವರಿಸಿದರು. ಜೀವರಾಜ್ ಅವರು ಅಧಿಕೃತವಾಗಿ ಗೆಲುವು ಸಾಧಿಸಿದ್ದರೂ ಘೋಷಣೆ ಮಾಡಿರ ಲಿಲ್ಲ. ಆದರೆ, ಈಗ ಜೀವರಾಜ್ ಅವರೇ ವಿಧಾನಸಭಾ ಸದಸ್ಯರು ಎಂಬ ಪ್ರಮಾಣಪತ್ರವನ್ನು ಚುನಾವಣಾಧಿಕಾರಿ ನೀಡಿದ್ದಾರೆ. ವಿಧಾನಸಭಾಧ್ಯಕ್ಷರ ಬಳಿ ಮಾತನಾಡಿ ಕೂಡಲೇ ಪ್ರಮಾಣವಚನ ಸ್ವೀಕಾರ ಮಾಡಲು ಅವಕಾಶ ಕಲ್ಪಿಸಬೇಕು ಎಂದು ತಿಳಿಸಿದರು.

ಸಮರ್ಥ್ ಶಾಮನೂರು, ಉಮೇಶ ಮೇಟಿ ಬೆಂಬಲಿಸಿದ ಮತದಾರರು

ಕೈ ಅಭ್ಯರ್ಥಿಗಳಿಗೆ ಜಯ

• **ದಾವಣಗೆರೆ/ಬಾಗಲಕೋಟೆ:** ಪಂಚರಾಜ್ಯಗಳ ಚುನಾವಣೆಯ ಮತ ಎಣಿಕೆ ಜೊತೆಗೆ ರಾಜ್ಯದಲ್ಲಿ ಬಾಗಲಕೋಟೆ ಹಾಗೂ ದಾವಣಗೆರೆ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಹಾಗೂ ಉಮೇಶ ಮೇಟಿ ಜಯ ಸಾಧಿಸುವ ಮೂಲಕ ಸಿಎಂ ಸಿದ್ದರಾಮಯ್ಯ ಅವರ ಕೈ ಬಲ ಪಡಿಸಿದ್ದಾರೆ.

ಒಟ್ಟು 25 ಜನ ಅಭ್ಯರ್ಥಿಗಳು ಸ್ಪರ್ಧಾ ಕಣದಲ್ಲಿದ್ದ ದಾವಣಗೆರೆ ದಕ್ಷಿಣದ ಮತ ಎಣಿಕೆ ಕಾರ್ಯ ನಗರದ ಡಿಆರ್‌ಆರ್ ಶಾಲೆಯಲ್ಲಿ ಸೋಮವಾರ ನಡೆಯಿತು. 24 ಸುತ್ತಿನ ಮತ ಎಣಿಕೆಯಲ್ಲಿ ಕಾಂಗ್ರೆಸ್ಸಿನ ಸಮರ್ಥ ಶಾಮನೂರು ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ವಿರುದ್ಧ 5,708 ಮತಗಳ ಅಂತರದಿಂದ ಜಯ ದಾಖಲಿಸಿದ್ದಾರೆ. ಸಮರ್ಥ ಶಾಮನೂರು 68,619 ಮತಗಳನ್ನು ಪಡೆದರೆ, ಶ್ರೀನಿವಾಸ ದಾಸಕರಿಯಪ್ಪ 63,746 ಮತ ಗಳಿಸಲಷ್ಟೇ ಶಕ್ತರಾಗಿದ್ದಾರೆ.

ಹಿರಿಯ ಕಾಂಗ್ರೆಸ್ ಶಾಸಕ ಡಾ.ಶಾಮನೂರು ಶಿವಶಂಕರಪ್ಪನವರ ನಿಧನದಿಂದ ತೆರವಾಗಿದ್ದ ಕ್ಷೇತ್ರವನ್ನು ಮೊಮ್ಮಗ ಉಳಿಸಿಕೊಳ್ಳುವ ಯಶಸ್ವಿಯಾದರೂ, ಅನುಕಂಪದ ಅಲೆಯ ನಡುವೆಯೂ ದಾಖಲೆಯ ಅಂತರದಲ್ಲಿ ಗೆಲುವು ಸಾಧಿಸಲು ಸಾಧ್ಯವಾಗಿಲ್ಲ.ಆದರೂ ಸ್ಪರ್ಧಿಸಿದ ಮೊದಲ ಚುನಾವಣೆಯಲ್ಲೇ ಸಮರ್ಥ ಶಾಮನೂರು ಗೆಲುವಿನ ನಗೆ ಬೀರಿದ್ದಾರೆ.



ಸಮರ್ಥ ಶಾಮನೂರು	ಕಾಂಗ್ರೆಸ್	68,619
ಶ್ರೀನಿವಾಸ ದಾಸಕರಿಯಪ್ಪ	ಬಿಜೆಪಿ	63,746
ಗೆಲುವಿನ ಅಂತರ		5,708
ನೋಟಾ		511

ಗಣನೀಯ ಮತ ಪಡೆದ ಎಸ್‌ಡಿಪಿಐ

ಅಲ್ಪಸಂಖ್ಯಾತರಿಗೆ ಟಿಕೆಟ್ ನಿರಾಕರಿಸಿದ್ದನ್ನು ಖಂಡಿಸಿ ಕಾಂಗ್ರೆಸ್ ವಿರುದ್ಧ ಬಂಡಾಯವಾಗಿ ಸ್ಪರ್ಧಿಸಿದ್ದ ಮುಸ್ಲಿಂ ಅಭ್ಯರ್ಥಿಗಳು ಎಲ್ಲರೂ ಸೇರಿ ಸುಮಾರು 23 ಸಾವಿರದಷ್ಟು ಮತ ಪಡೆದಿದ್ದಾರೆ. ಎಸ್‌ಡಿಪಿಐನ ಅಫ್ಸರ್ ಕೊಡ್ಲಿಪೇಟೆ 18,975 ಮತಗಳನ್ನು ಪಡೆದರೆ ಉಳಿದ ಮುಸ್ಲಿಂ ಅಭ್ಯರ್ಥಿಗಳೆಲ್ಲರೂ ಸೇರಿ 3875 ಮತಗಳನ್ನು ಹಂಚಿಕೊಂಡಿದ್ದಾರೆ.

ಸ್ಟ್ರಾಂಗ್ ರೂಮ್ ಬೀಗ ಒಡೆದ ಸನ್ನಿವೇಶ..!

ಮತಎಣಿಕೆಗೂ ಮುನ್ನ ಕೀಲಿಕೈಗಳು ಹೊಂದಿಕೆಯಾಗದ ಕಾರಣ ಸಾಕಷ್ಟು ಪ್ರಯತ್ನದ ನಂತರ ಸ್ಟ್ರಾಂಗ್ ರೂಮ್ ಬಾಗಿಲು ಒಡೆಯಬೇಕಾದ ಪ್ರಸಂಗ ಎದುರಾಯಿತು. ಇದರಿಂದಾಗಿ ಮತ ಎಣಿಕೆ ಕಾರ್ಯ ಸುಮಾರು ಅರ್ಧ ಗಂಟೆಯಷ್ಟು ತಡವಾಗಿ ಶುರುವಾಯಿತು. ತಾಂತ್ರಿಕ ದೋಷ – ವಿವಿ ಪ್ಯಾಟ್ ಮತ ಎಣಿಕೆ ಕೊನೆಯಲ್ಲಿ ಮತ ಎಣಿಕೆಯ ಕೊನೆಯ ಹಂತದಲ್ಲಿ ನಾಲ್ಕು ಇವಿಎಂ ಯಂತ್ರಗಳಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಕಾರಣ ವಿವಿ ಪ್ಯಾಟ್ ಮೂಲಕ ಮತ ಎಣಿಕೆಗೆ ಮೊರೆ ಹೋಗಬೇಕಾಯಿತು.

ಉಮೇಶ ಮೇಟಿಗೆ ಒಲಿದ ಜಯ

• **ಬಾಗಲಕೋಟೆ:** ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ–2026ರ ಮತ ಎಣಿಕೆ ಕಾರ್ಯ ಸೋಮವಾರ ನಡೆದಿದ್ದು, ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ, ಅವರ ಪ್ರತಿ ಸ್ಪರ್ಧಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂಟಿಮಠ ಅವರಿಗಿಂತ 22,332 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ 98,919 ಮತಗಳನ್ನು ಪಡೆದು ಗೆಲುವು ಸಾಧಿಸಿದರೆ, ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ 76587 ಮತಗಳನ್ನು ಪಡೆದು ಸೋಲು ಅನುಭವಿಸಿದ್ದಾರೆ. ಬಾಗಲಕೋಟೆ ಉಪ ಚುನಾವಣೆ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಟ್ಟು 2,60,182 ಮತಗಳು ಇದ್ದು, ಈ ಪೈಕಿ 1,77,073 ಮತಗಳು ಚಲಾವಣೆಗೊಂಡಿದ್ದು, ಅದರಲ್ಲಿ 1,458 ಮತಗಳು ನೋಟಾ ಮತಗಳು ಇರುತ್ತವೆ. 100 ಮತಗಳು ತಿರಸ್ಕೃತಗೊಂಡಿವೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಗೆಲುವು ಸಾಧಿಸುತ್ತಿದ್ದಂತೆ ಮತ ಎಣಿಕೆ ಕೇಂದ್ರದಲ್ಲಿ ಕಾರ್ಯಕರ್ತರು, ವಿಜಯೋತ್ಸವ ಆಚರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಸ

ಕಾಂಗ್ರೆಸ್ ಸಿದ್ಧಾಂತಕ್ಕೆ ಮತದಾರರ ಒಲವು

• **ಬೆಂಗಳೂರು:** ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಮತದಾನ ಮಾಡಿ ಗೆಲ್ಲಿಸಿದ ಸಮಸ್ತ ಮತದಾರ ಬಂಧುಗಳಿಗೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇದು ನಮ್ಮ ಸರ್ಕಾರದ ಸಾಧನೆಗಳಿಗೆ ಮತ್ತು ಕಾಂಗ್ರೆಸ್ ಪಕ್ಷದ ಸಿದ್ಧಾಂತಕ್ಕೆ ಸಿಕ್ಕ ಜಯವಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಸಂತಸ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿ, ವಿರೋಧ ಪಕ್ಷಗಳ ಅಪಪ್ರಚಾರ ಮತ್ತು ಹಣದ ಪ್ರಭಾವದ ಹೊರತಾಗಿಯೂ ಎರಡೂ ಕ್ಷೇತ್ರಗಳ ಮತದಾರರು ಕಾಂಗ್ರೆಸ್ ಪಕ್ಷ ಮತ್ತು ನಮ್ಮ ಸರ್ಕಾರದ ಮೇಲೆ ನಂಬಿಕೆ ಇಟ್ಟು ಮತಚಲಾಯಿಸಿದ್ದಾರೆ. ಈ ಎರಡೂ ಕ್ಷೇತ್ರಗಳ ಮತದಾರರಷ್ಟೇ ಅಲ್ಲ ಇಡೀ ರಾಜ್ಯದ ಜನತೆ ನಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳುತ್ತೇವೆ. ಮುಂದಿನ ವಿಧಾನಸಭಾ ಚುನಾವಣೆ ಯಲ್ಲಿಯೂ ರಾಜ್ಯದ ಮತದಾರರು ಇದೇ ರೀತಿ ನಮ್ಮನ್ನು ಹರಸುತ್ತಾರೆ ಎಂಬ ನಂಬಿಕೆ ನಮಗೆ ಇದೆ ಎಂದರು.

ಗ್ಯಾರಂಟಿ ಯೋಜನೆಗಳು ನಮ್ಮ ಕೈ ಹಿಡಿದಿವೆ: ಡಿಸಿಎಂ

ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳು ನಮ್ಮ ಕೈ ಹಿಡಿದಿವೆ. ಜನರ ಕಷ್ಟಕ್ಕೆ ನಮ್ಮ ಸರ್ಕಾರ ಸ್ಪಂದಿಸಿದೆ. ಹೀಗಾಗಿ ಕರ್ನಾಟಕ ಉಪಚುನಾವಣೆಗಳಲ್ಲಿ ಉತ್ತಮ ಫಲಿತಾಂಶ ಬಂದಿದೆ. ಬೇರೆ ರಾಜ್ಯಗಳ ಪೈಕಿ ಕೇರಳದಲ್ಲಿ ಅಧಿಕಾರಕ್ಕೆ ಬರುತ್ತೇವೆ ಎನ್ನುವ ವಿಶ್ವಾಸವಿತ್ತು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು. ರಾಜ್ಯದ ಉಪಚುನಾವಣೆ, ಪಂಚ ರಾಜ್ಯಗಳ ಚುನಾವಣಾ ಫಲಿತಾಂಶದ ಕುರಿತು ಸೋಮವಾರ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣದಲ್ಲಿ ಗೆಲುವಿನ ಅಂತರ ಕಡಿಮೆಯಾಗಿದೆ. ಅಲ್ಲಿ ನಡೆದಿರುವ ಗೊಂದಲಗಳಿಂದ 25–30 ಸಾವಿರ ಅಂತರದ ಗೆಲುವು ಸಿಗುವುದಿಲ್ಲ ಎಂಬುದು ಗೊತ್ತಿತ್ತು. ಆದರೆ ಆರಾಮವಾಗಿ ಗೆಲ್ಲುತ್ತೇವೆ ಎಂದು ಗೊತ್ತಿತ್ತು. ಎಸ್‌ಡಿಪಿಐನಿಂದ ಅಪಾಯವಾಗಿದೆ ಎಂದರು. ಎಸ್‌ಡಿಪಿಐ ಅನ್ನು ಹಗುರವಾಗಿ ನಾವು ಪರಿಗಣಿಸಿರಲಿಲ್ಲ ಎಂದರು.

ಚುನಾವಣೆ ಫಲಿತಾಂಶವು ರಾಜ್ಯದಲ್ಲಿ ಏನೂ ಬದಲಾವಣೆ ತರುವುದಿಲ್ಲ. ನಮ್ಮ ರಾಜ್ಯಕ್ಕೆ ಏನೂ ಆಗುವುದಿಲ್ಲ. ಒಂದಷ್ಟು ಜನಕ್ಕೆ ಸಂತೋಷ, ಒಂದಷ್ಟು ಜನಕ್ಕೆ ಬೇಜಾರಾಗಿರಬಹುದು ಡಬಲ್ ಇಂಜಿನ್ ಸರ್ಕಾರ ಇದ್ದಾಗಲೇ ಅವರಿಗೆ ಏನೂ ಮಾಡಲಾಗಲಿಲ್ಲ.

■ **ಶಿವಕುಮಾರ್,** ಡಿಸಿಎಂ

ಸರ್ಕಾರಕ್ಕೆ ಮತ್ತಷ್ಟು ಬಲ: ಸಚಿವ

• **ಬೆಳಗಾವಿ:** ರಾಜ್ಯದ ಉಪಚುನಾವಣೆಯಲ್ಲಿ ಎರಡೂ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿಗಳು ಗೆಲುವು ಸಾಧಿಸಲಿದೆ ಎಂದು ಮೊದಲಿನಿಂದಲೂ ವಿಶ್ವಾಸ ಇತ್ತು ಎಂದು ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.



ಸೋಮವಾರ ಬೆಳಗಾವಿ ಜಿಲ್ಲೆಯ ಚನ್ನಮ್ಮ ಕಿತ್ತೂರಿನಲ್ಲಿ ನೂತನ ಬಸ್‌ಗಳಿಗೆ ಉದ್ಘಾಟಿಸಿ ಚಾಲನೆ ನೀಡಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ದಾವಣಗೆರೆಯಲ್ಲಿ ಮತಗಳ ಅಂತರ ಕಡಿಮೆಯಾಗುವ ಸಾಧ್ಯತೆ ಇದ್ದರೂ ಅಂತಿಮವಾಗಿ ಕಾಂಗ್ರೆಸ್ ಜಯ ಸಾಧಿಸಿದೆ ಎಂದರು.

ಟಿಕೆಟ್ ಹಂಚಿಕೆ ವೇಳೆ ಉಂಟಾದ ಗೊಂದಲ ಈಗ ನಿವಾರಣೆಯಾಗಿದೆ ಎಂದು ಸ್ಪಷ್ಟಪಡಿಸಿದ ಅವರು, ಉಪಚುನಾವಣೆಯಲ್ಲಿ ಬಿಜೆಪಿ ಕೂಡ ಕೆಲ ಕ್ಷೇತ್ರಗಳಲ್ಲಿ ಸೋಲು ಕಂಡಿರುವುದನ್ನು ಉಲ್ಲೇಖಿಸಿದರು. ಶೃಂಗೇರಿ ವಿಧಾನಸಭಾ ಮತ ಎಣಿಕೆಯಲ್ಲಿ ಅಧಿಕಾರಿಗಳ ತಪ್ಪಿನಿಂದ ಬ್ಯಾಲೆಟ್ ಪೇಪರ್ ಎಣಿಕೆ ನಡೆದಿರುವುದಾಗಿ ಆರೋಪಿಸಿದರು.

ಚುನಾವಣಾ ಪ್ರಕ್ರಿಯೆಯಲ್ಲಿ ಯಾವುದೇ ಲೋಪದೋಷವಾಗದಂತೆ ಅಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿದ್ದಾರೆ ಎಂದು ಹೇಳಿದರು. ಬಳಿಕ ಸಾರಿಗೆ ಇಲಾಖೆಯಿಂದ ನೂತನವಾಗಿ ಬಸ್‌ಗಳ ಲೋಕಾರ್ಪಣೆಯ ಬಗ್ಗೆ ಮಾತನಾಡಿದ ಅವರು, ನಗರ ಸಾರಿಗೆಗೆ ಒಟ್ಟು 750 ಹೊಸ ಬಸ್ ನೀಡಲಾಗಿದೆ. ಡಿಪೋಗಳನ್ನು ನಿರ್ಮಿಸಲು ಕಾಮಗಾರಿ ಆರಂಭಿಸಲಾಗಿದೆ. ಜಿಸಿಸಿ ಮಾದರಿಯಲ್ಲಿ ಬಸ್ ಸೇವೆ ಆರಂಭಿಸಲಾಗುತ್ತಿದೆ. ಬಸ್, ಚಾಲಕರು ಖಾಸಗಿಯವರಾಗಿದ್ದು, ಕಂಡಕ್ಟರ್ ನಮ್ಮವರಾಗಿರುತ್ತಾರೆ. ಬೆಳಗಾವಿಯ 8 ಗ್ರಾಮಗಳಿಗೆ ಬಸ್ ಸೇವೆ ಇಲ್ಲದ ಬಗ್ಗೆ ಪ್ರತಿಕ್ರಿಯಿಸಿದರು.

ಶಾಸಕರಾಗಿ ಜೀವರಾಜ್ ಆಯ್ಕೆ ಅಧಿಕೃತ

• **ಚಿಕ್ಕಮಗಳೂರು:** ಹೈಕೋರ್ಟ್ ಆದೇಶದ ಮೇರೆಗೆ ನಡೆದ ಅಂಚೆ ಮತ ಮತ್ರಗಳ ಮರು ಎಣಿಕೆಯಲ್ಲಿ 52 ಮತಗಳ ಮುನ್ನಡೆ ಸಾಧಿಸಿದ್ದ ಶೃಂಗೇರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ನೂತನ ಶಾಸಕರಾಗಿ ಅಧಿಕೃತವಾಗಿ ಆಯ್ಕೆಯಾಗಿದ್ದಾರೆ.

ಈ ಸಂಬಂಧ ಜಿಲ್ಲಾ ಚುನಾವಣಾಧಿಕಾರಿ ಗೌರವ್ ಕುಮಾರ್ ಶೆಟ್ಟಿ ಅವರು ಸೋಮವಾರ ಬೆಳಗ್ಗೆ ತಮ್ಮ ನಿವಾಸದ ಬಳಿ ಜೀವರಾಜ್ ಅವರಿಗೆ ಶಾಸಕ ಸ್ಥಾನದ ಪ್ರಮಾಣ ಪತ್ರವನ್ನು ಹಸ್ತಾಂತರಿಸಿದರು. ಈ ವೇಳೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಂ.ಆರ್.ದೇವರಾಜ ಶೆಟ್ಟಿ, ನಗರಾಧ್ಯಕ್ಷ ಸಂತೋಷ್ ಕೋಟ್ಯಾನ್, ಹಿರಿಯ ಮುಖಂಡ ಕೋಟೆ ರಂಗನಾಥ್, ನರೇಂದ್ರ, ದಿನೇಶ್ ಇತರರು ಹಾಜರಿದ್ದು, ಜೀವರಾಜ್ ಪರ ಘೋಷಣೆಗಳನ್ನು ಕೂಗಿ ಸಂತಸ ಹಂಚಿಕೊಂಡರು.

ಈ ವೇಳೆ ನೂತನ ಶಾಸಕ ಡಿ.ಎನ್.ಜೀವರಾಜ್ ಮಾತನಾಡಿ, ಮತ ಎಣಿಕೆ ಮುಗಿದ ತಕ್ಷಣವೇ ನಮ್ಮ ಕೋರಿಕೆ ಮೇರೆಗೆ ಮರು ಮತ ಎಣಿಕೆ ಮಾಡಿದ್ದರೆ ಇದಾವ ಪ್ರಶ್ನೆಗಳು ಏಳುತ್ತಿರಲಿಲ್ಲ. ಅಂದೇ ನಮ್ಮ ಅರ್ಜಿ ಪರಿಗಣಿಸದಿರುವುದು ಬಹಳ ಮೋಸ ಮತ್ತು ಗಂಭೀರವಾದ ವಿಚಾರ. ಅಧಿಕಾರ ದುರುಪಯೋಗ ಮಾಡಿ ಈ ರೀತಿ ಅನ್ಯಾಯ ಮಾಡುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಳ್ಳೆಯದಲ್ಲ ಎಂದರು.



ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿ ಕಾಂಗ್ರೆಸ್ ಮುಖಂಡರು ಈ ವಿಚಾರದಲ್ಲಿ ಬಿಜೆಪಿಯಿಂದಲೇ ಹಗರಣ ನಡೆದಿದೆ ಎಂದು ಆರೋಪಿಸಿರುವ ಕುರಿತು ಪ್ರತಿಕ್ರಿಯಿಸಿದ ಜೀವರಾಜ್, ಸ್ಟ್ರಾಂಗ್ ರೂಂನಲ್ಲಿದ್ದ ಮತ ಪೆಟ್ಟಿಗೆಗಳ ಸುರಕ್ಷತೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಾವು ಕಳೆದ ಒಂದೂವರೆ ವರ್ಷದ ಹಿಂದೆಯೇ ನಮ್ಮ ಪಕ್ಷದ ಜಿಲ್ಲಾಧ್ಯಕ್ಷರ ಮೂಲಕ ಜಿಲ್ಲಾಡಳಿತಕ್ಕೆ ಅರ್ಜಿ ಕೊಟ್ಟಿದ್ದೆವು. ಅಲ್ಲದೆ ನ್ಯಾಯಾಲಯದ ಸುಪರ್ದಿಯಲ್ಲೇ ಮತ ಪತ್ರಗಳನ್ನು ಇರಿಸಬೇಕು ಎಂದು ಕೋರ್ಟ್‌ಗೂ ಸಹ ಕೋರಿಕೊಂಡಿದ್ದೆವು. ಅಂದು ರಾಜೇಗೌಡರ ವಕೀಲರು ಅದರ ಅವಶ್ಯಕತೆ ಇಲ್ಲ ಎಂದು ವಾದಿಸಿದ್ದರು. ಹಾಗಾಗಿ ಇದೆಲ್ಲ ದಾರಿತಪ್ಪಿಸುವ ಮತ್ತು ಮುಖ ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ ಎಂದು ಟೀಕಿಸಿದರು.


ಜೀವರಾಜ್ ವಿರುದ್ಧ ದೂರು ದಾಖಲು

2023ರ ವಿಧಾನ ಸಭೆ ಚುನಾವಣೆಯ ಮತ ಎಣಿಕೆ ಸಂದರ್ಭದಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಎಣಿಕೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಡಿ.ಎನ್.ಜೀವರಾಜ್ ಸೇರಿದಂತೆ ಮೂವರ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಅಂದು ಬಿಜೆಪಿ ಅಭ್ಯರ್ಥಿಯಾಗಿದ್ದ ಡಿ.ಎನ್. ಜೀವರಾಜ್, ಅಂದಿನ ಜಿಲ್ಲಾ ಚುನಾವಣಾಧಿಕಾರಿ ವೇದಾಮೂರ್ತಿ ಮತ್ತು ಅಂದಿನ ಜಿಲ್ಲಾಧಿಕಾರಿ ರಮೇಶ್ ಕುಮಾರ್ ಅವರ ಮೇಲೆ ಎಫ್‌ಐಆರ್ ದಾಖಲಾಗಿದೆ. ಅಂಚೆ ಮತ ಎಣಿಕೆ ಸಂದರ್ಭದಲ್ಲಿ ಕಾಂಗ್ರೆಸ್‌ನ ಟೇಬಲ್ ಏಜೆಂಟ್ ಆಗಿದ್ದ ಸುಧೀರ್ ಕುಮಾರ್ ಮುರೊಳ್ಳಿ ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಾಗಿದೆ. ಮತಪತ್ರಗಳನ್ನು ಇರಿಸಲಾಗಿದ್ದ ಸ್ಟ್ರಾಂಗ್ ರೂಂ ಸೀಲ್ ಆಗಿರಲಿಲ್ಲ ಮತ್ತು ಟ್ರಂಕ್‌ಗಳ ಲಾಕ್ ಕಟ್ ಆಗಿತ್ತು ಎಂದು ದೂರುದಾರರು ಆರೋಪ ಮಾಡಿದ್ದಾರೆ. ಮತ ಪತ್ರಗಳನ್ನು ಟ್ಯಾಂಪರಿಂಗ್ ಮಾಡಲಾಗಿದೆ ಎಂದು ದೂರು ದಾಖಲಿಸಿಕೊಂಡಿದ್ದಾರೆ.

ಸಂಘಟಿತ ಹೋರಾಟ | ಪ್ರಜಾಪ್ರಭುತ್ವವಾದಿ ಜನರ ಪರವಾದ ತೀರ್ಪು : ಸಿಎಂ

ಕೇರಳದಲ್ಲಿ ನಿರೀಕ್ಷೆ ಮೀರಿ ಕಾಂಗ್ರೆಸ್ ಗೆಲುವು

• **ಬೆಂಗಳೂರು:** ದಕ್ಷಿಣದ ರಾಜ್ಯಗಳಾದ ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳಂತೆ ಕೇರಳ, ತಮಿಳುನಾಡು ರಾಜ್ಯಗಳಲ್ಲಿಯೂ ಬಿಜೆಪಿಯ ಕೋಮು ವಾದಿ ರಾಜಕಾರಣಕ್ಕೆ ಪ್ರವೇಶ ಇಲ್ಲ ಎನ್ನುವ ಸ್ಪಷ್ಟ ಸಂದೇಶವನ್ನು ನೀಡಿರುವ ಎರಡು ರಾಜ್ಯಗಳ ಮತದಾರರನ್ನು ದೇಶದ ಎಲ್ಲ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಜನರ ಪರವಾಗಿ ಅಭಿನಂದಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.



ಕೇರಳದಲ್ಲಿ ಕಾಂಗ್ರೆಸ್ ಪಕ್ಷದ ಗೆಲುವು ನಿರೀಕ್ಷಿತವಾಗಿತ್ತು. ಅಭ್ಯರ್ಥಿಗಳ ಆಯ್ಕೆಯಿಂದ ಹಿಡಿದು ಪ್ರಚಾರದ ಕಾರ್ಯತಂತ್ರದ ವರೆಗೆ ಎಲ್ಲವನ್ನೂ ಆ ರಾಜ್ಯದ ಕಾಂಗ್ರೆಸ್ ನಾಯಕರು ಸಂಘಟಿತರಾಗಿ ನಡೆಸಿದ್ದಾರೆ. ಕೇರಳ ರಾಜ್ಯದೊಂದಿಗೆ ವಿಶೇಷವಾದ ಬಾಂಧವ್ಯವನ್ನು ಬೆಳೆಸಿಕೊಂಡಿರುವ ನಮ್ಮ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿಯವರು ಪಕ್ಷದ ಗೆಲುವಿಗಾಗಿ ಹಗಲಿರುಳು ಶ್ರಮಿಸಿದ್ದಾರೆ. ಅವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

ಕಳೆದ ಮೂರು ಅವಧಿಗೆ ಮುಖ್ಯಮಂತ್ರಿಯಾಗಿದ್ದ ಮಮತಾ ಬ್ಯಾನರ್ಜಿ ವಿರುದ್ಧ ಸಹಜವಾಗಿಯೇ ಪ್ರಬಲ ಆಡಳಿತ ವಿರೋಧಿ ಅಲೆ ಇತ್ತು. ಇದರ ಜೊತೆಯಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆಯಲ್ಲಿನ ಮೋಸದಾಟವೂ ಸೇರಿದಂತೆ ಕೇಂದ್ರ ಚುನಾವಣಾ ಆಯೋಗದ ಕೈವಾಡದಿಂದಾಗಿ ಮಮತಾ ಬ್ಯಾನರ್ಜಿಯವರು ಸೋತಿದ್ದಾರೆ.

ತಮಿಳುನಾಡು ಚುನಾವಣೆಯ ಈ ಭಾರಿಯ ಫಲಿತಾಂಶವನ್ನು ನಾನು ನಿರೀಕ್ಷಿಸಿರಲಿಲ್ಲ. ಆಡಳಿತ ವಿರೋಧಿ ಅಲೆ ಇದ್ದರೂ ಡಿಎಂಕೆ ಸರ್ಕಾರದ ಜನಪರ ಆಡಳಿತ ಮತ್ತು ಕಾರ್ಯಕ್ರಮಗಳನ್ನು ಅಲ್ಲಿನ ಜನ ಮೆಚ್ಚಿಕೊಂಡಿದ್ದರು. ತಮಿಳುನಾಡಿನ ಯುವಜನರು ಮತ್ತು ಮಹಿಳೆಯರಲ್ಲಿ ಸಿನೆಮಾ ನಟ ವಿಜಯ್ ಅವರ ಬಗೆಗಿನ ಆಕರ್ಷಣೆಗೆ ಬಲಿಯಾಗಿದ್ದಾರೆ ಎಂದು ಸಿದ್ದರಾಮಯ್ಯ ವಿಷಾದ ವ್ಯಕ್ತಪಡಿಸಿದ್ದಾರೆ.

ತ.ನಾಡಿನ ಫಲಿತಾಂಶ ಅಚ್ಚರಿ ತಂದಿದೆ: ಉಪ ಮುಖ್ಯಮಂತ್ರಿ ಶಿವಕುಮಾರ್

• **ಬೆಂಗಳೂರು:** ತಮಿಳುನಾಡಿನದ್ದು ಅಚ್ಚರಿಯ ಫಲಿತಾಂಶ. ಅಲ್ಲಿ ಹೊಸ ಯುಗ ಪ್ರಾರಂಭವಾಗಿದೆ. ಜನರ ನಾಡಿಮಿಡಿತವನ್ನು ನಾವು ಗ್ರಹಿಸಲು ಆಗಲಿಲ್ಲ. ಸ್ಥಳೀಯ ನಾಯಕರು ಈ ಬಗ್ಗೆ ಹೇಳಿದ್ದರು. 40 ವರ್ಷಗಳ ರಾಜಕೀಯದಲ್ಲಿ ಸಂಬಂಧ, ನೆಂಟಸ್ತನ ಬಿಡಲು ಆಗುತ್ತದೆಯೇ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸೋಮವಾರ ಚುನಾವಣೆ ಫಲಿತಾಂಶದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ವಿಜಯ್ ಅವರು ಸೆಲೆಬ್ರಿಟಿ ಅನ್ನುವ ಕಾರಣಕ್ಕೆ ಶೇ. 30–40 ರಷ್ಟು ಮತ ಹೋಗಬಹುದು ಎಂದು ಕೊಂಡಿದ್ದೆವು. ಆದರೆ ಅದಕ್ಕೂ ಹೆಚ್ಚು ಮತ ಅವರಿಗೆ ಹೋಗಿದೆ. ಅವರು ನಿರೀಕ್ಷೆಗೂ ಮೀರಿ ಮತ ಗಳಿಕೆ ಮಾಡಿದ್ದಾರೆ ಎಂದು ತಿಳಿಸಿದರು. ಅಸ್ಸಾಂನಲ್ಲಿ ನಾವು 50– 60 ಸ್ಥಾನ ಬರುತ್ತೇವೆ ಎಂದು ಕೊಂಡಿದ್ದೆವು. ಅಲ್ಲಿನ ಸ್ಥಳೀಯ ನಾಯಕರೂ 50 ಸ್ಥಾನಗಳನ್ನು ಮುಟ್ಟುತ್ತೇವೆ ಎಂದು ಹೇಳಿದ್ದರು. ಕ್ಷೇತ್ರ ಮರುವಿಂಗಡಣೆ ಮಾಡುವಾಗ ಅಲ್ಪಸಂಖ್ಯಾತರು ಒಂದೇ ಕಡೆ ಬರುವಂತೆ ಮಾಡಿದ್ದಾರೆ. ಉಪಾಯವಾಗಿಯೇ ಇದನ್ನು ಮಾಡಲಾಗಿದೆ ಇದೇ ಸೋಲಿಗೆ ಕಾರಣ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಗೆ ಸೋಲು: ಡಿ.ಕೆ. ಶಿವಕುಮಾರ್

ಮರು ಎಣಿಕೆ ಫಲಿತಾಂಶ ಮಾರಕ

• **ಬೆಂಗಳೂರು:** ಶೃಂಗೇರಿ ಮರು ಎಣಿಕೆ ಫಲಿತಾಂಶವು ಇಡೀ ದೇಶಕ್ಕೇ ಮಾರಕ. ಬಿಜೆಪಿಯಲ್ಲಿ ಇಷ್ಟರ ಮಟ್ಟಿಗಿನ ಕ್ರಿಮಿನಲ್‌ಗಳಿದ್ದಾರೆ ಎಂದು ನಾನು ಎಣಿಸಿರಲಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.



ಸೋಮವಾರ ಮಾಧ್ಯಮಗಳೊಂದಿಗೆ ಮಾತಮಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೋಲು, ಗೆಲುವು ಸಾಮಾನ್ಯ. ಆದರೆ ಇಲ್ಲಿ ನಡೆದಿರುವುದು ಷಡ್ಯಂತ್ರ. ಅತ್ಯಂತ ಆಘಾತಕಾರಿ ವಿಚಾರ. ನಾವು ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ತನಿಖೆ ಮಾಡಿಸುತ್ತೇವೆ. ಕಾನೂನಾತ್ಮಕವಾಗಿಯೂ ಹೋರಾಟ ಮಾಡುತ್ತೇವೆ ಎಂದರು.

ಇದೊಂದು ಅಂತಾರಾಷ್ಟ್ರೀಯ ಸಂಚಿನ ರೀತಿ ನಡೆದಿದೆ. ನಮಗೆ ಅನುಮಾನ ಇದ್ದರೆ ಸುಪ್ರೀಂಕೋರ್ಟಿಗೆ ಹೋಗುತ್ತಿದ್ದೆವು. ಇಲ್ಲಿ ಮತ ಎಣಿಕೆ ಬಾಕ್ಸ್‌ಗಳನ್ನು ತೆರೆಯಲಾಗಿದೆ. ಕೆಲವರನ್ನು ಉಪಯೋಗಿಸಿಕೊಂಡು ನಮಗೆ ಮತ ಬಿದ್ದ ಬ್ಯಾಲೆಟ್ ಪೇಪರ್‌ಗಳ ಮೇಲೆ ಮತ್ತೊಂದು ಗುರುತು ಹಾಕಲಾಗಿದೆ. ಎಲ್ಲಾ ಬಂಡಲ್‌ಗಳು ಮಾನ್ಯ ಎಂದು ತೀರ್ಮಾನ ಆದ ಮೇಲೆ ಈ ತಿದ್ದುಪಡಿ ಹೇಗಾಯಿತು ಎಂದು ಡಿಸಿಎಂ ಪ್ರಶ್ನಿಸಿದರು.

ರಾಜ್ಯಕ್ಕೆ ಕಳಂಕದ ಪ್ರಕರಣ

ಫಲಿತಾಂಶದ ಬಗ್ಗೆ ಚುನಾವಣಾಧಿಕಾರಿ ನ್ಯಾಯಲಯಕ್ಕೆ ಕಳುಹಿಸಬೇಕಿತ್ತು. ಸಂಬಂಧಿಸಿದ ಅಧಿಕಾರಿ ಇದನ್ನೆಲ್ಲಾ ಗಮನಿಸಿದ್ದಾರೆ. ಇದು ಇಡೀ ರಾಜ್ಯಕ್ಕೆ ಕಳಂಕದ ಪ್ರಕರಣ. ಗಾಯತ್ರಿ ಶಾಂತನಗೌಡ ಅವರ ವಿಚಾರವನ್ನು ನ್ಯಾಯಲಯದಲ್ಲಿ ಬ್ಲಾಕ್ ಮಾಡಿಕೊಂಡೆ ಬರುತ್ತಿದ್ದಾರೆ. ಸೌಮ್ಯರೆಡ್ಡಿ ಅವರು 12 ಮತಗಳ ಅಂತರದಲ್ಲಿ ಸೋತಿದ್ದಾರೆ. ಅದು ಇನ್ನು ಎಣಿಕೆಯಾಗಿಲ್ಲ. ಇದು ಹೇಗೆ ಎಣಿಕೆಯಾಗುತ್ತದೆ ಎಂದರು.

ಇಂತಹವರಿಗೆ ಮತ ಬಿದ್ದಿದೆ ಎಂದು ಪ್ರತಿ ಮತಗಳನ್ನು ಎಲ್ಲರಿಗೂ ತೋರಿಸಿರುತ್ತಾರೆ. ಇದನ್ನು ಕ್ಯಾಮೆರಾದಲ್ಲಿಯೂ ದಾಖಲೀಕರಣ ಮಾಡಿಕೊಳ್ಳಲಾಗಿರುತ್ತದೆ. ಎಲ್ಲಾ ಎಣಿಕೆಯಾದ ಮೇಲೆ ಬಂಡಲ್‌ಗಳನ್ನು ಒಳಗೆ ಹಾಕಿ ಸೀಲ್ ಮಾಡಲಾಗಿರುತ್ತದೆ. ಇದಾದ ನಂತರ ಬಂಡಲ್ ತೆಗೆದು ಮತ್ತೊಂದು ಗುರುತು ಮಾಡಲಾಗಿದೆ. ಈಗ ಅದು ಮಾತ್ರ ಎಣಿಕೆಯಾಗಬೇಕು ಎಂದು ನ್ಯಾಯಲಯದ ಮೂಲಕ ಆದೇಶ ತಂದು ಈ ರೀತಿ ಮಾಡಲಾಗಿದೆ ಎಂದರು.

ಸಂಪಾದಕೀಯ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಶಕೆ, ತಮಿಳ್ನಾಡಲ್ಲಿ ವಿಜಯ್ ಜನನಾಯಕ

ಪಶ್ಚಿಮ ಬಂಗಾಳದಲ್ಲಿ ಏನಿದ್ದರೂ ತನ್ನದೇ ಆಟ, ಬೇರೆಯವರು ಲೆಕ್ಕಕ್ಕಿಲ್ಲ ಎಂದು ತೃಣಮೂಲ ಕಾಂಗ್ರೆಸಿನ ಮಮತಾ ಬ್ಯಾನರ್ಜಿ ಹೇಳುತ್ತಿದ್ದುದಿತ್ತು. ಆದರೆ ಈಗ ಮಮತಾ 'ಆಟ' ಮುಗಿದಿದೆ. 15 ವರ್ಷಗಳ ಅವರ ದುರಾಡಳಿತಕ್ಕೆ ಅಂತ್ಯ ಬಿದ್ದಿದೆ. ಅಲ್ಲೀಗ ಬಿಜೆಪಿ ತನ್ನ ಹೊಸ ಆಟ ಆರಂಭಿಸಿದೆ. ಮಮತಾ ಬ್ಯಾನರ್ಜಿಯವರ ಕೆಟ್ಟ ಆಡಳಿತ, ಹದಗೆಟ್ಟ ಕಾನೂನು ವ್ಯವಸ್ಥೆ, ಅತಿರೇಕದ ಅಲ್ಪಸಂಖ್ಯಾತ ತುಷ್ಟೀಕರಣ, ಬಾಂಗ್ಲಾ ದೇಶಿ ಮುಸ್ಲಿಮರಿಗೆ ಸಿಗುತ್ತಿರುವ ರಾಜಮರ್ಯಾದೆ, ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಮುಂತಾದ ಎಲ್ಲಾ ಅಪಸವ್ಯಗಳಿಂದ ರೋಸಿಹೋದ ಜನರು ಮಮತಾ ಬ್ಯಾನರ್ಜಿಗೆ ಸೋಲುಣಿಸಿ ಬಿಜೆಪಿಯನ್ನು ಅಧಿಕಾರಕ್ಕೆ ತಂದಿದ್ದಾರೆ. ಬಿಜೆಪಿಯಿಂದ ಅಭಿವೃದ್ಧಿಯ ಹೊಸ ಪಥ ಬಯಸಿದ್ದಾರೆ.

ನಿಜಕ್ಕಾದರೆ ಕಳೆದ ಚುನಾವಣೆಯಲ್ಲೇ ಮಮತಾ ಬ್ಯಾನರ್ಜಿಗೆ ಬಿಜೆಪಿ ಪ್ರಬಲ ಸವಾಲು ಒಡ್ಡಿತ್ತು. ಆದರೆ ತೃಣಮೂಲ ಕಾಂಗ್ರೆಸ್ ಪಕ್ಷವು ಮತದಾರರನ್ನು ಬೆದರಿಸಿ, ಮತಗಟ್ಟೆ ವಶೀಕರಣ ಮಾಡಿ ಮತ್ತು ಅಕ್ರಮ ಮಾರ್ಗಗಳ ಮೂಲಕ ಚುನಾವಣೆಯಲ್ಲಿ ಗೆಲುವು ಸಾಧಿಸುತ್ತಾ ಬರುತ್ತಿದೆಯೆನ್ನುವ ಅನುಮಾನ ಕೂಡಾ ಅದೇವೇಳೆ ಹುಟ್ಟಿಕೊಂಡಿತ್ತು. ಹಾಗಾಗಿಯೇ ಈ ಬಾರಿ ಚುನಾವಣಾ ಆಯೋಗವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡಿತ್ತು. ಕೇಂದ್ರ ಮೀಸಲು ಪಡೆಯನ್ನು ದೊಡ್ಡ ಮಟ್ಟದಲ್ಲಿ ನಿಯೋಜಿಸುವ ಮೂಲಕ ಜನರು ನಿರ್ಭೀತಿಯಿಂದ ಮತದಾನ ಮಾಡಲು ಅವಕಾಶ ಕಲ್ಪಿಸಿತ್ತು. ಇದರಿಂದಾಗಿ ಚುನಾವಣಾ ಅಕ್ರಮಗಳನ್ನೆಸಗಲು ತೃಣಮೂಲ ಕಾರ್ಯಕರ್ತರಿಗೆ ಸಾಧ್ಯವಾಗಿರಲಿಲ್ಲ. ಚುನಾವಣಾ ಪಟ್ಟಿ ವಿಶೇಷ ಪರಿಷ್ಕರಣೆ(ಎಸ್ಐಆರ್)ಯ ಮೂಲಕ ನಕಲಿ ಮತದಾರರನ್ನು ಹಾಗೂ ಬಾಂಗ್ಲಾ ದೇಶೀಯರನ್ನು ಮತದಾರ ಪಟ್ಟಿಯಿಂದ ತೆಗೆದುದು ಕೂಡಾ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿರುವುದು ಸ್ಪಷ್ಟವಾಗಿದೆ. ಇದೀಗ ಪಶ್ಚಿಮ ಬಂಗಾಳದಲ್ಲಿ ಮಮತಾ ಆಡಳಿತ ಕೊನೆಗೊಂಡಿರುವುದು ಇಡೀ ದೇಶಕ್ಕೇ ನಿರಾಳತೆ ತರುವ ವಿಚಾರವಾಗಿದೆ. ದೇಶದ ಸಮಗ್ರತೆಗೇ ಅಪಾಯವೊಡ್ಡುವ ರೀತಿಯಲ್ಲಿ ಅಲ್ಲಿ ಬಾಂಗ್ಲಾ ದೇಶಿ ಮುಸ್ಲಿಮರು ವ್ಯಾಪಿಸಿದ್ದು, ನಮ್ಮ ದೇಶದ ಸವಲತ್ತುಗಳನ್ನು ಪಡಕೊಳ್ಳುತ್ತಿದ್ದಾರೆ. ಮಮತಾ ಸರಕಾರವು ಅವರಿಗೆ ಆಶ್ರಯತಾಣದಂತಾಗಿತ್ತು. ಇನ್ನೀಗ ಬಿಜೆಪಿ ಸರಕಾರದಡಿಯಲ್ಲಿ ಪಶ್ಚಿಮ ಬಂಗಾಳವು ಹೊಸ ಶಕೆಯೆಡೆಗೆ ಪಯಣ ಬೆಳೆಸುವುದೆಂದು ಆಶಿಸಬೇಕಾಗಿದೆ.



ತಮಿಳುನಾಡಿನಲ್ಲಿ ಮತ್ತು ಕೇರಳದಲ್ಲಿ ಕೂಡಾ ಆಡಳಿತ ವಿರೋಧಿ ಅಲೆಗಳು ಹಾಲಿ ಸರಕಾರವನ್ನು ಉರುಳಿಸಿವೆ. ಆಶ್ಚರ್ಯಕರ ಬೆಳವಣಿಗೆಯಲ್ಲಿ ತಮಿಳುನಾಡಿನ ಜನರು ವಿರೋಧ ಪಕ್ಷವಾದ ಎಐಎಡಿಎಂಕೆಗಿಂತಲೂ ಚಿತ್ರನಟ ವಿಜಯ್ ಅವರ ನೂತನ ಪಕ್ಷವನ್ನು ಆದರಿಸಿದ್ದಾರೆ. ಅವರ ಪಕ್ಷವು ಬಹುಮತ ಪಡೆಯುವುದರಿಂದ ಬೆರಳೆಣಿಕೆಯಷ್ಟು ಸ್ಥಾನಗಳಿಂದ ಮಾತ್ರ ವಂಚಿತರಾಗುವಂತಿದೆ. ಸರಕಾರ ರಚಿಸಲು ಅವರಿಗೆ ಇತರ ಪಕ್ಷದ ನೆರವು ಬೇಕಾಗಬಹುದು. ಒಟ್ಟಿನಲ್ಲಿ ಚಿತ್ರನಟರನ್ನು ಅಧಿಕಾರಕ್ಕೇರಿಸುವ ತಮ್ಮ ಹಳೆಯ ಸಂಪ್ರದಾಯವನ್ನು ತಮಿಳುನಾಡಿನ ಜನತೆ ಮತ್ತೆ ಮುಂದುವರಿಸಿದ್ದಾರೆ. ಎಂಜಿಆರ್, ಜಯಲಲಿತಾ ಹಾದಿಯಲ್ಲಿ ಈಗ ವಿಜಯ್ ಕೂಡಾ ಹೆಜ್ಜೆ ಹಾಕಲಿದ್ದಾರೆ. ಎರಡೂ ದ್ರಾವಿಡ ಪಕ್ಷಗಳ ರಾಜಕೀಯವು ತಮಗೆ ಬೇಕಾಗಿಲ್ಲ ಎಂಬ ಸ್ಪಷ್ಟ ಸಂದೇಶ ಕೂಡಾ ತಮಿಳುನಾಡು ಜನತೆಯಿಂದ ರವಾನೆಯಾಗಿದ್ದು, ಇದನ್ನು ಅಲ್ಲಿನ ಪಕ್ಷಗಳು ಮನನ ಮಾಡಿಕೊಳ್ಳಬೇಕಾಗಿದೆ. ಸಿನಿಮಾಗಳಲ್ಲಿ ದುಷ್ಟರನ್ನು ದಮನಿಸಿ ಸಿಳ್ಳೆ ಗಿಟ್ಟಿಸುವ ವಿಜಯ್ ನಿಜ ಜೀವನದಲ್ಲಿ 'ಜನನಾಯಕ'ನ ಹೊಣೆಗಾರಿಕೆಯನ್ನು ಹೇಗೆ ನಿಭಾಯಿಸುತ್ತಾರೆಂದು ನೋಡಬೇಕಾಗಿದೆ. ಡಿಎಂಕೆಯ ಸ್ಟಾಲಿನ್ ಆಡಳಿತವು ಉತ್ತರ ಭಾರತವನ್ನು ದ್ವೇಷಿಸುವಂತಹ ವಾತಾವರಣವನ್ನು ಸೃಷ್ಟಿಸಿದ್ದು, ಪ್ರತ್ಯೇಕತಾ ಭಾವಕ್ಕೆ ಇಂಬು ನೀಡುವಂತೆ ವರ್ತಿಸುತ್ತಿತ್ತು. ಜನರು ಅದನ್ನು ತಿರಸ್ಕರಿಸಿ ಅವರಿಗೆ ತಕ್ಕ ಪಾಠ ಕಲಿಸಿದ್ದಾರೆ.

ಕೇರಳವು ಅಧಿಕಾರವನ್ನು ಪರ್ಯಾಯವಾಗಿ ಬದಲಿಸುವ ತನ್ನ ಹಳೆಯ ಸಂಪ್ರದಾಯಕ್ಕೆ ಮತ್ತೆ ಆತುಕೊಂಡಿದೆ. ಕಳೆದ ಬಾರಿ ಎಲ್‌ಡಿಎಫ್‌ಗೆ ಮರುಅಧಿಕಾರ ನೀಡಿ ಈ ಸಂಪ್ರದಾಯ ಮುರಿದಿದ್ದರೂ ಈ ಬಾರಿ ಯುಡಿಎಫ್‌ಗೆ ಅಧಿಕಾರ ನೀಡಿದೆ. ದೇಶದೆಲ್ಲೆಡೆ ಹಿನ್ನಡೆ ಕಾಣುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಕೇರಳದ ಈ ಗೆಲುವು ತುಸು ನೆಮ್ಮದಿ ನೀಡಬಹುದು. ಆದರೆ ಬಿಜೆಪಿ ಕೇರಳದಲ್ಲಿ ತನ್ನ ನಿರೀಕ್ಷೆಯನ್ನು ಉಳಿಸಿಕೊಳ್ಳದೆ ತುಸು ನಿರಾಶೆ ಅನುಭವಿಸಿದೆ. ಕೇರಳದಲ್ಲಿ ಬಿಜೆಪಿ ಕ್ರಮಿಸಬೇಕಾದ ಹಾದಿ ಇನ್ನೂ ಬಹಳಷ್ಟಿದೆ ಎಂಬುದು ಇದರಿಂದ ನಿಚ್ಚಳವಾಗಿದೆ.

ಮೂರು ರಾಜ್ಯಗಳು 'ಆಡಳಿತ ವಿರೋಧಿ ಅಲೆ'ಯನ್ನು ತೆರೆದಿಟ್ಟಿದ್ದರೆ, ಬಿಜೆಪಿ ಆಳ್ವಿಕೆಯ ಅಸ್ಸಾಂ ಮತ್ತು ಪುದುಚೇರಿಗಳು ಇದಕ್ಕೆ ವಿರುದ್ಧವಾಗಿ ಕಾರ್ಯಾಚರಿಸಿವೆ. ಅಸ್ಸಾಂನಲ್ಲಿ ಹಿಮಂತ ಬಿಸ್ವ ಅವರ ಸಮರ್ಥ ನೇತೃತ್ವದಲ್ಲಿ ಬಿಜೆಪಿ ಸತತ ಮೂರನೇ ಅವಧಿಗೆ ಅಧಿಕಾರಕ್ಕೇರಿದೆ. ಅವರು ನೀಡಿದ ಉತ್ತಮ ಆಡಳಿತ, ಜನಮೆಚ್ಚುಗೆಯ ಕಾರ್ಯಕ್ರಮಗಳು, ಅಕ್ರಮ ನುಸುಳುಕೋರರ ವಿರುದ್ಧ ಅವರು ತಳೆದಿರುವ ಕಠಿಣ ನಿಲುವುಗಳು ಅವರನ್ನು ಜನಪ್ರಿಯ ನಾಯಕನನ್ನಾಗಿಸಿವೆ. ಹಾಗಾಗಿ ಭಾರೀ ಬಹುಮತದಿಂದಲೇ ಜನರು ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತಂದಿದ್ದಾರೆ. ಪುದುಚೇರಿಯಲ್ಲಿ ಕೂಡಾ ಬಿಜೆಪಿ ನೀಡಿದ ಸುಶಾಸನವು ಅದನ್ನು ಮತ್ತೆ ಅಧಿಕಾರಕ್ಕೇರಿಸುವಲ್ಲಿ ಸಫಲವಾಗಿದೆ.

ಒಂದಂತೂ ನಿಜ, ಭಾರತದಲ್ಲಿ ಪ್ರಜಾತಂತ್ರವು ಅತ್ಯಂತ ಜೀವಂತವಾಗಿದೆ ಹಾಗೂ ಜನರು ಹೆಚ್ಚೆಚ್ಚು ಪ್ರಬುದ್ಧರಾಗುತ್ತಿದ್ದಾರೆ ಎಂಬುದನ್ನು ಈ ಚುನಾವಣಾ ಫಲಿತಾಂಶಗಳು ತೋರಿಸಿಕೊಟ್ಟಿವೆ.

ಜೀವನದಲ್ಲೂ ಎರಡನೇ ಇನ್ನಿಂಗ್ಸ್ ಇದೆ...ನೆನಪಿರಲಿ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ತೊಂಬತ್ತರ ದಶಕದ ಭಾರತವನ್ನು ನೋಡಿದವರಿಗೆ ರೇಡಿಯೋ, ದೂರದರ್ಶನ, ಅಂಬಾಸೆಡರ್ ಕಾರು, ಅಟ್ಲಾಸ್ ಸೈಕಲ್, ಟೇಪ್ ರೆಕಾರ್ಡರು, ಟ್ರಿಂಗ್‌ಟ್ರಿಂಗ್ ಟೆಲಿಫೋನ್, ಗೋಲಿಯಾಟ ಮುಂತಾದ ಸವಿನೆನಪುಗಳೊಂದಿಗೆ ಬಜಾಜ್ ಚೇತಕ್ ಸ್ಕೂಟರ್ ಕೂಡಾ ಅಚ್ಚಾಗಿರುತ್ತದೆ. ಶ್ರೀಮಂತರು ಎಂದರೆ ಕಾರು ಮತ್ತು ಬೈಕಿರುವವರು ಎಂದ ಮಾತು ಚಾಲ್ತಿಯಲ್ಲಿದ್ದ ಕಾಲದ ಈ ಚೇತಕ್ ಸ್ಕೂಟರ್ ಭಾರತದ ಮಧ್ಯಮವರ್ಗದ ಅತ್ಯುತ್ತಮ ಪ್ರತಿನಿಧಿಯೆನ್ನಬಹುದು. ರಜಪೂತ ರಾಜ ಮಹಾರಾಣಾ ಪ್ರತಾಪನ ಕುದುರೆಯ ಹೆಸರಿಟ್ಟುಕೊಂಡು 1972ರಲ್ಲಿ ರಸ್ತೆಗಿಳಿದ ಈ ಚೇತಕ್ ಸ್ಕೂಟರ್ ಭಾರತದ ಅತ್ಯಂತ ಜನಪ್ರಿಯ ಸ್ಕೂಟರ್ ಆಗಿದ್ದು ಮಾತ್ರವಲ್ಲ, ಭಾರತದ ಅತ್ಯಂತ ಮೌಲ್ಯಯುತ ಬ್ರಾಂಡ್ ಕೂಡ ಆಗಿತ್ತು. ಇದಕ್ಕೂ ಮುಂಚೆ 1950ರ ಆಸುಪಾಸಿನಲ್ಲಿ ಆಟೋಮೊಬೈಲ್ ಪ್ರಾಡಕ್ಟ್ಸ್ ಆಫ್ ಇಂಡಿಯಾ (API) ಇಟಲಿಯಿಂದ ಆಮದು ಮಾಡಿ ಮಾರುತ್ತಿದ್ದ ಲ್ಯಾಂಬ್ರೆಟ್ಟಾ, ಭಾರತದ ಮೊತ್ತಮೊದಲ ಸ್ಕೂಟರ್ ಆಗಿತ್ತು. ಬಜಾಜ್ ಕೂಡ 1960ರಲ್ಲಿ ಇಟಾಲಿಯನ್ ಕಂಪನಿ ಪಿಯಾಜ್ಜಿಯೋದ ಸಹಯೋಗದಲ್ಲಿ ವೆಸ್ಪಾ ಸ್ಕೂಟರುಗಳನ್ನು ಮಾರುತ್ತದ್ದ ಕಂಪನಿಯೇ. 1972ರಲ್ಲಿ ಈ ಪಾಲುದಾರಿಕೆ ಕೊನೆಯಾಗಿ, ಬಜಾಜ್ ತನ್ನದೇ ಆದ ಎಂಜಿನ್ ತಯಾರಿಸಿ, ಚೇತಕ್ ಅನ್ನು ಸಂಪೂರ್ಣವಾಗಿ ಭಾರತದಲ್ಲೇ ತಯಾರಾದ ಮೊತ್ತಮೊದಲ ಸ್ಕೂಟರ್ ಎನಿಸಿದರು.

ಜಾಗತಿಕವಾಗಿ ನೋಡಿದರೆ, ಈ ಸ್ಕೂಟರಿನ ಜನಕರು ಜರ್ಮನ್ನರು. 1817ರಲ್ಲೇ ಜರ್ಮನ್ನರು Laufmaschine (ಜರ್ಮನ್ ಭಾಷೆಯಲ್ಲಿ 'ಓಡುವ ಮಶೀನ್' ಎಂದೇ ಇದರರ್ಥ) ಎಂಬ ಹೆಸರಿನ ಮೊಪೆಡ್ ಒಂದನ್ನು ತಯಾರಿಸಿದ್ದರು. ಒಂದುನೂರು ವರ್ಷದ ಬಳಿಕ ಇದರ ಸುಧಾರಿತ ಮಾಡೆಲ್ ಆದ ಆಟೋಪೆಡ್ ಅನ್ನು ಅಮೇರಿಕನ್ನರು ಮಾರುಕಟ್ಟೆಗೆ ಬಿಟ್ಟರು. ಆಗಿನ್ನೂ ಜನಪ್ರಿಯವಾಗುತ್ತಿದ್ದ ಮೋಟಾರುಕಾರುಗಳ ಹುಚ್ಚಿನಲ್ಲಿದ್ದ ಅಮೇರಿಕಾದಲ್ಲಿ ಇದು ಹೆಚ್ಚೇನೂ ಜನಪ್ರಿಯವಾಗಲಿಲ್ಲವಾದರೂ, ಕಾರು ಕೊಳ್ಳಲಾಗದ ಕೆಳಮಧ್ಯಮ ವರ್ಗಕ್ಕೆ ಈ ಆಟೋಪೆಡ್ ಸ್ವಲ್ಪ ಹಿಡಿಸಿತ್ತು. ಆದರೆ ಈ ಲಾವುಫ್ಮಶೀನ್ ಆಗಲೀ, ಆಟೋಪೆಡ್ ಆಗಲೀ ನಾವು ನೀವು ಕಲ್ಪಿಸಿಕೊಳ್ಳುವ ಸ್ಕೂಟರುಗಳ ರೀತಿ ಇರಲೇ ಇಲ್ಲ. ಬದಲಿಗೆ ಹಿಡಿದುಕೊಳ್ಳಲೊಂದು ಹ್ಯಾಂಡಲ್ಲು, ನಿಲ್ಲಲಿಕ್ಕೊಂದು ಮಣೆಯಂತದ್ದು ಮಾತ್ರ ಇತ್ತು. ಹೆಚ್ಚೂಕಮ್ಮಿ ಇಂದಿನ ಎಲೆಕ್ಟ್ರಿಕ್ ಸೆಗ್-ವೇಗಳ ತರ ಇದ್ದವು. 1946ರಲ್ಲಿ ವೆಸ್ಪಾ ಬರುವವರೆಗೂ ಸ್ಕೂಟರುಗಳೇನೂ ಜಗತ್ತಿಗೆ ಅಷ್ಟೊಂದು ಇಷ್ಟವಾದ ಸಾರಿಗೆಯ ವಿಧಾನವೂ ಆಗಿರಲಿಲ್ಲ. ರಸ್ತೆಯ ಮೇಲೆ ಕಾರುಗಳೇ ರಾಜರಾಗಿದ್ದ ಕಾಲದಲ್ಲಿ, ಹಳ್ಳಿಯಿಂದ ಹಳ್ಳಿಗಳ ನಡುವಿನ ಸಣ್ಣ ಪ್ರಯಾಣಗಳಿಗೆ ಹಾಗೂ ನಗರದ ಒಳಗೇ ಪ್ರಯಾಣಿಸಲಿಕ್ಕೆಂದು ಬಂದ ವೆಸ್ಪಾ ಸ್ಕೂಟರ್ ಜಗತ್ತಿನಲ್ಲಿ ಚೆಂದದೊಂದು ಸಣ್ಣನೆಯ ಬಿರುಗಾಳಿಯನ್ನೆಬ್ಬಿಸಿತು.

ತಮಾಷೆಯ ವಿಷಯವೆಂದರೆ ಇದನ್ನು ಕಂಡುಹಿಡಿದ ಹಾಗೂ ವಿನ್ಯಾಸಗೊಳಿಸಿದ ವ್ಯಕ್ತಿಗೆ ಸ್ಕೂಟರುಗಳ ಬಗ್ಗೆ ಏನೇನೂ ಗೊತ್ತಿರಲಿಲ್ಲ ಹಾಗು ಸ್ಕೂಟರುಗಳ ಬಗ್ಗೆ ಅಷ್ಟೇನೂ ಆಸ್ಥೆಯುಳ್ಳವನೂ ಆಗಿರಲಿಲ್ಲ. ಕೊರ್ರಾಡಿನೋ ಡ'ಎಸ್ಕಾನಿಯೋ ಎಂಬ ಈ ವ್ಯಕ್ತಿ ಮೂಲತಃ ವಿಮಾನಗಳ ಎಂಜಿನಿಯರ್ ಆಗಿದ್ದವ. ಹಲವಾರು ಹೆಲಿಕಾಪ್ಟರುಗಳನ್ನೂ, ಕೆಲ ಸಣ್ಣ ವಿಮಾನಗಳನ್ನೂ ವಿನ್ಯಾಸಗೊಳಿದವ. ಎರಡನೇ ಮಹಾಯುದ್ಧದ ಕಾಲದ ಇಟಲಿಯ ಮಟ್ಟಿಗೆ ಇವ ರೈಟ್ ಸಹೋದರ ಸಮಾನನೆಂದೇ



ಆಟೋಪೆಡ್



ವೆಸ್ಪಾ

ಹೇಳಬಹುದು. ಆತ ಕೆಲಸ ಮಾಡುತ್ತಿದ್ದ ಕಂಪನಿ ಪಿಯಾಜ್ಜಿಯೋ ಕೂಡ ಮೂಲತಃ ರೈಲು ಮತ್ತು ವಿಮಾನಗಳ ವಿನ್ಯಾಸ ಮತ್ತು ಎಂಜಿನ್ ಮತ್ತಿತ್ಯಾದಿ ಭಾಗಗಳನ್ನು ತಯಾರಿಸುತ್ತಿದ್ದ ಕಂಪನಿಯೇ ಆಗಿದ್ದದ್ದು. ಆದರೆ ಎರಡನೇ ಮಹಾಯುದ್ಧದ ಬಳಿಕ, ಇಟಲಿಯ ಎಲ್ಲಾ ಕೈಗಾರಿಕೆಗಳೂ ದಿವಾಳಿಯೆದ್ದು ಸ್ಥಗಿತಗೊಂಡಿದ್ದವು. ಮಾತ್ರವಲ್ಲದೇ ಜರ್ಮನಿಯ ಸ್ನೇಹಿತನಾಗಿದ್ದ ಕಾರಣ ಇಟಲಿಯ ಮೇಲೆ ಮಿತ್ರರಾಷ್ಟ್ರಗಳು ಹಲವಾರು ನಿರ್ಬಂಧಗಳನ್ನೂ ಹೇರಿದ್ದರಿಂದ ಪಿಯಾಜ್ಜಿಯೋ ಬಳಿ ಬೇರೇನೂ ಕೆಲಸಗಳೂ ಇರಲಿಲ್ಲ. ಆ ನಿರ್ಬಂಧಗಳಲ್ಲೊಂದು 'ನೀವಿನ್ನು ವಿಮಾನಗಳನ್ನು ತಯಾರಿಸುವಂತಿಲ್ಲ' ಎಂಬುದೂ ಆಗಿತ್ತು. ಮಾತ್ರವಲ್ಲದೇ ಯುದ್ಧಕಾಲದಲ್ಲಿ ಪಿಯಾಜ್ಜಿಯೋದ ಹಲವಾರು ಫ್ಯಾಕ್ಟರಿಗಳು ಮಿತ್ರರಾಷ್ಟ್ರಗಳ ವಿಮಾನಧಾಳಿಗೆ ಬಲಿಯಾಗಿದ್ದವು. ಆದರೆ ನೂರಾರು ಜನರಿಗೆ ಕೆಲಸ ಕೊಟ್ಟಿದ್ದ ಕಂಪನಿಯ ವ್ಯವಹಾರ ಹೇಗಾದರೂ ಮುಂದುವರಿಯಬೇಕಲ್ಲ. ಇದ್ದಬದ್ದ ಸಂಪನ್ಮೂಲಗಳನ್ನೆಲ್ಲಾ ಕ್ರೋಡೀಕರಿಸಿ ನಾವು ಮುಂದೇನು ಮಾಡಬಹುದು ಎಂದು ಯೋಚಿಸಿದ ಕಂಪನಿಯ ಆಡಳಿತಮಂಡಳಿಗೆ ಹೊಳೆದದ್ದು, ಆರ್ಥಿಕವಾಗಿ ಅತ್ಯಂತ ಕಡಿಮೆ ಬಂಡವಾಳ ಬೇಕಿದ್ದ ಹಾಗೂ ಮಾರಾಟ ಅಥವಾ ದಿವಾಳಿಯ ರಿಸ್ಕ್ ಅತ್ಯಂತ ಕಡಿಮೆಯಿದ್ದ ಸಣ್ಣದೊಂದು ಸ್ಕೂಟರಿನ ತಯಾರಿಕೆಯ ಆಲೋಚನೆ. ಫೆರಾರಿ, ಲ್ಯಾಂಬೋರ್ಗಿನಿ, ಆಲ್ಫಾ ರೋಮಿಯೋ ಎಲ್ಲರದ್ದೂ ಕಾರಿನ ವ್ಯವಹಾರ ಇಳಿಮುಖವಾಗಿದ್ದ ಕಾಲದಲ್ಲಿ, ಪಿಯಾಜ್ಜಿಯೋ ತನ್ನ ಎಂಜಿನಿಯರುಗಳಿಗೆ ಸ್ಕೂಟರ್ ಒಂದನ್ನು ವಿನ್ಯಾಸಗೊಳಿಸುವ ಕೆಲಸ ಕೊಟ್ಟೇಬಿಟ್ಟಿತು.

ಡ'ಎಸ್ಕಾನಿಯೋ ಸ್ವತಃ ಕಾರಿನಲ್ಲೇ ಕೆಲಸಕ್ಕೆ ಬರುತ್ತಿದ್ದರೂ ಯುದ್ಧದ ಬಳಿಕ ರಸ್ತೆಗಳೆಲ್ಲಾ ಬಾಂಬ್, ಶೆಲ್ ಇತ್ಯಾದಿಗಳಿಂದಾಗಿ ಹೊಂಡಬಿದ್ದದ್ದನ್ನು ಗಮನಿಸಿ, ತನ್ನ ಸ್ಕೂಟರ್ ಅನ್ನು ವಿನ್ಯಾಸಗೊಳಿಸುವಾಗ, ಅಂದಿನ ಬೈಕುಗಳಂತೆ ಆಚೀಚೆ ಕಾಲುಹಾಕಿ ಕೂರುವ ಬದಲು, ಎರಡೂ ಕಾಲನ್ನು ಮುಂದೆಯೇ ಇಟ್ಟುಕೂರುವಂತೆ ಒಂದು ಚೇದಿಕೆಯನ್ನೂ, ಅದರ ಮುಂದೆ ಒಂದು ಅಗಲವಾದ ಗುರಾಣಿಯಂಥ ವಿನ್ಯಾಸದಿಂದ ಪ್ರಾರಂಭಿಸಿದ. ಇದರಿಂದಾಗಿ ಸ್ಕೂಟರ್ ಚಾಲಕರ ಪ್ಯಾಂಟು ಹಾಗೂ ಸ್ಕರ್ಟ್‌ಗಳ ಮೇಲೆ ಕೊಚ್ಚೆ ಮಣ್ಣು ಹಾರುವುದು ತಪ್ಪಿತು. ಈ ಗುರಾಣಿಗೆ ಅವನು ಕೊಟ್ಟ ಹೆಸರೇ ಮಡ್-ಗಾರ್ಡ್. ಕಾಲನ್ನು ಮುಂದಿಟ್ಟು ಕೂತಾಗ ಎಂಜಿನ್ ಎಲ್ಲಿಡಬೇಕು? ಹಾಗಾಗಿ ಈ ವಿನ್ಯಾಸದಲ್ಲಿ ಎಂಜಿನ್ ಹಿಂದಕ್ಕೆ ಹೋಯಿತು. ಈ ಹೊಂಡಬಿದ್ದ ರಸ್ತೆಗಳಲ್ಲಿ ತನ್ನದೇ ಕಾರುಗಳ ಟೈರುಗಳು ಆಗಾಗ ಕೈಕೊಡುವುದನ್ನು ಗಮನಿಸಿ, ಸದಾ ಒಂದು ಟೈರು ಜೊತೆಯೇ ಇರುವಂತೆ ಆಲೋಚಿಸಿ, ಹಿಂದಿನ ಸೀಟಿನ ಕೊನೆಯಲ್ಲಿ ಒಂದು ಎಕ್ಸ್ಟ್ರಾ ಟೈರನ್ನೂ ಕೂರಿಸಲಾಯ್ತು. ಹಿಂದಿನಿಂದ ಸ್ವಲ್ಪ ಅಗಲವಾಗಿ, ಮಧ್ಯದಲ್ಲಿ ಚಿಕ್ಕದಾಗಿದ್ದು, ಕರ್ರ್ರ್ ಎಂದು ಶಬ್ದ ಮಾಡುವ ಎರಡು ಸ್ಟ್ರೋಕಿನ ಎಂಜಿನ್ ಉಳ್ಳ ಈ ವಾಹನಕ್ಕೆ ಕಣಜದ ಹುಳ(wasp)ದ್ದೇ ಈ ಮೂರೂ ಗುಣಗಳಿದ್ದದ್ದರಿಂದ, ಇಟಾಲಿಯನ್ ಭಾಷೆಯಲ್ಲಿ ಕಣಜಕ್ಕಿದ್ದ ಪದವಾದ ವೆಸ್ಪಾ ಎಂದೇ ಹೆಸರಿಡಲಾಯ್ತು.

ಈ ಸಣ್ಣ ಬದಲಾವಣೆಗಳಿಂದಾಗಿ ವಿನ್ಯಾಸವಾದ ಈ ಸ್ಕೂಟರ್, ಅಂದಿನ ಜನರಿಗೆ ಆಕರ್ಷಕವಾಗಿ ಕಂಡಿದ್ದು ಮಾತ್ರವಲ್ಲ, ಆರ್ಥಿವಾಗಿ ಕೂಡ ಕೈಗೆಟುವಂತಿತ್ತು. ಒಂದೇ ವರ್ಷದಲ್ಲಿ ಪಿಯಾಜ್ಜಿಯೋದ ವೆಸ್ಪಾ ಇಟಲಿಯ ಬೀದಿಬೀದಿಗಳಲ್ಲಿ ಕಾಣಲಾರಂಭಿಸಿತು. ವಿಮಾನ ತಯಾರಿಸುವ ಕಂಪನಿಯೊಂದು, ಯುದ್ಧದ ಅನಿವಾರ್ಯತೆಗಳಿಂದಾಗಿ ಸ್ಕೂಟರ್ ಕಂಪನಿಯಾಗಿ ಬದಲಾಗಿದ್ದು ಮಾತ್ರವಲ್ಲದೇ, ಜಗತ್ತಿಗೆ ಒಂದು ಅತ್ಯಂತ ಜನಪ್ರಿಯ ವಾಹನವನ್ನು ಕೊಟ್ಟಿತು. ವಿಮಾನದ ಕಂಪನಿಯಾಗಿ ಪಡೆದಿದ್ದ ಪ್ರಸಿದ್ಧಿ ಹಾಗೂ ಆರ್ಥಿಕ ಸಫಲತೆಗಿಂಥ ಹೆಚ್ಚನ್ನು, ಈ ಎರಡನೇ ಇನ್ನಿಂಗ್ಸಿನಲ್ಲಿ ಗಳಿಸಿತು.

ಇದು ಪಿಯಾಜ್ಜಿಯೋ ಒಂದರ ಕಥೆ ಮಾತ್ರವಲ್ಲ. ಜಪಾನಿನ ವಿಮಾನ ತಯಾರಿಕಾ ಕಂಪನಿಯಾಗಿದ್ದ ಕವಾನಿಶಿಯದ್ದು ಕೂಡ ಇದೇ ಕತೆ. ವಿಮಾನಗಳನ್ನು ತಯಾರಿಸಲು ಸಾಧ್ಯವಾಗದೇ, ಕವಾನಿಶಿ ಕೂಡ ಸ್ಕೂಟರ್ ಮತ್ತು ಬೈಕುಗಳ ತಯಾರಿಕೆಗೆ ಇಳಿದು, ಜಗತ್ತಿಗೆ ಸೂಪರ್ ಲಾಸ್ಸೀ ಮೋಟರ್ ಸೈಕಲ್ ಅನ್ನು ಕೊಟ್ಟಿತು. ನಾವು ನೀವು ಇವತ್ತು ಬಳಸುವ ಬೈಕುಗಳಲ್ಲಿ ಮುಂದೆ ಕಂಡುಬರುವ ಫ್ಯೂಯಲ್ ಟ್ಯಾಂಕ್ ವಿನ್ಯಾಸ ಏನಿದೆ, ಅದು ಸೂಪರ್ ಲಾಸ್ಸೀಯ ಕೊಡುಗೆ. ವಿಮಾನಗಳಲ್ಲಿ ಕಂಡುಬರುವ ಸಂಯೋಜಿತ ವಿನ್ಯಾಸದ (integrated design) ತತ್ವಗಳು, ಕವಾನಿಶಿಯಿಂದಾಗಿ ಸಾಮಾನ್ಯ ಬೈಕುಗಳಿಗೂ ಬಂದಿಳಿಯಿತು. ಜಗತ್ತಿಗೆ ಮೊತ್ತಮೊದಲ ಜೆಟ್ ಪ್ರೊಪಲ್ಷನ್ ವಿಮಾನವನ್ನೂ, ಜಗತ್ತಿನ ಮೊತ್ತಮೊದಲ ದ್ರವ ಇಂಧನ ಚಾಲಿತ ರಾಕೆಟ್ ವಿಮಾನವನ್ನೂ ಕೊಟ್ಟ ಜರ್ಮನ್ ಕಂಪನಿಯಾದ ಹೈನ್ಕೆಲ್‌ನದ್ದೂ ಇದೇ ಕಥೆ. ವಿಮಾನದ ವ್ಯವಹಾರಗಳನ್ನು ಮಾಡುವಂತಿಲ್ಲ ಎಂಬ ಆಜ್ಞೆಯಿಂದಾಗಿ, ಹೈನ್ಕೆಲ್ ವೆಸ್ಪಾದ್ದೇ ಇನ್ನೊಂದು ರೂಪವಾದ (ಅಷ್ಟೇನೂ ಚೆಂದವಿಲ್ಲದ) ಹೈನ್ಕೆಲ್ ಟೂರಿಸ್ಟ್ ಎನ್ನುವ ಸ್ಕೂಟರ್ ಅನ್ನು ಜರ್ಮನಿಯಲ್ಲಿ ಬಿಡುಗಡೆ ಮಾಡಿದರು. ಹೈನ್ಕೆಲ್ ಬಬಲ್ ಎಂಬ ಕಾರು ಕೂಡ ಮಾರುಕಟ್ಟೆಗೆ ಬಂದಿಳಿಯಿತು.

ಹೀಗೆ, ಹಲವಾರು ಕಂಪನಿಗಳು ಪರಿಸ್ಥಿತಿಯ ಒತ್ತಡದಿಂದ ಮುಚ್ಚುವ ನಿರ್ಧಾರಕ್ಕೆ ಮುಂದಾದರೆ, ತಮಗಿದ್ದ ಜ್ಞಾನವನ್ನೇ ಬಳಸಿಕೊಂಡು ಸಣ್ಣಮಟ್ಟಿನ ಬದಲಾವಣೆಗಳಿಂದ ಎರಡನೇ ಜೀವಪಡೆದು ಮುಂದುವರೆದು ಸಫಲತೆ ಕಂಡಿವೆ. ಮಹಾಯುದ್ಧವನ್ನೇ ಎದುರಿಸಿ ಬದುಕಿಳಿದು ಪಿಯಾಜ್ಜಿಯೋ ವೆಸ್ಪಾವನ್ನು ತಯಾರಿಸಬಹುದಾದರೆ, ನಮ್ಮ ನಿಮ್ಮ ಕಷ್ಟಗಳನ್ನೂ ನಾವು ಎದುರಿಸಿ ನಿಂತು ಗೆಲ್ಲಲಾರೆವೇ? ಒಮ್ಮೆ ಯೋಚಿಸಿ ನೋಡಿ.

ಹೋರಾಟಕ್ಕೆ ಹೆಸರಾದ ಅಮೃತ್‌ಮಹಲ್ ತಳಿ

ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಅಮೃತ್ ಮಹಲ್ ಈ ದೇಶ ಕಂಡ ಗೋತಳಿಗಳಲ್ಲೇ ಅತ್ಯಂತ ಪ್ರಸಿದ್ಧ ಹಾಗೂ ಐತಿಹಾಸಿಕ ತಳಿಯಾಗಿದೆ. ಈ ತಳಿ ಪ್ರಸಿದ್ಧಿ ಪಡೆದಿದ್ದೇ ತನ್ನ ಹೋರಾಟ ಮನೋಭಾವದಿಂದ ಎಂದರೆ ತಪ್ಪಾಗಲಾರದು. ಎಷ್ಟರ ಮಟ್ಟಿಗೆ ಎಂದರೆ ಯುದ್ಧಗಳಲ್ಲಿ ಇದರ ಹಿಂಡನ್ನು ಕಂಡರೇನೆ ಶತ್ರು ಸೈನ್ಯ ದಿಕ್ಕಾಪಾಲಾಗಿ ಓಡುತ್ತಿತ್ತು. ಹೀಗೆ ತನ್ನ ಕೆಚ್ಚೆದೆಯ ಕಿಚ್ಚಿನಿಂದಲೇ ಗೆಲುವು ತಂದುಕೊಡುತ್ತಿದ್ದ ಈ ತಳಿಗಳನ್ನು 'ವಾರಿಯರ್ ಬ್ರೀಡ್ಸ್' ಎಂಬುದಾಗಿಯೂ ಕರೆಯುತ್ತಿದ್ದರು. ದಣಿವಿಲ್ಲದೆ ಸತತ 16 ಗಂಟೆಗೂ ಹೆಚ್ಚು ಕಾಲ ಕೆಲಸ ಮಾಡುವ ಶಕ್ತಿಯನ್ನು ಹೊಂದಿರುವ ಇವುಗಳು ಪ್ರಪಂಚದಲ್ಲೇ ಏಕೈಕ ಕೆಲಸಗಾರ ಮತ್ತು ಹೋರಾಟದ ತಳಿ ಎಂಬ ಪ್ರಶಂಸೆಗೂ ಪಾತ್ರವಾಗಿವೆ. ಪ್ರಪಂಚದಲ್ಲೇ ಮೊಟ್ಟಮೊದಲು ಅಭಿವೃದ್ಧಿ ಪಡಿಸಲಾದ ದನದ ತಳಿ ಎಂಬ ಹೆಗ್ಗಳಿಕೆ ಸಹ ಇದರದ್ದು. ಇಂಗ್ಲೆಂಡಿನಲ್ಲಿ ಅತ್ಯಂತ ಹಳೆಯ ತಳಿಯೆಂದು ಗುರುತಿಸಲ್ಪಡುವ 'ಶಾರ್ಟ್ ಹಾರ್ನ್' ಗಿಂತ ಮೊದಲೇ ಈ ತಳಿಯನ್ನು ಇಲ್ಲಿ ಅಭಿವೃದ್ಧಿಪಡಿಸಲಾಗಿತ್ತು ಎಂಬುದನ್ನು ದಾಖಲೆಗಳು ದೃಢಪಡಿಸುತ್ತವೆ. ಹಿಂದೆ ಈ ತಳಿ ಹಾಲು ಕೊಡುವುದಕ್ಕೂ ಮತ್ತು ಹೊಲ ಉಳುವುದಕ್ಕೂ ಸೈ ಎನಿಸಿಕೊಂಡಿತ್ತು. ಇಂದು ಕೇವಲ ಮೂರ್ನಾಲ್ಕು ಲೀಟರ್ ಹಾಲನ್ನು ನೀಡುವ ಈ ತಳಿ ಒಂದೆರಡು ದಶಮಾನಗಳ ಹಿಂದೆ ಸುಮಾರು 15 ರಿಂದ 16 ಲೀಟರ್ ಹಾಲನ್ನು ನೀಡುತ್ತಿದ್ದುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಒಂದರ್ಥದಲ್ಲಿ ಈ ತಳಿಗಳನ್ನು ಭಾವನಾ ಜೀವಿಗಳು ಎಂಬುದಾಗಿ ಹೇಳಲಾಗುತ್ತದೆ.

ಕ್ರಿ.ಶ. 1572 ರಿಂದ 1600ರಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ರಾಯಭಾರಿ ತಮ್ಮ ಆಡಳಿತದ ಸುಭದ್ರತೆ, ಸುರಕ್ಷಣೆ ಮತ್ತು ಅನುಕೂಲಕ್ಕಾಗಿ ವಿಜಯನಗರದ ಕರುಹಟ್ಟಿ ಎಂಬಲ್ಲಿಂದ ಕೆಲವು ಉತ್ತಮ ದನಗಳ ಹಿಂಡನ್ನು ತರಿಸಿಕೊಂಡರು. ನಂತರ ಆ ದನಗಳು ಆಗ ಮೈಸೂರಿನಲ್ಲಿದ್ದ ಸ್ಥಳೀಯ ದನಗಳೊಂದಿಗೆ ಸೇರಿ ಅವುಗಳಿಂದ ಉತ್ಪನ್ನವಾದ ಪೀಳಿಗೆಯೇ ಇಂದು ಲೋಕ ಪ್ರಸಿದ್ಧವಾದ ಅಮೃತಮಹಲ್ ದನಗಳು ಎಂಬುದು ಮೈಸೂರಿನ ಚರಿತ್ರೆಯಿಂದ ತಿಳಿದುಬರುತ್ತದೆ. ತನ್ನ ಸದೃಢ ದೇಹ, ಬಿಗುವಾದ ಮೈಕಟ್ಟು, ಚೂಪಾದ ಕೊಂಬು, ತೀಕ್ಷ್ಣವಾದ ನೋಟದಿಂದಲೇ ನೋಡುವವರ ಎದೆ ನಡುಗಿಸುವ ತಾಕತ್ತನ್ನು ಹೊಂದಿರುವ ಇವುಗಳು ದೇಶದಲ್ಲಿರುವ ಸಾಕಷ್ಟು ಗೋತಳಿಗಳಲ್ಲಿಯೇ ವಿಶೇಷವಾಗಿ ಕಂಡುಬರುತ್ತವೆ. ಸಾಕಿದವರನ್ನು ಬಿಟ್ಟು ಬೇರೆ ಯಾರೇ ಇವುಗಳ ಹತ್ತಿರ ಸುಳಿಯುವುದಕ್ಕೂ ಒಂದು ಕ್ಷಣ ಯೋಚಿಸಬೇಕಾದ ಇವುಗಳಿಗೆ ನೆನೆಪಿನ ಶಕ್ತಿ ಹೆಚ್ಚು.

ಇಂತಹ ಅಮೃತ್‌ಮಹಲ್ ದನಗಳಿಗೆ ಸಂಬಂಧಿಸಿದಂತೆ ಸಾಕಷ್ಟು ರೋಚಕ ಕಥೆಗಳಿವೆ. ಕಾಡಿಗೆ ಮೇಯುವುದಕ್ಕೆ ಹೋಗಿ ಹಿಂತಿರುಗಿ ಬರುವಾಗ ತಮ್ಮ ಕೊಂಬಿಗೆ ಹುಲಿ ಅಥವಾ ಚಿರತೆಯನ್ನು ಸಿಕ್ಕಿಸಿಕೊಂಡು ಬರುತ್ತಿದ್ದವು ಎಂದೆಲ್ಲಾ ಬಣ್ಣಿಸಲಾಗುತ್ತದೆ. ಯಾವುದೇ ಕ್ರೂರ ಪ್ರಾಣಿಗಳೂ ಇವನ್ನು ಸುಲಭದ ತುತ್ತಾಗಿಸುವುದು ಸಾಧ್ಯವಿರಲಿಲ್ಲ. ಮನೆಯಲ್ಲಿ ಒಂದು ನಾಯಿಗಿಂತ ಹೆಚ್ಚಿನ ಪೌರುಷದ ಕೆಲಸವನ್ನು ಈ ತಳಿಗಳೇ ನಿರ್ವಹಿಸುತ್ತಿದ್ದವು. ಇಂತಹ ಪೌರುಷ ಮತ್ತು ತಾಕತ್ತನ್ನು ನೋಡಿಯೇ ರಾಜ ಮಹಾರಾಜರು ಈ ತಳಿಗಳನ್ನು ಅರಮನೆಯಲ್ಲಿ ಸಾಕಿಕೊಳ್ಳುತ್ತಿದ್ದರು. ಎಷ್ಟರ ಮಟ್ಟಿಗೆ ಎಂದರೆ ಇವುಗಳದ್ದೇ ಒಂದು ಪ್ರತ್ಯೇಕ ಸೈನ್ಯವನ್ನೇ ಯುದ್ಧಕ್ಕೆ ಸಿದ್ಧಗೊಳಿಸಿಡುತ್ತಿದ್ದರು. ಯುದ್ಧದ ಸಮಯದಲ್ಲಿ ಇವುಗಳ ಹಿಂಡನ್ನು ವೈರಿ ಪಡೆಯ ಮೇಲೆ ನುಗ್ಗಿಸಿದರೆ ಸಾಕು. ಎದುರಿಗೆ ಸಿಕ್ಕ ಸಿಕ್ಕವರನ್ನೆಲ್ಲಾ ಧ್ವಂಸಗೊಳಿಸಿಕೊಂಡು ಮುಂದೆ ನುಗ್ಗುತ್ತಿದ್ದವು. ಹೀಗೆ ನಷ್ಟಗೊಂಡ ಎದುರಾಳಿಗಳನ್ನು ನಂತರ ಹಿಂದೆ ಬರುವ ಸೈನಿಕರು ಸುಲಭವಾಗಿ ಸಂಹಾರ ಮಾಡುತ್ತಿದ್ದರು. ಕೆಲವೊಮ್ಮೆ ರಾತ್ರಿ ವೇಳೆ ಇವುಗಳ ಕೊಂಬಿಗೆ ಉರಿಯುತ್ತಿರುವ ಪಂಜುಗಳನ್ನು ಕಟ್ಟಿ ವೈರಿ ಪಾಳಯಗಳ ಮೇಲೆ ಓಡಿಸಲಾಗುತ್ತಿತ್ತು. ಹೇಗೆಂದರೆ ಹಾಗೆ ಇವುಗಳು ಓಡುವ ಮೂಲಕ ಅಲ್ಲಿದ್ದ ಸೈನಿಕರ ದಿಕ್ಕನ್ನೇ ತಪ್ಪಿಸುತ್ತಿದ್ದವು. ಅಕಸ್ಮಾತ್ ಉಂಟಾಗುತ್ತಿದ್ದ ಈ ಘಟನೆಯಿಂದ ಶತ್ರು ಪಾಳಯ ತಬ್ಬಿಬ್ಬಾಗಿ ಏನು ಮಾಡಬೇಕೆಂಬುದನ್ನೇ ಅರಿಯದೆ ಪಲಾಯನಗೈಯುತ್ತಿತ್ತು.

1777ರಲ್ಲಿ ಹೈದರಾಬಾದಿನ ನಿಜಾಮ ತನ್ನ ಬೃಹತ್ ಸೈನ್ಯದೊಂದಿಗೆ ಅಂದಿನ ಮೈಸೂರು ರಾಜ್ಯದ ಚಿತ್ರದುರ್ಗದ ಕೋಟೆಗೆ ಮುತ್ತಿಗೆ ಹಾಕಿದಾಗ, ಅವನ ಬಳಿ ಸರಿ ಸುಮಾರು 3000ಕ್ಕೂ ಹೆಚ್ಚು ಶಸ್ತ್ರಸಜ್ಜಿತ ಕೆಚ್ಚೆದೆಯ ಸಿಪಾಯಿಗಳು, ಬೃಹತ್ ಶಸ್ತ್ರಾಸ್ತ್ರದ ಖಜಾನೆ, ಬಲಿಷ್ಠ ಆನೆಗಳು, ಕುದುರೆ ದಳ ಮತ್ತು ಸಾಕಷ್ಟು ಅನುಭವವಿರುವ ಪದಾಥಿ ದಳವೇ ಇತ್ತು. ಇಂತಹ ಅತ್ಯಂತ ಬಲಿಷ್ಠ ನಿಜಾಮನ ಸೈನ್ಯ ಇದ್ದಕ್ಕಿದ್ದಂತೆಯೇ ನಿರೀಕ್ಷಿಸಿರದ ರೀತಿಯಲ್ಲಿ ಧೂಳೀಪಟವಾಗಿ ಸೋಲೊಪ್ಪಿಕೊಂಡು ಪಲಾಯನ ಮಾಡಿಬಿಡುತ್ತದೆ. ಅದಕ್ಕೆ ಪ್ರಮುಖ ಕಾರಣ ಮೈಸೂರು ಸೈನ್ಯದಲ್ಲಿದ್ದ ಇದೇ ವಾರಿಯರ್ ಬ್ರೀಡ್‌ಗಳು. ಒಮ್ಮೆ ರಾಜನಾದ ಹೈದರಾಲಿಯ ಕೆಲವೇ ಕೆಲವು ಸೈನಿಕರು ಬೃಹತ್ ನಿಜಾಮನ ಸೈನ್ಯದ ಜೊತೆ ಕಾದಾಡುತ್ತಾ ಇನ್ನೇನು ಕಾದಾಡಲು ಸಾಧ್ಯವಾಗದೇ ಸೋಲೊಪ್ಪಿಕೊಳ್ಳುವಸಂದರ್ಭದಲ್ಲಿ ಹೈದರಾಲಿಗೆನೆನಪಾಗುವುದೇತನ್ನ ಮೆಚ್ಚಿನ ಈ 237 ತಳಿಗಳು. ಕೂಡಲೇ ಅವುಗಳನ್ನೇ ಆತ ರಣರಂಗಕ್ಕೆ ನುಗ್ಗಿಸುತ್ತಾನೆ. ನಂತರ ಇವು ರಣರಂಗದಲ್ಲಿ ಮಾಡಿದ್ದು ಅಚ್ಚರಿಯ ಸಾಹಸಗಾಥೆ. ಸೋಲಿನ ದವಡೆಯಿಂದ ಜಯ ತಂದುಕೊಟ್ಟಿದ್ದಷ್ಟೇ ಅಲ್ಲದೆ ನಿಜಾಮನ ಸೈನ್ಯ ಇದರ ಕೊಂಬು ಮತ್ತು ಕಾಲಿಗೆ ಸಿಕ್ಕಿ ಯಾವೊಂದು ಸೈನಿಕ ದಳದವರೂ ಮಾಡಲಾರದಷ್ಟು ನಷ್ಟವನ್ನು ಕೆಲವೇ ಕೆಲವು ತಳಿಗಳು ಮಾಡಿಬಿಟ್ಟಿದ್ದವು. ಇದೇ ದನಗಳ ಸಹಾಯದಿಂದ ಎರಡೂವರೆ ದಿನಗಳಲ್ಲಿ 100 ಮೈಲಿಗಳನ್ನು ನಡೆದು ಚಿದಂಬರಂ ಮುತ್ತಿಗೆಯನ್ನು ಬಿಡುಗಡೆ ಮಾಡಲು ಹೈದರಾಲಿಗೆ ಸಾಧ್ಯವಾಗಿತ್ತು. ಹಾಗೆಯೇ ಅಲ್ಲಿಂದ ಹಿಂದಿರುಗುವಾಗ ಈ ದನಗಳು ದೊಡ್ಡ ತೋಪಿನ ಗಾಡಿಗಳನ್ನು ಎಳೆದುಕೊಂಡು ದಿನಕ್ಕೆ 40 ಮೈಲಿಗಳ ದೂರ ಪ್ರಯಾಣ ಮಾಡಿ ಶತ್ರುಗಳಿಗೂ ಆಶ್ಚರ್ಯವನ್ನುಂಟು ಮಾಡಿದ್ದವು. ಟಿಪ್ಪು ಸುಲ್ತಾನನು ಬಿದನೂರನ್ನು ವಶಪಡಿಸಿಕೊಳ್ಳುವಾಗ ಈ ದನಗಳು 63 ಮೈಲುಗಳ ಹಾದಿಯನ್ನು ಕೇವಲ ಎರಡು ದಿನದಲ್ಲಿ ತಲುಪಿ, ಬ್ರಿಟಿಷ್ ಅಧಿಕಾರಿಯಾದ ಜನರಲ್ ಮೆಡಾಸ್ ಮುಟ್ಟುವುದಕ್ಕಿಂತ ಮುಂಚಿತವಾಗಿ ಮುಟ್ಟಿ ಟಿಪ್ಪುವಿಗೆ ಜಯವನ್ನು ತಂದುಕೊಟ್ಟಿದ್ದವು. ಈ ರೀತಿ ಹೈದರಾಲಿಯ ಯುದ್ಧಗಳಲ್ಲಿ ಸಾಕಷ್ಟು ಐತಿಹಾಸಿಕ ಜಯಗಳನ್ನು ತಂದು ಕೊಡುತ್ತಿದ್ದ ಈ ವಾರಿಯರ್ ಬ್ರೀಡ್‌ಗಳು ಆನಂತರ ಇವನ ಮಗನಾದ ಟಿಪ್ಪುವಿನ ಎಲ್ಲಾ ವಿಜಯಗಳಲ್ಲಿಯೂ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದುದು ಇತಿಹಾಸದಿಂದ ತಿಳಿದುಬರುತ್ತದೆ.

ಇವುಗಳ ಚಲನ ವಲನಗಳನ್ನು ಇಂದಿಗೂ ಭಾರತ ಮತ್ತು ಪಾಕಿಸ್ತಾನದ ಯುದ್ಧದಲ್ಲಿ ಭಾರತದ ಗೆಲುವಿಗೆ ಪ್ರಮುಖ ಕಾರಣವಾದ 'ನ್ಯಾಟ್' ವಿಮಾನಗಳಿಗೆ ಹೋಲಿಸಲಾಗುತ್ತದೆ. ಕ್ರಿ.ಶ. 1914ರಿಂದ 1918ರ ಮೊದಲನೆಯ ವಿಶ್ವ ಯುದ್ಧದಲ್ಲಿ ಬಾಗ್ದಾದಿನ ದಂಡನಾಯಕರು ಮೆಸಪೊಟೋಮಿಯಾಕ್ಕೆ ಹೋದ ಈ ಅಮೃತ್‌ಮಹಲ್ ದನಗಳನ್ನು ಕಂಡು ಮೂಕವಿಸ್ಮಿತರಾಗಿದ್ದರು. ಇವುಗಳು ಒಂಟೆಗಿಂತ ವೇಗವಾಗಿ ನಡೆಯಬಲ್ಲವೆಂದೂ, ಇಕ್ಕಟ್ಟಾದ ಕಣಿವೆ ದಾರಿಗಳನ್ನು ಮತ್ತು ಸಣ್ಣ ಸಣ್ಣ ಸೇತುವೆಗಳನ್ನು ದಾಟುವಾಗ ಅತಿ ಜಾಗರೂಕತೆಯನ್ನು ಮತ್ತು ಜಾಣತನವನ್ನು ತೋರಿಸುತ್ತವೆಯೆಂದೂ ಅವರು ಪ್ರಶಂಸಿಸಿದ್ದರು. ಆಹಾರ ಅಭಾವವಿದ್ದಾಗ ಮತ್ತು ಪ್ರತಿಕೂಲ ಹವಾಮಾನದಲ್ಲೂ ಸಹ ಇವುಗಳು ಜಗ್ಗದೆ ಕುಗ್ಗದೆ ಎಂದಿನಂತೆಯೇ ಜೀವಿಸುವ ವಿಶಿಷ್ಟತೆಯನ್ನು ಹೊಂದಿವೆ ಎಂಬುದಾಗಿಯೂ ಉಲ್ಲೇಖಿಸಿದ್ದರು. 1818ರಲ್ಲಿ ಮೈಸೂರು ಕಮಿಷನರೇಟ್ ರವರು ಅಮೃತ್ ಮಹಲ್ ದನಗಳ ಬಗ್ಗೆ, ಅವು ಚಾಕಚಕ್ಯತೆಯುಳ್ಳವು ಮತ್ತು ಹುರುಪಿನ ಹಾಗೂ ಸಿಟ್ಟಿನ ದನಗಳು ಎಂಬುದಾಗಿ ಹೇಳಿದ್ದುದು ಹಾಗೂ 1842ರಲ್ಲಿ ಬ್ರಿಟಿಷ್ ಅಧಿಕಾರಿಯಾಗಿದ್ದ ಕ್ಯಾಪ್ಟನ್ ಡೇವಿಸನ್, ತಮ್ಮ ಪಡೆಗೆ ಸೇರಿದ್ದ ಈ ಅಮೃತಮಹಲ್ ದನಗಳ ಬಗ್ಗೆ ಪ್ರಶಂಸಿರುವುದು ದಾಖಲಾಗಿದೆ.

ಇವುಗಳು ಅಫ್ಘಾನಿಸ್ತಾನದ ಟಿರಿಯಾ ಬೆಟ್ಟದ ಮೇಲಿನ ಕಣಿವೆ ದಾರಿಯಲ್ಲಿ ಇಳಿದು ಬರುವಾಗ ಸತತ 16 ಗಂಟೆ ನೊಗಕ್ಕೆ ಕಟ್ಟಿದರೂ ಸಹ ಸ್ವಲ್ಪವೂ ಆಯಾಸವಿಲ್ಲದೆ ಬೆಟ್ಟದಿಂದ ಕೆಳಗೆ ಇಳಿದು ಬಂದಿದ್ದವು. ಬೇರೆ ಯಾವ ಜಾತಿಯ ಎತ್ತುಗಳೂ ಇಷ್ಟು ಕಷ್ಟವನ್ನು ಸಹಿಸಲಿಲ್ಲ ಎಂಬುದು ದಾಖಲಿಸಲ್ಪಟ್ಟಿದೆ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಅಮೃತ್‌ಮಹಲ್ ದನಗಳ ಗಟ್ಟಿತನ, ಚುರುಕುತನ, ತೀಕ್ಷ್ಣತೆ ಮತ್ತು ನಡಿಗೆಯಲ್ಲಿನ ವೇಗ, ಇವುಗಳಿಗೆ ಅಂದು ಸೇನೆಯಲ್ಲಿ ವಿಶಿಷ್ಟವಾದ ಸ್ಥಾನವನ್ನು ತಂದುಕೊಟ್ಟಿತ್ತು. ಸೇನೆಯ ಯುದ್ಧ ಸಾಮಗ್ರಿ, ಮದ್ದುಗುಂಡುಗಳು ಮತ್ತು ತೋಪುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವ ಉದ್ದೇಶಕ್ಕಾಗಿಯೇ ಹೆಚ್ಚಾಗಿ ಈ ತಳಿಗಳನ್ನು ಬಳಸಲಾಗುತ್ತಿತ್ತು. ಇದಕ್ಕೆ ಮತ್ತಿ ಇಂದಿನ ಮೈಸೂರು ಮತ್ತು ಚಿತ್ರದುರ್ಗದ ಹೆದ್ದಾರಿ ಹಿಂದೊಮ್ಮೆ ಈ ಅಮೃತ್‌ಮಹಲ್ ತಳಿಗಳು ಯುದ್ಧದ ತೋಪುಗಳನ್ನು ಎಳೆದುಕೊಂಡು ಹೋದ ದಾರಿಯೇ ಆಗಿರುವುದು. ಹೀಗೆ ಅಮೃತ್‌ಮಹಲ್ ದನಗಳ ವಿರೋಚಿತ ಹೋರಾಟದ ಕಥಾಪುಂಜವೇ ಇತಿಹಾಸದಲ್ಲಿ ಕಂಡುಬರುತ್ತದೆ. ವಿಪರ್ಯಾಸವೆಂದರೆ ಈ ತಳಿಯಿಂದು ವಿನಾಶದ ಅಂಚಿನಲ್ಲಿರುವುದು..!!

ಮಮತಾ, ಸ್ಟಾಲಿನ್ ಸೋಲು: ಇಂಡಿ ಕೂಟದ ಅಸ್ತಿತ್ವಕ್ಕೇ ಸಂಚಕಾರ

▸ ಸೋಮಶೇಖರ ಸಿ.ಜಿ.

ಭಾರತೀಯ ರಾಜಕಾರಣದಲ್ಲಿ ಒಂದು ಮಾತಿದೆ. ಒಂದು ಚುನಾವಣೆ ಸೋಲು ವ್ಯಕ್ತಿಯ ಸೋಲು, ಆದರೆ ಸರಣಿ ಸೋಲು ಆ ವ್ಯವಸ್ಥೆಯ ಸೋಲು. ಈ ಮಾತು ಇಂದು ಇಂಡಿ ಕೂಟಕ್ಕೆ ಅಕ್ಷರಶಃ ಅನ್ವಯವಾಗುತ್ತಿದೆ. ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಕೇವಲ ಒಂದು ರಾಜಕೀಯ ಸೋಲಲ್ಲ, ಅದು ಇಂಡಿ ಕೂಟ ಎಂಬ ಅಸ್ತಿತ್ವಕ್ಕೇ ಮಾರಕವಾದ ಆಘಾತ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ತಮಿಳುನಾಡಿನ ಸಿಎಂ ಎಂ.ಕೆ. ಸ್ಟಾಲಿನ್, ಈ ಇಬ್ಬರು ನಾಯಕರು ಸೋತಿದ್ದಾರೆ ಎಂದರೆ ಅದು ಸಾಮಾನ್ಯ ಸೋಲಲ್ಲ. ಇಂಡಿ ಕೂಟದ ಬೆನ್ನೆಲುಬಾಗಿ ನಿಂತಿದ್ದ, ಕಾಂಗ್ರೆಸ್ ಅನ್ನೂ ತಮ್ಮ ದನಿಗೆ ತಲೆದೂಗುವಂತೆ ಮಾಡಿದ್ದ ಈ ಇಬ್ಬರು ನಾಯಕರ ಪತನ, ಇಡೀ ಕೂಟದ ಭವಿಷ್ಯದ ಚಿತ್ರಣವನ್ನೇ ಬದಲಿಸಿಬಿಟ್ಟಿದೆ.

ಮಮತಾ: ನಾಯಕಿ ಆಗುವ ಕನಸು ಕಮರಿಹೋಯಿತು

ಮಮತಾ ಬ್ಯಾನರ್ಜಿ ಸಾಮಾನ್ಯ ನಾಯಕಿಯಲ್ಲ. ದೀದಿ ಎಂಬ ಒಂದೇ ಹೆಸರಿನಲ್ಲಿ ಕೋಟ್ಯಂತರ ಮತದಾರರ ಭಾವನೆಗಳನ್ನು ತಮ್ಮ ಬೆರಳ ತುದಿಯಲ್ಲಿ ಇಟ್ಟುಕೊಂಡಿದ್ದ ನಾಯಕಿ. ಆದರೆ ಇತ್ತೀಚಿನ ದಿನಗಳಲ್ಲಿ ಅವರ ಮಹಾಭಿಲಾಷೆ ಕೇವಲ ಬಂಗಾಳಕ್ಕೆ ಸೀಮಿತವಾಗಿರಲಿಲ್ಲ. ಇಂಡಿ ಕೂಟದ ನಾಯಕನಾಗಿ ರಾಹುಲ್ ಗಾಂಧಿ ಏಕೆ ಆಗಬೇಕು, ತಾನೇಕೆ ಆ ಸ್ಥಾನಕ್ಕೆ ಅರ್ಹಳಲ್ಲ ಎಂಬ ಪ್ರಶ್ನೆಯನ್ನು ಮಮತಾ ಖಾಸಗಿ ಮಾತುಕತೆಗಳಲ್ಲಿ ತೇಲಿಬಿಟ್ಟಿದ್ದರು. ಕೂಟದ ಒಳಗೇ ಕಾಂಗ್ರೆಸ್ ನೇತೃತ್ವವನ್ನು ಪ್ರಶ್ನಿಸುವಷ್ಟು ತಾಕತ್ತು ತೋರಿಸಿದ್ದ ಮಮತಾ ಇಂದು ತಮ್ಮ ರಾಜ್ಯದಲ್ಲಿಯೇ ಸೋತು ನಿಂತಿದ್ದಾರೆ. ರಾಷ್ಟ್ರ ರಾಜಕಾರಣದಲ್ಲಿ ದೊಡ್ಡ ಮಾತಾಡಿದ ನಾಯಕಿ, ಮೊದಲು ತನ್ನ ಮನೆ ಕಾಯ್ದುಕೊಳ್ಳಲಾಗದಿದ್ದಾಗ ಆ ಮಾತಿಗೆ ಯಾವ ತೂಕ ಉಳಿಯುತ್ತದೆ?

ಸ್ಟಾಲಿನ್: ದ್ರಾವಿಡ ಸಿದ್ಧಾಂತಿಯ ಮೌನ

ಸ್ಟಾಲಿನ್ ಸೋಲು ಇನ್ನಷ್ಟು ಆಳವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಲೋಕಸಭೆ ಕ್ಷೇತ್ರ ಪುನರ್ ವಿಂಗಡಣೆ ವಿಷಯದಲ್ಲಿ ತಾನು ದಕ್ಷಿಣ ಭಾರತದ ಪ್ರತಿನಿಧಿ ಎಂತಲೇ ಹೇಳಿಕೊಂಡು ಗಟ್ಟಿಯಾಗಿ ನಿಂತವರು ಸ್ಟಾಲಿನ್. ಕಾಂಗ್ರೆಸ್ ಸಹ ತಮ್ಮ ಒತ್ತಡಕ್ಕೆ ಮಣಿದು ಅವರ ನಿಲುವಿಗೆ ಬೆಂಬಲ ಕೊಡುವಂತೆ ಮಾಡಿದ ರಾಜಕೀಯ ಚಾಣಾಕ್ಷ ಇವರು. ದ್ರಾವಿಡ ರಾಜಕಾರಣದ ಗತ್ತು ಮತ್ತು ಗಾಂಭೀರ್ಯ ಅವರ ಹಿನ್ನೆಲೆಯಾಗಿತ್ತು. ಆದರೆ ಜನ ನೀಡಿದ ತೀರ್ಪಿನ ಮುಂದೆ ಆ ಗತ್ತು ನಡೆಯಲಿಲ್ಲ. ಸ್ಟಾಲಿನ್ ಸೋಲು ಕೇವಲ ಡಿಎಂಕೆ ಸೋಲಲ್ಲ, ದಕ್ಷಿಣ ಭಾರತ ಇಂಡಿ ಕೂಟದ ಏಕೈಕ ಭದ್ರ ನೆಲೆ ಎಂಬ ನಂಬಿಕೆಗೇ ಬಿದ್ದ ಹೊಡೆತ.

ಕೇಜ್ರಿವಾಲ್ ಮಾದರಿ ಮತ್ತೆ ಪ್ರಸ್ತುತ

ದಿಲ್ಲಿ ಚುನಾವಣೆಯಲ್ಲಿ ಅರವಿಂದ್ ಕೇಜ್ರಿವಾಲ್ ಸೋಲು ನೆನಪಿಸಿಕೊಳ್ಳಿ. ಒಂದು ಕಾಲದಲ್ಲಿ ಆಮ್ ಆದ್ಮಿ ಪಕ್ಷ ಬದಲಾವಣೆಯ ಸಂಕೇತವಾಗಿ ನಿಂತಿತ್ತು. ಇಂಡಿ ಕೂಟದ ಭಾಗವಾಗಿ ಕೇಜ್ರಿವಾಲ್ ತಮ್ಮ ಭ್ರಷ್ಟಾಚಾರ ವಿರೋಧಿ ವರ್ಚಸ್ಸನ್ನೇ ರಾಷ್ಟ್ರ ರಾಜಕಾರಣಕ್ಕೆ ಬಳಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಜನ ಆ ಲೆಕ್ಕಾಚಾರ ಒಪ್ಪಲಿಲ್ಲ. ಈಗ ಮಮತಾ ಮತ್ತು ಸ್ಟಾಲಿನ್ ಸೋಲು ಅದೇ ಮಾದರಿ ಮತ್ತೆ ಕಣ್ಣ ಮುಂದೆ ಬಂದಂತಾಗಿದೆ. ರಾಷ್ಟ್ರ ರಾಜಕಾರಣದಲ್ಲಿ ದೊಡ್ಡ ದೊಡ್ಡ ಭಾಷಣ ಬಿಗಿದ ನಾಯಕರು ತಮ್ಮ ರಾಜ್ಯಗಳಲ್ಲಿ ಸೋಲುತ್ತ ಬಂದಿದ್ದಾರೆ ಇದೊಂದು ಮಾದರಿಯೇ ಆಗಿ ಬಿಡುತ್ತಿದೆ.

ಇಂಡಿ ಕೂಟದ ಭವಿಷ್ಯ: ಕೂಟ ಉಳಿಯುತ್ತದೆಯೇ?

ಇಂಡಿ ಕೂಟ ಹುಟ್ಟಿದ್ದೇ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಅದೆಂದರೆ ಬಿಜೆಪಿ ವಿರೋಧ. ಆದರೆ ಬಿಜೆಪಿ ವಿರೋಧ ಒಂದೇ ಅಂಶದ ಮೇಲೆ ಕಟ್ಟಿದ ಕೂಟ ಎಷ್ಟು ದಿನ ನಿಲ್ಲುತ್ತದೆ? ಈ ಕೂಟದ ಒಳಗೆ ಒಗ್ಗಟ್ಟಿಗಿಂತ ಅಧಿಕ ಅಹಂಕಾರ ಮತ್ತು ಸ್ಥಾನಮಾನದ ಸ್ಪರ್ಧೆ ಇತ್ತು. ಮಮತಾ ಒಂದು ದಿಕ್ಕಿನಲ್ಲಿ ಎಳೆದರೆ, ಸ್ಟಾಲಿನ್ ಇನ್ನೊಂದು ದಿಕ್ಕಿನಲ್ಲಿ ಎಳೆಯುತ್ತಿದ್ದರು. ಕೇಜ್ರಿವಾಲ್ ಮತ್ತು ಕಾಂಗ್ರೆಸ್ ನಡುವಿನ ಸಂಘರ್ಷ ಮೇಲ್ಮೈಯ ಮೇಲೇ ಗೋಚರವಾಗಿತ್ತು. ಇಂತಹ ಒಳಜಗಳ ತುಂಬಿದ ಕೂಟ ಈಗ ಮತ್ತಷ್ಟು ದುರ್ಬಲವಾಗಿದೆ.

ಇನ್ನು ಮಮತಾ ಮತ್ತು ಸ್ಟಾಲಿನ್ ರಾಜ್ಯ ರಾಜಕಾರಣದಲ್ಲಿ ಸೋತಿರುವ ಕಾರಣ, ಅವರ ರಾಷ್ಟ್ರ ರಾಜಕಾರಣದ ಮಾತಿಗೆ ಹಿಂದಿನ ಮಾನ್ಯತೆ ಸಿಗಲಾರದು. ರಾಜ್ಯದಲ್ಲಿ ಅಧಿಕಾರ ಉಳಿಸಿಕೊಳ್ಳಲು ವಿಫಲರಾದ ನಾಯಕರು ರಾಷ್ಟ್ರ ರಾಜಕಾರಣದಲ್ಲಿ ಯಾರಿಗೆ ಮಾದರಿ? ಆದ್ದರಿಂದ ಇಂಡಿ ಕೂಟದಲ್ಲಿ ಈ ಇಬ್ಬರ ಪ್ರಭಾವ ಗಣನೀಯವಾಗಿ ಕಡಿಮೆಯಾಗಲಿದೆ ಎಂಬುದು ನಿಶ್ಚಿತ.

ರಾಹುಲ್ ಗಾಂಧಿಗೆ ಸಿಕ್ಕಿದ ಅನಿರೀಕ್ಷಿತ ಅವಕಾಶ

ವಿರೋಧಿಗಳ ಸೋಲು ಕೆಲವೊಮ್ಮೆ ನಿಮ್ಮ ಗೆಲುವಿಗೆ ದಾರಿ ಮಾಡುತ್ತದೆ. ಇದಕ್ಕೆ ಸಾಕ್ಷಿ ಈಗಿನ ಫಲಿತಾಂಶ. ಕಾಂಗ್ರೆಸ್‌ನ ನಾಯಕ ಮತ್ತು ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ಇಂಡಿ ಕೂಟದ ನಾಯಕ ಎಂಬುದನ್ನು ಈವರೆಗೂ ಔಪಚಾರಿಕವಾಗಿ ಒಪ್ಪಿಕೊಂಡಿರಲಿಲ್ಲ. ಮಮತಾ, ಸ್ಟಾಲಿನ್, ಕೇಜ್ರಿವಾಲ್ ಮೊದಲಾದವರು ಇದ್ದಷ್ಟೂ ದಿನ ಕಾಂಗ್ರೆಸ್ ನೇತೃತ್ವಕ್ಕೆ ಪ್ರಶ್ನೆ ಎದ್ದೇ ಏಳುತ್ತಿತ್ತು. ಆದರೆ ಈ ನಾಯಕರು ಒಬ್ಬೊಬ್ಬರಾಗಿ ದುರ್ಬಲರಾಗುತ್ತ ಹೋದಂತೆ, ರಾಹುಲ್ ಗಾಂಧಿ ಮೇಲೇ ಕೂಟದ ಎಲ್ಲ ತೂಕ ಬಿದ್ದಿದೆ.

ಆದರೆ ಇಲ್ಲಿ ಒಂದು ಪ್ರಮುಖ ಪ್ರಶ್ನೆ ಎದ್ದೇ ಏಳುತ್ತದೆ ಇತರ ನಾಯಕರ ಸೋಲಿನಿಂದ ಸಿಕ್ಕ ನಾಯಕತ್ವ, ತಾಕತ್ತಿನ ನಾಯಕತ್ವ ಆಗಲು ಸಾಧ್ಯವೇ? ರಾಹುಲ್ ಗಾಂಧಿ ಇಂದು ಕೂಟದ ಅತ್ಯಂತ ಹಿರಿಯ ಮತ್ತು ಉಳಿದ ನಾಯಕ ಎಂಬ ಕಾರಣಕ್ಕಾಗಿ ನಾಯಕರಾಗುತ್ತಿದ್ದಾರೆ, ಆದರೆ, ಇದು ಅವರ ತಾಕತ್ತಿನ ಮೇಲೆ ನಿರ್ಧಾರವಾದ ನಾಯಕತ್ವವೇ?. ಇದೊಂದು ಮಹತ್ವದ ವ್ಯತ್ಯಾಸ. ಡೀಫಾಲ್ಟ್ ನಾಯಕ ಮತ್ತು ಚಾಯ್ಸ್ ನಾಯಕ ಎಂಬ ವ್ಯತ್ಯಾಸ ಇಲ್ಲಿದೆ.

ಇದು ಕೊನೆಯ ಅಧ್ಯಾಯವಲ್ಲ, ಆದರೆ...

ಇಂಡಿ ಕೂಟ ಇನ್ನು ಮುಂದೆ ಸಂಪೂರ್ಣ ಮೌನ ತಾಳಿ ಕಣ್ಮರೆಯಾಗಲಾರದು, ಅದು ಸಾಧ್ಯವೂ ಇಲ್ಲ. ಆದರೆ ಮೊದಲಿನಂತಹ ಹುಮ್ಮಸ್ಸು, ಏಕಮುಖ ದನಿ ಮತ್ತು ರಣತಂತ್ರದ ಸ್ಪಷ್ಟತೆ ಮತ್ತೆ ಬರಲು ಇನ್ನಷ್ಟು ಕಾಲ ಹಿಡಿಯಲಿದೆ. ದೊಡ್ಡ ದೊಡ್ಡ ನಾಯಕರೇ ಒಬ್ಬೊಬ್ಬರಾಗಿ ತಮ್ಮ ರಾಜ್ಯಗಳಲ್ಲಿ ಸೋಲುತ್ತ ಹೋದಂತೆ, ಕೂಟದ ಒಳಗಿನ ಚರ್ಚೆ ಮುಂದೇನು? ಎಂಬ ಅನಿಶ್ಚಿತತೆಯ ಸುತ್ತ ಗಿರಕಿ ಹೊಡೆಯಲಿದೆ.

ಭಾರತದ ಮತದಾರ ಒಂದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾನೆ ರಾಷ್ಟ್ರ ರಾಜಕಾರಣದ ಆಟ ಆಡುವ ಮೊದಲು ನಿನ್ನ ರಾಜ್ಯದ ಮನೆ ಸರಿ ಮಾಡಿಕೋ ಎಂದು. ಆ ಮಾತನ್ನು ಇಂಡಿ ಕೂಟ ಎಷ್ಟು ಬೇಗ ಅರ್ಥ ಮಾಡಿಕೊಳ್ಳುತ್ತದೆ ಎಂಬುದರ ಮೇಲೆ ಈ ಕೂಟದ ಉಳಿವು ನಿರ್ಧಾರವಾಗಲಿದೆ. ಹಾಗೆಯೇ, ನಾವು ರಾಜ್ಯಗಳ ಲೆಕ್ಕದಲ್ಲಿ ಮೈತ್ರಿ ಮಾಡಿಕೊಂಡಿಲ್ಲ, ರಾಷ್ಟ್ರ ರಾಜಕಾರಣಕ್ಕೆ ಮಾತ್ರ ನಮ್ಮ ಮೈತ್ರಿ ಎಂಬ ವೈರುಧ್ಯಕ್ಕೂ ಈಗ ಉತ್ತರ ಸಿಕ್ಕಿದೆ. ನೋಡಿ, ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್, ಟಿಎಂಸಿ ಮತ್ತು ಎಡಪಕ್ಷಗಳು ಬೇರೆ ಬೇರೆಯಾಗಿ ಸ್ಪರ್ಧಿಸಿದ್ದವು. ಹಾಗೆಯೇ, ಕೇರಳದಲ್ಲೂ ಕಾಂಗ್ರೆಸ್ ಮತ್ತು ಎಡಪಕ್ಷಗಳು ಎದಿರು ಬದಿರಾಗಿ ಸ್ಪರ್ಧಿಸಿ, ಪರಸ್ಪರ ವಾಗ್ದಾಳಿ ಮಾಡಿಕೊಂಡಿದ್ದವು. ಈ ಮಾದರಿಯ ರಾಜಕಾರಣ ಜನರಲ್ಲಿ ಗೊಂದಲಕ್ಕೂ ಕಾರಣವಾಗುತ್ತದೆ. ಮೈತ್ರಿ ಎಂದರೆ ಅದು ರಾಷ್ಟ್ರ ಮಟ್ಟಕ್ಕಾಗಲಿ, ರಾಜ್ಯದ ಮಟ್ಟಕ್ಕಾಗಲಿ ಒಂದೇ ಇರಬೇಕು. ಒಟ್ಟಾಗಿಯೇ ಹೋಗಬೇಕು. ಮೈತ್ರಿ ಧರ್ಮ ಪಾಲನೆ ಮಾಡುವುದು ತುಂಬಾ ಕಷ್ಟಕರ. ಕೆಲವೊಮ್ಮೆ ದೊಡ್ಡ ಪಕ್ಷವಾಗಿ ನೀವು ಕಡಿಮೆ ಸೀಟು ಗಳಿಸಿದ್ದರೂ, ಮೈತ್ರಿ ಪಕ್ಷಕ್ಕೆ ಸಿಎಂ ಸ್ಥಾನ ಬಿಟ್ಟುಕೊಡಬೇಕು. ಈ ವಿಚಾರದಲ್ಲಿ ಎನ್‌ಡಿಎ ಉತ್ತಮ ಮಾದರಿಯಾಗಿರಬಹುದೇನೋ.

ದೇಶದಲ್ಲಿ ಕಾಂಗ್ರೆಸ್ ಅಸ್ತಿತ್ವ ಶೂನ್ಯ: ಜೋಶಿ

• ನವದೆಹಲಿ: ಕೇರಳ ಬಿಟ್ಟರೆ ದೇಶದಲ್ಲಿ ಕಾಂಗ್ರೆಸ್ ಅಸ್ತಿತ್ವ ಶೂನ್ಯ. ಮುಂಬರುವ ಚುನಾವಣೆ ಕರ್ನಾಟಕದಲ್ಲಿಯೂ ಇದೇ ಸ್ಥಿತಿ ಎದುರಾಗಲಿದೆ ಎಂದು ಸಚಿವ ಪ್ರಹ್ಲಾದ ಜೋಶಿ ಭವಿಷ್ಯ ನುಡಿದರು.



ದೆಹಲಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಪಂಚ ರಾಜ್ಯ ಚುನಾವಣೆ ಫಲಿತಾಂಶ ಕುರಿತು ಪ್ರತಿಕ್ರಿಯಿಸಿ, ದುರಾಡಳಿತ, ಮಿತಿಮೀರಿದ ತುಷ್ಟೀಕರಣ, ಭ್ರಷ್ಟಾಚಾರ, ಗೂಂಡಾಗಿರಿ ವಿರುದ್ಧ ಅತ್ಯಂತ ಸ್ಪಷ್ಟ ಜನಾದೇಶ ಇದಾಗಿದೆ. ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ ಬಿಜೆಪಿ ಆಡಳಿತಕ್ಕೆ ಬಹು ದೊಡ್ಡ ಗೆಲುವು ತಂದು ಕೊಟ್ಟಿದ್ದಾರೆಂದು ಹೇಳಿದರು. ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಪುದುಚೆರಿಯಲ್ಲಿ ಎನ್‌ಡಿಎಗೆ ಅಭೂತಪೂರ್ವ ಗೆಲುವು ಸಿಕ್ಕಿದೆ. ಮೋದಿ ಅವರ 12 ವರ್ಷಗಳ ಸಮರ್ಥ ಆಡಳಿತ, ಅದ್ಭುತ ಕಾರ್ಯ ಕಂಡು ಬಿಜೆಪಿಗೆ ಮನ್ನಣೆ ನೀಡಿದ್ದಾರೆ. ಕೇರಳದಲ್ಲಿ ನಮಗೆ ಯಶಸ್ಸು ಸಿಕ್ಕಿಲ್ಲ. ಆದರೆ, ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಮುಕ್ತವಾಗಿದೆ ಎಂದು ವ್ಯಾಖ್ಯಾನಿಸಿದರು.

ದೇಶಾದ್ಯಂತ ಕಾಂಗ್ರೆಸ್ ಶೂನ್ಯ: ಒಂದು ರಾಷ್ಟ್ರೀಯ ಪಕ್ಷವಾಗಿ ಕಾಂಗ್ರೆಸ್ ದೇಶಾದ್ಯಂತ ಶೂನ್ಯಕ್ಕೆ ತಳ್ಳಲ್ಪಟ್ಟಿದೆ. ಕೇರಳ ಬಿಟ್ಟರೆ ಬೇರೆಲ್ಲೆಡೆ ಅಸ್ತಿತ್ವ ಕಳೆದುಕೊಂಡಿದೆ. ಪಶ್ಚಿಮ ಬಂಗಾಳ-0, ತಮಿಳುನಾಡು-0, ಅಸ್ಸಾಂ-22-24 ಸ್ಥಾನ ಗೆದ್ದಿದೆ ಅಷ್ಟೇ. ಕಾಂಗ್ರೆಸ್‌ನ ತುಷ್ಟೀಕರಣದ ಪರಮಾವಧಿ, ಭ್ರಷ್ಟಾಚಾರ, ಬಹುಸಂಖ್ಯಾತ ಹಿಂದೂಗಳ ತಿರಸ್ಕಾರ, ವೋಟ್ ಬ್ಯಾಂಕ್ ರಾಜಕಾರಣಕ್ಕೆ ಜನ ತಕ್ಕ ಪಾಠ ಕಲಿಸಿದ್ದಾರೆ ಎಂದು ಜೋಶಿ ವಿಶ್ಲೇಷಿಸಿದರು. ತಮಿಳುನಾಡಲ್ಲಿ ವಿಜಯ್ ಜತೆ ಹೋಗುತ್ತೇವೆ ಎಂದಿದ್ದಾರೆ. ಅಲ್ಲಿ ಹೋಗಲು ಅವರಲ್ಲೇನೂ ಉಳಿದಿಲ್ಲ. ಇನ್ನೇನು ಹೋಗುತ್ತಾರೆ? ಇನ್ನು ಕೇರಳದಲ್ಲಿ ದೇಶ ಇಬ್ಭಾಗ ಮಾಡುವ ಮನಸ್ಥಿತಿಯ ಮುಸ್ಲಿಂ ಲೀಗ್ ಜತೆ ಒಪ್ಪಂದದೊಂದಿಗೆ ಹಿಂದೂ ವಿರೋಧಿಯಾಗಿ ವರ್ತಿಸಿದ್ದರ ಪರಿಣಾಮ ದೇಶದೆಲ್ಲೆಡೆಯೂ ಕಾಂಗ್ರೆಸ್ ಧೂಳೀಪಟವಾಗಿದೆ ಎಂದು ಟೀಕಿಸಿದರು.

ಉಪಚುನಾವಣೆ: ಎನ್‌ಡಿಎ ಗೆಲುವು


• ಹೊಸದಿಲ್ಲಿ: ದೇಶದಲ್ಲಿ ನಡೆದ ವಿಧಾನಸಭೆಯ ಏಳು ಕ್ಷೇತ್ರಗಳ ಉಪಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಐದರಲ್ಲಿ ಗೆದ್ದಿದೆ. ಇನ್ನು ಎರಡರಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ಗುಜರಾತ್‌ನ ಉಮ್ರೇತ್, ಮಹಾರಾಷ್ಟ್ರದ ರಾಹುರಿ, ನಾಗಾಲೆಂಡ್‌ನ ಕೊರಿಡಾಂಗ್ ಮತ್ತು ತ್ರಿಪುರಾದ ಧರ್ಮನಗರದಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆದ್ದಿದ್ದಾರೆ. ಅಜಿತ್ ಪವಾರ್ ಅವರ ಸಾವಿನಿಂದ ತೆರವಾದ ಬಾರಾಮತಿಯಲ್ಲಿ ಅವರ ಪತ್ನಿ, ಎನ್‌ಸಿಪಿಯ ಸುನೇತ್ರ ಪವಾರ್ ಅವರು ದಾಖಲೆಯ 2.18 ಲಕ್ಷ ಮತಗಳಿಂದ ಗೆದ್ದಿದ್ದಾರೆ. ವಿಧಾನಸಭೆ ಇತಿಹಾಸದಲ್ಲಿ ಇದು ಅತ್ಯಂತ ದೊಡ್ಡ ಗೆಲುವು ಎಂದು ಬಣ್ಣಿಸಲಾಗಿದೆ.

ಗೆದ್ದು ಬೀಗಿದ ಉಮೇಶ ಮೇಟಿ

ಪುಟ 1➜**ಸಿಎಂ ಭರ್ಜರಿ ಪ್ರಚಾರ:** ಬಾಗಲಕೋಟೆಯ ಉಪ ಚುನಾವಣೆ ಆರಂಭವಾಗಿ ಮತದಾನ ಇನ್ನೇನು ಏಳೆಂಟು ದಿನ ಇರುವಾಗಲೇ ಬಾಗಲಕೋಟೆಯ 5 ಕ್ಷೇತ್ರದಲ್ಲಿ ಸಿದ್ದರಾಮಯ್ಯ ಶತಾಗತಾಯ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಲು ಗ್ರಾಮೀಣ, ನಗರ ಪ್ರದೇಶದಲ್ಲಿ ಭರ್ಜರಿ ಪ್ರಚಾರ ನಡೆಸಿದರು. ಮೇಟಿಯವರ ಪುತ್ರ ಉಮೇಶನನ್ನು ನಿಮ್ಮ ಜೋಳಿಗೆ ಹಾಕಿದ್ದೇನೆ ಅವನನ್ನು ಗೆಲ್ಲಿಸಿ ಎಂದೇ ಮನವಿ ಮಾಡಿದ್ದರು.

ಕುಗ್ಗುವುದಿಲ್ಲ: ಸೋಲನ್ನು ಸ್ವೀಕರಿಸಿದ್ದೇವೆ. ಚುನಾವಣೆಯಲ್ಲಿ ಸೋತಿದ್ದೇವೆ ಎಂದು ಕುಗ್ಗುವುದಿಲ್ಲ. ಇನ್ನಷ್ಟು ಕ್ಷೇತ್ರದಲ್ಲಿ ಬಿಜೆಪಿ ಗಟ್ಟಿಗೊಳಿಸುವ ಕೆಲಸ ಮಾಡುತ್ತೇವೆ ಎಂದು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ತಿಳಿಸಿದ್ದಾರೆ.

ರಾಮ ಬಾಣ



ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ : ಚೌತಿ, ನಕ್ಷತ್ರ: ಜ್ಯೇಷ್ಠ

ದಿನದ ಮಾತು

ಗರ್ವವನ್ನು ತ್ಯಜಿಸುವವನು ಇತರರ ಪ್ರೀತಿಗೆ ಪಾತ್ರನಾಗುತ್ತಾನೆ.

▲ಮಹಾಭಾರತ

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಭಾರತವಲ್ಲದೆ ಇಡೀ ವಿಶ್ವದ ಗಮನ ಸೆಳೆದಿರುವ ಆರೆಸ್ಸೆಸ್ಸನ್ನು ನಿಷೇಧಿಸಲು ಯಾರಿಂದಲೂ ಸಾಧ್ಯವಿಲ್ಲ – **ಈಶ್ವರಪ್ಪ**

– ಕೆಲವರಿಗೆ ನಿಷೇಧ ಮಾಡುವುದು ಮುಖ್ಯವಲ್ಲ, ನಿಷೇಧ ಮಾಡಲೇ ಬೇಕು ಅಂತಲೂ ಇಲ್ಲ.ಆದರೆ ನಿಷೇಧ ಮಾಡಲು ಭಾರೀ ಪ್ರಯತ್ನ ಮಾಡಿದ್ದೇವೆ ಅಂತ ಬ್ರದರ್ಸ್‌ಗಳಿಗೆ ಕನ್ವಿನ್ಸ್ ಮಾಡುವುದು ಮುಖ್ಯ!

ದಿನ ಭವಿಷ್ಯ

ಮೇಷ ಸಹೋದ್ಯೋಗಿಗಳು ಸಮಸ್ಯೆ ಸೃಷ್ಟಿಸಬಹುದು. ನೆಮ್ಮದಿ ಕಳೆದುಕೊಳ್ಳದಿರಿ. ನಿಮಗೇ ಒಳಿತಾಗುವ ಸಮಯ ಬರುವುದು. ಆಪ್ತ ಸಂಬಂಧ ಗಟ್ಟಿ.

ವೃಷಭ ಮನೆಯ ಹೊಣೆ ಮತ್ತು ವೃತ್ತಿಕಾರ್ಯದ ಮಧ್ಯೆ ಅಸಮತೋಲನ ಉಂಟಾದೀತು. ಇದರಿಂದ ಎಲ್ಲವೂ ಅಸ್ತವ್ಯಸ್ತ. ಹೊಂದಾಣಿಕೆ ಮುಖ್ಯ.

ಮಿಥುನ ಚಿಂತೆಗೆ ಕಾರಣವಾದ ವಿಷಯಗಳೆಲ್ಲ ಇತ್ಯರ್ಥ. ಮಾನಸಿಕ ನಿರಾಳತೆ. ಮುನಿಸಿಕೊಂಡವರು ಸಮೀಪವಾಗುತ್ತಾರೆ. ಕೌಟುಂಬಿಕ ಸಾಮರಸ್ಯ.

ಕಟಕ ವ್ಯವಹಾರದಲ್ಲಿ ಕೆಲವು ಮಹತ್ವದ ಬೆಳವಣಿಗೆ. ಅದೃಷ್ಟವನ್ನೆ ನಂಬಿ ಕೂರಬೇಡಿ. ನಿಮ್ಮ ಪ್ರಯತ್ನವೂ ಅಗತ್ಯವಾಗಿದೆ.

ಸಿಂಹ ಆಪ್ತ ಸಂಬಂಧ ಉಳಿಸಲು ನಿಮ್ಮ ಅಹಂ ಅಡ್ಡಿ ಬಾರದಿರಲಿ. ಖರ್ಚಿನ ದಾರಿ ಹೆಚ್ಚುವುದು. ಆದಾಯ ಗಳಿಕೆಯ ಸಾಧ್ಯತೆ ಕಡಿಮೆ.

ಕನ್ಯಾ ವೃತ್ತಿಯಲ್ಲಿ ಯಶಸ್ಸು. ಆದಾಯ ಹೆಚ್ಚಳ. ಸಮಸ್ಯೆಯೊಂದು ಪರಿಹಾರ, ನೆಮ್ಮದಿ. ಕುಟುಂಬ ಸದಸ್ಯರ ಸಹಕಾರ, ಬೆಂಬಲ.

ತುಲಾ ನಿಮ್ಮ ಹೊಣೆಗಾರಿಕೆ ನಿಭಾಯಿಸುವಲ್ಲಿ ಎಚ್ಚರಿಕೆ ವಹಿಸಿ. ನಿರ್ಲಕ್ಷ್ಯದಿಂದ ನಷ್ಟ ಉಂಟಾದೀತು. ಇತರರ ಮೇಲೆ ಜವಾಬ್ದಾರಿ ದಾಟಿಸಬೇಡಿ.

ವೃಶ್ಚಿಕ ಕರ್ತವ್ಯ ಕ್ಷಿಪ್ರವಾಗಿ ನಿಭಾಯಿಸುವಿರಿ. ಆದರಿಂದ ಯಶ. ಆರ್ಥಿಕ ಪರಿಸ್ಥಿತಿ ಉತ್ತಮ. ಬಂಧುಗಳಿಂದ ಪ್ರೀತಿ, ಗೌರವ ಪಡೆಯುವಿರಿ.

ಧನು ಮಾನಸಿಕ ಒತ್ತಡ. ನಿಮ್ಮ ಕೆಲಸದ ಮೇಲೆ ಗಮನ ಕಡಿಮೆಯಾಗಲಿದೆ. ಸಂಗಾತಿ ಜತೆಗೆ ಭಿನ್ನಮತ. ಅನವಶ್ಯ ಖರ್ಚು.

ಮಕರ ನಿಮಗಿಂದು ಪೂರಕ ದಿನ. ನಿಮ್ಮ ಕಾರ್ಯ ಸಫಲ. ಆತ್ಮೀಯರಿಂದ ಭಾವನಾತ್ಮಕ ಬೆಂಬಲ. ಕೌಟುಂಬಿಕ ಉದ್ವಿಗ್ನತೆ ಶಮನಗೊಳ್ಳುವುದು.

ಕುಂಭ ಖಾಸಗಿ ವಿಷಯದಲ್ಲಿ ಪೂರಕ ಬೆಳವಣಿಗೆ. ಪ್ರೀತಿಯಲ್ಲಿ ಯಶಸ್ಸು. ನಿಮ್ಮ ಭಾವನೆಗೆ ಸೂಕ್ತ ಸ್ಪಂದನೆ ಪಡೆಯುವಿರಿ. ವಿವಾದಕ್ಕೆ ಆಸ್ಪದ ನೀಡದಿರಿ.

ಮೀನ ಕೊರಗೊಂದು ಕಾಡುತ್ತಿದೆ. ಅದನ್ನು ನಿಭಾಯಿಸಲು ಕಷ್ಟ ಪಡುವಿರಿ. ಸೂಕ್ತ ನೆರವು ಬೇಗನೆ ಒದಗಲಿದೆ. ಆ ಬಳಿಕ ಮನಶ್ಶಾಂತಿ.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30

ಅದೃಷ್ಟ ಸಂಖ್ಯೆ: 4,1,6,2

ಸಮರ್ಥ್ ಶಾಮನೂರು ಗೆಲುವು

ಪುಟ 1➜**ಸ್ಟ್ರಾಂಗ್ ರೂಮ್ ಒಡೆದರು!:** ಮತಎಣಿಕೆಗೂ ಮುನ್ನ ಕೀಲಿಕೈಗಳು ಹೊಂದಿಕೆಯಾಗದ ಕಾರಣ ಸಾಕಷ್ಟು ಪ್ರಯತ್ನದ ನಂತರ ಸ್ಟ್ರಾಂಗ್ ರೂಮ್ ಬಾಗಿಲು ಒಡೆಯಬೇಕಾದ ಪ್ರಸಂಗ ಎದುರಾಯಿತು. ಇದರಿಂದಾಗಿ ಮತ ಎಣಿಕೆ ಕಾರ್ಯ ಅರ್ಧ ಗಂಟೆ ವಿಳಂಬವಾಗಿ ಆರಂಭವಾಯಿತು.

ಅನುಮಾನ: ಸ್ಟ್ರಾಂಗ್ ರೂಂ ಬೀಗ ತೆಗೆಯುವ ಬದಲಿಗೆ ಚಿಲಕಗಳನ್ನು ಒಡೆದಿರುವುದು ಅನುಮಾನಕ್ಕೆ ಕಾರಣವಾಗಿದೆ. ಚುನಾವಣಾಧಿಕಾರಿ ಬೀಗ ಮರೆತು ಬರುತ್ತಾರೆ ಎಂದರೆ ಅಲ್ಲೇನೋ ನಡೆದಿದೆಯೆಂದೇ ಅರ್ಥ. ಚುನಾವಣಾಧಿಕಾರಿ ವಿರುದ್ಧ ರಾಜ್ಯ, ಕೇಂದ್ರ ಚುನಾವಣಾ ಆಯೋಗಗಳಿಗೆ ದೂರು ನೀಡುವುದಲ್ಲದೆ ಕಾನೂನು ಹೋರಾಟ ನಡೆಸುತ್ತೇನೆ ಎಂದು ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಹೇಳಿದ್ದಾರೆ.

ತಮಿಳು ಮತದಾರನ ಮೂರನೇ ಆಯ್ಕೆ!

ಪುಟ 1➜1967ರಿಂದೀಚೆಗೆ ತಮಿಳುನಾಡಿನ ಅಧಿಕಾರ ಡಿಎಂಕೆ ಮತ್ತು ಎಐಎಡಿಎಂಕೆ ಈ ಎರಡು ಪಕ್ಷಗಳ ನಡುವೆ ಅತ್ತಿಂದಿತ್ತ ಚಲಿಸುತ್ತಿತ್ತು. ಈ ಎರಡೂ ದ್ರಾವಿಡ ಚಳವಳಿಯ ಗರ್ಭದಲ್ಲಿ ಹುಟ್ಟಿದ ಪಕ್ಷಗಳು. ಸಾಮಾಜಿಕ ನ್ಯಾಯ, ತಮಿಳು ಭಾಷಾಭಿಮಾನ, ಹಿಂದಿ-ವಿರೋಧ, ಜಾತಿ-ವಿರೋಧಿ ಪರಂಪರೆಯ ಸೈದ್ಧಾಂತಿಕ ಚೌಕಟ್ಟಿನಿಂದಲೇ ಎರಡೂ ತಮ್ಮ ಮತಗಳನ್ನು ಬೆಳೆಸಿಕೊಂಡಿದ್ದವು. ಆದರೆ ಇಂದಿನ ಫಲಿತಾಂಶ ಒಂದು ಮೂಲಭೂತ ಪ್ರಶ್ನೆಯನ್ನು ಎತ್ತಿದ್ದು, ದ್ರಾವಿಡ ರಾಜಕಾರಣದ ಸೈದ್ಧಾಂತಿಕ ಗಣಿಯಲ್ಲಿ ಇನ್ನೂ ಚಿನ್ನವಿದೆಯೇ? ಅಥವಾ ಗಣಿ ಬರಿದಾಗಿದೆಯೇ?



ಮುಖ್ಯ ಸಂಗತಿ ಎಂದರೆ ಟಿವಿಕೆ ಒಂದು ಕಡೆಯ ಮತಗಳನ್ನು ಸೆಳೆದಿಲ್ಲ. ಬದಲಾಗಿ, ಡಿಎಂಕೆ ಮತ್ತು ಎಐಎಡಿಎಂಕೆಯ ಬುಟ್ಟಿಗೆ ಕೈ ಹಾಕಿ ಸೆಳೆದಿದೆ. ಹೀಗಾಗಿ ಇದು ಒಂದು ಸಾಮಾನ್ಯ ಮೂರನೇ ಶಕ್ತಿಯ ಪ್ರವೇಶವಲ್ಲ. ಹಿಂದೆ ಡಿಎಂಡಿಕೆ (ವಿಜಯಕಾಂತ್), ಎಮ್ಎನ್ಎಂ (ಕಮಲ್ ಹಾಸನ್), ಪಿಎಂಕೆ (ರಾಮದಾಸ್) ಪ್ರಯೋಗಗಳು ದ್ರಾವಿಡ ಪಕ್ಷಗಳ ಮೈತ್ರಿಕೂಟಗಳ ಬಾಲಗಳಾಗಿ ಬದುಕಿಕೊಂಡವಷ್ಟೆ. ಟಿವಿಕೆ ಮಾತ್ರ ದ್ರಾವಿಡ ಸಿದ್ಧಾಂತದ ಎರಡು ಪಕ್ಷಗಳ ಚೌಕಟ್ಟನ್ನೇ ಒಡೆದಿದೆ. ಇದು ಸಂಖ್ಯಾತ್ಮಕ ಬದಲಾವಣೆಯಲ್ಲ, ಇದಕ್ಕೆ ಬದಲಾಗಿ ಸಾಂಸ್ಥಿಕ ಬದಲಾವಣೆ.

ಅಹಂಕಾರಕ್ಕೆ ತಕ್ಕ ಪಾಠ: ಹಾಗಾದರೆ, ವಿಜಯ್ ಪಕ್ಷದ ಗೆಲುವಿಗೆ ಮುನ್ನ ಡಿಎಂಕೆ ಮತ್ತು ಎಐಎಡಿಎಂಕೆ ಸೋಲಿನ ಬಗ್ಗೆ ಪರಾಮರ್ಶಿಸಬೇಕು. ಕೇವಲ ಆಡಳಿತ ವಿರೋಧಿ ಅಲೆಯಿಂದ ಡಿಎಂಕೆ ಸೋಲಲಿಲ್ಲ, ಬದಲಿಗೆ, ತನ್ನ ಅಹಂಕಾರಿ ಮನೋಭಾವ, ಕುಟುಂಬ ರಾಜಕಾರಣ ಅದನ್ನು ಸೋಲಿಸಿದೆ. ಮತದಾರನ ಸಿಟ್ಟು ಎಷ್ಟು ಗಟ್ಟಿಯಾಗಿತ್ತೆಂದರೆ, ಸ್ವತಃ ಸಿಎಂ ಎಂ.ಕೆ.ಸ್ಟಾಲಿನ್ ಅವರನ್ನೇ ಸೋಲಿಸುವಷ್ಟರ ಮಟ್ಟಿಗೆ ಹೋಗಿದೆ.

ಹಾಗೆಯೇ, ಇಲ್ಲಿನ ಯುವ ಮತದಾರ ಟಿವಿಕೆ ಗೆಲುವಲ್ಲಿ ಹೆಚ್ಚು ಪ್ರಭಾವ ಬೀರಿದ್ದಾನೆ. 35 ವರ್ಷಕ್ಕಿಂತ ಕೆಳಗಿನ ಮತದಾರರು ನೇರವಾಗಿ ವಿಜಯ್ ಕೈಹಿಡಿದ್ದಾರೆ. ಈ ಹಿಂದೆ ಕರುಣಾನಿಧಿ, ಎಂಜಿಆರ್ ಮತ್ತು ಜಯಲಲಿತಾ ಅವರ ನೆನಪಿನಲ್ಲೇ ಮತಹಾಕುತ್ತಿದ್ದ ಹಿರಿಯರನ್ನು ಹಿಂದಿಕ್ಕಿರುವ ಯುವ ಮತದಾರರು ನೂತನ ಸಿನಿ ನಾಯಕ ನಟನೊಬ್ಬನನ್ನು ಆಯ್ಕೆ ಮಾಡಿಕೊಂಡಿದೆ. ಅಲ್ಲದೆ ಎಂಜಿಆರ್ ಸಾಧನೆಯನ್ನೇ ಸರಿಗಟ್ಟಿದ್ದಾರೆ. ಜತೆಗೆ, ತಮ್ಮ ಪ್ರಣಾಳಿಕೆಯಲ್ಲಿ ಯುವ ಮತದಾರರಿಗೆ ಬೇಕಾದ ಅಂಶಗಳನ್ನೇ ಹೆಚ್ಚಾಗಿ ಪ್ರಸ್ತಾಪಿಸಿ, ನಂಬಿಕೆಯನ್ನೂ ಹುಟ್ಟಿಸಿದ್ದಾರೆ.

ಹಿಂದೂ ಅವಮಾನಕ್ಕೆ ಶಾಸ್ತಿ: ಕಳೆದ ಐದು ವರ್ಷಗಳ ಆಡಳಿತದಲ್ಲಿ ಡಿಎಂಕೆ ಉಪಮುಖ್ಯಮಂತ್ರಿ ಉದಯನಿಧಿ ಮತ್ತು ಇನ್ನಿತರ ನಾಯಕರು ಪದೇ ಪದೆ ಹಿಂದೂ ದೇವರುಗಳಿಗೆ ಅವಮಾನ ಮಾಡುತ್ತಲೇ ಬಂದರು. ಇದನ್ನು ಸಿಎಂ ಸ್ಟಾಲಿನ್ ಖಂಡಿಸಲೂ ಇಲ್ಲ, ಇದಕ್ಕೆ ಬದಲಾಗಿ ಇಂಥ ಘಟನೆಗಳಿಗೆ ಪ್ರೋತ್ಸಾಹ ಕೊಡುವಂತೆ ನಡೆದುಕೊಂಡರು. ಇದು ಜನರಲ್ಲಿ ಸಿಟ್ಟಿಗೂ ಕಾರಣವಾಯಿತು. ಇಡೀ ದೇಶದಲ್ಲೇ ಹೆಚ್ಚು ದೇಗುಲಗಳನ್ನು ಹೊಂದಿರುವ ತಮಿಳುನಾಡಿನಲ್ಲಿ ಹಿಂದುತ್ವ ಎಂಬುದು ಕಣ್ಣಿಗೆ ಕಾಣದಿದ್ದರೂ, ಹಿಂದೂ ದೇವರಗಳ ಮೇಲಂತೂ ಅಪಾರ ಗೌರವ, ನಂಬಿಕೆಯಂತೂ ಇದ್ದೇ ಇದೆ. ಇಂಥ ವಿಚಾರಗಳನ್ನು ಜನ ಯಾರಿಗೂ ಹೇಳದಂತೆ ಡಿಎಂಕೆಗೆ ಪಾಠ ಕಲಿಸುವಂತೆಯೇ ಮತ ಹಾಕಿದರು.

ಎಐಎಡಿಎಂಕೆ ಕಥೆ ಏನು?: ಇಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸಬೇಕು. ಜಯಲಲಿತಾ ಇನ್ನಿಲ್ಲವಾದ ಮೇಲೆ ಎಐಎಡಿಎಂಕೆಗೆ ನಾಯಕರೇ ಇಲ್ಲದ ಸ್ಥಿತಿ ಉದ್ಭವವಾಗಿದೆ ಎಂಬುದನ್ನು ಈ ಫಲಿತಾಂಶ ತೋರಿದೆ. ಮಾಜಿ ಸಿಎಂ ಪಳನಿಸ್ವಾಮಿಯತ್ತ ಮತದಾರ ಮಣೆಹಾಕಿಲ್ಲ. ಜತೆಗೆ, ತಮ್ಮ ಜತೆ ಇದ್ದ ಒ.ಪನ್ನೀರ್ ಸೆಲ್ವಂ, ಪಿ.ಅಯ್ಯಪ್ಪನ್ ರಂಥ ನಾಯಕರನ್ನು ಹೊರಗಟ್ಟಿದ್ದು ದೊಡ್ಡ ಪೆಟ್ಟೇ ಬಿದ್ದಿದೆ. ಹೀಗಾಗಿ, ಇಲ್ಲಿನ ಈ ನಾಯಕತ್ವದ ಶೂನ್ಯವನ್ನು ವಿಜಯ್ ಗಟ್ಟಿಯಾಗಿ ತಮ್ಮ ಕಡೆ ಸೆಳೆದುಕೊಂಡಿದ್ದಾರೆ.

83 ಸಾವಿರ ಫ್ಯಾನ್ ಕ್ಲಬ್

ಟಿವಿಕೆ ವಿಜಯದ ಹಿಂದೆ ಇರುವ ಕಾರಣಗಳು ಏನು ಎಂಬುದನ್ನೂ ನೋಡಬೇಕು. 2022ರಿಂದಲೂ ತಮ್ಮ 83 ಸಾವಿರ ಫ್ಯಾನ್ ಕ್ಲಬ್ ಗಳ ಮೂಲಕ ಸಮಾಜದಲ್ಲಿ ಕೆಲಸ ಮಾಡುತ್ತಿದ್ದ ವಿಜಯ್, 2021ರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಒಂದಷ್ಟು ಸಾಧನೆ ಮಾಡಿದ್ದರು. 2024ರ ಫೆಬ್ರವರಿಯಲ್ಲಿ ಟಿವಿಕೆ ಜನ್ಮತಾಳಿದ್ದು, ಈಗ ಅಧಿಕಾರಕ್ಕೇರುವ ದೊಡ್ಡ ಸಾಧನೆಯನ್ನೂ ಮಾಡಿದೆ. ಪಕ್ಷ ಸಂಘಟನೆ, ಸೈದ್ಧಾಂತಿಕ ಬದ್ಧತೆಗಳು ವಿಜಯ್ ಕೈಹಿಡಿದವು. ಅಂಬೇಡ್ಕರ್, ಪೆರಿಯಾರ್, ಕಾಮರಾಜ್ ರ ಪರಂಪರೆ ಮುಂದುವರಿಸಿಕೊಂಡು ಹೋಗುವ ಬದ್ಧತೆ ತೋರಿದರು. ಕರೂರ್ ಕಾಲ್ತುಳಿತ ದುರಂತದ ವಿಚಾರದಲ್ಲಿ ಡಿಎಂಕೆ ಸರ್ಕಾರ ನಡೆದುಕೊಂಡ ರೀತಿ, ವಿಜಯ್ ಗೆ ಅನುಕಂಪವನ್ನೂ ತಂದುಕೊಟ್ಟವು. ಒಟ್ಟನಲ್ಲಿ ವಿಜಯ್ ತಮಿಳುನಾಡು ರಾಜಕೀಯದ ಪರ್ಯಾಯವಾಗಿ ಬೆಳೆದು ನಿಂತಿದ್ದಾರೆ. ಜನರ ವಿಶ್ವಾಸವೂ ಹಾಗೇ ಇದೆ. ಇದನ್ನು ವಿಜಯ್ ಹೇಗೆ ತೆಗೆದುಕೊಂಡು ಹೋಗುತ್ತಾರೆ ಎಂಬುದನ್ನು ನೋಡಬೇಕು.

ಅರಳಿತು ತಾವರೆ: ಪ್ರಧಾನಿ ಮೋದಿ ಹರ್ಷ

ಪುಟ 1➜ಕೋಟ್ಯಂತರ ಬಿಜೆಪಿ ಕಾರ್ಯಕರ್ತರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಬಿಜೆಪಿ ಕಾರ್ಯಕರ್ತರು ಅವರು ಸಣ್ಣವರಿರಲಿ, ದೊಡ್ಡವರಿರಲಿ ಮತಗೊಮ್ಮೆ ಅಚ್ಚರಿಗಳನ್ನು ಸೃಜಿಸಿದ್ದಾರೆ. ಕಠಿಣ ಪರಿಶ್ರಮದಿಂದ ಕಮಲವನ್ನು ಅರಳಿಸಿದ್ದಾರೆಂದು ಪ್ರಧಾನಿ ಮೋದಿ ತುಂಬು ಹರ್ಷ ವ್ಯಕ್ತಪಡಿಸಿದರು.

ನಿತಿನ್ ನವೀನ್ ಬಿಜೆಪಿ ಅಧ್ಯಕ್ಷರಾದ ನಂತರ ನಡೆದ ಪ್ರಥಮ ವಿಧಾನಸಭಾ ಚುನಾವಣೆಗಳಿವು. ಚುನಾವಣೆಗೆ ಸಂಬಂಧಿಸಿ ಅಧ್ಯಕ್ಷ ನವೀನ್ ಪ್ರತಿಯೋರ್ವ ಕಾರ್ಯಕರ್ತರಿಗೆ ನೀಡಿರುವ ಮಾರ್ಗದರ್ಶನಗಳು ಚುನಾವಣಾ ವಿಜಯದಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ ಎಂದು ನಿತಿನ್ ನವೀನ್‌ರನ್ನು ಪ್ರಧಾನಿ ಮೋದಿ ಕೊಂಡಾಡಿದರು.

ಉಪ ಚುನಾವಣೆಗಳ ಫಲಿತಾಂಶ ಉತ್ತೇಜಕ: ವಿವಿಧ ರಾಜ್ಯಗಳ ಉಪ ಚುನಾವಣೆಗಳ ಇಂದಿನ ಫಲಿತಾಂಶಗಳೂ ಉತ್ತೇಜನಕಾರಿ. ಮಹಾರಾಷ್ಟ್ರ, ಗುಜರಾತ್, ನಾಗಾಲ್ಯಾಂಡ್, ತ್ರಿಪುರಾಗಳಲ್ಲಿನ ಉಪ ಚುನಾವಣೆಗಳಲ್ಲಿ ಜನಾಶೀರ್ವಾದ ಬಲದಿಂದ ನಮ್ಮ ಅಭ್ಯರ್ಥಿಗಳು ಗೆದ್ದಿರುವುದು ಗಮನಾರ್ಹ. ಎನ್‌ಡಿಎ ನಾಯಕ , ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಸುನೇತ್ರ ಪವಾರ್ ಗಮನಾರ್ಹ ವಿಜಯ ದಾಖಲಿಸಿದ್ದಾರೆ ಎಂದು ಪ್ರಧಾನಿ ಮೋದಿ ಪ್ರಶಂಸಿಸಿದರು.

ಭಾರತದ ಪ್ರಜಾಸತ್ತೆಯ ಜಯ: ಭಾರತವು ಪ್ರಜಾಸತ್ತೆಯ ಮಾತೆಯಾಗಿರುವುದು ಯಾಕೆಂಬುದನ್ನು ಈ ಐದೂ ರಾಜ್ಯಗಳ ಜನತೆ ಇಡೀ ಜಗತ್ತಿಗೆ ಮನವರಿಕೆ ಮಾಡಿದ್ದಾರೆ. ಇಂದು ಭಾರತದ ಪ್ರಜಾಸತ್ತೆಯಷ್ಟೇ ಅಲ್ಲ, ಭಾರತದ ಸಂವಿಧಾನಕ್ಕೂ ವಿಜಯವಾಗಿದೆ. ಇಂದು ನಮ್ಮ ಸಾಂವಿಧಾನಿಕ ಸಂಸ್ಥೆಗಳು ಮತ್ತು ನಮ್ಮ ಪ್ರಜಾತಾಂತ್ರಿಕ ಪ್ರಕ್ರಿಯೆಗಳೂ ಜಯಭೇರಿ ಹೊಡೆದಿವೆ. ಪ.ಬಂಗಾಳದಲ್ಲಿನ ಶೇ. 93 ಮೀರಿ ಮತದಾನ ಸ್ವಯಂ ಐತಿಹಾಸಿಕವೆಂದು ಪ್ರಧಾನಿ ಮೋದಿ ವಿಶ್ಲೇಷಿಸಿದರು.


ಚರಿತ್ರೆ ಮರೆಯದು: ಚುನಾವಣಾ ಆಯೋಗ, ಚುನಾವಣಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಂಡ ಎಲ್ಲಾ ಸೋದರ ಸೋದರಿಯರು, ಮುಖ್ಯವಾಗಿ ಭದ್ರತಾ ಪಡೆಗಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಭಾರತೀಯ ಪ್ರಜಾಸತ್ತೆಯ ಘನತೆ ಎತ್ತಿ ಹಿಡಿಯುವಲ್ಲಿ ತಾವು ನೀಡಿರುವ ಕೊಡುಗೆಯನ್ನು ಚರಿತ್ರೆ ಎಂದಿಗೂ ಮರೆಯದು. ಗಂಗೆಯು ಬಿಹಾರದಿಂದಾಚೆಗೆ ಗಂಗಾಸಾಗರವರೆಗೂ ಹರಿಯುವುದು ಎಂದು ಕಳೆದ ವರ್ಷ ನ.14ರಂದು ಬಿಹಾರದ ಚುನಾವಣಾ ಫಲಿತಾಂಶ ಪ್ರಕಟಗೊಂಡಾಗ ನಾನು ಇದೇ ಬಿಜೆಪಿ ಪ್ರಧಾನಕಚೇರಿಯಿಂದ ನಿಮಗೆ ತಿಳಿಸಿದ್ದೆ. ಇಂದೀಗ ಬಂಗಾಳದಲ್ಲಿನ ವಿಜಯದೊಂದಿಗೆ ಗಂಗೋತ್ರಿಯಿಂದ ಗಂಗಾಸಾಗರವರೆಗೂ ಕಮಲ ಅರಳಿದೆ. ಉತ್ತರಾಖಂಡ, ಉತ್ತರಪ್ರದೇಶ, ಬಿಹಾರ, ಇದೀಗ ಪ.ಬಂಗಾಳದಲ್ಲೂ ಕಮಲ ನಳನಳಿಸಿದೆ. ಇಂದೀಗ ಗಂಗೆಯ ಸುತ್ತಮುತ್ತಲೂ ನೆಲೆಸಿರುವ ಈ ರಾಜ್ಯಗಳಲ್ಲಿ ಬಿಜೆಪಿ, ಎನ್‌ಡಿಎ ಅಧಿಕಾರ ಸೂತ್ರ ಹಿಡಿದಿದೆ.

ಮಾತೆ ಗಂಗೆ ಕರೆದಲ್ಲಿಗೆ...: 2013ರಲ್ಲಿ ಪ್ರಧಾನಿ ಅಭ್ಯರ್ಥಿಯಾಗಿ ಬಿಜೆಪಿ ನನ್ನನ್ನು ನೇಮಿಸಿದ್ದಾಗ, ತಾನು ನಾಮಪತ್ರ ಸಲ್ಲಿಸಲು ಕಾಶಿಗೆ ತೆರಳಿದ್ದೆ. ಮಾಧ್ಯಮದವರು ನನ್ನ ಸುತ್ತ ನೆರೆದಿದ್ದರು.ಆಗ ನನ್ನ ಹೃದಯಾಂತರಾಳದಿಂದ ಹೊರಬಂದ ಮಾತುಗಳಿವು. ನಾನು ಸ್ವಂತ ಇಚ್ಛೆಯಿಂದ ಇಲ್ಲಿಗೆ ಬಂದಿಲ್ಲ ಅಥವಾ ಯಾರೂ ನನ್ನನ್ನು ಇಲ್ಲಿಗೆ ಕಳುಹಿಸಿದ್ದಲ್ಲ. ಗಂಗಾಮಾತೆಯೇ ನನ್ನಲ್ಲಿಗೆ ಕರೆಸಿರುವಳು... ಇಂದೀಗ ಗಂಗೆಯ ಜತೆ ಬ್ರಹ್ಮಪುತ್ರಾದ ಆಶೀರ್ವಾದ ಬಲವೂ ನಮಗೊದಗಿದೆ. ಮಾತೆ ಕಾಮಾಕ್ಯ ಮಾತೆಯೂ ನಮ್ಮನ್ನು ಹರಸಿರುವಳು. ಹ್ಯಾಟ್ರಿಕ್ ವಿಜಯದೊಂದಿಗೆ ಅಸ್ಸಾಂನ ಜನತೆ ಕೂಡ ತೃತೀಯ ಅವಧಿಗೆ ಬಿಜೆಪಿ ಮತ್ತು ಎನ್‌ಡಿಎಯಲ್ಲಿ ತುಂಬು ವಿಶ್ವಾಸ ವ್ಯಕ್ತಪಡಿಸಿದ್ದಾರೆಂದರು.

ಬೆಸ್ಟ್ ಪುದುಚೇರಿ ವಿಷನ್: 2021ರಲ್ಲಿ ಶ್ರೇಷ್ಠ ಪುದುಚೇರಿಯ ವಿಷನ್‌ನ್ನು ಪುದುಚೇರಿ ಜನರ ಮುಂದಿಟ್ಟಿದ್ದೆವು. ಪುದುಚೇರಿ ಜನರು ಈ ದೃಷ್ಟಿಕೋನದಲ್ಲಿ ಶ್ರದ್ಧೆಯಿರಿಸಿ ನಮ್ಮನ್ನು ಆಶೀರ್ವದಿಸಿದ್ದಾರೆ. ಈ ವಿಷನ್‌ನ ವಿಸ್ತೃತತೆಗಾಗಿ ಎನ್‌ಡಿಎ ಸರಕಾರ ಕಳೆದೈದು ವರ್ಷಗಳಿಂದ ಸಂಪೂರ್ಣ ಸಮರ್ಪಣಾ ಭಾವ ಮತ್ತು ಸಂಕಲ್ಪಬದ್ಧತೆಯಿಂದ ದುಡಿದಿದೆ.

ಡಾ.ಶ್ಯಾಮ್ ಪ್ರಸಾದ್ ಕನಸು ನನಸು

ಪುಟ 1➜**ಬಂಗಾಳವನ್ನು ಭಾರತದ ಅವಿಭಾಜ್ಯ ಭಾಗವಾಗಿ ಕಾಪಾಡಿಕೊಳ್ಳಲು ಶ್ಯಾಮ್ ಪ್ರಸಾದ್ ಮುಖರ್ಜಿ ಭಾರೀ ಹೋರಾಟ ಮಾಡಿದ್ದರು.**



ಬಲಿಷ್ಠ ಮತ್ತು ಸಂಪನ್ನ ಬಂಗಾಳದ ಅವರ ಕನಸು ದಶಕಗಳಿಂದ ಸಾಕಾರವಾಗಲೇ ಇಲ್ಲ. ಇಂದೀಗ 2026 ಮೇ 4ರಂದು ಬಂಗಾಳದ ಜನತೆ ನಮಗೆ , ಬಿಜೆಪಿ ಕಾರ್ಯಕರ್ತರಿಗೆ ಡಾ.ಶ್ಯಾಮ್ ಪ್ರಸಾದ್ ಕನಸಿನ ಸಾಕಾರಕ್ಕೆ ಅವಕಾಶ ನೀಡಿದ್ದಾರೆ. ಬಂಗಾಳದ ಇತಿಹಾಸದಲ್ಲಿ ಹೊಸ ಅಧ್ಯಾಯ ತೆರೆದಿದೆ. ಇಂದಿನಿಂದ ಬಂಗಾಳವು ಭೀತಿ ಮುಕ್ತವಾಗಿರುವುದು ಮತ್ತು ಅಭಿವೃದ್ಧಿಯ ಆತ್ಮವಿಶ್ವಾಸದಿಂದ ನಳನಳಿಸುವುದು ಎಂದು ಪ್ರಧಾನಿ ಮೋದಿ ವಿಶ್ವಾಸ ವ್ಯಕ್ತಪಡಿಸಿದರು.

ಲಾಸ್ಟ್ ಮೊಘಲ್ ಆದ ಕಾಮ್ರೆಡ್ ವಿಜಯನ್

ಪುಟ 1➜ಹಾಗೆಂದ ಎಂಟೇ ವರ್ಷಗಳಲ್ಲಿ ಪಿಣರಾಯಿ ವಿಜಯನ್ ಲಾಸ್ಟ್ ಮೊಘಲ್ ಆಗಿದ್ದಾರೆ! ಕೇರಳದಲ್ಲಿ 1957ರಲ್ಲಿ ಮೊದಲ ಬಾರಿಗೆ ಖಾತೆ ತೆಗೆದ ಕಮ್ಯುನಿಸ್ಟರು ಹಿಂದಿರುಗಿ ನೋಡಲಿಲ್ಲ. ನಂತರ ಸೈದ್ಧಾಂತಿಕ ಆಧಾರದಲ್ಲಿ ಕಮ್ಯುನಿಸ್ಟರು ಹೋಳಾದರೂ ಚುನಾವಣೆಯನ್ನು ಜತೆಯಾಗಿಯೇ ಎದುರಿಸಿದ್ದವು. 1967ರಲ್ಲಿ ಇ.ಎಂ.ಎಸ್ ನಂಬೂದರಿಪಾಡ್ ಕೇರಳದ ಮುಖ್ಯಮಂತ್ರಿಯಾಗುವುದ ರೊಂದಿಗೆ ದೇಶದಲ್ಲಿ ಅತಿ ವೇಗವಾಗಿ ಬೆಳೆದು ಅಧಿಕಾರ ಕ್ಕೇರಿದ ಪಕ್ಷ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು.

ಜತೆಗೆ ದೇಶದ ಮೊಟ್ಟಮೊದಲ ಕಮ್ಯುನಿಸ್ಟ್ ಮುಖ್ಯಮಂತ್ರಿ ಎಂಬ ಗೌರವಕ್ಕೂ ಅವರು ಪಾತ್ರರಾಗಿದ್ದರು. ಮೂರು ವರ್ಷ ಅಧಿಕಾರದಲ್ಲಿದ್ದರೂ ನಂಬೂದರಿಪಾಡ್ ಅವರ ನಿಲುವುಗಳು ಕೇರಳದ ಸಾಮಾಜಿಕ ವಾತಾವರಣವನ್ನು ಬದಲಿಸುವಲ್ಲಿ ಯಶಸ್ವಿಯಾಗಿದ್ದವು. ನಂಬೂದರಿಪಾಡ್ ಮಾದರಿಯನ್ನು ಅನುಷ್ಠಾನ ಮಾಡಿಕೊಂಡ ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ಗಳಲ್ಲೂ ಕಮ್ಯುನಿಸಂ ತತ್ವಗಳನ್ನು ಜನರು ಬೆಂಬಲಿಸಿದವು. ಅದರ ಫಲವಾಗಿ 1977 ರಲ್ಲಿ ಜ್ಯೋತಿ ಬಸು ಅಧಿಕಾರಕ್ಕೆ ಬಂದರು. ಬರೋಬ್ಬರಿ 23 ವರ್ಷ, 137ದಿನಗಳು ಅಧಿಕಾರದ ಗಾದಿಯಲ್ಲಿದ್ದ ಬಸು ಕಾಲದಲ್ಲಿ ರಾಜ್ಯ ಅಭಿವೃದ್ಧಿಯಿಂದ ವಂಚಿತವಾಗುವುದರ ಜತೆಗೆ ರಾಜಕೀಯ ಹತ್ಯೆ ಮತ್ತು ಚುನಾವಣಾ ಅಕ್ರಮಗಳೂ ಹೆಚ್ಚಿತು.

ಮರುವರ್ಷ, ಅಂದರೆ 1978ರಲ್ಲಿ ಬಸು ಒಡನಾಡಿ ನೃಪನ್‌ಚಕ್ರವರ್ತಿ ತ್ರಿಪುರಾದ ಮುಖ್ಯಮಂತ್ರಿಯಾದರು. ಎರಡು ಅವಧಿಯವರೆಗೆ ಮುಖ್ಯಮಂತ್ರಿಯಾಗಿದ್ದ ನೃಪನ್ ಚಕ್ರವರ್ತಿ ಅಧಿಕಾರದಿಂದ ಇಳಿದಾಗ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಕಮ್ಯುನಿಸ್ಟ್ ಸಿಎಂ ಅಧಿಕಾರದಲ್ಲಿದ್ದರು. ಕೇರಳದಲ್ಲಿ ಇ. ಕೆ. ನಾಯನಾರ್ ಮೂರು ಬಾರಿ, ಪ.ಬಂಗಾಳದಲ್ಲಿ ಜ್ಯೋತಿ ಬಸು, ನಂತರ ಬುದ್ಧದೇವ ಭಟ್ಟಾಚಾರ್ಯ ಎರಡು ಅವಧಿಯವರೆಗೆ ಮುಖ್ಯಮಂತ್ರಿ ಸ್ಥಾನದಲ್ಲಿದ್ದು 'ಕಾಮ್ರೆಡ್ ಇಲ್ಲದ ಸಿಎಂ' ಸ್ಥಿತಿ ಕಮ್ಯುನಿಸ್ಟರಿಗೆ ಬಂದಿರಲಿಲ್ಲ. ಅತ್ತ ತ್ರಿಪುರಾದಲ್ಲಿ ದಶರಥ ದೇವ್ ಒಂದು ಅವಧಿ ಮತ್ತು ನಂತರ ಮಾಣಿಕ್ ಸರ್ಕಾರ್ 20 ವರ್ಷಗಳವರೆಗೆ ಮುಖ್ಯಮಂತ್ರಿಗಳಾಗಿ ಕಾಮ್ರೆಡ್ ಸಿಎಂ ಇಲ್ಲದ ಪರಿಸ್ಥಿತಿ ಕಮ್ಯುನಿಸ್ಟರಿಗೆ ಬಂದಿರಲಿಲ್ಲ.

ಭಾರತದ ಮಣ್ಣಿಗೆ ಒಗ್ಗದ ಸಿದ್ಧಾಂತ, ಮುಖಂಡರ ಅಧಿಕಾರ ಲಾಲಸೆ, ಪರಂಪರೆಗೆ ಗೌರವ ನೀಡದ ಮಾನಸಿಕತೆ, ದೇಶದ ಭದ್ರತೆಯ ವಿಷಯಗಳಲ್ಲಿ ಹಗುರ ಧೋರಣೆ, ದೀರ್ಘಾವಧಿಯವರೆಗೆ ಅಧಿಕಾರದಲ್ಲಿದ್ದರೂ ತೊಲಗದ ಬಡತನ, ಭ್ರಷ್ಟಾಚಾರಗಳ ಕಾರಣ ಒಂದೊಂದಾಗಿ ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಳ್ಳುತ್ತಾ ಸಾಗಿದ ಕಮ್ಯುನಿಸ್ಟರು ಅಂತಿಮವಾಗಿ ಕೇರಳದಲ್ಲಿ ಮಾತ್ರ ಕುಟುಕು ಜೀವವಿರಿಸಿಕೊಂಡಿದ್ದರು. ಪಿಣರಾಯಿ ಕಾಲದಲ್ಲಿ ನಡೆದ ಹಗರಣಗಳು, ಹಿಂದು ವಿರೋಧಿ ನೀತಿಗಳ ಕಾರಣಕ್ಕೆ ಇದೀಗ ಅವರೂ ಅಧಿಕಾರದಿಂದ ಕೆಳಗಿಳಿದಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ದಾಖಲೆ ಜಯ

ಪುಟ 1➜**ಗೆದ್ದು ಬೀಗಿದ್ದು ಹೇಗೆ?:** ಪಶ್ಚಿಮ ಬಂಗಾಳದಲ್ಲಿ ಬೀಸಿದ ಬಿಜೆಪಿ ಪರ ಅಲೆ ಭಾರೀ ಬದಲಾವಣೆಗೆ ಕಾರಣವಾಗಿದೆ. ಮಮತಾ ವಿರೋಧಿ ಅಲೆ ಏಳಲು ಧಾರ್ಮಿಕ ಆಧಾರಿತ ಮತಗಳ ಏಕೀಕರಣ ಬಿಜೆಪಿಗೆ ಲಾಭ ತಂದಿದೆ. ಆಡಳಿತ ವಿರೋಧಿ ಅಲೆ ಬಿಜೆಪಿಗೆ ವರವಾಗಿದೆ. ಕೇಂದ್ರ ನಾಯಕತ್ವದ ಆಕ್ರಮಣಕಾರಿ ಪ್ರಚಾರ, ಬೂತ್ ಮಟ್ಟದ ಸಂಘಟನೆ ಬಲಪಡಿಸುವ ಕಾರ್ಯ ಮತ್ತು ಸಾಮಾಜಿಕ ಮಾಧ್ಯಮಗಳ ಪರಿಣಾಮಕಾರಿ ಬಳಕೆ ಬಿಜೆಪಿಗೆ ನೆರವಾಗಿದೆ. ನಕಲಿ ಮತದಾರರನ್ನು ಹೊರಗಿಟ್ಟಿದ್ದು, ಚುನಾವಣಾ ಸಮಯದ ಹಿಂಸಾಚಾರವನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಿದ್ದು ಕೂಡ ಗೆಲುವಿಗೆ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಬಿಜೆಪಿಯ ಮೊದಲ ಸರ್ಕಾರ: ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ ಭಾರತೀಯ ಜನತಾ ಪಕ್ಷ ಪಶ್ಚಿಮ ಬಂಗಾಳದಲ್ಲಿ ಸರ್ಕಾರ ರಚಿಸಲು ಸಜ್ಜಾಗಿದೆ. ಮಮತಾ ಬ್ಯಾನರ್ಜಿ ಅವರ 15 ವರ್ಷಗಳ ಆಡಳಿತ ಅಂತ್ಯವಾಗಿದೆ. ತೃಣಮೂಲ ಕಾಂಗ್ರೆಸ್ ಪಕ್ಷ ವಿರುದ್ಧ ಬಿಜೆಪಿ ಭರ್ಜರಿ ಜಯ ಸಾಧಿಸಿದೆ.

ಬಿಜೆಪಿ ಗೆಲ್ಲಿಸಿದ ಜೋಡಿ: ಈ ಬಾರಿ ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸಲೇಬೇಕೆಂದು ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಖುದ್ದಾಗಿ ಅಖಾಡಕ್ಕೆ ಇಳಿದಿದ್ದರು. ಕಳೆದ 2 ತಿಂಗಳಲ್ಲಿ ಹಲವು ಬಾರಿ ನರೇಂದ್ರ ಮೋದಿ ಬಂಗಾಳಕ್ಕೆ ಆಗಮಿಸಿ ಚುನಾವಣಾ ಪ್ರಚಾರ ನಡೆಸಿದ್ದಾರೆ. ಅಮಿತ್ ಶಾ ಬಂಗಾಳದಲ್ಲೇ ಬೀಡುಬಿಟ್ಟು ಬಿಜೆಪಿ ಪರ ಅಲೆ ಮೂಡಲು ಶ್ರಮಿಸಿದ್ದಾರೆ.

ಬೂತ್ ನಿಯಂತ್ರಣ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ 82,000 ಬೂತ್‌ಗಳಲ್ಲಿ 71,000 ಬೂತ್‌ಗಳ ಮೇಲೆ ನಿಯಂತ್ರಣ ಸಾಧಿಸಿದೆ. ಹಿಂಸಾಚಾರಕ್ಕೆ ಬಲಿಯಾದ ಕಾರ್ಯಕರ್ತರನ್ನು ಪುನಃ ಸಕ್ರಿಯಗೊಳಿಸುವ ಮೂಲಕ ಬಿಜೆಪಿ ತುಳಿತಕ್ಕೆ ಒಳಗಾದವರನ್ನು ತನ್ನ ಚುನಾವಣಾ ಅಸ್ತ್ರವನ್ನಾಗಿ ಬಳಸಿಕೊಂಡಿತು.

ಡಬಲ್ ಹಣ: ಮಮತಾ ಬ್ಯಾನರ್ಜಿಯವರ ಲಕ್ಷ್ಮೀ ಭಂಡಾರ್ 1,500 ರೂ.ಗೆ ಪ್ರತಿಯಾಗಿ ಬಿಜೆಪಿ ಪ್ರತಿ ಮಹಿಳೆಗೆ ತಿಂಗಳಿಗೆ 3,000 ರೂ. ನೀಡುವುದಾಗಿ ಭರವಸೆ ನೀಡಿತು.

ಗೆದ್ದ ಕ್ರಿಕೆಟಿಗ: ಈ ಗೆಲುವಿನಲ್ಲಿ ಮಾಜಿ ಭಾರತೀಯ ಕ್ರಿಕೆಟ್ ಆಟಗಾರ ಅಶೋಕ್ ದಿಂಡಾ ಕೂಡ ಪಾತ್ರ ವಹಿಸಿದ್ದಾರೆ. ಪೂರ್ವ ಮಿಡ್ನಾಪುರ ಜಿಲ್ಲೆಯ ಮೊಯ್ನಾ ವಿಧಾನಸಭಾ ಕ್ಷೇತ್ರದಲ್ಲಿ ಅಶೋಕ್ ದಿಂಡಾ 16,241 ಮತಗಳಿಂದ ಗೆದ್ದಿದ್ದಾರೆ. ಹಿಂದಿನ ವಿಧಾನಸಭಾ ಚುನಾವಣೆಯಲ್ಲೂ ಜಯಗಳಿಸಿದ್ದರು.

ಸ್ಟಾಲಿನ್‌ಗೆ ಹೀನಾಯ ಸೋಲು: ಹಾಲಿ ಸಿಎಂ ಡಿಎಂಕೆ ನಾಯಕ ಎಂಕೆ ಸ್ಟಾಲಿನ್ ತಮ್ಮ ಭದ್ರಕೋಟೆ ಕೊಳತ್ತೂರಿನಲ್ಲಿ ಸ್ಪರ್ಧಿಸಿರುವ ಎಂಕೆ ಸ್ಟ್ಯಾಲಿನ್, ಟಿವಿಕೆ ವಿಎಸ್ ಬಾಬು ವಿರುದ್ಧ ಹೀನಾಯವಾಗಿ ಸೋತಿದ್ದಾರೆ. ಅಲ್ಲದೆ, ಸಿಎಂ ಎಂಕೆ ಸ್ಟ್ಯಾಲಿನ್ ಸೇರಿದಂತೆ 14 ಡಿಎಂಕೆ ಸಚಿವರು ತಾವು ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ತೀವ್ರ ಹಿನ್ನಡೆ ಎದುರಿಸಿದ್ದಾರೆ. ಸ್ಟಾಲಿನ್ ವಿರುದ್ಧ ವಿಎಸ್ ಬಾಬು 8 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಮುಖ್ಯಮಂತ್ರಿಯನ್ನು ಸೋಲಿಸಿದ ವಿಎಸ್ ಬಾಬು ಡಿಎಂಕೆ ಮಾಜಿ ನಾಯಕನಾಗಿದ್ದು, ಇತ್ತೀಚೆಗಷ್ಟೇ ಟಿವಿಕೆ ಸೇರ್ಪಡೆಯಾಗಿದ್ದರು.

ಅಜಿತ್ ಪವಾರ್ ಪತ್ನಿಗೆ ದಾಖಲೆ ಗೆಲುವು: ಮಹಾರಾಷ್ಟ್ರದ ಬಾರಾಮತಿ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ದಿವಂಗತ ಡಿಸಿಎಂ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ 1.75 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

242 ಕೋಟಿ ರೂ. ಬೆಟ್ಟಿಂಗ್! ಪಂಚರಾಜ್ಯ ಚುನಾವಣಾ ಫಲಿತಾಂಶದ ಹಿನ್ನೆಲೆಯಲ್ಲಿ, ನಿಷೇಧಿತ ಪಾಲಿಮಾರ್ಕೆಟ್ ವೇದಿಕೆಯಲ್ಲಿ ಕ್ರಿಪ್ಟೋ ಮೂಲಕ 242.8 ಕೋಟಿಗೂ ಹೆಚ್ಚು ಬೆಟ್ಟಿಂಗ್ ನಡೆದಿದೆ. ತಮಿಳುನಾಡಿನಲ್ಲಿ ಬೆಟ್ಟಿಂಗ್ ನಿರೀಕ್ಷೆಗಳು ತಲೆಕೆಳಗಾಗಿದೆ. ವಿಶ್ವದ ಅತಿದೊಡ್ಡ ವಿಕೇಂದ್ರೀಕೃತ ಊಹೆ ಮಾರುಕಟ್ಟೆ ವೇದಿಕೆಯಾಗಿರುವ ಪಾಲಿಮಾರ್ಕೆಟ್ನಲ್ಲಿ ಬೆಟ್ಟಿಂಗ್ ಹೆಚ್ಚಿದ್ದು, ಹಣದ ಹೊಳೆಯೇ ಹರಿದಿತ್ತು. ಫಲಿತಾಂಶಕ್ಕೂ ಮುನ್ನವೇ 242.8 ಕೋಟಿ ರೂ.ನಷ್ಟು ವ್ಯವಹಾರ ನಡೆದಿದೆ.

22 ರಾಜ್ಯಗಳಲ್ಲಿ ಎನ್‌ಡಿಎ ಆಡಳಿತ: ಪಶ್ಚಿಮ ಬಂಗಾಳ ಗೆಲುವಿನೊಂದಿಗೆ ದೇಶದಲ್ಲಿ ಎನ್‌ಡಿಎ ಆಡಳಿತ ದಲ್ಲಿರುವ ರಾಜ್ಯಗಳ ಸಂಖ್ಯೆ(ಕೇಂದ್ರಾಡಳಿತ ಪ್ರದೇಶಗಳು ಸೇರಿ) 22ಕ್ಕೆ ಏರಿಕೆಯಾಗಿದೆ.

ಕೇರಳದಲ್ಲಿ ಬಿಜೆಪಿಗೆ 3 ಸ್ಥಾನ

• ತಿರುವನಂತಪುರಂ: ಕೇರಳದಲ್ಲಿ ನೆಲೆಗೊಳ್ಳಲು ಬಹುಕಾಲದಿಂದ ಹೋರಾಟ ನಡೆಸುತ್ತಿರುವ ಬಿಜೆಪಿಗೆ ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಮೂರು ಸ್ಥಾನ ದಕ್ಕಿದೆ. ಈ ಪೈಕಿ ನೇಮಂ ಕ್ಷೇತ್ರದಿಂದ ಸ್ಪರ್ಧಿಸಿದ್ದ ರಾಜ್ಯ ಘಟಕದ ಅಧ್ಯಕ್ಷರಾದ ರಾಜೀವ್ ಚಂದ್ರಶೇಖರ್ ಅವರ ಗೆಲುವೂ ಪ್ರಮುಖವಾಗಿದೆ. ನಾಲ್ಕು ದಶಕಗಳ ಕಾಲ ಸಿಪಿಐ(ಎಂ) ಹಿಡಿತದಲ್ಲಿದ್ದ ತಿರುವನಂತಪುರಂ ಕಾರ್ಪೋರೇಷನ್ ಅನ್ನು ಬಿಜೆಪಿ ತನ್ನದಾಗಿಸಿಕೊಂಡದ್ದು ಮೊದಲ ಸೂಚನೆಯಾಗಿ ಕಾಣಿಸಿಕೊಂಡಿತು. ಈ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೂರು ಸ್ಥಾನಗಳನ್ನು ಗೆದ್ದು, ಹಲವು ಕ್ಷೇತ್ರಗಳಲ್ಲಿ ತನ್ನ ವೋಟ್ ಶೇರ್ ಹೆಚ್ಚಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ಪಕ್ಷದ ಕಾರ್ಯಕರ್ತರಿಗೆ ಇದು ಕೇರಳ ರಾಜಕೀಯದಲ್ಲಿ ದೀರ್ಘಕಾಲದ ಹೋರಾಟಕ್ಕೆ ಸಿಕ್ಕ ಮಹತ್ವದ ಉತ್ತೇಜನವಾಗಿದೆ.

ಅಸ್ಸಾಂನಲ್ಲಿ ಅಚಲ ಬಿಸ್ವಾಸ

ಪುಟ 1➜**ಹಿಮಂತ ಎರಡನೇ ಬಾರಿ ಸಿಎಂ ಆಗುವ ಸಾಧ್ಯತೆಯಿದೆ. ಕಾಂಗ್ರೆಸ್ ಅಧ್ಯಕ್ಷ ನಾಯಕ ಗೌರವ್ ಗೊಗೊಯ್ ಜೋರ್ಹತ್‌ನಲ್ಲಿ ಸೋತರೆ, ಲುರಿಂಜ್ಯೋತಿ ಗೊಗೊಯ್ ಖೋವಾಂಗ್‌ನಲ್ಲಿ ಸೋತಿದ್ದಾರೆ.**

ಐತಿಹಾಸಿಕ ಶತಕ: ಅಸ್ಸಾಂ ಇತಿಹಾಸದಲ್ಲಿ ಮೊದಲ ಬಾರಿಗೆ ಮೈತ್ರಿಕೂಟ ಶತಕ ಬಾರಿಸಿದೆ.ಯಾವುದೇ ಪಕ್ಷ, ಮೈತ್ರಿ ಕೂಟವೂ 100ರ ಗಡಿ ದಾಟಿರಲೇ ಇಲ್ಲ.

ಕೇರಳದಲ್ಲಿ ಯುಡಿಎಫ್

ಪುಟ 1➜**ಯುಡಿಎಫ್ ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಮರಳುತ್ತಿದೆ. ಈ ಚುನಾವಣಾ ಫಲಿತಾಂಶವು ಕೇವಲ ಸರ್ಕಾರದ ಬದಲಾವಣೆಯಲ್ಲ. ಸರ್ಕಾರದಲ್ಲಿ ನಿರಂತರತೆಯ ನಷ್ಟದೊಂದಿಗೆ, ಕೇರಳ ರಾಜಕೀಯವನ್ನು ನಿಯಂತ್ರಿಸುವ ಅನೇಕ ನಾಯಕರ ಭವಿಷ್ಯ ಮತ್ತು ಅಸ್ತಿತ್ವವೂ ಇಲ್ಲಿ ಬದಲಾಗುತ್ತಿದೆ. ವಿರೋಧ ಪಕ್ಷದ ನಾಯಕ ವಿ.ಡಿ. ಸತೀಸನ್ ಈ ಅದ್ಭುತ ಗೆಲುವಿನ ರೂವಾರಿ ಎಂದು ಹೇಳಲಾಗುತ್ತಿದೆ.**

ಯಕ್ಷಗಾನದ ಮೂಲಕ ಧರ್ಮಜಾಗೃತಿ: ಗೋಪಾಲಕೃಷ್ಣ ಆಸ್ರಣ್ಣ

• ಕಿನ್ನಿಗೋಳಿ: ಯಕ್ಷಗಾನದ ಮೂಲಕವಾಗಿ ಧರ್ಮ ಜಾಗೃತಿ, ಪುರಾಣ ಕಥೆಗಳ ಸಾರವನ್ನು ಸುಲಭ ರೀತಿಯಲ್ಲಿ ಜನರಿಗೆ ತಲುಪಿಸಿ ಸುಸಂಸ್ಕೃತರನ್ನಾಗಿಸುವ ಶ್ರೇಷ್ಠಕಲಾ ಪ್ರಕಾರವಾಗಿದೆ ಈ ನಿಟ್ಟಿನಲ್ಲಿ ಇದರ ಜೊತೆಗೆ ಕಲೆಗಾಗಿ ಶ್ರಮಿಸಿದ ಸಾಧಕರನ್ನು ಗೌರವಿಸುತ್ತಿರುವುದು ಶ್ಲಾಘನೀಯ ಎಂದು ಕಟೀಲು ದೇವಸ್ಥಾನದ ಅರ್ಚಕ ಗೋಪಾಲಕೃಷ್ಣ ಆಸ್ರಣ್ಣ ಹೇಳಿದರು.

ತಾಳಿಪಾಡಿ ಗುತ್ತುವಿನಲ್ಲಿ ಕಟೀಲು ಮೇಳದ 32 ನೇ ವರ್ಷದ್ದ ಬಯಲಾಟ ಸಂದರ್ಭ ಯಕ್ಷಗಾನದ ಹಿರಿಯ ಕಲಾವಿದರನ್ನು ಗೌರವಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಕಟೀಲು ಮೇಳದ ಹಿರಿಯ ಕಲಾವಿದರ ನೆಲೆಯಲ್ಲಿ ನಗ್ರಿ



ಮಹಾಬಲ ರೈ ಅವರನ್ನು 50 ಸಾವಿರ ರೂ ಗೌರವಧನ ನೀಡಿ ಗೌರವಿಸಲಾಯಿತು. ತಾಳಿಪಾಡಿ ಗುತ್ತುವಿನಲ್ಲಿ ನಿರಂತರವಾಗಿ ಯಕ್ಷಗಾನ ಕಲೆಯ ಆರಾಧನೆ ನಡೆಯುತ್ತ ಬಂದಿದೆ ಅದರ ಜೊತೆಗೆ ಕಲಾವಿದರನ್ನು ಗುರುತಿಸಿ ಗೌರವಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಭುವನಾಭಿರಾಮ ಉಡುಪ, ರಾಮಕೃಷ್ಣ ಹೆಗ್ಡೆ ತಾಳಿಪಾಡಿ ಗುತ್ತು, ಉದ್ಯಮಿ ರಾಮಚಂದ್ರ ಎಸ್. ಶೆಟ್ಟಿ ತಾಳಿಪಾಡಿ ಗುತ್ತು, ಮುಂಬಯಿ ಶ್ರೀ ಮೂಕಾಂಬಿಕಾ ದೇವಸ್ಥಾನದ ಟ್ರಸ್ಟಿ ಭಾಸ್ಕರ ಶೆಟ್ಟಿ ತಾಳಿಪಾಡಿ ಗುತ್ತು, ಸಂಘಟಕ ಧನಪಾಲ ಶೆಟ್ಟಿ ತಾಳಿಪಾಡಿ ಗುತ್ತು, ಸಾಂಕಾ ಧನಪಾಲ ಶೆಟ್ಟಿ, ಪ್ರಸಾದ್ ಶೆಟ್ಟಿ ಮತ್ತಿತರರಿದ್ದರು. ಶರತ್ ನಿರೂಪಿಸಿದರು.

ಬೆಟ್ಟಂಪಾಡಿ ನವೋದಯ ಪ್ರೌಢ ಶಾಲಾ ಬಳಿ ಗುಡ್ಡದಲ್ಲಿ ಬೆಂಕಿ ಆಕಸ್ಮಿಕ



• ನಿಡ್ಪಳ್ಳಿ: ಬೆಟ್ಟಂಪಾಡಿ ನವೋದಯ ಪ್ರೌಢಶಾಲೆಯ ವ್ಯಾಪ್ತಿಗೆ ಸೇರಿದ ಗುಡ್ಡಕ್ಕೆ ಬೆಂಕಿ ಬಿದ್ದ ಪರಿಣಾಮ ಗುಡ್ಡ ಹೊತ್ತಿ ಉರಿದ ಘಟನೆ ಸೋಮವಾರ ಮಧ್ಯಾಹ್ನ ಸಂಭವಿಸಿದೆ. ಅಗ್ನಿಶಾಮಕ ದಳದಿಂದ ಕ್ಷಿಪ್ರ ಕಾರ್ಯಾಚರಣೆ; ಬೆಂಕಿ ಬಿದ್ದ ವಿಷಯ ತಿಳಿದ ರಿಕ್ಷಾ ಚಾಲಕ ಪ್ರಸಾದ್ ಭಟ್ ಅವರು ತಕ್ಷಣ ಅಗ್ನಿಶಾಮಕ ದಳಕ್ಕೆ ಕರೆ ಮಾಡಿ ತಿಳಿಸಿದರು. ತಕ್ಷಣ ಆಗಮಿಸಿದ ಅಗ್ನಿಶಾಮಕ ದಳದವರು ಸ್ಥಳೀಯರ ಸಹಕಾರದಿಂದ ಸುಮಾರು ಒಂದು ಗಂಟೆಯ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಸುಮಾರು 10 ಎಕರೆಗಳಷ್ಟು ಗುಡ್ಡದ ಮರ ಗಿಡ ಮರಗಳು ಸುಟ್ಟು ಹೋಗಿರ ಬಹುದು ಎಂದು ಅಂದಾಜಿಸಲಾಗಿದೆ. ಯಾರೋ ದಾರಿಹೋಕರು ಬೀಡಿ ಸೇದಿ ಬಿಸಾಡಿದ ಕಾರಣ ಬೀಸಿದ ಗಾಳಿಗೆ ಆಕಸ್ಮಿಕವಾಗಿ ಬೆಂಕಿ ಹತ್ತಿರ ಬಹುದು ಎಂದು ಶಂಕಿಸಲಾಗಿದೆ. ನವೋದಯ ಪ್ರೌಢ ಶಾಲಾ ಸಂಚಾಲಕ ಪುಷ್ಪರಾಜ್ ಶೆಟ್ಟಿ, ರಾಮಕೃಷ್ಣ ಭಟ್ ದೇವಮಜಲು, ಮಸ್ತಾಂ ಸ್ಟ್ರಿಬಂದಿಗಳು ಹಾಗೂ ಸ್ಥಳೀಯರು ಬೆಂಕಿ ನಂದಿಸುವಲ್ಲಿ ಸಹಕಾರ ನೀಡಿದರು.

ವೃದ್ಧ ಆತ್ಮಹತ್ಯೆ; ಇಬ್ಬರ ವಿರುದ್ಧ ಪ್ರಕರಣ ದಾಖಲು

• ಕಡಬ: ನೂಜಿಬಾಳ್ತಿಲ ಗ್ರಾಮದ ಕಲ್ಲುಗುಡ್ಡೆ ಎಂಬಲ್ಲಿ ಬಾಡಿಗೆ ಕೊಠಡಿಯಲ್ಲಿದ್ದ ಮೂಲತಃ ಕಡಬ ತಾಲೂಕು ಕೊಣಾಜೆ ಗ್ರಾಮದ ಬನಾರಿ ನಿವಾಸಿ ಚೆನ್ನಪ್ಪ ಪೂಜಾರಿ (60) ಅವರು ಆತ್ಮಹತ್ಯೆ ಮಾಡಿಕೊಂಡ ಘಟನೆಗೆ ಸಂಬಂಧಿಸಿ, ಮೃತರ ಜೇಬಿನಲ್ಲಿ ಸಿಕ್ಕಿದ ಡೆತ್ ನೋಟ್ ಆಧಾರಿಸಿ ಇಬ್ಬರ ವಿರುದ್ಧ ಕಡಬ ಪೊಲೀಸ್ ಠಾಣೆಯಲ್ಲಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಪ್ರಕರಣ ದಾಖಲಾಗಿದೆ.

ಮೇ 1ರಂದು ಚೆನ್ನಪ್ಪ ಪೂಜಾರಿ ಅವರ ಮೃತದೇಹವು ಅವರು ವಾಸ್ತವ್ಯವಿದ್ದ ಕೊಠಡಿಯ ಕಟಾಗೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಆರಂಭದಲ್ಲಿ ಇದು ಆತ್ಮಹತ್ಯೆ ಎಂದು ಭಾವಿಸಲಾಗಿತ್ತಾದರೂ, ಮಹಜರು ಸಂದರ್ಭದಲ್ಲಿ ಮೃತರ ಜೇಬಿನಲ್ಲಿ ಪತ್ತೆಯಾದ ಮೊಬೈಲ್ ಮತ್ತು ಸಾವಿಗೆ ಮುನ್ನ ಬರೆದಿಟ್ಟಿದ್ದ ಡೆತ್‌ನೋಟ್ ಪ್ರಕರಣಕ್ಕೆ ತಿರುವು ನೀಡಿದೆ. ಡೆತ್‌ನೋಟ್‌ನಲ್ಲಿ ನನ್ನ ಸಾವಿಗೆ ಜೀತು (ಜಿತೇಶ್ ಪೂಜಾರಿ) ಮತ್ತು ನಿಶ್ಮಿ ಎಂಬವರೇ ಕಾರಣ. ನನ್ನ ಫೋನ್ ರೆಕಾರ್ಡ್‌ಗಳನ್ನು ಪರಿಶೀಲಿಸಿ ಎಂದು ಬರೆಯಲಾಗಿತ್ತು ಎಂದು ಮೃತರ ಪುತ್ರ ರವಿಚಂದ್ರ ಅವರು ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾದಾಗ ಕೊಠಡಿಯ ಬಾಗಿಲಿಗೆ ಒಳಗಿನಿಂದ ಚಿಲಕ ಹಾಕಲಿರಲಿಲ್ಲ ಎನ್ನುವುದು ಸಂಶಯಕ್ಕೆ ಕಾರಣವಾಗಿದ್ದು, ಆ ಬಗ್ಗೆ ಮೃತರ ಪುತ್ರ ರವಿಚಂದ್ರ ಅವರು ನೀಡಿದ ದೂರಿನ ಮೇರೆಗೆ ಜಿತೇಶ್ ಪೂಜಾರಿ ಮತ್ತು ನಿಶ್ಮಿ ಎಂಬವರ ವಿರುದ್ಧ ಕಡಬ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಬಂಟ್ವಾಳ: ಕಾರು ಡಿಕ್ಕಿ ಗಾಯಾಳು ಮೃತ್ಯು

• ಬಂಟ್ವಾಳ: ಇಲ್ಲಿನ ಸಮೀಪದ ಪಾಣೆಮಂಗಳೂರು ಎಂಬಲ್ಲಿ ರಸ್ತೆ ದಾಟಲು ನಿಂತಿದ್ದ ವೇಳೆ ಕಾರು ಡಿಕ್ಕಿಯಾಗಿ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ವೃದ್ಧರೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟ ಘಟನೆ ನಡೆದಿದೆ. ಪುತ್ತೂರು ನಿವಾಸಿ ವಿಶ್ವನಾಥ ರೈ (63) ಅವರು ಮೃತಪಟ್ಟವರೆಂದು ಗುರುತಿಸಲಾಗಿದೆ.

ಅವರು ಪಾಣೆಮಂಗಳೂರಿನ ನೆಹರು ನಗರದಲ್ಲಿರುವ ಆಡಿಟೋರಿಯಂನಲ್ಲಿ ಸಂಬಂಧಿಕರ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಾಪಸು ಮನೆಗೆ ಹೋಗಲೆಂದು ರಸ್ತೆಯನ್ನು ದಾಟಲು ನಿಂತಿದ್ದ ವೇಳೆ ಬಿ.ಸಿ.ರೋಡಿನಿಂದ ಮೆಲ್ಕಾರ್ ಕಡೆಗೆ ಅತೀ ವೇಗದಿಂದ ಸಂಚರಿಸುತ್ತಿದ್ದ ಕಾರೊಂದು ಡಿಕ್ಕಿಯಾಗಿದೆ. ಪರಿಣಾಮ ವಿಶ್ವನಾಥ ರೈ ಅವರಿಗೆ ಗಂಭೀರ ಸ್ವರೂಪದ ಗಾಯವಾಗಿದ್ದು, ಕೂಡಲೇ ಸ್ಥಳೀಯ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಯೊಂದಕ್ಕೆ ಸೇರಿಸಲಾಗಿತ್ತು. ಅಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಅವರು ಸಂಜೆ ವೇಳೆ ಕೊನೆಯುಸಿರೆಳೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈಬಗ್ಗೆ ಬಂಟ್ವಾಳ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

IN THE COURT OF THE CIVIL JUDGE & JMFC AT MADIKERI
Cr. M.C. No. 87 Of 2026

Petitioner :
1. Sri. P.S.Bheemaiah, S/o late P.K.Subbaiah, Aged 77 years.
2. Sri. P.K.Menaka, W/o late P.S.Kuttappa., Aged 74 years.
3. Sri. P.S. Ganapathy, S/o late P.K.Subbaiah, Aged 74 years.
4. Sri. P.S. Thilak, S/o late P.K.Subbaiah, Aged 69 years.
5. Sri. Kaumbaiah P.S., S/o late P.K.Subbaiah, Aged 64 years.
All are residents of Bavali village, Parane Post, Madikeri Taluk, Kodagu District.

Respondent:
The Thahashildar, Registrar of Birth and Death, Madikeri Taluk, Madikeri, Kodagu.

COURT NOTICE

The above named petitioner has filed above case for obtaining the Death Certificate of his mother late **Smt. P.S. SEETHAVVA** who died on 05-05-2007 at Bavali village Madikeri Taluk, Kodagu District.

This is public notice that the above case has been posted for appearance of any person/persons claiming or interested to contest in the above case.

Therefore anybody interested in the above case must appear before the Hon'ble Principal Civil Judge and JMFC Court at Madikeri on 05-06-2026 at 11 A.M. either personally or through Advocate. Failing which the case will be heard and proceeded with as per law.

/By the order of the Court/
Sd/- **Chief Ministerial Officer**
Principal Civil Judge & JMFC Court, Madikeri.
Sd/- **M.S. Jayachandra,**
Advocate, Kohinoor Road, Madikeri.

IN THE COURT OF I ADDL. DISTRICT JUDGE AND COMMERCIAL COURT, AT MANGALORE, D.K.
In Com O.S 08/2026

Between:
Canara Bank, Lalbagh Branch
...Plaintiff

And
M/s Kripa Swasahaya Sangha and others
...Defendants

NOTICE

To Defendant No.8
Mrs. Ayisha, Aged about 34 years, W/o Nissar, R/at: 2-202, Site No. 805A Zeenath Manzil, 2nd Block, Katipalla, Mangaluru D.K-575030.

Please take notice that the plaintiff named above has filed the above suit against you. You are not available for service of suit notice so far. Hence, the Honourable court has ordered the plaintiff to cause suit notice through paper publication against you. Therefore you are hereby called upon to appear in person or through pleader before the above said Honourable Court at **11.00 A.M. on 20-06-2026.** If you fail to appear the matter will be decided in your absence according the merits of the suit treating you ex-parte by the court.

Given under my hand and the seal of the court on this 4th day of May, 2026.

Sd/- **Chief Administrial Officer**
Sd/-(**Ravichandra P.M**)
Advocate for plaintiff

Mangalore, D.K.
Date: 02-05-2026

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ–571313.

ಅಲ್ಪಾವಧಿ ಇ-ಪ್ರಕ್ಯೂರ್‌ಮೆಂಟ್-ಟೆಂಡರ್

ಪ್ರಕಟಣೆ ಸಂಖ್ಯೆ:-01/2026-27, ದಿನಾಂಕ :- 30-04-2026 (ದ್ವಿಲಕೋಟೆ ಪದ್ಧತಿ)

****

ಈ ಕಛೇರಿಯಿಂದ ಉಲ್ಲೇಖಿ ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ 2026-27ನೇ ಸಾಲಿನಲ್ಲಿ ಗಣ ಮತ್ತು ಭೂವಿಜ್ಞಾನ ಇಲಾಖೆ ಅನುದಾನ ಯೋಜನೆಯ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾದ ಕಾಮಗಾರಿಗಳಿಗೆ KW-4 ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿನಾಂಕ :- 04-05-2026 ರಿಂದ ದಿನಾಂಕ :- 22-05-2026 ರವರೆಗೆ ಸಂಜೆ 16.00 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಣೆ ಮಾಹಿತಿ ಪಡೆಯಲು ಅಂತಿಮ ದಿನಾಂಕ 13-05-2026ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ :- 25-05-2026ರ ಸಂಜೆ 17.00 ಘಂಟೆಯ ನಂತರ ಹಾಗೂ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು. ಟೆಂಡರ್ ಫಾರಂ ಬೆಲೆ ಇ-ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಸದರಿ ಕಾಮಗಾರಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ	ಅಂದಾಜು ಮೊತ್ತ (ರೂ.ಗಳಲ್ಲಿ)	ಟೆಂಡರ್‌ಗಿಟ್ಟ ಇ-ಪ್ರಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ಅರ್ಹತೆ
01.	Improments to the Road of Rechamballi village to Nanjarajapura in Chamarajanagara taluk 0.00 To 1.50 KM	150.00	-	2,00,000.00	2ನೇ ದರ್ಜೆ ಮತ್ತು ಮೇಲ್ಪಟ್ಟು

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ (ಫೋನ್ ನಂ. 08226-223019) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಮೊಬೈಲ್ ಸಂಖ್ಯೆ :- ಸ.ಇಂ. 8073339806

ಸಹಿ/- ಕಾರ್ಯಪಾಲಕ ಅಭಿಯಂತರರು
ಪಂ.ರಾ.ಇಂ. ವಿಭಾಗ, ಚಾಮರಾಜನಗರ

ಸಂ : ವಾ೩ಸಂಇ : ಚಾನಗರ : 86 : 2026-27

ಕರ್ನಾಟಕ ಸರಕಾರ
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
ಇ-ಮೇಲ್: directorgimsgulbarga@gmail.com ದೂ.08472-260252

ಸಂಖ್ಯೆ:GIMS/KLB/Tender/Inj/CR/10/2026-27/218 ದಿನಾಂಕ:–27/04/2026

:: ಟೆಂಡರ ಪ್ರಕಟಣೆ ::

2026–27 ನೇ ಸಾಲಿಗೆ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಯ ಜಿಮ್ಸ್ ಆಸ್ಪತ್ರೆಯ ಹಾಗೂ ಟ್ರಾಮಾಕೇರ್ ಹಾಗೂ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಗಳಲ್ಲಿ ಉಪಯೋಗಿಸಲು ಬೇಕಾಗಿರುವ Injection ಗಳನ್ನು ಖರೀದಿಸಲು ಅರ್ಹಿತ ಬಿಡ್ದಾರರಿಂದ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ: No.GIMS/KLB/TENDER/Inj/CR/10/2026-27 Date:27.04.2026. IND. No: DME/2026-27/IND2273, 2) ಅನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್‌ಗಳನ್ನು ಇ-Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: 26–05–2026 ಸಾಯಂಕಾಲ 4:30ಕ್ಕೆ, 3) ಅನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 08–05–2026 ಸಾಯಂಕಾಲ 5.00 ಗಂಟೆಯವರೆಗೆ, 4) ಟೆಂಡರ ಪೂರ್ವಭಾವಿ ಸಭೆ: 12–05–2026 ಮಧ್ಯಾಹ್ನ 12:30ಕ್ಕೆ, 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 27–05–2026 ಸಾಯಂಕಾಲ 5:00ಕ್ಕೆ, 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: 29–05–2026 11:30ಕ್ಕೆ, 7) ಟೆಂಡರನ ಮೊತ್ತ: ರೂ. 7,04,29,850/-, 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ರೂ. 2,00,000/-, 9) ವ್ಯವಹರಿಸಬೇಕಾದ ಅಧಿಕಾರ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472-260252 Office Email: directorgimsgulbarga@gmail.com, Cell:+91 9482093568, Tender Section Email: gimstenderklb22@gmail.com, Cell:+91 9972688602

ಸಹಿ/– ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/94/ಕೆ.ಎಸ್.ಎಂ.ಸಿ.ಎ/2026–27

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)
E-Mail :- ka.chikkaballapur.dudc@gmail.com, Ph: 08156-277005

ಸಂ:ಜಿನಕೋ/ಚಿಕ(1)/ಶಾ.ಶಾ/ಅ.ನ-4/107/2025–26 ದಿನಾಂಕ:28.04.2026

ಟೆಂಡರ್ ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)–4 ಯೋಜನೆಯಡಿ ಈ ಕೆಳಕಂಡ ವ್ಯಕ್ತಿ ಸಂಬಂಧಿತ ಕಾರ್ಯಕ್ರಮಗಳಿಗೆ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಂದ ಅರ್ಹ ಗುತ್ತಿಗೆದಾರರಿಂದ/ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ವಿವರ: (1) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ರ ಯೋಜನೆಯಡಿ ಬಾಗೇಪಲ್ಲಿ ಪುರಸಭೆಯ ವಿಶೇಷ ಚೇತನರಿಗೆ ವಿದ್ಯುತ್ ಚಾಲಿತ ಟ್ರೈಸಿಕಲ್ ಮಿಷನ್ ಖರೀದಿಸುವುದು. (DMA/2025-26/IND6228), **ಟೆಂಡರ್‌ಗಿಟ್ಟ ಮೊತ್ತ:** ರೂ. 1.85 ಲಕ್ಷ, **ಇ.ಎಮ್.ಡಿ ಮೊತ್ತ:** ರೂ.4650.00 **(2)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ರ ಯೋಜನೆಯಡಿ ಚಿಕ್ಕಬಳ್ಳಾಪುರ ನಗರಸಭೆಯ ವಿಶೇಷ ಚೇತನರಿಗೆ ವಿದ್ಯುತ್ ಚಾಲಿತ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5651/Call-2), **ಟೆಂಡರ್‌ಗಿಟ್ಟ ಮೊತ್ತ:** ರೂ. 79.90, **ಇ.ಎಮ್.ಡಿ ಮೊತ್ತ:** 159816.00 **(3)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ರ ಯೋಜನೆಯಡಿ ಬಾಗೇಪಲ್ಲಿ ಪುರಸಭೆಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5652/Call-2), **ಟೆಂಡರ್‌ಗಿಟ್ಟ ಮೊತ್ತ:** ರೂ. 13.49, **ಇ.ಎಮ್.ಡಿ ಮೊತ್ತ:** 33728.00 **(4)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ರ ಯೋಜನೆಯಡಿ ಗೌರಿಬಿದನೂರು ನಗರಸಭೆಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5653/Call-2), **ಟೆಂಡರ್‌ಗಿಟ್ಟ ಮೊತ್ತ:** ರೂ. 19.72, **ಇ.ಎಮ್.ಡಿ ಮೊತ್ತ:** 49300.00, **(5)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ರ ಯೋಜನೆಯಡಿ ಶಿಡ್ಲಘಟ್ಟ ನಗರಸಭೆಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5654/Call-2), **ಟೆಂಡರ್‌ಗಿಟ್ಟ ಮೊತ್ತ:** ರೂ. 24.90, **ಇ.ಎಮ್.ಡಿ ಮೊತ್ತ:** 49813.00, **(6)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ರ ಯೋಜನೆಯಡಿ ಚಿಂತಾಮಣಿ ನಗರಸಭೆಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5655/Call-2), **ಟೆಂಡರ್‌ಗಿಟ್ಟ ಮೊತ್ತ:** ರೂ. 26.98, **ಇ.ಎಮ್.ಡಿ ಮೊತ್ತ:** 53965.00, **(7)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ರ ಯೋಜನೆಯಡಿ ಗುಡಿಬಂಡೆ ಪಟ್ಟಣ ಪಂಚಾಯಿತಿಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5656/Call-2), **ಟೆಂಡರ್‌ಗಿಟ್ಟ ಮೊತ್ತ:** ರೂ. 12.45, **ಇ.ಎಮ್.ಡಿ ಮೊತ್ತ:** 31134.00. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು/ ಏಜನ್ಸಿಯವರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು/ಏಜನ್ಸಿಯವರು ಟೆಂಡರ್ ದಸ್ತಾವೇಜುಗಳನ್ನು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ವೇದಿಕೆ **https://kppp.karnataka.gov.in** ನಲ್ಲಿ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು. (1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 12.05.2026ರ ಸಂಜೆ 05.30 ಗಂಟೆಗೆ (2)** ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 14.05.2026ರ ಪೂರ್ವಾಹ್ನ 11.00 ಗಂಟೆಗೆ. (3)** ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 02.06.2026ರ ಬೆಳಿಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸಿದ ದಿನದಂದು. ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:46/ಕೆಎಸ್‌ಎಂಸಿಎ/2026–27

ಪುತ್ತೂರು ಮಾರುಕಟ್ಟೆ ಧಾರಣೆ
04-05-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	445 - 475
ಡೋಲ್ ಅಡಿಕೆ	:	525 - 550
ಡಬಲ್ ಚೋಲ್	:	525 - 550
ಹೊಸ ಪಟೋರ	:	355 - 405
ಹಳೆ ಪಟೋರ	:	375 - 405
ಹೊಸ ಉಳ್ಳಿ	:	120 - 290
ಹಳೆ ಉಳ್ಳಿ	:	110 - 290
ಹೊಸ ಕೋಕಾ	:	325 - 345
ಹಳೆ ಕೋಕಾ	:	325 - 345
ಹೊಸ ಕರಿಗೋಟು	:	245 - 275
ಹಳೆ ಕರಿಗೋಟು	:	245 - 275
ಹಸಿ ಕೊಕ್ಕೋ	:	70 - 100
ಒಣ ಕೊಕ್ಕೋ	:	270 - 315

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 675
ರಬ್ಬರ್ ಧಾರಣೆ : ಗ್ರೇಡ್		
ಆರ್‌ಎಸ್‌ಎಸ್ 1	-	246.00
ಆರ್‌ಎಸ್‌ಎಸ್ 2	-	210.00
ಸ್ಕ್ರಾಪ್ 1	-	149.00
ಸ್ಕ್ರಾಪ್ 2	-	140.00

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಹೇಮಾವತಿ ನಾಲಾ ವಿಭಾಗ, ಕಾ.ನೀ.ನಿ.ನಿ, ತುಮಕೂರು

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ; 01/2026–27 ದಿನಾಂಕ: 29.04.2026

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕಾ.ನೀ.ನಿ.ನಿ, ಹೇಮಾವತಿ ನಾಲಾ ವಿಭಾಗ, ತುಮಕೂರು ವ್ಯಾಪ್ತಿಯ ರೂ:-36.51 ಲಕ್ಷ ದಿಂದ 379.40 ಲಕ್ಷದವರೆಗಿನ 02 ಕೆಲಸ ಕಾಮಗಾರಿಗಳ ಟೆಂಡರ್‌ಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ KTPP ನಿಬಂಧನೆಗಳೊಂದಿಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 06.05.2026 ಸಂಜೆ 4.00 ಗಂಟೆ ವರೆಗೆ. ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 4.05.2026 ರಿಂದ 13.05.2026 ಸಂಜೆ 4.00 ಗಂಟೆ ವರೆಗೆ ತಾಂತ್ರಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:–14.05.2026 ಸಂಜೆ 4.30ಗಂಟೆ ನಂತರ. ಆರ್ಥಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:–16.05.2026 ಬೆಳಿಗ್ಗೆ 11.00 ಗಂಟೆ ನಂತರ (ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ).

ಇ.ಎಂ.ಡಿ ಮೊತ್ತ, ಕಾಲಾವಧಿ, ಕಾಮಗಾರಿಗಳ ವಿವರ, ಅರ್ಹತಾ ಷರತ್ತುಗಳು, ಹಾಗೂ ಇನ್ನಿತರ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸಿಸ್ಟಮ್ https://kppp.karnataka.gov.in/ ಮೂಲಕ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ವಿಭಾಗ, ತುಮಕೂರು

DIPR/TUM/46/KSMCA/2026-27

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಐ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು – 560024.
ಇ–ಮೇಲ್: commissionerahvs@gmail.com ಫೋನ್: 080–23412767

ನಂ: ಆಪಸಂ/ವಿಎಯಸ್/ವಿ–51/ಕೆ.ಸಿಸ್ಟ/ಟೆಂಡರ್/2026–27 ದಿನಾಂಕ: 04-05-2026

ಟೆಂಡರ್ ನೋಟಿಫಿಕೇಷನ್
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2026–27 ನೇ ಸಾಲಿನಲ್ಲಿ ಆಯುಕ್ತಾಲಯ ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಶುಪಾಲನಾ ಭವನದ ಕಟ್ಟಡದ ನಿರ್ವಹಣೆ, ತೋಟಗಾರಿಕೆ ಸೇವೆ, ಭದ್ರತಾ ಸೇವೆ, ಎಲೆಕ್ಟ್ರಿಷಿಯನ್ ಮತ್ತು ಪ್ಲಂಬರ್ ಸೇವೆಗಳು **Work Contract** ಆಧಾರದ ಮೇಲೆ ಪಡೆಯುವ ಸಲುವಾಗಿ ಕೆಪಿಪಿ ಪೋರ್ಟಲ್ ನ ಮೂಲಕ ಒಂದು ವರ್ಷದ ಅವಧಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿ ಪಡಿಸಿದ ಮೊತ್ತ ರೂ. 45.00 ಲಕ್ಷಗಳು.

ಪೂರ್ಣ ಟೆಂಡರ್ ದಾಖಲೆಗಳನ್ನು https://kppp.karnataka.gov.in ಅಂತರ್ಜಾಲ ವಿಳಾಸದಲ್ಲಿ ದಿನಾಂಕ: **04.05.2026** ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ನಲ್ಲಿ ದಿನಾಂಕ: **04.05.2026** ರಿಂದ **19.05.2026** ರವರೆಗೆ **17.30** ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಕೆಪಿಪಿ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಟೆಂಡರ್‌ಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು ಪಶುವೈದ್ಯಕೀಯ ಔಷಧಿ ಭಂಡಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

DIPR/CP/493/NR/2026-27

ಕರ್ನಾಟಕ ಸರಕಾರ– ಧಾರ್ಮಿಕ ದತ್ತಿ ಇಲಾಖೆ
ಶ್ರೀ ಕ್ಷೇತ್ರ ಕುಡುಪು
ಶ್ರೀ ಅನಂತ ಪದ್ಮನಾಭ ದೇವಸ್ಥಾನ, ಕುಡುಪು ಮಂಗಳೂರು ದ.ಕ.ಜಿಲ್ಲೆ ದೂ.2262587
ಕೆವಿಪಿ/ಕೊಟೇಶನ್/ಸಿ.ಆರ್.05/2026–27 ದಿನಾಂಕ : 05.05.2026

ಕೊಟೇಷನ್ ಪ್ರಕಟಣೆ

ಶ್ರೀ ದೇವಾಲಯಕ್ಕೆ ದಿನಾಂಕ 01.06.2026 ರಿಂದ 31.05.2027 ರ ಒಂದು ವರ್ಷದ ಅವಧಿಗೆ, ಅತ್ಯುತ್ತಮ ಗುಣಮಟ್ಟದ ಪ್ರಕಟಣೆಯಲ್ಲಿ ನಮೂದಿಸಿದ ತರಕಾರಿಗಳನ್ನು ಸರಬರಾಜು ಮಾಡಲು ಮಾರಾಟ ತೆರಿಗೆ ನೋಂದಾಯಿತ ಅಧಿಕೃತ ಮಾರಾಟಗಾರರಿಂದ ಷರತ್ತುಗಳಿಗೆ ಒಳಪಟ್ಟು ಮತ್ತು ದೇವಾಲಯದಿಂದ ನೀಡುವ ಅಧಿಕೃತ ಕೊಟೇಷನ್ ಫಾರ್ಮ್‌ಗಳಲ್ಲಿ ಮಾತ್ರ ಕೊಟೇಷನ್‌ಗಳನ್ನು ಆಹ್ವಾನಿಸಲಾಗಿದೆ. **ದಿನಾಂಕ 25.05.2026 ರ ಸಂಜೆ 05.30 ಗಂಟೆಯ** ಒಳಗಡೆ ಸಲ್ಲಿಸತಕ್ಕದ್ದು. ಕೊಟೇಷನ್‌ಗಳನ್ನು ಅದೇ ದಿನ **ಸಂಜೆ 6.00 ಗಂಟೆಗೆ** ಅಥವಾ ನಂತರ ನಿಗದಿಗೊಳಿಸಬಹುದಾದ ದಿನಾಂಕದಂದು ತೆರೆಯಲಾಗುವುದು. ನಿಗದಿತ ಅವಧಿಯ ನಂತರ ಬಂದ ಕೊಟೇಷನ್‌ಗಳನ್ನು ಪರಿಗಣಿಸುವುದಿಲ್ಲ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ದೇವಾಲಯದ ಕಾರ್ಯ ನಿರ್ವಹಣಾಧಿಕಾರಿಯವರನ್ನು ಸಂಪರ್ಕಿಸಲು ಕೋರಿದೆ. ಹಿಂದೂಯೇತರರಿಗೆ ಕೊಟೇಷನ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

ಸಹಿ/– ಕಾರ್ಯನಿರ್ವಹಣಾಧಿಕಾರಿ

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ.
ಐ.ಎಸ್.ಆರ್ ರಸ್ತೆ, ಚಿತ್ತವಾಡ್ಗಿ, ಹೊಸಪೇಟೆ–583 201.
ದೂರವಾಣಿ ಸಂಖ್ಯೆ: 08394–227749
E-mail:hospethuda@gmail.com

ಸಂಖ್ಯೆ:ಹೊನಅಪ್ರಾ:ಟಿ:ಅ:ಯೋ:2026–27 ದಿನಾಂಕ 29.04.2026

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ರ ಪ್ರಕಾರ ಕಾಯ್ದೆ 2000 ನಿಯಮದಂತೆ ಹೊಸಪೇಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಮಹಾಯೋಜನೆ(ಹ–2) ತಯಾರಿಸುವ ಸಂಬಂಧ ತಾಂತ್ರಿಕ ಮತ್ತು ಆರ್ಥಿಕ ಟೆಂಡರನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆಯುಕ್ತರು ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

1.ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **16.05.2026 ಅಪರಾಹ್ನ 04.30 ಗಂಟೆಗೆ** 2.ಪ್ರೀ ಬಿಡ್ ಸಭೆ ದಿನಾಂಕ: **06.05.2026 ಪೂರ್ವಾಹ್ನ 10.30 ಗಂಟೆಗೆ.** 3.ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **18.05.2026 ಪೂರ್ವಾಹ್ನ 05.00 ಗಂಟೆಗೆ.** 4.ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **19.05.2026 ಪೂರ್ವಾಹ್ನ 10.30 ಗಂಟೆಗೆ.** 4.ಟೆಂಡರ್ ತೆರೆಯುವ ಸ್ಥಳ: **ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ**
ಇಂಡೆಂಟ್ ಸಂಖ್ಯೆ: HUDA/2025-26/SE0009/CALL-2, ಅಂದಾಜು ಮೊತ್ತ : ರೂ 188.80 ಲಕ್ಷಗಳು (ಜಿ.ಎಸ್.ಟಿ.ಸೇರಿ)

ಸಹಿ/–ಆಯುಕ್ತರು, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್.ಎಂ.ಸಿ.ಎ/ಆರ್.ಓ.ಸಂಖ್ಯೆ/60

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-52) ಡ್ರಾ ಮೇ 4ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BU 178419 (ERNAKULAM)
Consolation Prize Rs.5,000/-
BN 178419 BO 178419 BP 178419 BR 178419
BS 178419 BT 178419 BV 178419 BW 178419
BX 178419 BY 178419 BZ 178419
2nd Prize Rs.30,00,000/- [30 Lakhs]
BR 131063 (CHERTHALA)
3rd Prize Rs.5,00,000/- [5 Lakhs]
BP 203448 (THIRUVANANTHAPURAM)
FOR THE TICKETS ENDING WITH THE FOLLOWING NUMBERS
4th Prize Rs.5,000/-
0080 0211 0422 0937 3041 3641 4619 6260 6344 7613 7615 8003 8014 8255 8670 8683 8791 9804 9835
5th Prize Rs.2,000/-
0858 1695 1832 2495 4290 5914
6th Prize Rs.1,000/-
0886 0963 1208 1398 1613 2114 2163 2499 2833 3592 3985 4629 4780 7134 7386 8424 8470 8504 9015 9017 9210 9267 9323 9582 9914
7th Prize Rs.500/-
0276 0385 0501 0524 0634 1163 1319 1424 1436 1441 1457 1512 1617 1620 1655 1956 2191 2201 2553 2561 2630 2677 2778 2867 3230 3593 3690 3756 3896 4090 4373 4576 4800 5035 5083 5149 5285 5466 5518 5944 6034 6192 6322 6337 6398 6415 6463 6468 6535 6606 6688 6718 6786 6821 7000 7082 7321 7395 7744 7977 8100 8107 8129 8201 8271 8353 8410 8491 8691 8694 8905 9032 9042 9374 9417 9753
8th Prize Rs.200/-
0025 0098 0164 0309 0339 0479 0547 0580 0735 0896 0905 0955 1048 1113 1133 1149 1160 1256 1368 1451 1452 1576 1597 1835 1986 2009 2396 2428 2497 2618 2639 2699 2923 2938 3026 3061 3182 3232 3305 3440 3465 3786 3802 3824 3936 3978 4150 4152 4295 4656 4718 5214 5445 5559 5563 5699 5861 6088 6288 6324 6486 6635 6770 6926 7125 7164 7420 7484 7806 7838 7850 8022 8179 8189 8317 8362 8505 8773 8870 8978 9051 9092 9208 9235 9325 9393 9409 9410 9526 9544 9596 9800 9813 9928
9th Prize Rs.100/-
0052 0093 0151 0170 0222 0287 0296 0300 0363 0419 0542 0565 0583 0584 0629 0632 0672 0706 0707 0757 0878 1001 1042 1297 1309 1315 1367 1581 1626 1889 1935 2016 2075 2159 2358 2548 2571 2599 2600 2617 2643 2680 2722 2808 2824 2850 2872 2885 3009 3115 3267 3350 3377 3651 3657 3798 3815 3913 3928 3956 3999 4245 4320 4464 4615 4745 4747 4816 4839 4885 4914 4934 5006 5286 5361 5390 5467 5565 5573 5658 5717 5730 5754 5869 5958 5966 6041 6136 6301 6436 6448 6516 6625 6659 6694 6699 6704 6714 6784 6802 6816 6920 6962 6968 7018 7051 7073 7107 7300 7330 7504 7621 7637 7663 7713 7721 7748 7767 7815 7825 7876 7879 8000 8077 8090 8177 8187 8205 8233 8509 8718 8725 8909 8974 9299 9318 9395 9432 9446 9665 9707 9722 9771 9984

ಅವಂದೂರು ಶ್ರೀ ಗೋಪಾಲಕೃಷ್ಣ ದೇವಸ್ಥಾನ: ಇಂದಿನಿಂದ ಪುನರ್ ಪ್ರತಿಷ್ಠೆ, ಅಷ್ಟಬಂಧ ಬ್ರಹ್ಮಕಲಶೋತ್ಸವ

ನಾಪೋಕ್ಲು: ಮಡಿಕೇರಿ ತಾಲೂಕಿನ ಅವಂದೂರು ಗ್ರಾಮದ ಗ್ರಾಮ ದೇವರಾದ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಶ್ರೀ ದೇವರ ಬಿಂಬ ಪುನರ್ ಪ್ರತಿಷ್ಠೆ ಹಾಗೂ ಅಷ್ಟಬಂಧ ಬ್ರಹ್ಮಕಲಶೋತ್ಸವ ಧಾರ್ಮಿಕ ಕಾರ್ಯಕ್ರಮವು ಮೇ 5 ರಿಂದ 8 ರ ವರೆಗೆ ನಡೆಯಲಿದೆ. ಮೇ 8ರಂದು ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಹಾಸನದ ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಕಾರ್ಯದರ್ಶಿ ಪರಮ ಪೂಜ್ಯ ಶ್ರೀ ಶಂಭುನಾಥ ಸ್ವಾಮೀಜಿ, ಮಾಣಿಲ ಶ್ರೀಧಾಮದ ಪರಮ ಪೂಜ್ಯ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಕೃಷ್ಣದತ್ತ ಯದುವೀರ್ ಒಡೆಯರ್, ಶಾಸಕ ಎ.ಎಸ್. ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯ ಎಂ.ಪಿ. ಸುಜಾ ಕುಶಾಲಪ್ಪ, ಮಾಜಿ ಶಾಸಕ ಕೆ.ಜಿ ಬೋಪಯ್ಯ, ಉದ್ಯಮಿ ಕೇಕಡ ನಂದ, ಪೊನ್ನಚ್ಚನ ತಮ್ಮಯ್ಯ, ಪಟ್ಟಡ ದೇವಯ್ಯ, ಬೆಳ್ಯನ ನಾಣಯ್ಯ, ಬೆಳ್ಯನ ವಾಸುದೇವ, ಕಡ್ಯದ ಸೋಮಣ್ಣ, ಚೊಕ್ಕಾಡಿ ಅಪ್ಪಯ್ಯ ಮೊದಲಾದವರು ಆಗಮಿಸಲಿದ್ದಾರೆ ಎಂದು ಜೀರ್ಣೋದ್ಧಾರ ಸಮಿತಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಸರಕಾರಿ ಮಹಿಳಾ ಐ.ಟಿ.ಐ. ಪ್ರವೇಶ: ಅರ್ಜಿ ಆಹ್ವಾನ

ಮಂಗಳೂರು: ಸರಕಾರಿ ಐ.ಟಿ.ಐ.ಗಳಿಗೆ ಶೈಕ್ಷಣಿಕ ಸಾಲಿನ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಿಂದ ಅಧಿಸೂಚನೆ ಹೊರಡಿಸಲಾಗಿದ್ದು, ಸರಕಾರಿ ಐ.ಟಿ.ಐ, (ಮಹಿಳಾ) ಮಂಗಳೂರು ಸಂಸ್ಥೆಯಲ್ಲಿ ಲಭ್ಯವಿರುವ ಕೋರ್ಸುಗಳಲ್ಲಿ ಪ್ರವೇಶ ಬಯಸುವ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಸಂಸ್ಥೆಯನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 9880119147, 9448858417, 9620766870 ಮೂಲಕ ಸಂಪರ್ಕಿಸಬಹುದು.

ಕಿರುಸುದ್ದಿ

ಕೊಡಗು ಜಿಲ್ಲಾ ಖಾಸಗಿ ಬಸ್ ಮಾಲಕರ ಸಂಘದ ಅಧ್ಯಕ್ಷರಾಗಿ ಜನಾರ್ಧನ ಪ್ರಭು

ಮಡಿಕೇರಿ: ಕೊಡಗು ಜಿಲ್ಲಾ ಖಾಸಗಿ ಬಸ್ ಮಾಲಕರ ಸಂಘದ ಅಧ್ಯಕ್ಷರಾಗಿ ಕುಶಾಲನಗರದ ಜನಾರ್ಧನ ಪ್ರಭು ಆಯ್ಕೆಯಾಗಿದ್ದಾರೆ. ಶ್ರೀ ಗುರುರಾಘವೇಂದ್ರ ಮೋಟಾರ್ ಸರ್ವಿಸ್ ಮಾಲಕರಾಗಿರುವ ಜನಾರ್ಧನ್ ಪ್ರಭು ಅವರು ಕೊಡಗು ಜಿಲ್ಲೆಯ ಸಾರಿಗೆ ಕ್ಷೇತ್ರದಲ್ಲಿ ಸಂಪರ್ಕ ಕ್ರಾಂತಿ ನಿರ್ಮಿಸಿದವರಾಗಿದ್ದಾರೆ.

ಅಸೋಸಿಯೇಷನ್ ಉಪಾಧ್ಯಕ್ಷರಾಗಿ ಕೆ.ಡಬ್ಲ್ಯೂ. ಪೂಣಚ್ಚ, ಖಜಾಂಚಿಯಾಗಿ ವಾಲ್ನೂರಿನ ಎಂ. ಜಯಂತ್, ಕಾರ್ಯದರ್ಶಿಯಾಗಿ ಸುಬ್ರಮಣ್ಯ ಕಿಣಿ, ನಿರ್ದೇಶಕರಾಗಿ ಗೌತಂ ಭೋಜಣ್ಣ, ದಿಲನ್ ಚೆಂಗಪ್ಪ, ಕೆ.ಪಿ.ಜನಾರ್ದನ, ಡಿ.ಟಿ.ರಾಜೇಶ್, ಕೌಶಿಕ್ ಕಾವೇರಪ್ಪ, ನಯನ ಕುಮಾರ್, ದರ್ಶನ್, ಕೆ.ಎಸ್.ಧನಂಜಯ, ಕಾದಿರ ಉಮೇಶ್, ಗಣೇಶ್ ಹಾಗೂ ನೀಲಣ್ಣ ಆಯ್ಕೆಯಾಗಿದ್ದಾರೆ.

ಮೇ 8: 'ಮಂಗಮಾಯ' ತೆರೆಗೆ

ಮಂಗಳೂರು: ಪುತ್ತೂರು ಬ್ರದರ್ಸ್ ಎಂಟರ್ಟೇನ್‌ಮೆಂಟ್ ಅವರ ಚೊಚ್ಚಲ ನಿರ್ಮಾಣದ ಕನ್ನಡ ಸಿನೆಮಾ 'ಮಂಗಮಾಯ' ಮೇ 8ರಂದು ರಾಜ್ಯಾದ್ಯಂತ ತೆರೆ ಕಾಣಲು ಸಜ್ಜಾಗಿದೆ. ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಚಿತ್ರದ ನಿರ್ದೇಶಕ ಪ್ರಸಾದ್ ಪುತ್ತೂರು, ಸಣ್ಣ ವೆಚ್ಚದ, ನೈಜ ಘಟನೆ ಆಧಾರಿತ ಸಿನೆಮಾ ಇದಾಗಿದ್ದುಘಿ ಹಾಸ್ಯದೊಂದಿಗೆ ಉತ್ತಮ ಕಥಾಹಂದರವನ್ನೂ ಒಳಗೊಂಡಿದೆ ಎಂದರು. ಯಾವುದೇ ಮೇಕಪ್ ಇಲ್ಲದೆ, ಹೀರೋಯಿನ್ ಇಲ್ಲದೆ, ಒಂದೇ ಲೊಕೇಶನ್ ಮತ್ತು ಒಂದೇ ಶೆಡ್ಯೂಲ್‌ನಲ್ಲಿ ನಿರ್ಮಿಸಲ್ಪಟ್ಟ ಚಿತ್ರ ಇದಾಗಿದೆ. ಮೇ 8ರಂದು ಚಿತ್ರ ಬಿಡುಗಡೆಯ ನಂತರ ರಾಜ್ಯದಲ್ಲಿ ಪ್ರತಿ ದಿನ 65 ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಹೊಸ ಕಲಾವಿದರೇ ಇರುವ ಈ ಚಿತ್ರಕ್ಕೆ ಜನತೆ ಆಶೀರ್ವದಿಸುತ್ತಾರೆ ಎಂಬ ನಂಬಿಕೆ ಇದೆ ಎಂದರು. ಚಿತ್ರ ತಂಡದ ಪ್ರಸನ್ನ ಪುತ್ತೂರು, ರಾದೇಶ್ ಶೆಣೈ ಉಡುಪಿ, ರಂಜನ್ ಶೆಟ್ಟಿ ಸುದ್ದಿಗೋಷ್ಠಿಯಲ್ಲಿದ್ದರು.

ಐಸಿಎಸ್ಇ ಪರೀಕ್ಷೆ: ಹೊಶಿತ್ ಎಂ.ಎಸ್. ಟಾಪರ್

ಮಡಿಕೇರಿ: ಪ್ರಸಕ್ತ ಸಾಲಿನ ಇಂಡಿಯನ್ ಸರ್ಟಿಫಿಕೇಟ್ ಆಫ್ ಸೆಕೆಂಡರಿ ಎಜುಕೇಷನ್ ಐಸಿಎಸ್ಇನ 10ನೇ ತರಗತಿಯ ಪರೀಕ್ಷೆಯಲ್ಲಿ ಹೊಶಿತ್ ಎಸ್.ಎಂ. ಅವರು 600ಕ್ಕೆ 570 ಅಂಕದೊಂದಿಗೆ ಟಾಪರ್ ಆಗಿ ತೇರ್ಗಡೆಯಾಗಿದ್ದಾರೆ. ಕೊಡಗಿನವರಾದ ಇವರು ಪ್ರಸ್ತುತ ಮೈಸೂರಿನಲ್ಲಿ ನೆಲೆಸಿದ್ದು, ಮೈಸೂರಿನ ನೋಟ್ರೆಡೇಮ್ ಸ್ಕೂಲ್‌ನ ವಿದ್ಯಾರ್ಥಿಯಾಗಿದ್ದಾರೆ. ಇವರು ಶಿವಕುಮಾರ್ ಹೊಟಗಳ್ಳಿ ಹಾಗೂ ಮೊನಾಲಿಸಾ ಶಿವಕುಮಾರ್ ದಂಪತಿಯ ಪುತ್ರ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ ಹತ್ತು ಸಮಸ್ತರು, ತಾರೆಮಾರು, ಬೆಳ್ತಂಗಡಿ (ತಾ).
2. ಶ್ರೀ ದೇವಿ ಸೇವಾ ಸಮಿತಿ, ವಗ್ಗ-ಕುಲಾಲ ಭಂಜನ್ ಕುಟುಂಬಸ್ಥರ ತರವಾಡು, ಮರಾಯಿದೊಟ್ಟು ವಯಾ ಅಲ್ಲಿಪಾದೆ.
3. ದಿ| ಪುರುಷೋತ್ತಮ ಶೆಟ್ಟಿ ಸ್ಮರಣಾರ್ಥ ಲಕ್ಷ್ಮಣ ಡಿ. ಶೆಟ್ಟಿ ಮತ್ತು ಕುಟುಂಬಿಕರು, ಪೆಜತ್ತಿ ಮಾರುಮನೆ, ನಡುಗೋಡು.
4. ದಿ| ರಾಮಣ್ಣ ಶೆಟ್ಟಿ ಸ್ಮರಣಾರ್ಥ ಮಕ್ಕಳು ಮತ್ತು ಕುಟುಂಬಸ್ಥರು, ಅಗರಿ, ಕಿಲೆಂಜಾರು, ಕುಪ್ಪೆಪದವು- ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
5. ರಾಜು ಶೆಟ್ಟಿ, 'ಸಾಯಿ ನಿವಾಸ', ಅಡ್ಡಿಮಜಲು, ಚಿಕ್ಕಮುಡ್ನೂರು, ಪುತ್ತೂರು (ತಾ).
6. ರಾಘವ ಶೆಟ್ಟಿ ಆರ್ಯಾಡಿ, ಪಾಂಗಾಳ, ಕಾಪು (ತಾ) - ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
7. ಶೋಭ ವಿಶ್ವನಾಥ ಶೆಟ್ಟಿ, ಉಳೆಪ್ಪಾಡಿಗುತ್ತು, ಉಳೆಪ್ಪಾಡಿ, ಮುಂಡ್ಕೂರು.

ಶ್ರೀ ಧರ್ಮಸ್ಥಳ ಮೇಳ
ಸಾಯಿಬರಕಟ್ಟೆನಲ್ಲಿ
ಶ್ರೀಮತಿ ಮತ್ತು ಶ್ರೀ ರಾಘವೇಂದ್ರ ಆಚಾರ್ಯ, ಮಕ್ಕಳು, ಶ್ರೀರಂಗ, ತೌಡಿನಹಕ್ಲು

ಶ್ರೀ ಪೆರ್ಡೂರು ಮೇಳ
ಶೆಡ್ಲುರುನಲ್ಲಿ- ಚದುರಂಗ

ಶ್ರೀ ಹನುಮಗಿರಿ ಮೇಳ
ಪುತ್ತೂರಿನಲ್ಲಿ

ಶ್ರೀ ಪಾವಂಜೆ ಮೇಳ
ಗೋಸಾಡ ಶ್ರೀ ಮಹಿಷಮರ್ದಿನಿ ಕ್ಷೇತ್ರದಲ್ಲಿ
ಛಾಯಾನಂದನ



ಧರ್ಮಸ್ಥಳದಲ್ಲಿ ಭಗವಾನ್ ಚಂದ್ರನಾಥ ಸ್ವಾಮಿ ಬಸದಿಯ ವಾರ್ಷಿಕೋತ್ಸವದ ಅಂಗವಾಗಿ ಗುರುವಾರ ದೇವರಿಗೆ ಸಹಸ್ರನಾಮ ಪುಷ್ಪಾರ್ಚನೆ ನಡೆಯಿತು. ಶ್ರದ್ಧಾಅಮಿತ್ ಮತ್ತು ಊರಿನ ಶ್ರಾವಕರು, ಶ್ರಾವಕಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ತೋರಣಮುಹೂರ್ತ, ವಿಮಾನ ಶುದ್ಧಿ, ನಾಂದಿಮಂಗಲ, ವಾಸ್ತು ಪೂಜಾ ವಿಧಾನ, ನವಗ್ರಹ ಮಹಾಶಾಂತಿ ಮೊದಲಾದ ಧಾರ್ಮಿಕ ವಿಧಿ-ವಿಧಾನಗಳನ್ನು ನಡೆಸಲಾಯಿತು.

ಸುಪ್ರೀಂಕೋರ್ಟ್ ವ್ಯಾಜ್ಯ ಇತ್ಯರ್ಥಕ್ಕೆ 'ಸಮಾಧಾನ್ ಸಮಾರೋಹ್' : ನ್ಯಾಯಾಧೀಶ ಶ್ರೀನಾಥ್

ಗೋಣಿಕೊಪ್ಪಲು: ಸುಪ್ರೀಂಕೋರ್ಟ್‌ನಲ್ಲಿರುವ ವಿವಿಧ ವ್ಯಾಜ್ಯಗಳ ಇತ್ಯರ್ಥಕ್ಕೆ ವಾದಿ-ಪ್ರತಿವಾದಿಗಳಿಗೆ ಹೊಸ ಅವಕಾಶ ಕಲ್ಪಿಸುವ ಸಲುವಾಗಿ 'ಸಮಾಧಾನ್ ಸಮಾರೋಹ್' ಜಾರಿಗೆ ತರಲಾಗುತ್ತಿದೆ. ಮಧ್ಯವರ್ತಿಗಳ ಸಮ್ಮುಖದಲ್ಲಿ ಉಭಯ ಕಡೆಯವರು ಕುಳಿತು ವ್ಯಾಜ್ಯಗಳನ್ನು ಇತ್ಯರ್ಥ ಮಾಡಿಕೊಳ್ಳಲು ಆಗಸ್ಟ್ 21, 22, 23ರಂದು ದೇಶದ ಎಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮೂಲಕ ತಾಲೂಕು ಮಟ್ಟದಲ್ಲಿ ವಿಶೇಷ ಲೋಕ ಅದಾಲತ್ ಏರ್ಪಡಿಸಲಾಗುತ್ತದೆ ಎಂದು ಪೊನ್ನಂಪೇಟೆ ಸಿವಿಲ್ ಮತ್ತು ಜೆ.ಎಂ.ಎಫ್. ಸಿ ನ್ಯಾಯಾಧೀಶ ಶ್ರೀನಾಥ್ ಎ. ಮಾಹಿತಿ ನೀಡಿದರು.

ಪೊನ್ನಂಪೇಟೆ ನ್ಯಾಯಾಧೀಶರ ಕೊಠಡಿಯಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಸರ್ವೋಚ್ಚ ನ್ಯಾಯಾಲಯದಲ್ಲಿ ಹಲವು ವರ್ಷಗಳಿಂದ ಇತ್ಯರ್ಥವಾಗದೇ ಉಳಿದಿರುವ ವಿವಿಧ ಸಿವಿಲ್ ವ್ಯಾಜ್ಯಗಳು, ಚೆಕ್ ಅಮಾನ್ಯ ಪ್ರಕರಣ, ಪತಿ, ಪತ್ನಿಯ ನಡುವಿನ ವಿಚ್ಛೇದನ ಪ್ರಕರಣಗಳು ಇತ್ಯಾದಿ ರಾಜಿ ಮಾಡಬಹುದಾದ ಪ್ರಕರಣವನ್ನು ಕರ್ನಾಟಕ ರಾಜ್ಯ ಹೈಕೋರ್ಟ್ ನಿಯೋಜಿಸಿದ ಮಧ್ಯವರ್ತಿಗಳ ಸಮ್ಮುಖದಲ್ಲಿ ನ್ಯಾಯ ದಾನ ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಜಿಲ್ಲೆ ಹಾಗೂ ತಾಲೂಕು ಕಾನೂನು ಸೇವಾ ಸಮಿತಿಗೆ ಉಭಯ ಕಡೆಯವರೂ ವ್ಯಾಜ್ಯದ ಕುರಿತು ಮಾಹಿತಿ ನೀಡಿದಲ್ಲಿ ವಿಶೇಷ ಲೋಕ ಅದಾಲತ್‌ನಲ್ಲಿ ವ್ಯಾಜ್ಯ ಇತ್ಯರ್ಥಪಡಿಸಿ ಅರ್ಜಿದಾರರಿಗೆ ನ್ಯಾಯ ದೊರಕಿಸಲು ಯತ್ನಿಸಲಾಗುವುದು ಎಂದು ನುಡಿದರು.

ಸಂಧಾನಕಾರರಿಗೆ ತರಬೇತಿ

ಉಭಯ ಕಡೆಯವರಿಗೆ ನ್ಯಾಯದಾನ ನೀಡಲು ಹೈಕೋರ್ಟ್ ಸಂಧಾನಕಾರರ ಪಾತ್ರ ನಿರ್ವಹಿಸುವವರಿಗೆ ತರಬೇತಿಯನ್ನು ಈಗಾಗಲೇ ನೀಡಲಾಗಿದ್ದು, ತಾಲೂಕು ಕಾನೂನು ಸೇವೆಗಳ ಸಮಿತಿ ಮೂಲಕ ತರಬೇತಿ ಹೊಂದಿದ ಮಧ್ಯವರ್ತಿಗಳನ್ನು ವಿಶೇಷ ಲೋಕ ಅದಾಲತ್‌ನಲ್ಲಿ ನಿಯೋಜಿಸುತ್ತದೆ. ಸಮಾಧಾನ್ ಸಮಾರೋಹ್ ಸುಪ್ರೀಂಕೋರ್ಟ್‌ನಲ್ಲಿ ಇರುವ ವ್ಯಾಜ್ಯ ತೀರ್ಮಾನಕ್ಕೆ ಮಾತ್ರ ಅನ್ವಯಿಸುತ್ತದೆ. ಆಗಸ್ಟ್ ತಿಂಗಳಲ್ಲಿ ಜರುಗುವ ವಿಶೇಷ ಲೋಕ ಅದಾಲತ್‌ನ ಯಶಸ್ಸಿಗೆ ಎಲ್ಲರ ಸಹಕಾರ ಅಗತ್ಯ ಎಂದರು.

ಪುತ್ತೂರು ವಿವೇಕಾನಂದ ಕಾಲೇಜಿನಿಂದ ಶಾಲಾ ಪುನರುಜ್ಜೀವನ ಕಾರ್ಯಕ್ರಮ

ಪ್ರೇರಣಾದಾಯಕ ಪರಿಸರ ಅಗತ್ಯ

ಪುತ್ತೂರು: ಮಕ್ಕಳ ಕಲಿಕೆಗೆ ಉತ್ತಮವಾದ ಮೂಲ ಸೌಕರ್ಯಗಳು ಮತ್ತು ಕಲಿಕಾ ಪರಿಸರಗಳು ಅಗತ್ಯ. ಸ್ವಚ್ಛ, ಆರೋಗ್ಯಕರ ಮತ್ತು ಪ್ರೇರಣಾದಾಯಕ ಶಾಲಾ ಪರಿಸರ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದು ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಆಡಳಿತ ಮಂಡಳಿಯ ಅಧ್ಯಕ್ಷ ವಿಶ್ವಾಸ್ ಶೆಣೈ ಹೇಳಿದರು.

ನಗರದ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಎನ್ಎಸ್ಎಸ್ ಮತ್ತು ಯೂತ್ ರೆಡ್ ಕ್ರಾಸ್ ವಿಭಾಗದ ವತಿಯಿಂದ ಕಾಲೇಜಿನ ಗ್ರಾಮ ವಿಕಾಸ ಯೋಜನೆಯನ್ವಯ ನಡೆದ ಕುಳ ಗ್ರಾಮದ ಓಜಾಲ ಸರ್ಕಾರಿ ಉನ್ನತ ಪ್ರಾಥಮಿಕ ಶಾಲೆಯ ಪುನರುಜ್ಜೀವನಾ ಕಾರ್ಯಕ್ಕೆ ಅವರು ಚಾಲನೆ ನೀಡಿ ಮಾತಾಡಿದರು. ಸಮಾಜ ಸೇವೆಯನ್ನು ಧ್ಯೇಯವನ್ನಾಗಿಸಿಕೊಂಡ ಎನ್ನೆಸ್ಸೆಸ್ ಸ್ವಯಂಸೇವಕರ ಸೇವೆ ಅನುಕರಣೀಯ. ಕಲಿಕೆಯ ಜತೆಯಲ್ಲಿ ಸೇವಾ ಅನುಭವವನ್ನು ಪಡೆಯುವ ಇಂತಹ ಕಾರ್ಯಗಳು ಶ್ಲಾಘನೀಯ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ. ಮಹೇಶ್‌ಪ್ರಸನ್ನ ಕೆ. ಮಾತನಾಡಿ, ವಿದ್ಯಾರ್ಥಿಗಳಿಗೆ ಎಳವೆಯಲ್ಲಿಯೇ ಸೂಕ್ತ ಮಾರ್ಗದರ್ಶನ ದೊರೆತರೆ ಅವರು ಸಾಮಾಜಿಕ ಜವಾಬ್ದಾರಿಯುಳ್ಳ ನಾಗರಿಕರಾಗುವಲ್ಲಿ ಸಂದೇಹವೇ ಇಲ್ಲ. ಇಂತಹ ಕಾರ್ಯಗಳು ತಂಡದ ಭಾವನೆ, ನಾಯಕತ್ವ ಮತ್ತು ಜವಾಬ್ದಾರಿಗಳನ್ನು ಬೆಳೆಸುತ್ತವೆ. ಕಾಲೇಜ್ ಇಂತಹ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಸದಾ ಸಿದ್ಧವಿದೆ ಎಂದರು.

ಓಜಾಲ ಶಾಲೆಯ ಮುಖ್ಯೋಪಾಧ್ಯಾಯ ಸಂಜೀವ ಮಾತನಾಡಿ, ವಿವೇಕಾನಂದ ಸಂಸ್ಥೆಯು ಕುಳ ಗ್ರಾಮದಲ್ಲಿ ಅನೇಕ ಚಟುವಟಿಕೆಗಳನ್ನು ನಡೆಸುತ್ತಿದ್ದು, ಶಾಲಾ ಪುನರುಜ್ಜೀವನ ಎನ್ನುವ ಪರಿಕಲ್ಪನೆಯಲ್ಲಿ ನಮ್ಮ ಶಾಲೆಯಲ್ಲಿ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಅವರಿಗೆ ನಾವು ಆಭಾರಿಗಳಾದ್ದೇವೆ ಎಂದರು.

ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಗಣೇಶ್ ಮತ್ತು ಪೂರ್ವ ಅಧ್ಯಕ್ಷ ರಮೇಶ್ಚಂದ್ರ ಭಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾಲೇಜಿನ ಗ್ರಾಮ ವಿಕಾಸ ಯೋಜನೆಯ ಸಂಯೋಜಕ ಪ್ರೊ. ಗುರುಪ್ರಸನ್ನ ಸ್ವಾಗತಿಸಿ, ಶ್ರದ್ಧಾ ವಂದಿಸಿದರು. ಸನ್ಮಯ ಕಾರ್ಯಕ್ರಮ ನಿರ್ವಹಿಸಿದರು.



ಶಾಲೆಯ ಪುನರುಜ್ಜೀವನ

ಎನ್ನೆಸ್ಸೆಸ್ ವಿಭಾಗದ ಸಂಯೋಜಕ ಡಾ. ರಾಜೇಶ್ ಅವರ ಮಾರ್ಗದರ್ಶನದಲ್ಲಿ ಒಟ್ಟು 61 ಸ್ವಯಂಸೇವಕರು ಶಾಲೆಯ ಪುನರುಜ್ಜೀವನಾ ಕಾರ್ಯದಲ್ಲಿ ಪಾಲ್ಗೊಂಡರು. ಶಾಲೆಯ ಪರಿಸರ ಸ್ವಚ್ಛತೆ, ಆಟದ ಸಾಮಗ್ರಿಗಳಿಗೆ ಮತ್ತು ಹೊಸ ಗೋಡೆಗಳಿಗೆ ಬಣ್ಣ ಬಳಿಯುವುದು, ಶೌಚಾಲಯಗಳ ಸ್ವಚ್ಛತೆ ಮುಂತಾದ ಕಾರ್ಯಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದರು.

ವಿವಿಧ ವಿವಿಗಳ ಪ್ರಮುಖರ ಉಪಸ್ಥಿತಿ

ವಿವೇಕಾನಂದ ಕಾಲೇಜಿನಲ್ಲಿಂದು ರಾಷ್ಟ್ರೀಯ ವಿಚಾರ ಸಂಕಿರಣ

ಪುತ್ತೂರು: ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ(ಸ್ವಾಯತ್ತ) ಕಾಲೇಜಿನಲ್ಲಿ ಇಂದು (ಮೇ 5) ಕಾಲೇಜಿನ ರಾಜ್ಯಶಾಸ್ತ್ರ ವಿಭಾಗ, ವಿವೇಕಾನಂದ ಸಂಶೋಧನಾ ಕೇಂದ್ರ, ಐಕ್ಯೂಎಸಿ ಹಾಗೂ ಮಾನವಿಕ ವಿಭಾಗಗಳ ಸಹಯೋಗದಲ್ಲಿ 'ರಿ ಇಮಾಜಿನಿಂಗ್ ಇಂಡಿಯಾ: ಫ್ರಂ ಪೊಲಿಟಿಕಲ್ ಡಿಸ್ಕೋರ್ಸ್ ಟು ಕಾಂಟೆಂಪರರಿ ರಿಯಾಲಿಟಿಸ್' ಎನ್ನುವ ವಿಚಾರದ ಮೇಲೆ ರಾಷ್ಟ್ರೀಯ ವಿಚಾರ ಸಂಕಿರಣ ಕಾಲೇಜಿನ ಸುವರ್ಣ ಮಹೋತ್ಸವ ಸಭಾಭವನದಲ್ಲಿ ನಡೆಯಲಿದೆ.

ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಕೇರಳದ ಕೇಂದ್ರಿಯ ವಿಶ್ವವಿದ್ಯಾನಿಲಯದ ವಿಶ್ರಾಂತ ಉಪ ಕುಲಪತಿ ಪ್ರೊ. ಗೋಪ ಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸಿ ದಿಕ್ಸೂಚಿ ಭಾಷಣವನ್ನು ಮಾಡಲಿದ್ದಾರೆ.

ಸಭಾ ಕಾರ್ಯಕ್ರಮದ ನಂತರ ವಿವಿಧ ವಿಚಾರಗಳ ಬಗೆಗೆ ವಿಚಾರ ಸಂಕಿರಣ ನಡೆಯಲಿದ್ದು, ಇದರಲ್ಲಿ ನವದೆಹಲಿಯ ಜವಹಾರ್ ಲಾಲ್ ನೆಹರೂ ಯುನಿವರ್ಸಿಟಿಯ ಪ್ರೊಫೆಸರ್ ಡಾ. ಅಂಶು ಜೋಷಿ, ಪಾಂಡಿಚೇರಿ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ. ನಂದಕಿಶೋರ್ ಎಂ.ಎಸ್., ನವದೆಹಲಿಯ ಸೆಂಟರ್ ಫಾರ್ ಮೆರಿಟೈಂ ಎಕಾನಮಿ ಹಾಗೂ ಆರ್‌ಐಎಸ್, ಎಂಇಎ ಇದರ ಕನ್ಸಲ್ಟೆಂಟ್ ಡಾ. ಜಸ್ವಂತ್ ಸಿಂಗ್ ಕೈನ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ. ಈ ಮೂರು ವಿಚಾರ ಸಂಕಿರಣಗಳ ಸಮನ್ವಯಕಾರರಾಗಿ ವಿಧಾನಸಭಾ ಮಾಜಿ ಸದಸ್ಯ ಕ್ಯಾ. ಗಣೇಶ್ ಕಾರ್ಣಿಕ್ ಭಾಗವಹಿಸಲಿದ್ದಾರೆ.

ಈ ಸಂದರ್ಭ ನಡೆಯಲಿರುವ ಸಂಶೋಧನಾ ಪ್ರಬಂಧ ಮಂಡನೆಯಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳು ಹಾಗೂ ಉಪನ್ಯಾಸಕರು ಭಾಗವಹಿಸಲಿದ್ದಾರೆ.

ಸಮಾರೋಪ ಸಮಾರಂಭದಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಶ್ರೀಪತಿ ಕಲ್ಲೂರಾಯ ಹಾಗೂ ಸಂಚಾಲಕ ಮುರಳಿಕೃಷ್ಣ ಕೆ.ಎನ್. ಭಾಗವಹಿಸಲಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 17ರಿಂದ ಜೂ.16ರವರೆಗೆ ಅಖಂಡ ಭಜನಾ ಮಹೋತ್ಸವ

ಕುಂದಾಪುರ : ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಪುರುಷೋತ್ತಮ ಮಾಸದ ಅಂಗವಾಗಿ ಮಾಸಾವಧಿ ಅಖಂಡ ಭಜನಾ ಮಹೋತ್ಸವ ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರ ಆಶೀರ್ವಾದಾನುಸಾರ ಮೇ 17ರಿಂದ ಜೂ.16ರವರೆಗೆ ನಡೆಯಲಿದೆ.

ಮೇ 17ರಂದು ಬೆಳಿಗ್ಗೆ ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರು ಮಾಸಾವಧಿ ಅಖಂಡ ಭಜನಾ ಮಹೋತ್ಸವ ಚಾಲನೆ ನೀಡಲಿದ್ದು, ಜೂ.16ರಂದು ದೀಪ ವಿಸರ್ಜನೆಯೊಂದಿಗೆ ಸಂಪನ್ನಗೊಳ್ಳಲಿದೆ.

ಮೇ 15ರಂದು ಶ್ರೀದೇವರಿಗೆ ಗಂಧ ಲೇಪನ ಸೇವೆ, 16ರಂದು ಶ್ರೀ ವೆಂಕಟೇಶ ಮೂಲ ಮಂತ್ರ ಹವನ, 17ರಂದು ಬೆಳಿಗ್ಗೆ 9.30ರಿಂದ ಪುರುಷೋತ್ತಮ ಅಷ್ಟೋತ್ತರದಿಂದ ಶ್ರೀದೇವರಿಗೆ 108 ಪ್ರದಕ್ಷಿಣಾ ಸೇವೆ, ಮಧ್ಯಾಹ್ನ 12 ಗಂಟೆಗೆ ಅಪೂಪದಾನ ದೀಪದಾನ ಸೇವೆ, ದೇವರಿಗೆ ಮಹಾಪೂಜೆ, ಮಹಾಸಮಾರಾಧನೆ, ಸಂಜೆ 7 ಗಂಟೆಗೆ ಉಭಯ ದೇವರ ಸನ್ನಿಧಿಯಲ್ಲಿ ದೀಪಾರಾಧನೆ ಸೇವೆ ಮತ್ತಿತರ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದೆ.

ಜೂ.15ರಂದು ಸಂಜೆ 5 ಗಂಟೆಗೆ ನಗರ ಭಜನೆ, ರಾತ್ರಿ ವಿಶೇಷ ಪೂಜೆ, 16ರಂದು ಬೆಳಿಗ್ಗೆ ದೀಪ ವಿಸರ್ಜನೆ, ಮಧ್ಯಾಹ್ನ ಮಹಾಪೂಜೆ, ಮಹಾಸಮಾರಾಧನೆ ಮೊದಲಾದ ಕಾರ್ಯಕ್ರಮಗಳು ನಡೆಯಲಿದೆ. ಈ ಮಹೋತ್ಸವದಲ್ಲಿ ರಾಜ್ಯ ಮತ್ತು ಹೊರರಾಜ್ಯಗಳಿಂದ ವಿವಿಧ ಭಜನಾ ಮಂಡಳಿಗಳು ಹಾಗೂ ಕಲಾವಿದರು ಆಗಮಿಸಿ ಭಜನಾ ಸೇವೆ ಸಮರ್ಪಿಸಲಿದ್ದಾರೆ ಎಂದು ದೇವಸ್ಥಾನದ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಸ್ವಾಮೀಜಿ ಮೊಕ್ಕಾಂ

ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರು ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಮೇ 14ರಿಂದ 18ರವರೆಗೆ ಮೊಕ್ಕಾಂ ಮಾಡಲಿದ್ದಾರೆ.

14ರಂದು ಸಂಜೆ ಪರ್ತಗಾಳಿ ಮಠದಿಂದ ದೇವಸ್ಥಾನಕ್ಕೆ ಚಿತ್ತೈಸಲಿರುವ ಶ್ರೀಗಳನ್ನು ರಥಬೀದಿಯಿಂದ ಪೂರ್ಣಕುಂಭ ಸ್ವಾಗತದೊಂದಿಗೆ ದೇವಸ್ಥಾನಕ್ಕೆ ಬರಮಾಡಿಕೊಳ್ಳಲಾಗುವುದು. ಪುರುಷೋತ್ತಮ ಮಾಸದ ಪ್ರಯುಕ್ತ ಮೇ 17ರಿಂದ ಜೂ.16ರವರೆಗೆ ದೇವಸ್ಥಾನದಲ್ಲಿ ನಡೆಯಲಿರುವ ಮಾಸಾವಧಿ ಅಖಂಡ ಭಜನಾ ಮಹೋತ್ಸವವನ್ನು ಶ್ರೀಗಳು ದೀಪ ಪ್ರಜ್ವಲನಪೂರ್ವಕ ಚಾಲನೆ ನೀಡಲಿದ್ದಾರೆ. ಶ್ರೀಗಳ ಮೊಕ್ಕಾಂ ಸಮಯದಲ್ಲಿ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದೆ. 18ರಂದು ಬೆಳಿಗ್ಗೆ ಶ್ರೀಗಳು ಬೆಂಗಳೂರು ಮೊಕ್ಕಾಂಗೆ ಪ್ರಯಾಣಿಸಲಿದ್ದಾರೆ.

ಇಂದು 'ಗ್ಲೋಬಲ್ ಡಿಗ್ರಿ' ಮಂಗಳೂರು ಶಾಖೆ ಶುಭಾರಂಭ

ಮಂಗಳೂರು: ವಿದೇಶದಲ್ಲಿ ಅಧ್ಯಯನ ಮಾಡುವ ಕನಸು ಹೊಂದಿರುವ ವಿದ್ಯಾರ್ಥಿಗಳಿಗೆ ನೆರವಾಗುತ್ತಿರುವ ಗ್ಲೋಬಲ್ ಡಿಗ್ರಿ ಸಂಸ್ಥೆಯ ಮಂಗಳೂರು ಶಾಖೆ ಮೇ 5ರಂದು ಸಂಜೆ 4 ಗಂಟೆಗೆ ನಗರದ ಎಂ.ಜಿ.ರಸ್ತೆಯಲ್ಲಿರುವ ಮಾನಸ ಟವರ್ಸ್‌ನ ಮೊದಲನೇ ಮಹಡಿಯಲ್ಲಿ ಉದ್ಘಾಟನೆಗೊಳ್ಳಲಿದೆ ಎಂದು ಸಂಸ್ಥೆಯ ಸಹ ಸಂಸ್ಥಾಪಕ ಶಿಜೊಮೋನ್ ಯೇಸುದಾಸ್ ತಿಳಿಸಿದ್ದಾರೆ. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಲೋಬಲ್ ಡಿಗ್ರಿ ಸಂಸ್ಥೆಯು ದೇಶದ 18 ಕಡೆಗಳಲ್ಲಿ ಶಾಖೆ ಹೊಂದಿದ್ದು, ವಿದೇಶದಲ್ಲಿ ತಮ್ಮ ಶಿಕ್ಷಣ ಮುಂದುವರಿಸಲು ಬಯಸುವವರಿಗೆ ಅಗತ್ಯ ನೆರವು ನೀಡಿದೆ. ಉಡುಪಿ ಜಿಲ್ಲೆಯ ಮಣಿಪಾಲದಲ್ಲಿಯೂ ಶಾಖೆ ಆರಂಭಿಸಲಾಗಿದೆ ಎಂದರು. ಯುಎಸ್ಎ, ಯುಕೆ., ಆಸ್ಟ್ರೇಲಿಯ, ಕೆನಡ, ಜರ್ಮನಿ, ಫ್ರಾನ್ಸ್, ಐರ್ಲೆಂಡ್, ನ್ಯೂಜಿಲೆಂಡ್ ದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶ ಪಡೆದು ಅಧ್ಯಯನ ನಡೆಸಲು ಈ ಸಂಸ್ಥೆ ನೆರವಾಗುತ್ತದೆ. ವಿವಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ಆಯ್ಕೆ ಮಾಡಲು ನಮ್ಮ ವೃತ್ತಿಪರ ವಿದೇಶ ಅಧ್ಯಯನ ಸಲಹೆಗಾರರು ಪರಿಪೂರ್ಣ ಮಾರ್ಗದರ್ಶನ ನೀಡುತ್ತಾರೆ. ಬಳಿಕ ಪ್ರವೇಶ, ವಿದ್ಯಾರ್ಥಿವೇತನಗಳು ಮತ್ತು ವೀಸಾ ಅರ್ಜಿಗಳಿಗೂ ಬೆಂಬಲ ನೀಡುತ್ತಾರೆ. ವಿಶೇಷವಾಗಿ, ಎಐ ಆಧಾರಿತ ಮಾಕ್ ಸಂದರ್ಶನ ತರಬೇತಿಯ ಮೂಲಕ ವಿದ್ಯಾರ್ಥಿಗಳ ಯಶಸ್ಸಿನ ಪ್ರಮಾಣವನ್ನು ಹೆಚ್ಚಿಸಲು ಸಂಸ್ಥೆ ಮುಂದಾಗಿದೆ. ವಿದ್ಯಾರ್ಥಿ ಮತ್ತು ಫ್ಯಾಕಲ್ಟಿ ಎಕ್ಸ್‌ಚೇಂಜ್ ಪ್ರೋಗ್ರಾಂಗಳು ಹಾಗೂ ಅಂತಾರಾಷ್ಟ್ರೀಯ ಇಂಟರ್ನ್‌ಶಿಪ್‌ಗಳ ಮೂಲಕ ವಿದ್ಯಾರ್ಥಿಗಳಿಗೆ ಜಾಗತಿಕ ವೃತ್ತಿಜೀವನಕ್ಕೆ ಬೇಕಾದ ಅನುಭವ ನೀಡಲಿದೆ ಎಂದು ಶಿಜೊಮೋನ್ ಯೇಸುದಾಸ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸಹ-ಸಂಸ್ಥಾಪಕಿ ದೀಪಾ ಪ್ರಭು ಮತ್ತು ವ್ಯವಹಾರ ಅಭಿವೃದ್ಧಿ ಅಧಿಕಾರಿ ದಿಯಾ ಅಜಿತ್ ಉಪಸ್ಥಿತರಿದ್ದರು.

ಮುಲ್ಲಕಾಡು ಶ್ರೀರಾಮ ಭಜನಾ ಮಂದಿರ ಜೀರ್ಣೋದ್ಧಾರಕ್ಕೆ ಶಿಲಾನ್ಯಾಸ



ಮಂಗಳೂರು: ಮುಲ್ಲಕಾಡು 4ನೇ ಮೈಲಿನ ಶ್ರೀರಾಮ ಭಜನಾ ಮಂದಿರದ ಜೀರ್ಣೋದ್ಧಾರ ಹಿನ್ನೆಲೆಯಲ್ಲಿ ಶಿಲಾನ್ಯಾಸ ಕಾರ್ಯಕ್ರಮವು ವೇದಮೂರ್ತಿ ದೇರೆಬೈಲ್ ವಿಟ್ಠಲದಾಸ ತಂತ್ರಿ ಅವರ ನೇತೃತ್ವದಲ್ಲಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಭಾನುವಾರ ನೆರವೇರಿತು.

ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ವೈ. ಭರತ್ ಶೆಟ್ಟಿ ಭಾಗವಹಿಸಿ ತಮ್ಮ ಶಾಸಕ ನಿಧಿಯಿಂದ 5 ಲಕ್ಷ ರೂ. ಹಾಗೂ ಹೆಚ್ಚುವರಿ 5 ಲಕ್ಷ ರೂ. ಅನುದಾನದ ಭರವಸೆ ನೀಡಿದರು. ದಾನಿಗಳು ಹಾಗೂ ಗ್ರಾಮದ ಜನ ಸಹಕಾರದಿಂದ ಮಂದಿರ ಶೀಘ್ರ ನಿರ್ಮಾಣಗೊಳ್ಳಲಿ ಎಂದು ಹಾರೈಸಿದರು.

ಪ್ರಮುಖರಾದ ಗಂಗಯ್ಯ ಗುರಿಕಾರ, ಆಶಿಕ್ ಬಲ್ಲಾಳ್ ಕೂಳೂರುಬೀಡು, ಎಂ. ಶಶಿಧರ್ ಹೆಗ್ಡೆ. ಲೋಕೇಶ್ ಭಂಡಾರಿ, ಸಾಕ್ಷತ್ ಶೆಟ್ಟಿ, ಶಿವಪ್ಪ ನಂತೂರು, ಮಹೇಶ್ ಮಂಗಳೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯರಾದ ದೀಪಕ್ ಪೂಜಾರಿ, ಗಾಯತ್ರಿ ರಾವ್, ಸುಮಂಗಲಾ ರಾವ್, ಮಂದಿರದ ಗೌರವಾಧ್ಯಕ್ಷ ಕೆ. ಪೂವಪ್ಪ ಬಂಗೇರ, ಅಧ್ಯಕ್ಷ ಶಂಕರ ಮೇಸ್ತ್ರಿ, ಕಾರ್ಯದರ್ಶಿ ಜಗನ್ನಾಥ ಕರ್ಕೇರ, ಕೋಶಾಧಿಕಾರಿ ವಿಶು ಕುಮಾರ್, ಪ್ರಧಾನ ಅರ್ಚಕ ದೇವದಾಸ್ ಕೋಟ್ಯಾನ್, ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಕೃಷ್ಣ ಕುಲಾಲ್, ಅಧ್ಯಕ್ಷ ಪ್ರತೀಕ್ ಯು. ಪೂಜಾರಿ, ಕಾರ್ಯದರ್ಶಿ ಚಂದ್ರಶೇಖರ್ ಕುಲಾಲ್, ಕೋಶಾಧಿಕಾರಿ ಮಂಜುನಾಥ ಪ್ರಭು ಸೇರಿದಂತೆ ಸಮಿತಿ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ದೇವಿಕಾ ಸುಳ್ಯ ನಿರೂಪಿಸಿದರು.

ಮಂದಿರದ ಸಂಪೂರ್ಣ ಪುನರ್ ಕಾರ್ಯಕ್ಕೆ ಚಾಲನೆ ದೊರಕಿದ್ದು ಸುಮಾರು 68 ಲಕ್ಷ ರೂ. ವೆಚ್ಚದಲ್ಲಿ ಮಂದಿರ ನಿರ್ಮಾಣಗೊಳ್ಳಲಿದೆ.

4 ಅಡಿ ಎತ್ತರದ ಬೇಟೆಯ ವೀರಗಲ್ಲು ಪತ್ತೆ

ಉಡುಪಿ: ಕುಂದಾಪುರ ತಾಲೂಕಿನ ವಕ್ವಾಡಿ ದ್ಯಾಗಳಮನೆಯ ಆವರಣದ ಹೊರಭಾಗದಲ್ಲಿ ಸುಮಾರು 4 ಅಡಿ ಎತ್ತರದ ಬೇಟೆಯ ವೀರಗಲ್ಲು ಪತ್ತೆಯಾಗಿದೆ. ಮೂರು ಅಂಕಣಗಳನ್ನು ಒಳಗೊಂಡ ಈ ವೀರಗಲ್ಲಿನಲ್ಲಿ ಜಿಂಕೆ ಬೇಟೆಯ ಅಪರೂಪದ ಚಿತ್ರಣವಿದೆ ಎಂದು ಪುರಾತತ್ವ ಸಂಶೋಧಕ, ವಿದ್ವಾಂಸ ಹಾಗೂ ಉಡುಪಿಯ ಆದಿಮ ಕಲಾ ಟ್ರಸ್ಟ್‌ನ ಸ್ಥಾಪಕ ಸಂಚಾಲಕ ಪ್ರೊ.ಟಿ. ಮುರುಗೇಶಿ ತಿಳಿಸಿದ್ದಾರೆ.

ವಕ್ವಾಡಿಯ ಕವಿತಾ ಕುಲಾಲ್ ನೀಡಿದ ಮಾಹಿತಿಯಂತೆ ಆದಿಮ ಕಲಾ ಟ್ರಸ್ಟ್‌ವನಿಂದ ಶುಕ್ರವಾರ ನಡೆಸಲಾದ ಪುರಾತತ್ವ ಅನ್ವೇಷಣೆಯ ಸಂದರ್ಭದಲ್ಲಿ ಈ ವೀರಗಲ್ಲು ಪತ್ತೆಯಾಗಿದೆ ಎಂದು ಪ್ರೊ.ಮುರುಗೇಶಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇದು ಆಯತಾಕಾರದ ಶಿಲಾಫಲಕವಾಗಿದ್ದು, ಸುಮಾರು 45 ಇಂಚು ಉದ್ದ 22.5 ಇಂಚು ಅಗಲವಾಗಿದೆ. ಮೇಲಿನ ಪಟ್ಟಿಕೆ 12.5 ಇಂಚು ಎತ್ತರ, ಮಧ್ಯದ ಪಟ್ಟಿಕೆ 17.5 ಇಂಚು ಎತ್ತರ ಹಾಗೂ ಕೆಳಗಿನ ಪಟ್ಟಿಕೆ 15 ಇಂಚು ಎತ್ತರವಾಗಿದೆ.



ವೀರಗಲ್ಲಿನ ಚಾರಿತ್ರಿಕ ಮಹತ್ವ

ಬೇಟೆ ಪ್ರಾಚೀನ ಕಾಲದ ರಾಜಮನೆತನಗಳ ಹವ್ಯಾಸ ಮತ್ತು ರಾಜನೀತಿಯ ಭಾಗವಾಗಿತ್ತು. ಭಾರತೀಯ ಮಹಾಕಾವ್ಯಗಳು, ಸಾಹಿತ್ಯ ಮತ್ತು ತುಳುನಾಡಿನ ಪಾಡ್ದನಗಳೆಂಬ ಜಾನಪದ ಮಹಾ ಕಾವ್ಯಗಳಲ್ಲಿ ಈ ಬಗ್ಗೆ ಸಾಕಷ್ಟು ಮಾಹಿತಿಗಳು ಸಿಗುತ್ತವೆ. ತುಳುನಾಡಿನ ಜನಪದ ಮಹಾಕಾವ್ಯಗಳಾದ ಸಿರಿ ಪಾಡ್ದನ ಮತ್ತು ಕೋಟಿ-ಚೆನ್ನಯರ ಪಾಡ್ದನಗಳಲ್ಲಿ ಬೇಟೆಯ ಚಿತ್ರಣಗಳಿವೆ. ಆದರೆ, ಐತಿಹಾಸಿಕ ದಾಖಲೆಗಳಾದ ಶಾಸನಗಳಲ್ಲಿ ಬೇಟೆಯ ಬಗ್ಗೆ ಅತ್ಯಂತ ವಿರಳವಾದ ಮಾಹಿತಿಗಳಿವೆ. ಆದ್ದರಿಂದ ಈ ಶಾಸನಕ್ಕೆ ಬಹಳಷ್ಟು ಚಾರಿತ್ರಿಕ ಮಹತ್ವವಿದೆ.

ಕಾಲಮಾನ

ಈ ವೀರಗಲ್ಲಿನಲ್ಲಿ ಯಾವುದೇ ಬರವಣಿಗೆ ಇಲ್ಲ. ಕೇವಲ ಘಟನೆಯೊಂದರ ನಿರೂಪಾತ್ಮಕ ಶಿಲ್ಪಗಳಿವೆ. ಆದ್ದರಿಂದ ನಿಖರ ಕಾಲಮಾನವನ್ನು ನಿರ್ಣಯಿಸುವುದು ಅತ್ಯಂತ ಕಷ್ಟಕರ ಕೆಲಸ. ವೀರಗಲ್ಲಿನ ಶಿಲ್ಪಗಳ ಶೈಲಿಯ ಆಧಾರದ ಮೇಲೆ ಕಾಲವನ್ನು ನಿರ್ಧರಿಸಬೇಕಾಗುತ್ತದೆ. ವೀರಗಲ್ಲಿನ ಮೇಲಿನ ಪಟ್ಟಿಕೆಯಲ್ಲಿ ಚಿತ್ರತವಾದ ಶಿವಲಿಂಗ ಪ್ರಾತಿನಿಧಿಕವಾಗಿ 8-10ನೇ ಶತಮಾನದ ತುಳುನಾಡಿನ ಲಿಂಗಗಳನ್ನು ಹೋಲುತ್ತದೆ. ಆದ್ದರಿಂದ ಶಿಲ್ಪಶೈಲಿಯ ಆಧಾರದ ಮೇಲೆ ಸುಮಾರು 9-10ನೇ ಶತಮಾನದ, ಆಳುಪರ ಕಾಲದ ವೀರಗಲ್ಲು ಎಂದು ನಿರ್ಧರಿಸಬಹುದು ಎಂದು ಪ್ರೊ.ಮುರುಗೇಶಿ ಹೇಳಿದ್ದಾರೆ.

ಈ ಸಂಶೋಧನೆಗೆ ಕವಿತಾ ಕುಲಾಲ್ ವಕ್ವಾಡಿ, ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ವಿದ್ಯಾರ್ಥಿನಿ ಉನ್ನತಿ, ವಕ್ವಾಡಿ ದ್ಯಾಗಳಮನೆ ಬಾಬುಶೆಟ್ಟಿ, ಹೇಮಾ ಶೆಟ್ಟಿ, ನಾಗರಾಜ ಆಚಾರ್ಯ ಹಾಗೂ ಆದಿಮ ಕಲಾ ಟ್ರಸ್ಟ್‌ನ ಪ್ರದೀಪ್ ಕುಮಾರ್ ಬಸ್ರೂರು, ಗಣೇಶ್‌ರಾಜ್ ಸರಳೇಬೆಟ್ಟು ಮತ್ತು ರಾಘವೇಂದ್ರ ಕುಲಾಲ್‌ರಿಗೆ ನೆರವಾಗಿದ್ದಾರೆ ಎಂದವರು ಹೇಳಿಕೆಯಲ್ಲಿ ವಿವರಿಸಿದ್ದಾರೆ.

ಪಂಜಿಮೊಗರಿನಲ್ಲಿ 'ಮೊಗೇರ ಸೌಧ' ಉದ್ಘಾಟನೆ

ಮಂಗಳೂರು: ಮೊಗೇರ ಸಂಘ ಮಂಗಳೂರು ತಾಲೂಕು ಇದರ ನೇತೃತ್ವದಲ್ಲಿ ಕೂಳೂರು ಪಂಜಿಮೊಗರುವಿನಲ್ಲಿ ನೂತನವಾಗಿ ನಿರ್ಮಾಣಗೊಂಡ 'ಮೊಗೇರ ಸೌಧ' ಇದರ ಉದ್ಘಾಟನೆ ಮೇ 10ರಂದು ಪೂರ್ವಾಹ್ನ 10.30ಕ್ಕೆ ನೆರವೇರಲಿದೆ ಎಂದು ಸಂಘದ ಅಧ್ಯಕ್ಷ ಸೀತಾರಾಮ ಕೊಂಚಾಡಿ ತಿಳಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ಅವರು ಸಮುದಾಯ ಭವನ ಉದ್ಘಾಟಿಸುವರು. ಮೊಗೇರ ಸೌಧ ಬಹುಮಹಡಿ ಕಟ್ಟಡ ಸಂಕೀರ್ಣವನ್ನು ಡಾ.ಎಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ. ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸಭಾಕಾರ್ಯಕ್ರಮ ಉದ್ಘಾಟಿಸುವರು ಎಂದರು.

ಮೊಗೇರ ಜಾತಿ ಸಮೀಕ್ಷೆ ಆ್ಯಪ್

ದ.ಕ. ಸಂಸದ ಕ್ಯಾ.ಬ್ರಿಜೇಶ್ ಚೌಟ ಅವರು ವಿದ್ಯಾರ್ಥಿ ನಿಲಯದ ಉದ್ಘಾಟನೆ ನೆರವೇರಿಸಲಿದ್ದು, ಮಾಜಿ ಸಚಿವ ನಾರಾಯಣ ಸ್ವಾಮಿ ಸ್ವ-ಉದ್ಯೋಗ ತರಬೇತಿ ಕೇಂದ್ರ ಉದ್ಘಾಟಿಸುವರು. ಶಾಸಕ ಡಾ.ವೈ.ಭರತ್ ಶೆಟ್ಟಿ ಅವರು ಸಂಘದ ನೂತನ ಕಚೇರಿಯನ್ನು ಉದ್ಘಾಟಿಸಲಿದ್ದು, ಮಾಜಿ ಸಚಿವ ಎಸ್. ಅಂಗಾರ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಅವರು, ಮೊಗೇರ ಜಾತಿ ಸಮೀಕ್ಷೆ ಆ್ಯಪ್‌ಗೆ ಚಾಲನೆ ನೀಡಲಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಸೇರಿದಂತೆ ಹಲವು ಮಂದಿ ಗಣ್ಯರು ಭಾಗವಹಿಸಲಿದ್ದಾರೆ ಎಂದವರು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಮೊಗೇರ ಸಂಘದ ಮಾಜಿ ರಾಜ್ಯಾಧ್ಯಕ್ಷ ಸುಂದರ ಮೇರ, ಪ್ರಧಾನ ಕಾರ್ಯದರ್ಶಿ ಗಿರಿಯಪ್ಪ ಎಸ್., ಕೋಶಾಧಿಕಾರಿ ನಾರಾಯಣ ಉಳ್ಳಾಲ್, ಪ್ರಮುಖರಾದ ಅಶೋಕ್ ಕೊಂಚಾಡಿ, ರಾಮ ಕೊಳಂಬೆ, ನಾಗೇಶ್ ಉಪಸ್ಥಿತರಿದ್ದರು.


ಹಾಸ್ಟೆಲ್ ವ್ಯವಸ್ಥೆ

ಸುಮಾರು 4 ಕೋ.ರೂ.ವೆಚ್ಚದಲ್ಲಿ ಭವನ ನಿರ್ಮಾಣವಾಗಿದ್ದು, ಸಮುದಾಯದ ಹಲವು ವರ್ಷಗಳ ಕನಸು ಈಡೇರಿದೆ. 20 ಸಾವಿರ ಚದರ ಅಡಿ ವಿಸ್ತೀರ್ಣದ 4 ಅಂತಸ್ತಿನ ವಿಶಾಲವಾದ ಬಹುಮಹಡಿ ಕಟ್ಟಡದಲ್ಲಿ ಸಕಲ ವ್ಯವಸ್ಥೆಗಳಿರುವಂತೆ ನೋಡಿಕೊಳ್ಳಲಾಗಿದೆ. ದೂರದ ಊರಿನಿಂದ ಶಿಕ್ಷಣಕ್ಕೆ ಬರುವ ಸಮುದಾಯದ ಮತ್ತು ಅಲ್ಪ ಸಂಖ್ಯಾತ ಬಡ ವಿದ್ಯಾರ್ಥಿಗಳಿಗೆ ಇಲ್ಲಿ ಉಳಿದುಕೊಳ್ಳಲು ಹಾಸ್ಟೆಲ್ ವ್ಯವಸ್ಥೆಯನ್ನೂ ಮಾಡಲಾಗಿದೆ. ಮಹಿಳೆಯರ ಸಬಲೀಕರಣಕ್ಕಾಗಿ ಸ್ವ ಉದ್ಯೋಗ ತರಬೇತಿ ಕೇಂದ್ರವನ್ನೂ ತೆರೆಯಲಾಗಿದೆ ಎಂದವರು ವಿವರಿಸಿದರು.

ಪಶ್ಚಿಮ ಬಂಗಾಳದಲ್ಲಿ ಕೇಸರಿ ಅಲೆ | ಬಿಜೆಪಿಗೆ ಐತಿಹಾಸಿಕ ಜಯ | 15 ವರ್ಷದ ಟಿಎಂಸಿ ಆಡಳಿತಕ್ಕೆ ತೆರೆ

ರಾಜಕೀಯ ಸಮೀಕರಣ ಬದಲಿಸಿದ ಮತದಾರರು | ಪೂರ್ವ ಭಾರತದಲ್ಲೂ ಕಮಲ ಬಲವರ್ಧನೆ

ಬಂಗಾಳ ಕಮಲ ವಿಹಾರಿಣೀ!



ಕಾಂಗ್ರೆಸ್ 2, ಎಡ ಪಕ್ಷ 2, ಇತರರು 2

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಭರ್ಜರಿ ಸಾಧನೆ ಮಾಡಿದ್ದು, 200ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲುವ ಮೂಲಕ ರಾಜ್ಯದಲ್ಲಿ ತನ್ನ ಮೊದಲ ಸರ್ಕಾರ ರಚಿಸಲು ಸಜ್ಜಾಗಿದೆ. ಆ ಮೂಲಕ 15 ವರ್ಷಗಳಿಂದ ಮುಂದುವರಿದಿದ್ದ ಟಿಎಂಸಿ ಆಡಳಿತಕ್ಕೆ ಅಂತ್ಯಹಾಡಿದ ಜನತೆ ಸ್ಪಷ್ಟ ತೀರ್ಪು ನೀಡಿದ್ದು, ರಾಜ್ಯ ರಾಜಕೀಯದಲ್ಲಿ ಭಾರೀ ಬದಲಾವಣೆಗೆ ನಾಂದಿ ಹಾಡಿದೆ.

ಆರಂಭಿಕ ಮತ ಎಣಿಕೆ ಹಂತದಲ್ಲೇ ಬಿಜೆಪಿ ಮುನ್ನಡೆ ಸ್ಪಷ್ಟವಾಗಿದ್ದು, ಬಳಿಕ ಅದು ದಿಟ್ಟ ಅಲೆಯಾಗಿ ರೂಪುಗೊಂಡಿತು. 294 ಸದಸ್ಯರ ವಿಧಾನಸಭೆಯಲ್ಲಿ ಬಹುಮತದ 148 ಗಡಿ ಸುಲಭವಾಗಿ ದಾಟಿದ ಬಿಜೆಪಿ, ಭರ್ಜರಿ 207 ಸ್ಥಾನಗಳಲ್ಲಿ ಗೆದ್ದು ಬೀಗಿದೆ. ಆಡಳಿತರೂಢ ಟಿಎಂಸಿಗೆ 80 ಸ್ಥಾನಗಳಲ್ಲಿ ಜಯ ಗಳಿಸಿ ಮಾತ್ರ ಸಾಧ್ಯವಾಗಿದೆ.

ಬಿಜೆಪಿಗೆ ಶೇ.45 ಮತ: ಬಿಜೆಪಿಯ ಶೇಕಡಾವಾರು ಮತ ಹಂಚಿಕೆ ಪ್ರಮಾಣದಲ್ಲೂ 2021ರ ಶೇ.38ರಿಂದ ಸುಮಾರು ಶೇ.45ಕ್ಕೆ ಏರಿಕೆಯಾಗಿದೆ. ಇದು ಪಕ್ಷದ ಸಂಘಟನೆ ಶಕ್ತಿ ಹಾಗೂ ಜನಾಧಾರ ವಿಸ್ತರಣೆಯನ್ನು ತೋರಿಸುತ್ತದೆ. ಅದೇ ಸಮಯದಲ್ಲಿ ಟಿಎಂಸಿಯ ಮತ ಶೇ.48ರಿಂದ ಸುಮಾರು ಶೇ.41ಕ್ಕೆ ಕುಸಿದಿದ್ದು, ಅದರ ಬೆಂಬಲದ ಕುಸಿತವನ್ನು ಸ್ಪಷ್ಟಪಡಿಸುತ್ತದೆ.

ರಾಜ್ಯಾದ್ಯಂತ ಬಿಜೆಪಿ ಅಲೆ ಗೋಚರ: ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಮ್ಮ ಭವಾನಿಪುರ ಕ್ಷೇತ್ರದಲ್ಲಿ ಹೀನಾಯ ಸೋಲುಂಡಿದ್ದು, ರಾಜ್ಯದಾದ್ಯಂತ ಬಿಜೆಪಿ ಅಲೆ ಸ್ಪಷ್ಟವಾಗಿ ಗೋಚರಿಸಿದೆ. ನಂದಿಗ್ರಾಮ ಮತ್ತು ಭವಾನಿಪುರದಲ್ಲಿ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಗೆಲುವು ಸಾಧಿಸಿದ್ದು, ಪ್ರಮುಖ ಕ್ಷೇತ್ರಗಳಲ್ಲಿಯೂ ಬಿಜೆಪಿ ಹಿಡಿತ ಸಾಧಿಸಿದೆ. ಉತ್ತರ ಬಂಗಾಳದಿಂದ ಜಂಗಲ್ ಮಹಲ್‌ವರೆಗೆ, ಗಡಿಭಾಗಗಳಿಂದ ಕೈಗಾರಿಕಾ ಪ್ರದೇಶಗಳವರೆಗೆ ಬಿಜೆಪಿ ಸಾಧನೆ ವ್ಯಾಪಕವಾಗಿದೆ. ದಿನ್ಹಾಟಾ, ಗೋಸಾಬಾ, ಬಾಗ್ಮುಂಡಿ, ಬ್ಯಾಂಕುರಾ, ಬಿಸ್ಪುರ, ನಾಯಾಗ್ರಾಮ ಮುಂತಾದ ಗ್ರಾಮೀಣ ಹಾಗೂ ಆದಿವಾಸಿ ಪ್ರದೇಶಗಳಲ್ಲೂ ಪಕ್ಷ ಭರ್ಜರಿ ಪ್ರದರ್ಶನ ನೀಡಿದೆ. ಆಸನ್ಸೋಲ್ ದಕ್ಷಿಣ, ದುರ್ಗಾಪುರ ಪೂರ್ವ, ಕೋಲ್ಕತ್ತಾ ಭಾಗಗಳಲ್ಲಿಯೂ ಬಿಜೆಪಿ ಭರ್ಜರಿ ಸಾಧನೆ ಮಾಡಿದೆ.

ಕುಗ್ಗಿದ ಟಿಎಂಸಿ ಪ್ರಭಾವ: ಇದಕ್ಕೆ ವಿರುದ್ಧವಾಗಿ ಟಿಎಂಸಿ ಪ್ರಭಾವ ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುವುದು ಗೋಚರಿಸಿದೆ. ಬಾಲಿಗಂಜ್, ಎಂಟಾಲಿ ಸೇರಿದಂತೆ ಕೆಲ ನಗರ ಪ್ರದೇಶಗಳು ಹಾಗೂ ಕೆಲವು ಗ್ರಾಮೀಣ ಭಾಗಗಳಲ್ಲಿ ಮಾತ್ರ ಪ್ರತಿರೋಧ ಕಂಡುಬಂದಿದೆ.





ಸಿಹಿ ಹಂಚಿ ಕಾರ್ಯಕರ್ತರ ಸಂಭ್ರಮ

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸಿರುವ ಹಿನ್ನೆಲೆ ರಾಜ್ಯದ ವಿವಿಧ ಭಾಗಗಳಲ್ಲಿ ಪಕ್ಷದ ಕಾರ್ಯಕರ್ತರು ಉತ್ಸಾಹಭರಿತವಾಗಿ ಸಂಭ್ರಮಾಚರಣೆ ನಡೆಸಿದರು.ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರಗಳನ್ನು ಹಿಡಿದುಕೊಂಡು ಜೈ ಶ್ರೀ ರಾಮ್ ಘೋಷಣೆ ಕೂಗಿದ ಕಾರ್ಯಕರ್ತರು, ಪಕ್ಷದ ನಾಯಕರಾದ ಅಮಿತ್ ಶಾ, ಸುವೇಂದು ಅಧಿಕಾರಿಯನ್ನು ಗುಣಗಾನ ಮಾಡಿದರು. ಕೋಲ್ಕತ್ತಾದಲ್ಲಿರುವ ಪಕ್ಷದ ರಾಜ್ಯ ಪ್ರಧಾನ ಕಚೇರಿ ಹೊರಗೆ ಕಾರ್ಯಕರ್ತರು ಪರಸ್ಪರ ಸಿಹಿ ಹಂಚಿಕೊಂಡು, ದಾರಿಹೋಕರಿಗೂ ನೀಡಿ ಖುಷಿಪಟ್ಟರು. ದಕ್ಷಿಣ 24 ಪರಗಣ ಜಿಲ್ಲೆಯ ಕಾಕ್‌ದ್ವೀಪ್ ಮತ್ತು ಉತ್ತರ 24 ಪರಗಣ ಜಿಲ್ಲೆಯ ಬಂಗಾಂವ್ ಪ್ರದೇಶಗಳಲ್ಲಿಯೂ ಇದೇ ರೀತಿಯ ದೃಶ್ಯ ಕಂಡುಬಂದಿತು. ಬಂಗಾಂವ್ ಪ್ರದೇಶದಲ್ಲಿ ಮತುವಾ ಸಮುದಾಯದ ಜನಸಂಖ್ಯೆ ಹೆಚ್ಚಾಗಿದೆ. ಬಿಜೆಪಿ ಬೆಂಬಲಿಗರು 'ಆಬೀರ್' (ಗುಲಾಲ್) ಹಂಚಿಕೊಂಡು, ಪಲ್ಟಾನೋ ದರ್ಕಾರ್, ಎಬಾರ್ ಬಿಜೆಪಿ ಸರ್ಕಾರ (ಬದಲಾವಣೆ ಬೇಕು, ಈ ಬಾರಿ ಬಿಜೆಪಿ ಸರ್ಕಾರ) ಎಂಬ ಪಕ್ಷದ ಪ್ರಚಾರ ಗೀತೆಗೆ ನೃತ್ಯ ಮಾಡಿದರು.ಬಂಗಾಂವ್‌ನ ಬಿಜೆಪಿ ಬೆಂಬಲಿಗ ಅನುಭಾಬ್ ಬೈರಾಗೀ ಮಾತನಾಡಿ, ಮತುವಾ ಸಮುದಾಯದ ಪೌರತ್ವದ ವಿರುದ್ಧ ಬಿಜೆಪಿ ಕೆಲಸ ಮಾಡುತ್ತಿದೆ ಎಂದು ಟಿಎಂಸಿ ತಪ್ಪು ಪ್ರಚಾರ ನಡೆಸಿತ್ತು. ಆದರೆ, ಬಾಂಗ್ಲಾದೇಶದಿಂದ ವಲಸೆ ಬಂದ ಎಲ್ಲಾ ಹಿಂದುಗಳಿಗೆ ಪೌರತ್ವ ನೀಡಲಾಗುತ್ತದೆ ಎಂದು ಪಕ್ಷ ಸ್ಪಷ್ಟಪಡಿಸಿದೆ. ಈಗಾಗಲೇ ಪೌರರಾಗಿರುವವರಿಗೆ ಯಾವುದೇ ಆತಂಕ ಬೇಡ ಎಂದರು.

ಬಂಗಾಳದಲ್ಲಿ ಗೂಂಡಾರಾಜ್ ಅಂತ್ಯ

ನೆಲೆ ಭದ್ರಪಡಿಸಿಕೊಂಡ ಬಿಜೆಪಿ

ಈ ಚುನಾವಣೆಯಲ್ಲಿ ಬಿಜೆಪಿ ಸಾಧನೆ ಕೇವಲ ಜಯವಷ್ಟೇ ಅಲ್ಲ, ಬಂಗಾಳದ ರಾಜಕೀಯದಲ್ಲಿ ಮೂಲಭೂತ ಬದಲಾವಣೆಯ ಸಂಕೇತವಾಗಿದೆ. ಹಲವು ವರ್ಷಗಳಿಂದ ಹಂತ ಹಂತವಾಗಿ ತನ್ನ ನೆಲೆಯನ್ನು ಬಲಪಡಿಸಿಕೊಂಡಿದ್ದ ಬಿಜೆಪಿ, ಈಗ ಅದನ್ನು ಸಂಪೂರ್ಣ ಅಧಿಕಾರವಾಗಿ ಪರಿವರ್ತಿಸಿಕೊಂಡಿದೆ. ಸಂಘಟನಾ ಮಟ್ಟದಲ್ಲಿ, ಬಿಜೆಪಿ ಮಾಡಿದ ದೀರ್ಘಕಾಲದ ಶ್ರಮ, ಕೇಡರ್ ನಿರ್ಮಾಣ, ಬೂತ್ ನಿರ್ವಹಣೆ ಮತ್ತು ಸಾಮಾಜಿಕ ಪರಿವರ್ತನೆ... ಇವೆಲ್ಲವೂ ಫಲ ನೀಡಿವೆ. ರಾಜಕೀಯವಾಗಿ ಇದು ಬಿಜೆಪಿ ದೇಶವ್ಯಾಪಿ ವಿಸ್ತರಣೆಯ ಮತ್ತೊಂದು ದೊಡ್ಡ ಮೈಲುಗಲ್ಲಾಗಿದೆ.

ಟಿಎಂಸಿಗೆ ಕಠಿಣ ಹಂತ

ಟಿಎಂಸಿಗೆ ಈ ಸೋಲು ದೊಡ್ಡ ಹಿನ್ನಡೆಯಾಗಿದ್ದು, 15 ವರ್ಷದ ಆಡಳಿತದ ನಂತರ ವಿರೋಧ ಪಕ್ಷದ ಪಾತ್ರಕ್ಕೆ ಬದಲಾವಣೆಯಾಗಬೇಕಾದ ಪರಿಸ್ಥಿತಿ ಬಂದಿದೆ. ಭ್ರಷ್ಟಾಚಾರದ ಆರೋಪಗಳು, ಆಡಳಿತ ವಿರೋಧಿ ಅಲೆ ಹಾಗೂ ಸಂಘಟನಾ ದೌರ್ಬಲ್ಯ ಟಿಎಂಸಿ ಈ ಸೋಲಿಗೆ ಕಾರಣವಾಗಿವೆ. ಒಟ್ಟಾರೆ, ಬಂಗಾಳದಲ್ಲಿ ಈ ಫಲಿತಾಂಶವು ಬದಲಾವಣೆಯ ಯುಗಕ್ಕೆ ಚಾಲನೆ ನೀಡಿದ್ದು, ಬಿಜೆಪಿ ಆಡಳಿತದ ಹೊಸ ಅಧ್ಯಾಯಕ್ಕೆ ದಾರಿ ಮಾಡಿಕೊಟ್ಟಿದೆ.

ಜನರು ಬಿಜೆಪಿಗೆ ಸ್ಪಷ್ಟ ಆದೇಶ ನೀಡಿದ್ದು, ಸರ್ಕಾರ ರಚಿಸುತ್ತೇವೆ. ಈ ಚುನಾವಣೆಯಲ್ಲಿ ಹಿಂದು ಮತಗಳು ಬಿಜೆಪಿಯ ಪರ ಏಕೀಕೃತವಾಗಿದ್ದು, ವಿದ್ಯಾವಂತ ಹಿಂದುಗಳು ಮಮತಾ ಬ್ಯಾನರ್ಜಿಯನ್ನು ತಿರಸ್ಕರಿಸಿದ್ದಾರೆ.
■ **ಸುವೇಂದು ಅಧಿಕಾರಿ, ಬಿಜೆಪಿ ನಾಯಕ**

ಇದು ನೈತಿಕ ಜಯವಲ್ಲ, ಅನೈತಿಕ ಜಯ. ಚುನಾವಣಾ ಆಯೋಗ, ಕೇಂದ್ರ ಪಡೆಗಳು, ಪ್ರಧಾನಮಂತ್ರಿ ಹಾಗೂ ಗೃಹ ಸಚಿವರು ಮಾಡಿದ್ದು ಸಂಪೂರ್ಣ ಕಾನೂನುಬಾಹಿರ. ಇದು ಕಳ್ಳತನ, ಕಳ್ಳತನ, ಕಳ್ಳತನ. ನಾವು ಅಧಿಕಾರಕ್ಕೆ ಮರಳುತ್ತೇವೆ.
■ **ಮಮತಾ ಬ್ಯಾನರ್ಜಿ, ಪ.ಬಂಗಾಳ ಸಿಎಂ**

ಸಿಎಂ ಸ್ಪರ್ಧೆಯಲ್ಲಿ ಪ್ರಮುಖರು

ಪಶ್ಚಿಮ ಬಂಗಾಳದಲ್ಲಿ ಇದೇ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿರುವ ಬಿಜೆಪಿಯೊಳಗೆ ಮುಖ್ಯಮಂತ್ರಿ ಸ್ಥಾನಕ್ಕೆ ಕೆಲವು ಹೆಸರುಗಳು ಕೇಳಿಬಂದಿವೆ.



• **ಸುವೇಂದು ಅಧಿಕಾರಿ**
ಬಂಗಾಳದಲ್ಲಿ ಪ್ರಸ್ತುತ ವಿರೋಧ ಪಕ್ಷದ ನಾಯಕರಾಗಿರುವ ಸುವೇಂದು ಅಧಿಕಾರಿ ಸಿಎಂ ಹುದ್ದೆಗೆ ಪ್ರಮುಖ ಅಭ್ಯರ್ಥಿಯಾಗಿ ಪರಿಗಣಿಸಲ್ಪಡುತ್ತಿದ್ದಾರೆ. ನಂದಿಗ್ರಾಮ್ ಹೋರಾಟದಿಂದಲೇ ರಾಜ್ಯ ರಾಜಕೀಯದಲ್ಲಿ ಭಾರೀ ಪ್ರಭಾವ ಬೀರಿದ ಅವರು, ತೃಣಮೂಲ ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದ ನಂತರ ಪಕ್ಷದ ವಿಸ್ತರಣೆಗೆ ಪ್ರಮುಖ ಶಕ್ತಿಯಾಗಿದ್ದಾರೆ. ಸಂಘಟನಾ ಸಾಮರ್ಥ್ಯ, ಹಿಂದುತ್ವ ಮತಗಳ ಧ್ರುವೀಕರಣ ಮತ್ತು ಭೂಮಿಪುತ್ರ ಇಮೇಜ್ ಇವರ ಬಲವಾಗಿದೆ.



• **ಸಮಿಕ್ ಭಟ್ಟಾಚಾರ್ಯ**
ಬಿಜೆಪಿ ರಾಜ್ಯಾಧ್ಯಕ್ಷರಾಗಿರುವ ಸಮಿಕ್ ಭಟ್ಟಾಚಾರ್ಯ ಸಂಘಟನಾ ಹಂತದಲ್ಲಿ ಶಾಂತ. ಆದರೆ, ಪರಿಣಾಮಕಾರಿ ನಾಯಕನಾಗಿ ಗುರುತಿಸಿಕೊಂಡಿದ್ದಾರೆ. ಆರ್‌ಎಸ್‌ಎಸ್ ಹಿನ್ನೆಲೆಯುಳ್ಳ ಅವರು ವಿವಿಧ ಸಮುದಾಯಗಳಲ್ಲಿ ಪಕ್ಷದ ಆಧಾರ ವಿಸ್ತರಣೆಗಾಗಿ ಕೆಲಸ ಮಾಡಿದ್ದಾರೆ. ನೀತಿ ಮಟ್ಟದ ರಾಜಕಾರಣದಲ್ಲಿ ಪರಿಣತಿ ಹೊಂದಿರುವ ನಾಯಕನಾಗಿ ಇವರ ಹೆಸರು ಸಿಎಂ ರೇಸ್‌ನಲ್ಲಿ ಚರ್ಚೆಯಲ್ಲಿದೆ.



• **ದಿಲೀಪ್ ಘೋಷ್**
ಬಿಜೆಪಿ ರಾಜ್ಯ ಘಟಕವನ್ನು ಬಲಪಡಿಸಿದ ಪ್ರಮುಖ ನಾಯಕರಲ್ಲಿ ದಿಲೀಪ್ ಘೋಷ್ ಪ್ರಮುಖರು. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸಾಧನೆಗೆ ಅವರ ಸಂಘಟನಾ ಶ್ರಮ ಪ್ರಮುಖ ಕಾರಣವಾಗಿತ್ತು. ತಳಮಟ್ಟದ ಕಾರ್ಯಕರ್ತರಲ್ಲಿ ಹಿಡಿತ, ಸ್ಪಷ್ಟ ಹೇಳಿಕೆಗಳ ಮೂಲಕ ಗಮನ ಸೆಳೆಯುವ ಶೈಲಿ ಇವರಿಗೆ ವಿಶೇಷತೆ.


ಇತರೆ ಸಾಧ್ಯತೆಯ ಅಭ್ಯರ್ಥಿಗಳು

- **ನಿಸಿತ್ ಪ್ರಮಾಣಿಕ್:** ಕೇಂದ್ರ ಮಾಜಿ ಸಚಿವ
- **ಅಗ್ನಿಮಿತ್ರ ಪಾಲ್:** ಪಕ್ಷದ ರಾಜ್ಯ ಉಪಾಧ್ಯಕ್ಷೆ
- **ರೂಪಾ ಗಂಗೂಲಿ:** ಜನಪ್ರಿಯತೆ ಮತ್ತು ಸಾರ್ವಜನಿಕ ಇಮೇಜ್ ಕಾರಣ

ಆದರೆ, ಕೇಂದ್ರ ನಾಯಕತ್ವ, ವಿಶೇಷವಾಗಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರ ಅಭಿಪ್ರಾಯವೂ ಅಂತಿಮ ಆಯ್ಕೆಯಲ್ಲಿ ಪ್ರಮುಖವಾಗಬಹುದು. ಪ್ರಾದೇಶಿಕ ಸಮತೋಲನ ಜಾತಿ–ಸಮುದಾಯ ಸಮೀಕರಣಗಳು ಅಂತಿಮ ನಿರ್ಧಾರವನ್ನು ಪ್ರಭಾವ ಮಾಡಲಿವೆ.

ಅಂಗ, ಬಂಗ, ಕಳಿಂಗ

22 ರಾಜ್ಯಗಳಲ್ಲಿ ಎನ್‌ಡಿಎ ಆಡಳಿತ | ಇಂಡಿ ಕೂಟ 6ಕ್ಕೆ ಕುಸಿತ



ಪಶ್ಚಿಮ ಬಂಗಾಳ ಗೆಲುವಿನೊಂದಿಗೆ ದೇಶದಲ್ಲಿ ಎನ್‌ಡಿಎ ಆಡಳಿತದಲ್ಲಿರುವ ರಾಜ್ಯಗಳ ಸಂಖ್ಯೆ(ಕೇಂದ್ರಾಡಳಿತ ಪ್ರದೇಶಗಳು ಸೇರಿ) 22ಕ್ಕೆ ಏರಿಕೆಯಾಗಿದೆ. ಇನ್ನೊಂದೆಡೆ, ಕೇಂದ್ರದಲ್ಲಿ ಪ್ರಮುಖ ವಿರೋಧ ಪಕ್ಷಗಳ ಮೈತ್ರಿಯಾಗಿರುವ ಇಂಡಿ ಕೂಟ ದೇಶದಾದ್ಯಂತ ಆರು ರಾಜ್ಯಗಳಲ್ಲಿ ತನ್ನ ನೇತೃತ್ವವನ್ನು ಉಳಿಸಿಕೊಂಡಿದೆ. ತಮಿಳುನಾಡು ಕಳೆದುಕೊಂಡರೂ, ಕೇರಳದಲ್ಲಿ ಗೆಲುವು ಸಾಧಿಸಿದೆ. ಕೇರಳದಲ್ಲಿ ಸಾಧಿಸಿದ ಸ್ಪಷ್ಟ ಸಾಧನೆಯ ಹೊರತಾಗಿಯೂ, ಈ ಚುನಾವಣಾ ಫಲಿತಾಂಶಗಳು ಕಾಂಗ್ರೆಸ್ ನೇತೃತ್ವದ ಮೈತ್ರಿಯ ಭವಿಷ್ಯ ಕುರಿತ ಅನಿಶ್ಚಿತತೆಯನ್ನು ಮೂಡಿಸಿವೆ.

ಪಶ್ಚಿಮ ಬಂಗಾಳದ ಜಯದ ನಂತರ ಬಿಜೆಪಿ ಸ್ವತಂತ್ರವಾಗಿ 15 ರಾಜ್ಯಗಳಲ್ಲಿ ಆಡಳಿತ ನಡೆಸಲಿದ್ದು, ಬಿಹಾರ (ಜೆಡಿ(ಯು) ಜತೆಗೆ), ಆಂಧ್ರ ಪ್ರದೇಶ (ಟಿಡಿಪಿ ಜತೆಗೆ), ನಾಗಾಲ್ಯಾಂಡ್(ನಾಗಾ ಪೀಪಲ್ಸ್ ಫ್ರಂಟ್ ಜತೆಗೆ), ಮೇಘಾಲಯ(ನ್ಯಾಷನಲ್ ಪೀಪಲ್ಸ್ ಪಾರ್ಟಿ ಜತೆಗೆ) ಮೈತ್ರಿಯಿಂದ ಒಟ್ಟು ಸಂಖ್ಯೆ 22ಕ್ಕೆ ಏರಿದೆ.ತಮಿಳುನಾಡಿನಲ್ಲಿ ಡಿಎಂಕೆ–ಕಾಂಗ್ರೆಸ್ ಮೈತ್ರಿಯನ್ನು ಹೊಸ ರಾಜಕೀಯ ಶಕ್ತಿ ಜನ ನಾಯಕ ವಿಜಯ್ ನೇತೃತ್ವದ ಟಿವಿಕೆ ಅಧಿಕಾರದಿಂದ ಕೆಳಗಿಳಿಸಿದೆ. ಇತ್ತ, ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) ಸರ್ಕಾರ ರಚಿಸಲು ಸಿದ್ಧವಾಗಿದೆ.

ಚುನಾವಣಾ ಆಯೋಗದ ಅಧಿಕೃತ ಘೋಷಣೆಯ ನಂತರ, ಕಾಂಗ್ರೆಸ್‌ಗೆ ಕೇವಲ ಮೂರು ರಾಜ್ಯಗಳಲ್ಲಿ ಕರ್ನಾಟಕ, ತೆಲಂಗಾಣ ಮತ್ತು ಹಿಮಾಚಲ ಪ್ರದೇಶದಲ್ಲಿ ಮಾತ್ರ ಬಹುಮತ ಸರ್ಕಾರ ಉಳಿದಿದೆ. ಜಾರ್ಖಂಡ್‌ನಲ್ಲಿ ಹೇಮಂತ್ ಸೊರೇನ್ ನೇತೃತ್ವದ ಜೆಎಂಎಂ ಜತೆ ಮೈತ್ರಿಯಲ್ಲಿದೆ. ಪಂಜಾಬಿನಲ್ಲಿ ಭಗವಾನ್ ಮಾತ್ರ ನೇತೃತ್ವದ ಎಎಪಿ, ಇಂಡಿ ಕೂಟದ ಮೈತ್ರಿಯ ಭಾಗವಲ್ಲದಿದ್ದರೂ, ಕೇಂದ್ರದಲ್ಲಿ ಬಿಜೆಪಿ ವಿರುದ್ಧ ನಿಲುವು ಹೊಂದಿದೆ.

ಭಾರತದ ಸಂವಿಧಾನದ ಕಲಂ 368 ಪ್ರಕಾರ ತಿದ್ದುಪಡಿ ಮಸೂದೆ ಪಾಸಾಗಲು ಸಂಸತ್ತಿನಲ್ಲಿ ಮೂರನೇ ಎರಡರಷ್ಟು ಬಹುಮತ ಅಗತ್ಯ. ಕೆಲವು ವಿಶೇಷ ತಿದ್ದುಪಡಿಗಳಿಗೆ ಅರ್ಧಕ್ಕಿಂತ ಹೆಚ್ಚು ರಾಜ್ಯಗಳ ಅನುಮೋದನೆಯೂ ಅಗತ್ಯವಿರುತ್ತದೆ. ಇದರಲ್ಲಿ ಕಲಂ 54, 55, 73, 162, 241 ಹಾಗೂ ಏಳನೇ ಅನುಕ್ರಮಣಿಕೆಯ ವಿಷಯಗಳು ಸೇರಿವೆ.

ಈಗ ಭಾರತದಲ್ಲಿ 29 ರಾಜ್ಯಗಳಿದ್ದು, ಬಹುಮತಕ್ಕೆ 14.5 ರಾಜ್ಯಗಳು ಅಗತ್ಯ. ಬಂಗಾಳದ ಜಯದೊಂದಿಗೆ ಬಿಜೆಪಿ 15 ರಾಜ್ಯಗಳಲ್ಲಿ ಆಡಳಿತ ಸಾಧಿಸಿದೆ.

ದೀದಿಗೆ ಹೀನಾಯ ಸೋಲು

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗೆ ಹೀನಾಯ ಸೋಲಾಗಿದೆ. ಭವಾನಿಪುರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸುವೇಂದು ಅಧಿಕಾರಿ ವಿರುದ್ಧ 15,114 ಮತಗಳ ಅಂತರದಿಂದ ಸೋತಿದ್ದು, ತೀವ್ರ ಮುಖಭಂಗ ಅನುಭವಿಸಿದ್ದಾರೆ.

ಸುವೇಂದುಗೆ ಡಬಲ್ ಧಮಾಕ

ಪಶ್ಚಿಮ ಬಂಗಾಳದ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರು ಭವಾನಿಪುರ ಕ್ಷೇತ್ರದಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಅಲ್ಲದೇ ನಂದಿಗ್ರಾಮ ಕ್ಷೇತ್ರದಲ್ಲಿ ಟಿಎಂಸಿಯ ತಮ್ಮ ಪ್ರತಿಸ್ಪರ್ಧಿಗಿಂತ 9 ಸಾವಿರ ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ.



ಆಡಳಿತ ಬದಲಾವಣೆಗೆ ಕಾರಣವಾದ ಅಂಶಗಳು

ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಬದಲಾವಣೆಗೆ ಕಾರಣವಾದ ಅಂಶಗಳು ಹಲವು ಆಯಾಮಗಳಲ್ಲಿ ಚರ್ಚೆಗೆ ಒಳಗಾಗಿವೆ. ದೀದಿ ವಿರೋಧಿ ಅಲೆ ಏಳಲು ಪ್ರಮುಖವಾಗಿ ಮೂರು ಕಾರಣಗಳನ್ನು ವಿಶ್ಲೇಷಕರು ಉಲ್ಲೇಖಿಸುತ್ತಿದ್ದಾರೆ. ಮೊದಲನೆಯದು ಹಿಂದು ಮತಗಳ ಧ್ರುವೀಕರಣ. ಈ ಬಾರಿ ಧಾರ್ಮಿಕ ಆಧಾರಿತ ಮತಗಳ ಏಕೀಕರಣ ಬಿಜೆಪಿಗೆ ಲಾಭ ತಂದಿದೆ. ಎರಡನೆಯದು ಆಡಳಿತ ವಿರೋಧಿ ಅಲೆ. ಟಿಎಂಸಿ ಸರ್ಕಾರದ ವಿರುದ್ಧದ ಅಸಮಾಧಾನ, ಭ್ರಷ್ಟಾಚಾರದ ಆರೋಪಗಳು ಮತ್ತು ಸ್ಥಳೀಯ ಮಟ್ಟದ ಆಡಳಿತದ ವೈಫಲ್ಯಗಳು ಜನಮನದಲ್ಲಿ ಅಸಮಾಧಾನ ಮೂಡಿಸಿವೆ. ಮೂರನೆಯದು ಕೇಂದ್ರ ನಾಯಕತ್ವದ ಪ್ರಭಾವೀ ಪ್ರಚಾರ, ಬೂತ್ ಮಟ್ಟದ ಸಂಘಟನೆ ಬಲಪಡಿಸುವ ಕಾರ್ಯ ಮತ್ತು ಸಾಮಾಜಿಕ ಮಾಧ್ಯಮಗಳ ಪರಿಣಾಮಕಾರಿ ಬಳಕೆ ಬಿಜೆಪಿಗೆ ನೆರವಾಗಿದೆ. ಜತೆಗೆ ಯುವ ಮತದಾರರ ಮನೋಭಾವದಲ್ಲಿ ಬದಲಾವಣೆ, ಉದ್ಯೋಗ ಮತ್ತು ಅಭಿವೃದ್ಧಿ ಕುರಿತ ನಿರೀಕ್ಷೆಗಳು ಕೂಡ ಫಲಿತಾಂಶದ ಮೇಲೆ ಪ್ರಭಾವ ಬೀರಿವೆ. ಮಹಿಳಾ ಮತದಾರರ ಒಂದು ವರ್ಗದಲ್ಲೂ ಪರ್ಯಾಯದ ಅಗತ್ಯತೆಯ ಭಾವನೆ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕಲ್ಯಾಣ ಯೋಜನೆಗಳ ಅನುಷ್ಠಾನ ಕುರಿತ ಅಸಮಾಧಾನವೂ ಗಮನಾರ್ಹವಾಗಿದೆ. ಈ ಎಲ್ಲಾ ಅಂಶಗಳಿಗೆ ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಬಿಜೆಪಿ ಹೊಸ ಅಧ್ಯಾಯ ಆರಂಭಿಸಿದೆ.

ತುಷ್ಟೀಕರಣ ರಾಜನೀತಿಗೆ ಮರೆಯಲಾಗದ ಪಾಠ: ಶಾ

• **ಹೊಸದಿಲ್ಲಿ:** ಟಿಎಂಸಿ ತುಷ್ಟೀಕರಣ ರಾಜನೀತಿಯಲ್ಲಿ ಮುಳುಗಿದೆ ಎಂದು ಪಕ್ಷವನ್ನು ತರಾಟೆಗೆತ್ತಿಕೊಂಡ ಕೇಂದ್ರ ಗೃಹ ಸಚಿವ ಅಮಿತ್ ಶಾ, ಅಕ್ರಮ ನುಸುಳುಕೋರರು ಮತ್ತವರ ಬಗ್ಗೆ ಸಹಾನುಭೂತಿ ತೋರುವವರಿಗೆ ಪ.ಬಂಗಾಳದ ಜನತೆ ಅದ್ಯಾವ ಪರಿ ಪಾಠ ಕಲಿಸಿದ್ದಾರೆಂದರೆ, ತುಷ್ಟೀಕರಣದಲ್ಲಿ ತೊಡಗಿರುವ ಯಾವ ಪಕ್ಷಗಳೂ ಈ ಪಾಠವನ್ನು ಮರೆಯಲಾರರು. ಅದಮ್ಯ ಭರವಸೆ, ಆಶೋತ್ತರಗಳೊಂದಿಗೆ ಪ.ಬಂಗಾಳವು ಪ್ರಧಾನಿ ಮೋದಿ ನಾಯಕತ್ವದಲ್ಲಿ ನಂಬಿಕೆ ಇರಿಸಿ ಬಿಜೆಪಿಯನ್ನು ಬೆಂಬಲಿಸಿದೆ ಮತ್ತು ಜನರ ಆಶೋತ್ತರಗಳನ್ನು ನಾವು ಖಂಡಿತ ಈಡೇರಿಸುತ್ತೇವೆ ಎಂದು ಆಶ್ವಾಸನೆ ನೀಡಿದ್ದಾರೆ. ಮಹಾನ್ ವ್ಯಕ್ತಿತ್ವಗಳಾದ ಚೈತನ್ಯ ಮಹಾಪ್ರಭು, ಸ್ವಾಮಿ ವಿವೇಕಾನಂದ, ಕವಿ ಗುರು ಠಾಗೋರ್, ನೇತಾಜಿ ಸುಭಾಷ್‌ಚಂದ್ರ ಬೋಸ್, ಡಾ.ಶ್ಯಾಮ್ ಪ್ರಸಾದ್ ಮುಖರ್ಜಿಯವರ ಜನುಮಭೂಮಿ ಬಂಗಾಳದ ಗತ ವೈಭವದ ಮರುಕಳಿಕೆಗೆ ಬಿಜೆಪಿ ಅಹರ್ನಿಶಿ ಶ್ರಮಿಸಲಿದೆ ಎಂದು ಸಚಿವ ಶಾ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ಮಹಿಳಾ ಹೋರಾಟ ಮುಖಗಳಿಗೆ ಜಯ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಮಹಿಳಾ ಭದ್ರತೆ ಪ್ರಶ್ನೆಯನ್ನು ಮುಂದಿಟ್ಟುಕೊಂಡಿದ್ದ ಬಿಜೆಪಿ ಅಭ್ಯರ್ಥಿಗಳಾದ ರತ್ನಾ ದೇವನಾಥ್ ಹಾಗೂ ರೇಖಾ ಪಾತ್ರಾ ಭರ್ಜರಿ ಗೆಲುವು ಸಾಧಿಸಿದ್ದಾರೆ. ಆರ್‌ಜಿ ಕರ್ ಆಸ್ಪತ್ರೆಯ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದ ಅಭಯಳ ತಾಯಿ ರತ್ನಾ ದೇವನಾಥ್, ಪಾನಿಹಾಟಿ ಕ್ಷೇತ್ರದಲ್ಲಿ ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ತೀರ್ಥಂಕರ ಘೋಷ್ ವಿರುದ್ಧ 28,836 ಮತಗಳ ಅಂತರದಿಂದ ಜಯಗಳಿಸಿದರು. ರಾಜಕೀಯಕ್ಕೆ ಹೊಸದಾಗಿ ಕಾಲಿಟ್ಟ ರತ್ನಾ ತಮ್ಮ ಪ್ರಚಾರದ ವೇಳೆ ಮಹಿಳಾ ಸುರಕ್ಷತೆ ವಿಚಾರವನ್ನು ಪ್ರಮುಖವಾಗಿ ಮುಂದಿಟ್ಟಿದ್ದರು.ಇನ್ನೊಂದೆಡೆ, ಸಂದೇಶ್‌ಖಾಲಿ ಪ್ರತಿಭಟನೆಗಳ ಮುಖವಾಗಿದ್ದ ರೇಖಾ ಪಾತ್ರಾ ಹಿಂಗಲ್‌ಗಂಜ್ ಕ್ಷೇತ್ರದಲ್ಲಿ 5,421 ಮತಗಳ ಅಂತರದಿಂದ ಗೆಲುವು ಸಾಧಿಸಿದರು. ಗೃಹಿಣಿಯಾಗಿರುವ ಪಾತ್ರಾ, ಟಿಎಂಸಿ ನಾಯಕ ಶಾಜಹಾನ್ ಶೇಖ್ ವಿರುದ್ಧದ ಆರೋಪಗಳ ಹಿನ್ನೆಲೆ ದೇಶವ್ಯಾಪಿ ಗಮನ ಸೆಳೆದಿದ್ದರು.

- ಆರ್‌ಜಿ ಕರ್ ಆಸ್ಪತ್ರೆ ಪ್ರಕರಣದ ಅಭಯ ತಾಯಿಗೂ ಜಯ
- ಸಂದೇಶ್‌ಖಾಲಿ ಹೋರಾಟದ ಮಹಿಳೆಗೂ ವಿಜಯ



ಅಮಿತ್ ಶಾ ತಂಡದ ಅಚ್ಚುಕಟ್ಟಾದ ತಂತ್ರದ ಫಲ | ಮೈಕ್ರೋ ಮಟ್ಟದ ಯೋಜನೆ, ಸಂಘಟನಾ ಬಲ | ಬಿಜೆಪಿ ಐತಿಹಾಸಿಕ ಗೆಲುವಿನ ಒಳನೋಟ

ಕಮಲ ಅರಳಿಸಿದ 5 ಶಿಲ್ಪಿಗಳು

• **ಕೋಲ್ಕತಾ/ಹೊಸದಿಲ್ಲಿ:** ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ಸಾಧಿಸಿದ ಐತಿಹಾಸಿಕ ಗೆಲುವಿನ ಹಿಂದೆ ಒಂದು ಸಮಗ್ರ ರಾಜಕೀಯ ತಂತ್ರ ಹಾಗೂ ಬಲಿಷ್ಠ ನಾಯಕತ್ವದ ಸಮನ್ವಯ ಕಾರ್ಯನಿರ್ವಹಿಸಿರುವುದು ಸ್ಪಷ್ಟವಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಕಾರ್ಯನಿರ್ವಹಿಸಿದ ಐದು ಪ್ರಮುಖ ನಾಯಕರಾದ ಸುನಿಲ್ ಬನ್ಸಾಲ್, ಕೈಲಾಶ್ ವಿಜಯವರ್ಗೀಯ, ಶಿವಪ್ರಕಾಶ್ ಮತ್ತು ಅರವಿಂದ್ ಮೆನನ್ ಈ ಜಯದ ಪ್ರಮುಖ ಶಿಲ್ಪಿಗಳೆಂದು ಗುರುತಿಸಲಾಗಿದೆ.

ಈ ಚುನಾವಣೆಯನ್ನು ಬಿಜೆಪಿ ಕೇವಲ ರಾಜಕೀಯ ಪೈಪೋಟಿಯಾಗಿ ನೋಡದೆ, ದೀರ್ಘಾವಧಿಯ ಸಂಘಟನಾ ಹೋರಾಟವಾಗಿ ಪರಿಗಣಿಸಿತು. ಈ ದಿಕ್ಕಿನಲ್ಲಿ ಅಮಿತ್ ಶಾ ಅವರ ಪಾತ್ರ ನಿರ್ಣಾಯಕವಾಗಿತ್ತು. ರಾಜ್ಯದಾದ್ಯಂತ ವ್ಯಾಪಕ ಪ್ರಚಾರ ನಡೆಸುವುದರ ಜೊತೆಗೆ, ಕ್ಷೇತ್ರವಾರು ವಿಶೇಷ ತಂತ್ರ ರೂಪಿಸಿ, ಬೂತ್ ಮಟ್ಟದ ಮಾಹಿತಿಯನ್ನು ಆಧರಿಸಿದ ಕಾರ್ಯಪದ್ಧತಿಯನ್ನು ಜಾರಿಗೆ ತಂದರು. ಅಕ್ರಮ ವಲಸೆ, ಕಾನೂನು ಸುವ್ಯವಸ್ಥೆ ಮತ್ತು ಅಭಿವೃದ್ಧಿ ವಿಚಾರಗಳನ್ನು ಮತದಾರರ ಮನಸ್ಸಿಗೆ ತಲುಪಿಸುವಲ್ಲಿ ಅವರು ತೋರಿದ ರಾಜಕೀಯ ಚಾಣಾಕ್ಷತನ ಈ ಗೆಲುವಿಗೆ ಬಲವಾಯಿತು.

ಈ ಸಮಗ್ರ ಕಾರ್ಯತಂತ್ರದ ಜತೆಗೆ ಸಂಘಟನಾ ಬಲವನ್ನು ಕಟ್ಟಿದವರು ಸುನೀಲ್ ಬನ್ಸಾಲ್. ರಾಜ್ಯದ ಪ್ರತಿಯೊಂದು ಬೂತ್ ಮಟ್ಟದಲ್ಲೂ ಕಾರ್ಯಕರ್ತರ ಜಾಲವನ್ನು ಬಲಪಡಿಸುವ ಮೂಲಕ ಬಿಜೆಪಿ ನೆಲಮಟ್ಟದಲ್ಲಿ ಬೇರೂರಲು ಅವರು ಕಾರಣರಾದರು. ಹೊಸ ಸದಸ್ಯರ ಸೇರ್ಪಡೆ, ಕಾರ್ಯಕರ್ತರ ತರಬೇತಿ ಮತ್ತು ನಿರಂತರ ಸಂಪರ್ಕದ ಮೂಲಕ ಪಕ್ಷದ ಮತಶಕ್ತಿಯನ್ನು ವಿಸ್ತರಿಸಿದ ಬನ್ಸಾಲ್ ಅವರ ಕಾರ್ಯಶೈಲಿ ಈ ಚುನಾವಣೆಯಲ್ಲಿ ಸ್ಪಷ್ಟವಾಗಿ ಪ್ರತಿಫಲಿಸಿತು.

ಇದಕ್ಕೆ ಪೂರಕವಾಗಿ ಕೈಲಾಶ್ ವಿಜಯವರ್ಗೀಯ ಅವರು ಬಂಗಾಳದಲ್ಲಿ ದೀರ್ಘಕಾಲದಿಂದ ಪಕ್ಷದ ಮುಖವಾಗಿ ಕಾರ್ಯನಿರ್ವಹಿಸಿದರು. ಟಿಎಂಸಿ ವಿರುದ್ಧ ಪರಿಣಾಮಕಾರಿ ಪ್ರಚಾರ ನಡೆಸಿ, ಸ್ಥಳೀಯ ರಾಜಕೀಯ ಸಮೀಕರಣಗಳನ್ನು ಬದಲಿಸುವಲ್ಲಿ ಅವರು ಪ್ರಮುಖ ಪಾತ್ರವಹಿಸಿದರು. ಕಾರ್ಯಕರ್ತರಲ್ಲಿ ಉತ್ಸಾಹ ತುಂಬುವ ಅವರ ಶೈಲಿ, ಚುನಾವಣಾ ಕಣದಲ್ಲಿನ ಬಿಜೆಪಿಯ ಚುರುಕುತನವನ್ನು ಹೆಚ್ಚಿಸಿತು.

ಶಿವ ಪ್ರಕಾಶ್ ಅವರು ಸಂಘ ಮತ್ತು ಪಕ್ಷದ ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸಿ, ನೆಲಮಟ್ಟದಲ್ಲಿ ಶಿಸ್ತುಬದ್ಧ ಕಾರ್ಯಪದ್ಧತಿಯನ್ನು ರೂಪಿಸಿದರು. ಆರ್‌ಎಸ್‌ಎಸ್ ಕಾರ್ಯಕರ್ತರ ಸಕ್ರಿಯ ತೊಡಗಿಸಿಕೊಳ್ಳುವಿಕೆ ಮತ್ತು ತಂತ್ರಾತ್ಮಕ ಮಾರ್ಗದರ್ಶನದ ಮೂಲಕ ಅವರು ಚುನಾವಣಾ ಕಾರ್ಯಾಚರಣೆಗೆ ದಿಕ್ಕು ನೀಡಿದರು. ಇದರಿಂದ ಬಿಜೆಪಿ ಸಂಘಟನೆಯು ಹೆಚ್ಚು ಸಂಯೋಜಿತವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಯಿತು. ಚುನಾವಣಾ ನಿರ್ವಹಣೆಯ ಇನ್ನೊಂದು ಪ್ರಮುಖ ಅಂಶವನ್ನು ಅರವಿಂದ್ ಮೆನನ್ ಅವರು ನೋಡಿಕೊಂಡರು. ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯಿಂದ ಹಿಡಿದು ಕ್ಷೇತ್ರವಾರು ಪ್ರಚಾರ ತಂತ್ರ ರೂಪಿಸುವವರೆಗೂ, ಸಂಪೂರ್ಣ ಚುನಾವಣಾ ಕಾರ್ಯತಂತ್ರವನ್ನು ಸಮನ್ವಯಗೊಳಿಸುವಲ್ಲಿ ಅವರು ತೋರಿದ ನಿಖರತೆ ಗಮನಾರ್ಹವಾಗಿತ್ತು. ಸಂಪನ್ಮೂಲಗಳ ಸರಿಯಾದ ಹಂಚಿಕೆ ಮತ್ತು ಪ್ರಚಾರದ ಪರಿಣಾಮಕಾರಿ ನಿರ್ವಹಣೆ ಬಿಜೆಪಿ ಪರ ಹಿತಕರ ವಾತಾವರಣ ನಿರ್ಮಿಸಿತು.

ಈ ಎಲ್ಲ ಅಂಶಗಳ ಒಟ್ಟಾರೆ ಪರಿಣಾಮವಾಗಿ, ದೀರ್ಘಕಾಲದಿಂದ ತೃಣಮೂಲ ಕಾಂಗ್ರೆಸ್ ಪ್ರಭಾವದಲ್ಲಿದ್ದ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಹೊಸ ರಾಜಕೀಯ ಅಧ್ಯಾಯವನ್ನು ಆರಂಭಿಸಿದೆ. ಈ ಫಲಿತಾಂಶ ಕೇವಲ ಒಂದು ರಾಜ್ಯದ ಆಡಳಿತ ಬದಲಾವಣೆಯಷ್ಟೇ ಅಲ್ಲ, ರಾಷ್ಟ್ರ ರಾಜಕೀಯದ ದಿಕ್ಕಿನ ಮೇಲೆಯೂ ಪರಿಣಾಮ ಬೀರುವಂತಹ ಮಹತ್ವದ ಬೆಳವಣಿಗೆಯಾಗಿದೆ.

ಕಿರುಸುದ್ದಿ

ಕುಸುಮಾ ನಾಗರಾಜ್‌ಗೆ ಉಡುಪಿ ಕಸಾಪ ಗೌರವ



• **ಉಡುಪಿ:** ಉಡುಪಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ನಡೆದ ಉಡುಪಿ ತಾಲೂಕು 16ನೇ ಕನ್ನಡ ಸಾಹಿತ್ಯ ಸಮ್ಮೇಳನ 'ಭೀಷ್ಮೋತ್ಸವ' ಕಾರ್ಯಕ್ರಮದಲ್ಲಿ ಪ್ರಜ್ಞಾ ಆಂಗ್ಲ ಮಾಧ್ಯಮ ಶಾಲೆಯ ಸಂಯೋಜಕಿ ಕುಸುಮಾ ನಾಗರಾಜ್ ಅವರಿಗೆ ಕಸಾಪ ಪುರಸ್ಕಾರ ನೀಡಿ ಗೌರವಿಸಲಾಯಿತು. ಇವರು ಶ್ರೀರಮಾನಂದ ಗುರೂಜಿಯವರ ಆಡಳಿತದಲ್ಲಿ ಕಾರ್ಯಾಚರಿಸುತ್ತಿರುವ ದೊಡ್ಡಣಗುಡ್ಡೆ ಶ್ರೀದುರ್ಗಾ ಆದಿಶಕ್ತಿ ಕ್ಷೇತ್ರದ ಉಸ್ತುವಾರಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಕೊಲೆ ಯತ್ನ ಪ್ರಕರಣ: ತಂದೆ, ಇಬ್ಬರು ಮಕ್ಕಳಿಗೆ 6 ವರ್ಷ ಸಜೆ

• **ಕಾಸರಗೋಡು:** ಹಿತ್ತಿಲ ಗಡಿ ವಿಷಯದಲ್ಲಿ ಉಂಟಾದ ವಿವಾದದಿಂದ ನೆರೆಮನೆಯ ವ್ಯಕ್ತಿಯನ್ನು ಮಾರಕಾಯುಧದಿಂದ ಹೊಡೆದು ಕೊಲೆಗೈಯ್ಯಲೆತ್ನಿಸಿದ ಪ್ರಕರಣದ ಆರೋಪಿಗಳಾದ ತಂದೆ ಮತ್ತು ಇಬ್ಬರು ಮಕ್ಕಳಿಗೆ ಕಾಸರಗೋಡು ಹೆಚ್ಚುವರಿ ಜಿಲ್ಲಾ ಸೆಶನ್ಸ್ ನ್ಯಾಯಾಲಯ (ತೃತೀಯ) 6 ವರ್ಷ ಸಜೆ ಹಾಗೂ ತಲಾ 50 ಸಾವಿರ ರೂ.ನಂತೆ ದಂಡ ವಿಧಿಸಿ ತೀರ್ಪು ನೀಡಿದೆ. ಪೆರಿಯ ನಾಲೇಕ್ರೆ ನಿವಾಸಿ ಕಣ್ಣನ್ (70), ಅವರ ಮಕ್ಕಳಾದ ಕೆ.ಮನೀಶ್ (34) ಮತ್ತು ಕೆ.ಬಿಜಿತ್ (32) ಎಂಬವರಿಗೆ ಈ ಶಿಕ್ಷೆ ವಿಧಿಸಲಾಗಿದೆ. ದಂಡ ಪಾವತಿಸದಿದ್ದಲ್ಲಿ ಆರೋಪಿಗಳು 6 ತಿಂಗಳು ಹೆಚ್ಚುವರಿ ಸಜೆ ಅನುಭವಿಸಬೇಕಾಗಿದೆ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ. 2020 ಮಾರ್ಚ್ 6ರಂದು ಬೆಳಗ್ಗೆ ಗಡಿಯ ವಿವಾದದ ಹೆಸರಿನಲ್ಲಿ ನೆರೆಮನೆ ನಿವಾಸಿ ನಾಲೇಕ್ರೆ ಪೀತಾಂಬರನ್ ನಾಯರ್‌ರ ಹಿತ್ತಿಲಿಗೆ ಅಕ್ರಮವಾಗಿ ನುಗ್ಗಿ ಹಲ್ಲೆ ನಡೆಸಿದ ದೂರಿನಂತೆ ಬೇಕಲ ಪೊಲೀಸರು ಈ ಮೂವರು ಆರೋಪಿಗಳ ವಿರುದ್ಧ ಕೊಲೆಯತ್ನ ಪ್ರಕರಣ ದಾಖಲಿಸಿಕೊಂಡಿದ್ದರು.

ನಿಧನ ಸುದ್ದಿ

ಸಾರೆಪ್ಪಾಡಿ ನಡುಮನೆ ಕೃಷ್ಣಪ್ಪ ಗೌಡ



ನಿಡ್ಪಳ್ಳಿ: ಬಡಗನ್ನೂರು ಗ್ರಾಮದ ಸಾರೆಪ್ಪಾಡಿ ನಡುಮನೆ ಕೃಷ್ಣಪ್ಪ ಗೌಡ (73) ಅಲ್ಪಕಾಲದ ಅಸೌಖ್ಯದಿಂದ ಮಂಗಳೂರು ಆಸ್ಪತ್ರೆಯಲ್ಲಿ ಮೇ 2ರಂದು ನಿಧನರಾದರು. ಅವರು ಹಿಂದೆ ಕೆಲವು ವರ್ಷ ಊರ ಗೌಡರಾಗಿ ಕೆಲಸ ಮಾಡಿದ್ದರು. ಮುಡಿಪುನಡ್ಕ ಶ್ರೀಕೃಷ್ಣ ಭಜನಾ ಮಂದಿರದ ಸ್ಥಾಪಕ ಸದಸ್ಯರಾಗಿದ್ದರು. ಮೃತರು ಪತ್ನಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಶಶಿಕಲಾ ಎಸ್. ಕೋಟ್ಯಾನ್



ಮುಲ್ಕಿ: ಇಲ್ಲಿಗೆ ಸಮೀಪದ ಚಿತ್ರಾಪು ಘಜನಿ ಬಳಿಯ ನಿವಾಸಿ ಶಶಿಕಲಾ ಎಸ್. ಕೋಟ್ಯಾನ್ (83) ವಯೋಸಹಜದಿಂದ ಸ್ವಗೃಹದಲ್ಲಿ ಭಾನುವಾರ ಬೆಳಗ್ಗೆ ನಿಧನರಾದರು. ಅವರು ಮುಲ್ಕಿ ನಗರ ಪಂಚಾಯತ್ ಮಾಜೀ ಸದಸ್ಯ ಯೋಗೀಶ್ ಕೋಟ್ಯಾನ್ ಸಹಿತ 5 ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಅವರು ಹಿರಿಯ ಕೃಷಿಕೆಯಾಗಿ, ಹಿಂದಿನ ಮುಲ್ಕಿ ಪುರಸಭೆಯ ಸದಸ್ಯೆಯಾಗಿ, ಕಾಂಗ್ರೆಸ್ ಪಕ್ಷದ ಹಿರಿಯ ಮಹಿಳಾ ಶಕ್ತಿಯಾಗಿ, ಕೊಡುಗೈ ದಾನಿಯಾಗಿ, ಜನಾನುರಾಗಿಯಾಗಿದ್ದರು.

ಸದಾಶಿವ ಭಂಡಾರಿ



ಕೈಕಂಬ: ಗುಜರಾತ್‌ನಲ್ಲಿ ಖಾಸಗಿ ಕಂಪೆನಿಯೊಂದರಲ್ಲಿ ಉನ್ನತ ಹುದ್ದೆಯಲ್ಲಿದ್ದ ಗುರುಪುರ ಕಾರಮೊಗರುಗುತ್ತು ಸದಾಶಿವ ಭಂಡಾರಿ (77) ಅವರು ಅಲ್ಪಕಾಲದ ಅನಾರೋಗ್ಯದಿಂದ ವಾಮಂಜೂರಿನ ಸ್ವಗೃಹದಲ್ಲಿ ಮೇ 3ರಂದು ನಿಧನ ಹೊಂದಿದರು. ಮೃತರು ಇಬ್ಬರು ಪುತ್ರರು ಹಾಗೂ ಬಂಧುಮಿತ್ರರನ್ನು ಅಗಲಿದ್ದಾರೆ.

ಪುಷ್ಪಾವತಿ

ಕಾಸರಗೋಡು: ಬೀರಂತಬೈಲು ನಿವಾಸಿ ದಿ.ಸರ್ವೋತ್ತಮ ಎಂಬವರ ಪತ್ನಿ ಪುಷ್ಪಾವತಿ (82) ನಿಧನ ಹೊಂದಿದರು. ಮೃತರು ಮಕ್ಕಳಾದ ಶೋಭನಾ, ಶ್ರೀರಾಮಮೂರ್ತಿ, ಹರೀಶ, ಆಶಾ, ತಾರಕೇಶ, ಸಂತೋಷ ಅವರನ್ನು ಅಗಲಿದ್ದಾರೆ.

ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆ

ಸುಜ್ಞಾನ ಮಾರ್ಗದಲ್ಲಿ ನಡೆಯೋಣ: ಕೃಷ್ಣಾಪುರ ಶ್ರೀ



• **ಪಡುಬಿದ್ರಿ:** ನಮ್ಮ ಬದುಕಿನ ಅವಿಭಾಜ್ಯ ಅಂಗ ದೇವಸ್ಥಾನವಾಗಿದೆ. ದೇವಳದ ಪ್ರತೀ ಅವಯವಗಳಲ್ಲೂ ದೇವರ ಸನ್ನಿಧಾನ ಇದೆ. ಪ್ರತಿಯೊಬ್ಬರ ಹೃದಯದಲ್ಲಿಯೂ ದೇವರ ಸನ್ನಿಧಾನ ಇರುತ್ತದೆ. ಆ ನಿಟ್ಟಿನಲ್ಲಿ ಮಹಾರುದ್ರನ ಆರಾಧನೆಯುನಮ್ಮಲ್ಲಿಕ್ಷೇಮವನ್ನುಕರುಣಿಸುತ್ತದೆ. ಅಂತಹ ದೇವರನ್ನು ಒಳ್ಳೆಯ ಸ್ಥಾನದಲ್ಲಿ ಪ್ರತಿಷ್ಠಾಪಿಸಿ ಆರಾಧಿಸಬೇಕಿದೆ. ಅದರಿಂದ ಮನಸ್ಸಿನ ಪ್ರಸನ್ನತೆಗೆ ಕಾರಣವಾಗಲಿದೆ. ಸುಜ್ಞಾನ ಮಾರ್ಗದಲ್ಲಿ ಜಾಗರೂಕರಾಗಿ ನಡೆದು ದೇವರ ಅನುಗ್ರಹ ಜೊತೆಗೆ ಸುಖ ಪ್ರಾಪ್ತಿಯಾಗಲಿ ಎಂದು ಉಡುಪಿ ಶ್ರೀಕೃಷ್ಣಾಪುರ ಮಠಾಧೀಶರಾದ ಶ್ರೀ ವಿದ್ಯಾಸಾಗರ ತೀರ್ಥ ಶ್ರೀಪಾದರು ಹೇಳಿದರು.

ಅವರು ಮೇ 3ರಂದು ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿನ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ದೀಪ ಬೆಳಗಿಸಿ ಉದ್ಘಾಟಿಸಿ ಆಶೀರ್ವಚಿಸಿದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಪಡುಬಿದ್ರಿಯ ಮಹಾಲಿಂಗೇಶ್ವರ ದೇಗುಲ ಕಲಾತ್ಮಕ ದೇವಳವಾಗಿ ಮೂಡಿಬಂದಿದೆ. ರಾಜ್ಯದ ಮುಜರಾಯಿ ಇಲಾಖೆಯ 34500 ದೇವಸ್ಥಾನದಲ್ಲಿ 15000 ದೇಗುಲದಲ್ಲಿ ಪೂಜೆಗೂ ತತ್ವಾರವಿದೆ. ಆ ನಡುವೆಯೂ ಐತಿಹಾಸಿಕ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನವು ರಾಮ ಮಂದಿರದಂತೆ ಕಂಗೊಳಿಸುತ್ತಿದೆ. ಎಲ್ಲರೂ ಅಭಿವೃದ್ಧಿಯಲ್ಲಿ ಕೈ ಜೋಡಿಸುವ ಮೂಲಕ ಸಮಚಿತ್ತದ ದೇವಾಲಯವಾಗಿ ನಿರ್ಮಾಣಗೊಂಡು ಅದ್ಭುತವಾಗಿ ಮೂಡಿಬಂದಿದೆ ಎಂದರು.

ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಅನುವಂಶಿಕ ಅರ್ಚಕರಾದ ಲಕ್ಷ್ಮೀನಾರಾಯಣ ಆಸ್ರಣ್ಣ ಅವರು ಮಾತನಾಡಿ, ನಾವು ಸನಾತನ ಹಿಂದೂ ಧರ್ಮದಲ್ಲಿ ಜನಿಸಿದ್ದಕ್ಕೆ ಕೃತಾರ್ಥರಾಗಿರಬೇಕು. ದೇವಾಲಯಗಳ ನಾಡಿನಲ್ಲಿ ಕಣ್ಣಿಗೆ ಕಾಣದ ಅವ್ಯಕ್ತ ಶಕ್ತಿಯಾಗಿ ದೇವರು ನಮ್ಮನ್ನು ಸದಾ ರಕ್ಷಿಸುತ್ತಾರೆ. ನಂಬಿಕೆಯೇ ನಮ್ಮ ಶಕ್ತಿಯಾಗಿದೆ ಎಂದರು.

ಮಾಜಿ ಶಾಸಕ ರಘುಪತಿ ಭಟ್ ಮಾತನಾಡಿ, ದೇಗುಲ ಪ್ರವಾಸೀ ತಾಣ ಪಡುಬಿದ್ರಿಯಾಗಲಿದೆ ಎಂದರು. ಸಗ್ರಿ ಗೋಪಾಲಕೃಷ್ಣ ಸಾಮಗ ಅವರು, ದೇವಸ್ಥಾನಗಳು ಮನಸ್ಸಿಗೆ ನೆಮ್ಮದಿಯನ್ನು ನೀಡುತ್ತದೆ. ಅಂತಹಾ ಸುಂದರ ದೇಗುಲವು ಇಲ್ಲಿ ಲೋಕಾರ್ಪಣೆಯಾಗಿದೆ ಎಂದರು. ಪ್ರಕಾಶ್ ಮಲ್ಪೆ ಮಾತನಾಡಿ, ಪಂಚಭೂತಗಳ ತತ್ವದಲ್ಲಿ ನಾವು ಶಿವನ ಪೂಜೆ ಮಾಡಬಹುದಾಗಿದೆ ಎಂದರು. ಮಾಜಿ ಸಂಸದ ನಳಿನ್ ಕುಮಾರ್ ಕಟೀಲು ಮಾತನಾಡಿ, ಶಿವನಂತೆ ಆಗಿ ಶಿವನನ್ನು ಅರ್ಚನೆ ಮಾಡೋಣ ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಉದ್ಯಮಿ ಡಾ. ಕೆ. ಪ್ರಕಾಶ್ ಶೆಟ್ಟಿ ಮಾತನಾಡಿ, ಪಡುಬಿದ್ರಿಯ ಭಕ್ತರ ಮುಖದಲ್ಲಿನ ಸಂತೋಷವನ್ನು ಕಂಡಿದ್ದೇನೆ. ನನ್ನ, ಪಡುಬಿದ್ರಿಯ ಹತ್ತಿರದ ಸಂಬಂಧವು ಇದೀಗ ಇನ್ನಷ್ಟು ಗಾಢವಾಗಿದೆ. ಈ ಊರಿನ ಜನತೆ ಇರಿಸಿದ ವಿಶ್ವಾಸದ ಕರೆಗೆ ಓಗೊಟ್ಟು ಜವಾಬ್ದಾರಿಯನ್ನು ಸ್ವೀಕರಿಸಿ ದೇಗುಲವನ್ನು ನಿಮ್ಮೊಂದಿಗೆ ಸೇರಿ ಸಂಘಟನಾತ್ಮಕವಾಗಿ ಕಟ್ಟಿದ್ದೇವೆ. ತಾನು ನಿಮಿತ್ತ ಮಾತ್ರ ಎಂದರು.

ದಾನಿಗಳಾದ ಕೆ. ಎಂ. ಶೆಟ್ಟಿ ಮುಂಬಯಿ, ಕೊರ್ನಾಯ ಪದ್ಮನಾಭ ರಾವ್, ರಾಘವೇಂದ್ರ ಭಟ್, ಅನಂತ್ರಾಜ್ ಪಡುಬಿದ್ರಿ, ಆಶಾ ಸದನ ಪಡುಬಿದ್ರಿಯ ರಾಜೇಶ್ವರೀ ಪ್ರಸಾದ್ ಶೆಟ್ಟಿ, ಆದರ್ಶ ಸತೀಶ್ಭಂಡಾರಿ, ಅರ್ಚನಾ ಸಚಿತ್‌ಶೆಟ್ಟಿ, ಸೀತಾರಾಮ್ ಎಲ್. ಶೆಟ್ಟಿ ಪುಚ್ಚೊಟ್ಟುಬೀಡು, ಅವರಾಲು ಕಂಕಣಗುತ್ತು ಕೃಷ್ಣ ಶೆಟ್ಟಿ, ಬಗ್ಗೇಡಿಗುತ್ತು ಶೇಖರ ಶೆಟ್ಟಿ, ರಾಮಚಂದ್ರ ಉಪಾಧ್ಯಾಯ, ಶಿವಾನಂದ ಶೆಟ್ಟಿ ಎರ್ಮಾಳು, ಗುಡ್ಡೆಚ್ಚಿ ದಿ. ಸೀತಾರಾಮ ಭಟ್, ದಿ. ನಾರಾಯಣ ಭಟ್ ಕುಟುಂಬಿಕರು, ಪಾವಂಜೆ ಸುಧಾಕರ ರಾವ್ ಮಹೇಶ್ ಶೆಟ್ಟಿ ಮುಂಬಯಿ, ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವಗಳ ರೂವಾರಿ ಡಾ. ಕೆ. ಪ್ರಕಾಶ್ ಶೆಟ್ಟಿ ಹಾಗೂ ಅನುವಂಶಿಕ ಮೊಕ್ತೇಸರರಾದ ಪಡುಬಿದ್ರಿ ಬೀಡು ರತ್ನಾಕರ ರಾಜ್ ಅರಸು ಕಿನ್ಯಕ್ಕ ಬಲ್ಲಾಳರು, ಪೇಟೆಮನೆ ಭವಾನಿಶಂಕರ ಹೆಗ್ಡೆ, ಕೊರ್ನಾಯ ಶ್ರೀಪತಿ ರಾವ್ ಅವರನ್ನು ಶ್ರೀ ಕೃಷ್ಣಾಪುರ ಶ್ರೀಗಳು ಸನ್ಮಾನಿಸಿ ಗೌರವಿಸಿದರು.

ಸುಜಯ ಕುಮಾರ್‌ಶೆಟ್ಟಿ ಕಾರ್ಕಳ, ಕೊರ್ನಾಯ ಪದ್ಮನಾಭ ರಾವ್, ಅವರಾಲು ಕಂಕಣಗುತ್ತು ಕೃಷ್ಣ ಶೆಟ್ಟಿ, ಮುಂಡ್ಕೂರು ಪ್ರಸಾದ ಶೆಟ್ಟಿ, ಎಂಆರ್‌ಜಿ ಸಿಇಒ ನರಹರಿ ರಾವ್, ಮಹೇಶ್ ಶೆಟ್ಟಿ ಮುಂಬಯಿ, ರಮೇಶ್ ಶೆಟ್ಟಿ ಮುಂಬಯಿ, ರಾಘವೇಂದ್ರ ಭಟ್, ವಿಜಯ ಶೆಟ್ಟಿ ಮುಂಬಯಿ, ಶೇಖರ ಶೆಟ್ಟಿ ಬಗ್ಗೇಡಿಗುತ್ತು, ಪಿಡಿಒ ಮಂಜುನಾಥ ಶೆಟ್ಟಿ ಮತ್ತಿತರರು ವೇದಿಕೆಯಲ್ಲಿದ್ದರು.

ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು. ನಿತೇಶ್ ಶೆಟ್ಟಿ ಎಕ್ಕಾರು ಕಾರ್ಯಕ್ರಮ ನಿರೂಪಿಸಿದರು. ನವೀನ್ಚಂದ್ರ ಜೆ. ಶೆಟ್ಟಿ ವಂದಿಸಿದರು.

> ದೇವಳದ ಪ್ರತೀ ಅವಯವಗಳಲ್ಲೂ ದೇವರ ಸನ್ನಿಧಾನ ಇದೆ. ಪ್ರತಿಯೊಬ್ಬರ ಹೃದಯದಲ್ಲಿಯೂ ದೇವರ ಸನ್ನಿಧಾನ ಇರುತ್ತದೆ. ಆ ನಿಟ್ಟಿನಲ್ಲಿ ಮಹಾರುದ್ರನ ಆರಾಧನೆಯು ನಮ್ಮಲ್ಲಿ ಕ್ಷೇಮವನ್ನು ಕರುಣಿಸುತ್ತದೆ.
> ■ ಶ್ರೀ ವಿದ್ಯಾಸಾಗರ ತೀರ್ಥ ಶ್ರೀಪಾದರು

ಪಂಚ ರಾಜ್ಯಗಳ ಚುನಾವಣೆಯಲ್ಲಿ ಎನ್‌ಡಿಎ ಜಯಭೇರಿ

ಉಪ್ಪಿನಂಗಡಿಯಲ್ಲಿ ಬಿಜೆಪಿ ಸಂಭ್ರಮ



• **ಉಪ್ಪಿನಂಗಡಿ:** ಪಂಚ ರಾಜ್ಯಗಳ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿ ಕೂಟವು ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಅಧಿಕಾರಕ್ಕೆ ಬಂದಿದ್ದು, ಕೇರಳ ಹಾಗೂ ತಮಿಳುನಾಡು ರಾಜ್ಯಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಹಿನ್ನೆಲೆಯಲ್ಲಿ ಉಪ್ಪಿನಂಗಡಿಯ ಬಸ್ ನಿಲ್ದಾಣ ಬಳಿ ಬಿಜೆಪಿ ವತಿಯಿಂದ ವಿಜಯೋತ್ಸವ ನಡೆಯಿತು.

ಈ ಸಂದರ್ಭ ಮಾತನಾಡಿದ ಮಾಜಿ ಶಾಸಕ ಸಂಜೀವ ಮಠಂದೂರು, ಈ ಗೆಲುವು ಪ್ರಜಾತಂತ್ರ ವ್ಯವಸ್ಥೆ ಭದ್ರ ವಾಗುತ್ತಿದೆ ಎನ್ನುವುದಕ್ಕೆ ಸಾಕ್ಷಿ. ಎನ್‌ಡಿಎ ಮೈತ್ರಿಕೂಟದ ಈ ಗೆಲುವು ಇಡೀ ಜಗತ್ತು ಭಾರತವನ್ನು ತಿರುಗಿ ನೋಡುವಂತೆ ಮಾಡಿದೆ. ಬಿಜೆಪಿಯಿಂದ ಹಾಗೂ ನರೇಂದ್ರ ಮೋದಿಯವರಿಂದ ಮಾತ್ರ ಈ ದೇಶಕ್ಕೆ ಭವಿಷ್ಯ ಎಂದು ಜನರು ತೀರ್ಮಾನಿಸಿ ಈ ಮೂಲಕ ಹಿಂದುತ್ವದ ಕಹಳೆಯನ್ನು ಊದಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಪಕ್ಷವನ್ನು ಸೋಲಿಸಿ ಬಿಜೆಪಿಗೆ ಸ್ಪಷ್ಟ ಬಹುಮತವನ್ನು ನೀಡುವ ಮೂಲಕ ಪಶ್ಚಿಮ ಬಂಗಾಳದಲ್ಲಿ ಮುಂದಿನ ಅಭಿವೃದ್ಧಿಗೆ ನಾಂದಿ ಹಾಡಿ ದ್ದಾರೆ. ಇದಕ್ಕೆ ಶ್ರಮಿಸಿದ ರಾಷ್ಟ್ರ, ರಾಜ್ಯ ನಾಯಕರಾದಿಯಾಗಿ ಸಾಮಾನ್ಯ ಕಾರ್ಯಕರ್ತರಿಗೂ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಬಿಜೆಪಿಯ ಪುತ್ತೂರು ಗ್ರಾಮಾಂತರ ಮಂಡಲದ ಪ್ರಧಾನ ಕಾರ್ಯದರ್ಶಿ ಸುನೀಲ್ ಕುಮಾರ್ ದಡ್ಡು, ಉಪಾಧ್ಯಕ್ಷ ವಿದ್ಯಾಧರ ಜೈನ್, ಬಿಜೆಪಿಯ ಉಪ್ಪಿನಂಗಡಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸುರೇಶ ಅತ್ರಮಜಲು, ಬಿಜೆಪಿ ಜಿಲ್ಲಾ ಪ್ರಕೋಷ್ಠದ ಸಹ ಸಂಚಾಲಕ ಪುರುಷೋತ್ತಮ ಮುಂಗ್ಲಿಮನೆ, ಬಿಜೆಪಿ ಉಪ್ಪಿನಂಗಡಿ ಶಕ್ತಿ ಕೇಂದ್ರದ ಸಂಚಾಲಕ ಪ್ರಸಾದ್ ಬಂಡಾರಿ, ಹಿರೇಬಂಡಾಡಿ ಶಕ್ತಿಕೇಂದ್ರದ ಸಂಚಾಲಕ ನಿತಿನ್, ಉಪ್ಪಿನಂಗಡಿ ಸಿಎ ಬ್ಯಾಂಕ್ ಉಪಾಧ್ಯಕ್ಷ ದಯಾನಂದ ಸರೋಳಿ, ನಿರ್ದೇಶಕ ವಸಂತ ಪಿಜಕ್ಕಳ, ಮಾಜಿ ನಿರ್ದೇಶಕ ರಾಮಚಂದ್ರ ಮಣಿಯಾಣಿ, ಪ್ರಮುಖರಾದ ಉಮೇಶ್ ಶೆಣೈ, ಸಂತೋಷ್ ಕುಮಾರ್ ಪಂದಾರ್ಜೆ, ಸದಾನಂದ ನೆಕ್ಕಿಲಾಡಿ, ಸುಜಾತ ರೈ ಅಲಿಮಾರ್, ಉಷಾಚಂದ್ರ ಮುಳಿಯ, ಹರೀಶ್ ದರ್ಬೆ, ಯತೀಶ್ ಶೆಟ್ಟಿ, ಆದೇಶ್ ಶೆಟ್ಟಿ, ಕಂಗ್ವೆ ವಿಶ್ವನಾಥ ಶೆಟ್ಟಿ, ಸುರೇಶ ಪಂಚೇರು, ನವೀನ ಪೆರಿಯಡ್ಕ, ಸುಬ್ರಾಯ ನಾಯಕ್ ಅಜಿರಾಳ, ಹರೀಶ್ ಪಟ್ಲ, ಶೇಖರ ಮಡಿವಾಳ, ರಮೇಶ ಸುಭಾಶ್‌ನಗರ, ಕೃಷ್ಣ ಕೋಟೆ ಮತ್ತಿತರರು ಉಪಸ್ಥಿತರಿದ್ದರು. ವಿಜಯೋತ್ಸವದ ಅಂಗವಾಗಿ ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಲಾಯಿತು

ಕೊಡಗಿನ ವಿವಿಧೆಡೆ ವಿಜಯೋತ್ಸವ



• **ಮಡಿಕೇರಿ:** ಜಿಲ್ಲಾ ಕೇಂದ್ರ ಮಡಿಕೇರಿಯ ಇಂದಿರಾಗಾಂಧಿ ವೃತ್ತದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು, ಸಿಹಿ ಹಂಚಿ,ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ಪಕ್ಷದ ಜಿಲ್ಲಾಧ್ಯಕ್ಷ ನಾಪಂಡ ರವಿಕಾಳಪ್ಪ, ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಪಿ.ಸುನಿಲ್ ಸುಬ್ರಮಣಿ, ಜಿಲ್ಲಾ ಉಪಾಧ್ಯಕ್ಷರಾದ ಬಿ.ಕೆ.ಅರುಣ್ ಕುಮಾರ್, ಮನು ಮಂಜುನಾಥ್, ಮಾಜಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ, ನಗರಸಭಾ ಅಧ್ಯಕ್ಷೆ ಕಲಾವತಿ, ನಗರ ಅಧ್ಯಕ್ಷ ಉಮೇಶ್ ಸುಬ್ರಮಣಿ, ಬಿ.ಕೆ.ಜಗದೀಶ್, ಜಿ.ಎಂ. ಸತೀಶ್ ಪೈ, ಶಜಿಲ್ ಕೃಷ್ಣನ್, ಎಸ್.ಸಿ. ಸತೀಶ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ, ನಗರಸಭೆಯ ಬಿಜೆಪಿ ಸದಸ್ಯರು, ಎಸ್.ಸಿ.ಮೋರ್ಚಾದ ಪಿ.ಎಂ.ರವಿ ಸೇರಿದಂತೆ ಹಲವು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕುಶಾಲನಗರ ವರದಿ: ಕೂಡುಮಂಗಳೂರು ಶಕ್ತಿ ಕೇಂದ್ರದ ವತಿಯಿಂದ, ಗ್ರಾ.ಪಂ. ವ್ಯಾಪ್ತಿಯ ಬಿಜೆಪಿ ಪಕ್ಷದ ಕಾರ್ಯಕರ್ತರು ಕೂಡಿಗೆಯ ಡೈರಿ ಸರ್ಕಲ್‌ನಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಶಕ್ತಿ ಕೇಂದ್ರದ ಅಧ್ಯಕ್ಷ ದಿನೇಶ್, ಉಪಾಧ್ಯಕ್ಷ ಧರ್ಮ, ಕೂಡುಮಂಗಳೂರು ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಮನು ನಂಜುಂಡ, ಇಂದಿರಾ ರಮೇಶ್, ಕೂಡುಮಂಗಳೂರು ಶಕ್ತಿ ಕೇಂದ್ರ ಮಾಜಿ ಅಧ್ಯಕ್ಷ ಮಂಜುನಾಥ, ಕೆ. ವರದ, ತಾ.ಪಂ. ಮಾಜಿ ಸದಸ್ಯ ಗಣೇಶ್, ಓ.ಬಿ.ಸಿ ಮಂಡಲ ಕಾರ್ಯದರ್ಶಿ ರವಿ ಪಕ್ಕಿ, ಸಹಕಾರ ಸಂಘದ ನಿರ್ದೇಶಕ ಎಸ್. ಎಸ್. ಕೃಷ್ಣ, ಕೂಡಿಗೆ ಗ್ರಾಮ ಪಂಚಾಯತ್ ಅಧ್ಯಕ್ಷೆ ಮಂಗಳಾ ಪ್ರಕಾಶ್, ಪಕ್ಷದ ಪ್ರಮುಖರಾದ ಕೇಶವ ರೈ, ಎಂ. ಬಿ. ಮಹೇಶ್, ಲೋಕೇಶ್, ಸುಬ್ಬಯ್ಯ, ಯೋಗೇಶ್, ರಾಜು, ಲೋಹಿತ್, ಚಂದ್ರು ಮೂಡ್ಲಿಗೌಡ, ಮಂಜುನಾಥ, ಮಣಿಕಂಠ, ಪದ್ಮಾ, ಕನಕಾ, ಅನಿತಾ ಮತ್ತಿತರರು ಹಾಜರಿದ್ದರು.

ಆಳ್ವಾಸ್ ಕಾಲೇಜಿನಲ್ಲಿ ರ್‍ಯಾಂಕ್ ಸಾಧಕರಿಗೆ ಸನ್ಮಾನ

ದಿಶಾಗೆ 3, ರಕ್ಷಿತಾಗೆ 2 ಲಕ್ಷ ನಗದು





• **ಮೂಡುಬಿದಿರೆ:** ದ್ವಿತೀಯ ಪಿಯು ಅಂತಿಮ ಪರೀಕ್ಷೆಯಲ್ಲಿ ರಾಜ್ಯದ ಅಗ್ರಗಣ್ಯ 10 ರ್‍ಯಾಂಕ್‌ನ ಒಳಗೆ ಸ್ಥಾನ ಪಡೆದ ಆಳ್ವಾಸ್ ಪದವಿಪೂರ್ವ ಕಾಲೇಜಿನ 103 ವಿದ್ಯಾರ್ಥಿಗಳ ಜೊತೆಯಲ್ಲಿ ಎಸ್‌ಎಸ್‌ಎಲ್‌ಸಿ ಹಂತದಲ್ಲಿ 50%ಕ್ಕಿಂತ ಕಡಿಮೆ ಅಂಕಗಳಿಸಿ, ನಂತರ ಪದವಿಪೂರ್ವ ಶಿಕ್ಷಣಕ್ಕೆ ಆಳ್ವಾಸ್ ಸೇರಿದ ನಂತರ 95%ಕ್ಕಿಂತಲೂ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ವತಿಯಿಂದ ಗೌರವಿಸುವ ಕಾರ್ಯಕ್ರಮ ಭಾನುವಾರ ನುಡಿಸಿರಿ ಸಭಾಂಗಣದಲ್ಲಿ ನಡೆಯಿತು.

ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಮೋಹನ್ ಆಳ್ವ, ನೀವು ಈಗ ಕೇವಲ ನಮ್ಮ ವಿದ್ಯಾರ್ಥಿಗಳಲ್ಲ, ನಮ್ಮ ಸಂಸ್ಥೆಯ ರಾಯಭಾರಿಗಳಾಗುವವರು. ಇಲ್ಲಿ ಕಲಿತಿರುವ ಶಿಸ್ತಿನ ಜೊತೆಗೆ ಉತ್ತಮ ಸ್ವಭಾವ, ಹೋರಾಟ ಮನೋಭಾವ ಹಾಗೂ ಕೂಡಿ ಬಾಳುವ ಗುಣಗಳು ನಿಮ್ಮ ಮುಂದಿನ ಜೀವನಕ್ಕೆ ದಾರಿದೀಪವಾಗಲಿ ಎಂದರು.

ಆಳ್ವಾಸ್‌ನ್ನು 'ಮಿನಿ ಇಂಡಿಯಾ' ಎಂದು ಕರೆಯಲಾಗುತ್ತದೆ. ದೇಶದ ವಿವಿಧ ಭಾಗಗಳಿಂದ ಬಂದ ವಿದ್ಯಾರ್ಥಿಗಳು ಇಲ್ಲಿ ಒಂದೇ ಕುಟುಂಬದಂತೆ ಬೆರೆತು ಬದುಕುತ್ತಾರೆ. ಭಾಷೆ, ಸಂಸ್ಕೃತಿ, ಸಂಪ್ರದಾಯಗಳ ವೈವಿಧ್ಯತೆಯ ನಡುವೆಯೂ ಒಗ್ಗಟ್ಟಿನಿಂದ ಬದುಕುವುದನ್ನು ಕಲಿಸುತ್ತದೆ. ಈ ಅನುಭವವು ನಿಮ್ಮನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುತ್ತದೆ. ನೀವು ಎಲ್ಲಿಗೆ ಹೋದರೂ ಈ ಒಗ್ಗಟ್ಟಿನ ಸಂದೇಶವನ್ನು ಸಮಾಜಕ್ಕೆ ಹಂಚುವ ಜವಾಬ್ದಾರಿ ನಿಮ್ಮ ಮೇಲಿದೆ. ಮುಂದಿನ ಶೈಕ್ಷಣಿಕ ವಿಸ್ತರಣೆಯ ಭಾಗವಾಗಿ, ಈ ವರ್ಷದಿಂದ ಎಂಬಿಬಿಎಸ್ ಕೋರ್ಸ್ ಪ್ರಾರಂಭಿಸಲಾಗುವುದು ಎಂದ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ಮಾನವೀಯ ಸ್ಪರ್ಶ ಅತ್ಯಂತ ಮುಖ್ಯ ಎಂದರು.

ವಾಣಿಜ್ಯ ವಿಭಾಗದಲ್ಲಿ 600ಕ್ಕೇ 600 (ಪೂರ್ಣಾಂಕ) ಅಂಕ ಪಡೆದ ದಿಶಾಳಿಗೆ 3 ಲಕ್ಷ ನಗದು ಹಾಗೂ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನಿಯಾದ ರಕ್ಷಿತಾ ಮಂಜುನಾಥ್‌ಳಿಗೆ 2 ಲಕ್ಷ ನಗದಿನೊಂದಿಗೆ ಸನ್ಮಾನಿಸಲಾಯಿತು.

ಆಳ್ವಾಸ್ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರೊ. ಮೊಹಮ್ಮದ್ ಸದಾಕತ್, ಉಪಪ್ರಾಂಶುಪಾಲೆ ಝೂನ್ಸಿ ಪಿ. ಎನ್. ಹಾಗೂ ವಿವಿಧ ಶೈಕ್ಷಣಿಕ ವಿಭಾಗಗಳ ಮುಖ್ಯಸ್ಥರು ಇದ್ದರು. ವೇಣುಗೋಪಾಲ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

ವಿದೇಶಿ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ

ಹೋಂಸ್ಟೇ ಮಾಲಕರಿಗೆ ಷರತ್ತುಬದ್ಧ ಜಾಮೀನು

• **ಮಡಿಕೇರಿ:** ಅಮೆರಿಕ ಮೂಲದ ಪ್ರವಾಸಿ ಮಹಿಳೆಯ ಮೇಲೆ ನಡೆದ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿದ್ದ ಕುಟ್ಟದ ಹೋಂಸ್ಟೇ ಮಾಲಕರಿಗೆ ಎರಡು ವಾರಗಳ ಬಳಿಕ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದೆ.

ಹೋಂಸ್ಟೇಯ ಸಿಬ್ಬಂದಿ ಬ್ರಜೇಶ್ ಎಂಬಾತ ವಿದೇಶಿ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿದ ಆರೋಪದಡಿ ಬಂಧನಕ್ಕೊಳಗಾಗಿದ್ದರೆ, ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸಿದ ಆರೋಪದ ಮೇಲೆ ಹೋಂಸ್ಟೇ ಮಾಲಕ ವಿಶಾಲ್‌ನನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿತ್ತು. ಈ ನಡುವೆ ಹೋಂಸ್ಟೇ ಮಾಲಕರು ಜಾಮೀನಿಗಾಗಿ ಭಾರೀ ಪ್ರಯತ್ನ ನಡೆಸಿದ್ದರಾದರೂ, ಅದು ಸಫಲವಾಗಿರಲಿಲ್ಲ.

ಇದೀಗ ಎರಡು ವಾರಗಳ ಬಳಿಕ ನ್ಯಾಯಾಲಯ ಜಾಮೀನು ಮಂಜೂರು ಮಾಡಿದ್ದು, ವಿಶಾಲ್ ಅವರಿಗೆ ರೂ.1 ಲಕ್ಷ ವೈಯಕ್ತಿಕ ಬಾಂಡ್ ಮತ್ತು ಅದೇ ಮೊತ್ತದ ಇಬ್ಬರು ಶ್ಯೂರಿಟಿಗಳ ಮೇಲೆ ಜಾಮೀನು ನೀಡಲಾಗಿದೆ. ಅಲ್ಲದೆ ಎಲ್ಲಾ ವಿಚಾರಣೆಗಳಿಗೆ ಹಾಜರಾಗುವಂತೆ ಮತ್ತು ಸಾಕ್ಷಿಗಳು ಅಥವಾ ಸಾಕ್ಷ್ಯಗಳನ್ನು ಹಾಳು ಮಾಡದಂತೆ, ಪೂರ್ವಾನುಮತಿ ಇಲ್ಲದೆ ನ್ಯಾಯ ವ್ಯಾಪ್ತಿಯನ್ನು ಬಿಡದಂತೆ ಮತ್ತು ತನಿಖೆಗೆ ಸಂಪೂರ್ಣವಾಗಿ ಸಹಕರಿಸುವಂತೆ ನ್ಯಾಯಾಲಯವು ಅವರಿಗೆ ಸೂಚಿಸಿದೆ ಎಂದು ಅವರ ವಕೀಲ ಕೊಕ್ಕಂಡ ಅಪ್ಪಣ್ಣ ಹೇಳಿದ್ದಾರೆ.

ಕುಟ್ಟದಲ್ಲಿ ನಡೆದ ಈ ಅಹಿತಕರ ಘಟನೆಯ ಬಳಿಕ ಎಚ್ಚೆತ್ತುಕೊಂಡಿರುವ ಕರ್ನಾಟಕ ಸರ್ಕಾರವು, ಪ್ರಕರಣದಲ್ಲಿ ಆಡಳಿತಾತ್ಮಕ ಕ್ರಮವನ್ನು ಪ್ರಾರಂಭಿಸಿದೆ. ಸುರಕ್ಷತಾ ಮಾನದಂಡಗಳ ಉಲ್ಲಂಘನೆ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ಇಲಾಖೆ ಆ ಹೋಂಸ್ಟೇ ನೋಂದಣಿಯನ್ನು ರದ್ದುಗೊಳಿಸಿದೆ.

ಕೊಡಗಿನ ಹೋಂಸ್ಟೇಯಲ್ಲಿ ನಡೆದ ಈ ಘಟನೆ, ದೇಶೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿಗರಿಗೆ ಜನಪ್ರಿಯ ತಾಣವಾದ ಕೊಡಗಿನಲ್ಲಿ ಪ್ರವಾಸಿಗರ ಸುರಕ್ಷತೆ ಮತ್ತು ಹೋಂಸ್ಟೇಗಳ ನಿರ್ವಹಣೆಯ ಬಗ್ಗೆ ಕಳವಳ ವ್ಯಕ್ತವಾಗಿತ್ತು.

---

20 ಕಾನೂನು ಕಾಲೇಜುಗಳ ತಂಡ ಭಾಗಿ | ವಿಜೇತರಿಗೆ ನಗದು, ಟ್ರೋಫಿ | ಪ್ರಮುಖ ನ್ಯಾಯಾಧೀಶರುಗಳ ಉಪಸ್ಥಿತಿ | ಸಾರ್ವಜನಿಕರಿಗೂ ಅವಕಾಶ

ಮೇ 8-10: ವಿವೇಕಾನಂದ ಕಾಲೇಜಿನಲ್ಲಿ ರಾಷ್ಟ್ರ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆ



• **ಪುತ್ತೂರು:** ಕಾನೂನು ಕ್ಷೇತ್ರಕ್ಕೆ ಸಂಬಂಧಿಸಿ ಪ್ರಾಯೋಗಿಕ ಚಾಕಚಕ್ಯತೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಉದ್ದೇಶದಿಂದ ರಾಷ್ಟ್ರ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಯನ್ನು ವಿವೇಕಾನಂದ ಕಾನೂನು ಕಾಲೇಜಿನಲ್ಲಿ ಮೇ 8ರಿಂದ 10ರ ತನಕ ಆಯೋಜಿಸಲಾಗಿದೆ ಎಂದು ವಿವೇಕಾನಂದ ಕಾನೂನು ಕಾಲೇಜಿನ ಆಡಳಿತ ಮಂಡಳಿ ಸಂಚಾಲಕ ವಿಜಯನಾರಾಯಣ ಕೆ.ಎಂ. ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, 38 ವರ್ಷಗಳಿಂದ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿಚಾರಧಾರೆಯನ್ನು ಒಳಗೊಂಡ ಮೌಲ್ಯಯುತ ಕಾನೂನು ಶಿಕ್ಷಣವನ್ನು ನೀಡುತ್ತಿದೆ. ಈ ಹಿಂದೆ ಎರಡು ಬಾರಿ ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆಗಳನ್ನು ನಡೆಸಲಾಗಿತ್ತು. ಇದರಿಂದ ಕಾನೂನು ಕಾಲೇಜಿನ ವಿದ್ಯಾರ್ಥಿಗಳ ಭವಿಷ್ಯದ ಹಿನ್ನಲೆಯಲ್ಲಿ ಸಾಕಷ್ಟು ಪ್ರಯೋಜನ ಲಭಿಸಿದೆ ಎಂದರು.

ಕಾನೂನು ವಿದ್ಯಾರ್ಥಿಗಳು ನ್ಯಾಯಾಲಯದಲ್ಲಿ ಪರಿಣತಿ, ಕೌಶಲ್ಯ, ವಾದ ಮಾಡುವ ಚಾಕಚಕ್ಯತೆಯನ್ನು ಬೆಳೆಸುವ ಉದ್ದೇಶದೊಂದಿಗೆ ಈ ಸ್ಪರ್ಧೆ ಆಯೋಜಿಸಲಾಗುತ್ತಿದೆ ಎಂದರು.

ಮೂರನೇ ಬಾರಿಯ ಈ ಅಣುಕು ನ್ಯಾಯಾಲಯ ಸ್ಪರ್ಧೆಯಲ್ಲಿ ರಾಷ್ಟ್ರದ ಕಾನೂನು ಕಾಲೇಜುಗಳ 20 ತಂಡಗಳು ಭಾಗವಹಿಸಲಿವೆ. ತಂಡದಲ್ಲಿ ತಲಾ ಮೂರು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದ ಆಳವಾದ ಪರಿಶೋಧನೆಯನ್ನು ಮಾಡಿಕೊಂಡು ಈ ಸ್ಪರ್ಧೆಯಲ್ಲಿ ಸ್ಪರ್ಧಾಳುಗಳು ಭಾಗವಹಿಸುತ್ತಾರೆ. ಮೇ 8 ರಂದು ಸಂಜೆ ನೋಂದಣಿಯ ಬಳಿಕ ಸ್ಪರ್ಧೆಯ ಲಿಖಿತ ಪರೀಕ್ಷೆಯನ್ನು ಮಾಡಲಾಗುತ್ತದೆ. ಮೇ ರಂದು ಬೆಳಗ್ಗೆ ಪ್ರಥಮ ಹಂತದ ಸ್ಪರ್ಧೆ ಆರಂಭಗೊಳ್ಳಲಿದೆ. ಮೇ 10 ರಂದು ಸೆಮಿಫೈನಲ್ ಹಾಗೂ ಫೈನಲ್ ಹಂತಗಳು ನಡೆಯಲಿವೆ ಎಂದು ತಿಳಿಸಿದರು.

ಮೇ 9ರಂದು ಸಂಜೆ 4 ಗಂಟೆಗೆ ಆಂಧ್ರಪ್ರದೇಶದ ರಾಜ್ಯಪಾಲ, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಎಸ್. ಅಬ್ದುಲ್ ನಝೀರ್ ಉದ್ಘಾಟಿಸಲಿದ್ದಾರೆ. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎನ್. ಕೋಟೀಶ್ವರ್ ಸಿಂಗ್, ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸಿ. ಬಸವರಾಜು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್ ವಹಿಸಲಿದ್ದಾರೆ. ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಶೇಖರ್ ಜಿ. ದೇವಸ ವಿಶೇಷ ಆಹ್ವಾನಿತರಾಗಿ ಭಾಗಿಯಾಗಲಿದ್ದಾರೆ.

ಸಮಾರೋಪ

ಮೇ 10ರಂದು ಸಂಜೆ 3 ಗಂಟೆಗೆ ಆಂಧ್ರಪ್ರದೇಶದ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ, ಅಖಿಲ ಭಾರತೀಯ ಅಧಿವಕ್ತ ಪರಿಷತ್ ಅಧ್ಯಕ್ಷ ಶ್ರೀನಿವಾಸ್ ಮೂರ್ತಿ ಕೊಂಡಾ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸಮಾರೋಪ ಭಾಷಣವನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಇ.ಎಸ್. ಇಂದಿರೇಶ್ ಮಾಡಲಿದ್ದಾರೆ. ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ವಿ. ಶ್ರೀಶಾನಂದ ಮತ್ತು ತ್ಯಾಗರಾಜ ಎನ್. ಇನಾವಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಪುತ್ತೂರಿನ ವಕೀಲ ಸಂಘದ ಅಧ್ಯಕ್ಷ ಜಿ. ಜಗನ್ನಾಥ್ ವಿಶೇಷ ಆಹ್ವಾನಿತರಾಗಿ ಭಾಗಿಯಾಗಲಿದ್ದಾರೆ ಎಂದರು.

ಫೈನಲ್ ಸ್ಪರ್ಧೆಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಇ.ಎಸ್. ಇಂದಿರೇಶ್, ವಿ. ಶ್ರೀಶಾನಂದ ಮತ್ತು ತ್ಯಾಗರಾಜ ಎನ್. ಇನಾವಲ್ಲಿ ಹಾಗೂ ಹಿರಿಯ ನ್ಯಾಯವಾದಿಗಳಾದ ರಾಮಮೋಹನ್ ರಾವ್, ಪ್ರೇಮನಾಥ ಅವರು ತೀರ್ಪುಗಾರರಾಗಿರಲಿದ್ದಾರೆ. ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತ ಸಾರ್ವಜನಿಕರಿಗೂ ಮುಕ್ತ ಅವಕಾಶ ನೀಡಲಾಗಿದೆ.

ಅಣಕು ನ್ಯಾಯಾಲಯ ಸ್ಪರ್ಧೆಯ ಪ್ರಥಮ ವಿಜೇತರಿಗೆ ರೂ.30 ಸಾವಿರ ಹಾಗೂ ಟ್ರೋಫಿ, ದ್ವಿತೀಯ ಸ್ಥಾನಿಗರಿಗೆ ರೂ.20 ಸಾವಿರ ಮತ್ತು ಟ್ರೋಫಿ ಹಾಗೂ ಪ್ರೋತ್ಸಾಹಕ ಬಹುಮಾನ ನೀಡಲಾಗುವುದು ಎಂದವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾನೂನು ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಪಿ.ಕೆ. ರವೀಂದ್ರ, ಪ್ರಾಂಶುಪಾಲೆ ಡಾ. ಅಕ್ಷತಾ ಕೆ.ಪಿ, ಸಹಾಯಕ ಪ್ರಾಧ್ಯಾಪಕಿ ಸುಭಾಷಿಣಿ ಜೆ., ಸ್ಪರ್ಧಾ ಸಮಿತಿ ಅಧ್ಯಕ್ಷ ಮನೋಹರ್ ಕೆ.ವಿ., ವಕೀಲ ಸುರೇಶ್ ರೈ, ಸಹಾಯಕ ಪ್ರಾಧ್ಯಾಪಕ ಲಕ್ಷ್ಮಿಕಾಂತ್ ಅನಿಕೂಟೇಲು ಉಪಸ್ಥಿತರಿದ್ದರು.

> **ನೂತನ ಪದವಿ ಆರಂಭ**
> ಈ ಶೈಕ್ಷಣಿಕ ವರ್ಷದಿಂದ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ಬಿಬಿಎ ಎಲ್‌ಎಲ್‌ಬಿ ಹಾಗೂ ಎಲ್‌ಎಲ್‌ಎಂ ಪದವಿಗಳನ್ನು ಆರಂಭಿಸಲಾಗುತ್ತದೆ ಎಂದು ತಿಳಿಸಿದ್ದಾರೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	9	6	2	1	13	+0.855
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	10	6	4	0	12	+0.644
ರಾಜಸ್ಥಾನ	10	6	4	0	12	+0.510
ಗುಜರಾತ್	10	6	4	0	12	-0.147
ಚೆನ್ನೈ	9	4	5	0	8	+0.005
ದಿಲ್ಲಿ	9	4	5	0	8	-0.895
ಕೆಕೆಆರ್	9	3	5	1	7	-0.539
ಮುಂಬೈ	9	2	7	0	4	-0.803
ಲಖನೌ	8	2	6	0	4	-1.106

ಕಿರುಸುದ್ದಿ

ಇಂಗ್ಲೆಂಡಿಗೆ ಮರಳಿದ ಸಾಲ್ಟ್

ಬೆಂಗಳೂರು: ಆರ್‌ಸಿಬಿ ಆರಂಭಿಕ ಆಟಗಾರ ಫಿಲ್ ಸಾಲ್ಟ್ ಇಂಗ್ಲೆಂಡಿಗೆ ಮರಳಿದ್ದಾರೆ. ಅವರ ಕೈಬೆರಳಿಗಾದ ಗಾಯವು ಮಾಯದ ಕಾರಣ ಅವರು ಇಂಗ್ಲೆಂಡಿಗೆ ಮರಳಿದ್ದು ಅಲ್ಲಿ ಚಿಕಿತ್ಸೆ ಪಡೆಯಲಿದ್ದಾರೆ. ಕಳೆದ ಮೂರು ಪಂದ್ಯಗಳಿಂದ ಅವರು ಆರ್‌ಸಿಬಿಗೆ ಅಲಭ್ಯರಾಗಿದ್ದು, ಅವರ ಬದಲಿಗೆ ಬೆಥೆಲ್ ಆರಂಭಿಕರಾಗಿ ಬರುತ್ತಿದ್ದಾರೆ. ಇನ್ನೀಗ ಮುಂದಿನ ಪಂದ್ಯಗಳಿಗೂ ಬೆಥೆಲ್ ಆರಂಭಿಕರಾಗಿ ಮುಂದುವರಿಯುವ ಸಂಕೇತಗಳಿವೆ. ಸಾಲ್ಟ್ ಮತ್ತೆ ಆರ್‌ಸಿಬಿ ಸೇರುವರೆ ಎಂಬುದು ಖಚಿತಗೊಂಡಿಲ್ಲ.

ಫ್ರೆಂಚ್ ಓಪನ್ ಬಹುಮಾನ ಮೊತ್ತಕ್ಕೆ ಆಟಗಾರರ ಅತೃಪ್ತಿ

ಪ್ಯಾರಿಸ್: ಮುಂಬರುವ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಗೆ ನೀಡಲಾಗುತ್ತಿರುವ ಬಹುಮಾನ ಮೊತ್ತದ ಕುರಿತಂತೆ ಪ್ರಮುಖ ಟೆನಿಸ್ ಆಟಗಾರರು ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಜೋಕೋವಿಕ್, ಜಾನಿಕ್ ಸಿನ್ನರ್, ಸಬಲೆಂಕಾ ಸೇರಿದಂತೆ ಹಲವಾರು ಪುರುಷ ಮತ್ತು ಮಹಿಳಾ ಟೆನಿಸಿಗರು ಜಂಟಿ ಹೇಳಿಕೆಯೊಂದರಲ್ಲಿ ತಮ್ಮ ಅಸಂತೃಪ್ತಿ ವ್ಯಕ್ತಪಡಿಸಿದ್ದಾರೆ. ಫ್ರೆಂಚ್ ಓಪನ್ ಮೇ 24ರಿಂದ ಆರಂಭಗೊಳ್ಳಲಿದ್ದು, ಒಟ್ಟು ಬಹುಮಾನ ಮೊತ್ತವನ್ನು ಇತ್ತೀಚೆಗೆ ಶೇ.10ರಷ್ಟು ಏರಿಸಲಾಗಿತ್ತು. ಆದರೆ ಈ ಏರಿಕೆಯು ತಮ್ಮ ನಿರೀಕ್ಷೆಗೆ ತಕ್ಕಂತಿಲ್ಲ ಎಂದು ಆಟಗಾರರು ಹೇಳಿದ್ದಾರೆ. ಸಂಘಟಕರು ಗಳಿಸುತ್ತಿರುವ ಮೊತ್ತಕ್ಕೆ ಹೋಲಿಸಿದರೆ ಆಟಗಾರರಿಗೆ ನೀಡುತ್ತಿರುವ ಮೊತ್ತ ಕಡಿಮೆ ಎಂದು ಅವರು ಹೇಳಿದ್ದಾರೆ.

ಕೊನೆಗೂ ಮಿಂಚಿದ ಪೂರಣ್ | ಲಖನೌ 228/5

ಮುಂಬೈಗೆ ಕಠಿಣ ಗುರಿ

ಮುಂಬೈ: ತಮ್ಮ ಅಸಲು ಲಯಕ್ಕೆ ಬಂದ ನಿಕೋಲಸ್ ಪೂರಣ್ ಸಿಕ್ಸರ್‌ಗಳ ಸುರಿಮಳೆಗೈದಿದ್ದು, ಮುಂಬೈ ಇಂಡಿಯನ್ಸ್‌ಗೆ ಲಖನೌ ಸೂಪರ್ ಜೇಂಟ್ಸ್ ಕಠಿಣ ಗುರಿ ನೀಡಿತು.

ಇಂಗ್ಲಿಸ್ ಬಂದ ನಂತರ ಉತ್ತಮ ಆರಂಭ ಪಡೆದ ಲಖನೌ ಪೂರಣ್(63; 21ಎ, 1 ಬೌ, 8ಸಿ) ಹಾಗೂ ಮಾರ್ಷ್(44; 25ಎ, 4 ಬೌ, 3ಸಿ) ಬ್ಯಾಟಿಂಗ್‌ನೊಂದಿಗೆ ದೊಡ್ಡ ಗುರಿಯತ್ತ ಸಾಗಿತು. ಆದಾಗ್ಯೂ ಮಧ್ಯಮ ಕ್ರಮಾಂಕದಲ್ಲಿ ಭಾರೀ ಕುಸಿದ ನಂತರ ತಂಡ 228 ರನ್ ಗಳಿಸಿದೆ. ಬಾಷ್ 2, ರಘು, ಜ್ಯಾಕ್ಸ್ ಮತ್ತು ಘಜನ್‌ಫರ್ ತಲಾ 1 ವಿಕೆಟ್ ಪಡೆದ ನಂತರ ಮುಂಬೈ 5 ವಿಕೆಟ್ ಪಡೆಯಿತು.

ಭರ್ಜರಿ ಆರಂಭ: ಟಾಸ್ ಗೆದ್ದ ಮುಂಬೈ ಬೌಲಿಂಗ್ ಆಯ್ದುಕೊಂಡಿತು. ಜೋಸ್ ಇಂಗ್ಲಿಸ್ ಇದೇ ಮೊದಲ ಬಾರಿಗೆ ಕಣಕ್ಕಿಳಿದರು. ಮಾರ್ಷ್ ಸ್ವಾಭಾವಿಕ ಬ್ಯಾಟಿಂಗ್ ಶುರು ಮಾಡುತ್ತಿದ್ದಂತೆ ಇಂಗ್ಲಿಸ್ 5 ಬಾಲ್ ಮಾತ್ರದಲ್ಲಿ 3 ಬೌಂಡರಿ ಬಾರಿಸಿ ಘಜನ್‌ಫರ್‌ಗೆ ಕ್ಯಾಚಿತ್ತರು. ಆಗ ಬಂದವರೆ ನಿಕೋಲಸ್ ಪೂರಣ್. ತಮ್ಮ ಅಸಲು ಲಯಕ್ಕೆ ಮರಳಿದ ಅವರು, ಮೈದಾನದುದ್ದಕ್ಕೂ ಸಿಕ್ಸರ್‌ಗಳ ಸುರಿಮಳೆಗೈದರು. ಪವರ್ ಪ್ಲೇನಲ್ಲಿ ಪೂರಣ್ ಆಟ ನಡೆಯಿತು. ಲಖನೌ ಅಲ್ಲಿ 90 ರನ್ ಗಳಿಸಿತು. ಪೂರಣ್(63; 21ಎ, 1 ಬೌ, 8ಸಿ) ಆಟ ನಿಲ್ಲಿಸಂತೆ ಪಂತ್ ಬಂದು ಸಿಕ್ಸರ್, ಬೌಂಡರಿ ಬಾರಿಸಿದರು. ಆದರೆ ಅವರ ಆಟ 15 ರನ್‌ಗೆ ಮಾತ್ರ ಸೀಮಿತವಾಗಿತ್ತು. ಏಡನ್ ಮಾರ್ಕ್ರಂ ನಿಧಾನಗತಿ ಬ್ಯಾಟಿಂಗ್ ಶುರು ಮಾಡಿದರು. ಮೊದಲನೇ ಬಾಲ್ ನಲ್ಲೇ ಸಿಕ್ಸರ್ ಬಾರಿಸಿದ ಅಕ್ಷತ್ 11 ರನ್‌ಗೆ ವಿಕೆಟ್ ಒಪ್ಪಿಸಿದರು.

ಲಖನೌ ಮಧ್ಯಮ ಕ್ರಮಾಂಕ ತೀರಾ ಕುಸಿಯಿತು. ಆಟ ನಿಧಾನಗೊಂಡಂತೆ ಮಧ್ಯಮ ಓವರ್ ಮುಕ್ತಾಯಗೊಂಡವು. ಲಖನೌ ಅಲ್ಲಿ 102 ರನ್ ಗಳಿಸಿತು. ಡೆತ್ ಓವರ್‌ಗಳಲ್ಲಿ ಹಿಮ್ಮತ್ ಸಿಂಗ್ ಮತ್ತು ಏಡನ್ ಮಾರ್ಕ್ರಂ ಉತ್ತಮ ಬ್ಯಾಟಿಂಗ್ ಮಾಡಿದರು. ಮೊದಲಿನ ಬಾಲ್‌ಗಳಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ಹಿಮ್ಮತ್ 2 ಸಿಕ್ಸರ್, 2 ಬೌಂಡರಿ ಬಾರಿಸಿದರು. ಮಾರ್ಕ್ರಂ 31★ ರನ್ ಬಾರಿಸುವಂತೆ ಇನ್ನಿಂಗ್ಸ್ ಮುಗಿಯಿತು. ಹಿಮ್ಮತ್ ಒಟ್ಟಿನಲ್ಲಿ 40★ ರನ್ ಬಾರಿಸಿದರು. ತಂಡ 228 ರನ್ ಗಳಿಸಿತು. ಡೆತ್ ಓವರ್‌ನಲ್ಲಿ 36 ರನ್ ಬಂದವು.



ಪೂರಣ್ ಸಿಕ್ಸರ್‌ಗಳ ಅಬ್ಬರ

ಇಷ್ಟು ದಿನ ಲಯಕ್ಕಾಗಿ ಪರದಾಟ ನಡೆಸುತ್ತಿದ್ದ ನಿಕೋಲಸ್ ಪೂರಣ್ ಲಯಕ್ಕೆ ಮರಳಿದ್ದಲ್ಲದೆ, ಸಿಕ್ಸರ್‌ಗಳ ಸುರಿಮಳೆಗೈದರು. ತಮ್ಮ ಅಸಲು ಕ್ರಮಾಂಕ ಮೂರನೇ ವಿಕೆಟ್‌ಗೆ ಬ್ಯಾಟಿಂಗ್ ಮಾಡಿದ ಅವರು, ಅಬ್ಬರದ ಆರಂಭ ಕೊಟ್ಟರು. ಮೊದಲನೇ ಎಸೆತದಿಂದ ಸಿಕ್ಸರ್ ಬಾರಿಸಲು ಆರಂಭಿಸಿದರು. 16 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಕೇವಲ 21 ಬಾಲ್ ಮಾತ್ರವಾಡಿದ ಅವರು, 63 ರನ್ ಗಳಿಸಿದರು. ಇದರಲ್ಲಿ 8 ಭರ್ಜರಿ ಸಿಕ್ಸರ್‌ಗಳು ಸೇರಿವೆ.

ದಿಲ್ಲಿ, ಸಿಎಸ್‌ಕೆಗೆ ಪರೀಕ್ಷೆ

ಹೊಸದಿಲ್ಲಿ: ದಿಲ್ಲಿ ಕ್ಯಾಪಿಟಲ್ಸ್ ಇಂದಿನ ಪಂದ್ಯದಲ್ಲಿ ಚೆನ್ನೈ ಸುಪರ್ ಕಿಂಗ್ಸ್‌ನ್ನು ಎದುರಿಸಲಿದ್ದು, ಪ್ಲೇಆಫ್‌ಗೆ ತೇರ್ಗಡೆ ಪಡೆಯಲು ಇಂದಿನ ಪಂದ್ಯದಲ್ಲಿ ಗೆಲುವು ಸಾಧಿಸುವುದು ಎರಡೂ ತಂಡಗಳಿಗೆ ಆಗತ್ಯವಾಗಿದೆ.

ಪ್ರಸ್ತುತ 8 ಅಂಕ ಗಳಿಸಿರುವ ದಿಲ್ಲಿ ಕ್ಯಾಪಿಟಲ್ಸ್ ಮುಂದಿನ ಪಂದ್ಯಗಳನ್ನು ಸತತವಾಗಿ ಗೆಲ್ಲಬೇಕಾದ ಅನಿವಾರ್ಯತೆಗೆ ಸಿಲುಕಿದೆ. ಈವರೆಗೆ ತಾನಾಡಿದ 9 ಪಂದ್ಯಗಳಲ್ಲಿ 5ನ್ನು ಸೋತು ನಾಲ್ಕನ್ನಷ್ಟೆ ಗೆದ್ದಿದೆ.

ತಂಡಕ್ಕೆ ಪ್ರಮುಖ ವೇಗಿ ಸ್ಟಾರ್ಕ್ ಮರಳಿರುವುದು ತಂಡದ ವಿಶ್ವಾಸ ಹೆಚ್ಚಿಸಿದೆ. ಹಿಂದಿನ ಪಂದ್ಯದಲ್ಲಿ ಡೆಲ್ಲಿ ಗೆಲುವು ಸಾಧಿಸುವಲ್ಲಿ ಸ್ಟಾರ್ಕ್ ಪ್ರಮುಖ ಪಾತ್ರ ವಹಿಸಿದ್ದರು. ಅದೇರೀತಿ ಸಿಎಸ್‌ಕೆಗೂ ಈ ಪಂದ್ಯ ಮಹತ್ವದ್ದಾಗಿದೆ. ಸಿಎಸ್‌ಕೆ ಆರಂಭದಲ್ಲಿ ಕೆಲವು ಪಂದ್ಯಗಳನ್ನು ಸೋತಿದ್ದರೂ ಬಳಿಕ ಗೆಲುವಿನ ಹಾದಿಗೆ ಮರಳಿದೆ. ಕಳೆದ ಐದು ಪಂದ್ಯಗಳಲ್ಲಿ ಮೂರು ಪಂದ್ಯಗಳನ್ನು ಜಯಿಸಿದೆ.

ಸಿಎಸ್‌ಕೆ ಕೂಡಾ ಈಗ 8 ಅಂಕಗಳನ್ನು ಗಳಿಸಿದ್ದು, ಅದಕ್ಕೆ ಕೂಡಾ ಪ್ಲೇಆಫ್‌ಗೇರಲು ಮುಂದಿನ ಪಂದ್ಯಗಳನ್ನು ಗೆಲ್ಲುವುದು ಮಹತ್ವದ್ದಾಗಿದೆ. ಹಾಗಾಗಿ ಇಂದಿನ ಪಂದ್ಯವು ಉಭಯ ತಂಡಗಳಿಗೂ ಅಂಕಪಟ್ಟಿಯಲ್ಲಿ ಒಂದು ಸ್ಥಾನ ಮೇಲೇರಲು ಆಗತ್ಯವಾಗಿದ್ದು, ಎರಡೂ ತಂಡಗಳು ಗೆಲುವಿಗಾಗಿ ಪೂರ್ಣ ಸಾಮರ್ಥ್ಯ ಹಾಕಲಿವೆ.



ಧೋನಿ ಆಡುವುದಿಲ್ಲ


ಪ್ರತಿಬಾರಿ ಸಿಎಸ್‌ಕೆ ಪಂದ್ಯವಿದ್ದಾಗಲೂ ಧೋನಿ ಅಭಿಮಾನಿಗಳು ತಮ್ಮ ನೆಚ್ಚಿನ ಆಟಗಾರ ಆಡುವನೆ ಎಂದು ಕಾತರದಿಂದ ನಿರೀಕ್ಷಿಸುತ್ತಾರೆ. ಆದರೆ ಧೋನಿ ತಂಡದ ಸದಸ್ಯರಾಗಿದ್ದರೂ ಈವರೆಗೆ ಒಂದೂ ಪಂದ್ಯ ಆಡಿಲ್ಲ. ಅವರು ದಿಲ್ಲಿ ಎದುರಿನ ಪಂದ್ಯದಲ್ಲಿ ಆಡುವುದು ಕೂಡ ಅಸಾಧ್ಯವೆನಿಸಿದೆ. ಏಕೆಂದರೆ ಅವರು ಚೆನ್ನೈನಲ್ಲೇ ಉಳಕೊಂಡಿದ್ದು ದಿಲ್ಲಿಗೆ ಪ್ರಯಾಣಿಸಿಯೇ ಇಲ್ಲ. ಇಂದಿನ ಸಿಎಸ್‌ಕೆ ಪಂದ್ಯವು ಹೊಸದಿಲ್ಲಿಯಲ್ಲಿ ನಡೆಯಲಿದೆ.


ಚೇಸ್ ಕಲೆ ಕೊಹ್ಲಿಯಿಂದ ಕಲಿಯಬೇಕು: ಬೆಥೆಲ್

ಬೆಂಗಳೂರು: ವಿರಾಟ್ ಚೇಸ್ ಮಾಡುವ ರೀತಿಯನ್ನು ನೋಡಿದರೆ ಬ್ಯಾಟಿಂಗ್‌ನ ನಿಜವಾದ ಕಲೆ ಗೊತ್ತಾಗುತ್ತದೆ ಎಂದು ಆರ್‌ಸಿಬಿ ಬ್ಯಾಟರ್ ಜೇಕಬ್ ಬೆಥೆಲ್ ತಿಳಿಸಿದರು.

ವಿರಾಟ್ ಕೊಹಿ ಅವರ ಬಗ್ಗೆ ಮಾತನಾಡುತ್ತಾ, ಪರಿಸ್ಥಿತಿಗೆ ತಕ್ಕಂತೆ ಆಟದ ವೇಗವನ್ನು ಹೇಗೆ ಬದಲಿಸಬೇಕು ಅನ್ನೋದನ್ನು ಅವರಿಂದ ಕಲಿಯಬಹುದು, ಎಂದು ಅಭಿಪ್ರಾಯಪಟ್ಟರು.ಇಲ್ಲಿ ಎಲ್ಲರೂ ಕ್ರಿಕೆಟ್ ಬಗ್ಗೆ ಮಾತನಾಡುತ್ತಾರೆ. ಹೆಚ್ಚು ಮಾಹಿತಿ, ಹೆಚ್ಚು ಆಸಕ್ತಿ ಬಾಲ್ಯದಲ್ಲೇ ಹೆಚ್ಚಿನ ಅನುಭವ ಸಿಗುತ್ತದೆ, ಎಂದು ಹೇಳಿದರು. ಆ್ಯಂಡಿ ಫ್ಲವರ್ ಸರಿಯಾದ ಸಮಯದಲ್ಲಿ ಮಾತ್ರ ಮಾತನಾಡುತ್ತಾರೆ, ಆದರೆ ಹೇಳುವುದನ್ನು ಗಮನದಿಂದ ಕೇಳಬೇಕು. ದಿನೇಶ್ ಕಾರ್ತಿಕ್ ಬೇಗನೆ ದೋಷಗಳನ್ನು ಗುರುತಿಸಿ, ರನ್ ಮಾಡುವ ಮಾರ್ಗಗಳನ್ನು ತಿಳಿಸುತ್ತಾರೆ, ಎಂದರು.

ತಮ್ಮ ವೃತ್ತಿಜೀವನದ ಬಗ್ಗೆ ಮಾತನಾಡಿದ ನಾನು ಬಾರ್ಬಡೋಸ್‌ನಲ್ಲಿ ಬೆಳೆದವನು. ಬಾಲ್ಯದಿಂದಲೇ ಬ್ಯಾಟ್ ಮತ್ತು ಬಾಲ್ ಜೊತೆ ಇದ್ದೆ. ಹತ್ತು-ಹನ್ನೆರಡು ವಯಸ್ಸಿನಲ್ಲಿ ಕ್ರಿಕೆಟ್ ಅನ್ನು ಗಂಭೀರವಾಗಿ ತೆಗೆದುಕೊಂಡೆ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಆಟಗಾರ ಜೇಕಬ್ ಬೆಥಲ್ ತಿಳಿಸಿದರು. ಅವರು ಇಂಗ್ಲೆಂಡ್‌ಗೆ ಹೋಗಿ ವಾರ್ವಿಕ್‌ಶೈರ್ ತಂಡಕ್ಕೆ ಸೇರಿ 2021ರಲ್ಲಿ ಮೊದಲ ಒಪ್ಪಂದ ಪಡೆದೆ. ಗಾಯದಿಂದ ಒಂದು ಹಂತದಲ್ಲಿ ಹಿಂದೆ ಬಿದ್ದರೂ, ಮತ್ತೆ ಬಲವಾಗಿ ಹಿಂತಿರುಗಿ ಇಂಗ್ಲೆಂಡ್ ತಂಡಕ್ಕೆ ಆಯ್ಕೆಯಾದೆ. ಈಗ ಬೆಂಗಳೂರು ನನ್ನ ಹೊಸ ಅಧ್ಯಾಯ, ಎಂದು ಹೇಳಿದರು.





ಸ್ಟಾರ್‌ಬಾಯ್ ಎಂಬ ಹೆಸರು ಕುರಿತು ಮಾತನಾಡಿ, ಜನರು ನಿಮ್ಮ ಆಟವನ್ನು ನೋಡಲು ಬರುತ್ತಾರೆ ಅಂದರೆ ಅದು ದೊಡ್ಡ ಗೌರವ. ಭಾರತದಲ್ಲಿ ಜನರು ನನ್ನನ್ನು ಹೀಗೆ ಕರೆಯುತ್ತಾರೆ ಅನ್ನೋದು ನಿಜವಾಗಿಯೂ ವಿಶೇಷ ಅನುಭವ, ಎಂದರು. ಇಲ್ಲಿ ಆಟದ ವೇಗ ತುಂಬಾ ಹೆಚ್ಚು. ನೀವು ಧೈರ್ಯವಾಗಿ ಮತ್ತು ಆಕ್ರಮಣಕಾರಿ ರೀತಿಯಲ್ಲಿ ಆಡಬೇಕು.

ಉತ್ತಮವಾಗಿ ಆಡುವುದೇ ಉದ್ದೇಶ: ಹಿಂದಿನ ವರ್ಷದಿಗಿಂತ ಉತ್ತಮವಾಗಬೇಕು ಅನ್ನೋದು ನನ್ನ ಉದ್ದೇಶ. ಕೆಲವು ಪಂದ್ಯಗಳು ಅಥವಾ ಹೆಚ್ಚು ಪಂದ್ಯಗಳು ಯಾವಾಗಲೂ ಹಸಿವು ಇರಬೇಕು. ಈ ಮಟ್ಟದಲ್ಲಿ ಸುಧಾರಿಸದಿದ್ದರೆ ಮತ್ತೆಲ್ಲಿ? ಎಂದು ಹೇಳಿದರು. ವಿರಾಟ್ ಜೊತೆ ಮೈದಾನಕ್ಕೆ ಇಳಿದಾಗ ಆ ಶಬ್ದ, ಆ ಉತ್ಸಾಹ ಅದನ್ನು ಅನುಭವಿಸುವುದು ವಿಭಿನ್ನ. ನೀವು ಸಂಪೂರ್ಣ ಗಮನದಿಂದ ಇರಬೇಕು, ಎಂದು ಹೇಳಿದರು.

ಐಪಿಎಲ್ ಟಿಆರ್‌ಪಿ ಕುಸಿತ

ಹೊಸದಿಲ್ಲಿ: ಈ ಬಾರಿಯ ಐಪಿಎಲ್ ಟಿಆರ್‌ಪಿ ಶೇ. 18.8, ವೀಕ್ಷಕರ ಸಂಖ್ಯೆ ಶೇ. 26ರಷ್ಟು ಕುಸಿದಿದೆ. ಜಾಹೀರಾತುದಾರರ ಸಂಖ್ಯೆಯೂ ಕುಸಿದಿದೆ ಎಂದು ವರದಿಯಾಗಿದೆ.

ಇತ್ತೀಚೆಗೆ ಹೊರಬಿದ್ದ ವರದಿ ಪ್ರಕಾರ ಐಪಿಎಲ್ ಜನಪ್ರಿಯತೆ ಕಡಿಮೆಯಾಗುತ್ತಿದೆ ಎಂಬುದನ್ನು ಬಹಿರಂಗಪಡಿಸಿದೆ. 2026ರ ಐಪಿಎಲ್‌ನ ಟಿಆರ್‌ಪಿಯಲ್ಲಿ ಗಣನೀಯ ಕುಸಿತ ಕಂಡುಬಂದಿದೆ. ಮಾತ್ರವಲ್ಲದೆ ಐಪಿಎಲ್ ವೀಕ್ಷಿಸುವವರ ಸಂಖ್ಯೆಯಲ್ಲೂ ಇಳಿಮುಖ ಕಂಡುಬಂದಿದೆ. ಇದರ ಪರಿಣಾಮವೆಂಬಂತೆ ಜಾಹೀರಾತುದಾರರ ಸಂಖ್ಯೆಯೂ ಕಡಿಮೆಯಾಗಿದೆ. ಐಪಿಎಲ್ 2026ರ ಟಿಆರ್‌ಪಿ ಶೇಕಡಾ 18.8 ರಷ್ಟು ಕಡಿಮೆಯಾಗಿದೆ. 4.57 ರಿಂದ 3.71 ಕ್ಕೆ ಇಳಿದಿದೆ. ಇದರ ಜೊತೆಗೆ ಈ ಬಾರಿಯ ಐಪಿಎಲ್ ವೀಕ್ಷಕರ ಸಂಖ್ಯೆಯೂ ಶೇ.26 ರಷ್ಟು ಕಡಿಮೆಯಾಗಿದೆ. ಅಂದರೆ ಐಪಿಎಲ್ ವೀಕ್ಷಕರ ಸಂಖ್ಯೆ 124 ಮಿಲಿಯನ್‌ನಿಂದ 113.6 ಮಿಲಿಯನ್‌ಗೆ ಕುಸಿದಿದೆ.

ಇತ್ತ ಇನ್ನೊಂದು ಹೊಡೆತದಲ್ಲಿ ವೀಕ್ಷಕರ ಸಂಖ್ಯೆ ಕಡಿಮೆಯಾದ್ದರ ಪರಿಣಾಮವಾಗಿ ಜಾಹೀರಾತುದಾರರು ಸಹ ಆಸಕ್ತಿ ಕಳೆದುಕೊಳ್ಳುತ್ತಿರುವಂತೆ ತೋರುತ್ತಿದೆ. ಐಪಿಎಲ್ 2026 ಜಾಹೀರಾತುದಾರರು ಶೇಕಡಾ 31 ರಷ್ಟು ಕುಸಿತ ಕಂಡಿದ್ದಾರೆ. ಹಿಂದೆ, ಜಾಹೀರಾತುದಾರರ ಸಂಖ್ಯೆ 65 ಮೀರಿತ್ತು, ಆದರೆ ಈಗ ಅದು 45 ಕ್ಕೆ ಕುಸಿದಿದೆ.

ಪಶ್ಚಿಮ ಬಂಗಾಳ, ತಮಿಳುನಾಡಿನಲ್ಲಿ ಪ್ರಮುಖ ಪಕ್ಷಗಳಿಗೇ ಸೋಲು

ಇಂಡಿ ಕೂಟಕ್ಕೆ ಸೋಲಿನ ಆಘಾತ

ಹೊಸದಿಲ್ಲಿ: ಪಂಚ ರಾಜ್ಯಗಳ ಚುನಾವಣಾ ಫಲಿತಾಂಶಗಳ ಬಳಿಕ ಇಂಡಿ ಕೂಟ ಎದುರಿಸುತ್ತಿರುವ ರಾಜಕೀಯ ವಾಸ್ತವಿಕತೆ ಗಂಭೀರ ತಿರುವು ಪಡೆದಿದೆ. ಏಕೆಂದರೆ, ಇಂಡಿ ಕೂಟದ ಪ್ರಮುಖ ಪಕ್ಷಗಳಾದ ಟಿಎಂಸಿ ಮತ್ತು ಡಿಎಂಕೆ ಸೋತು ಸುಣ್ಣವಾಗಿವೆ. ಹೀಗಾಗಿ, ಇಂಡಿ ಕೂಟದ ಮುಂದಿನ ದಿಕ್ಕೇನು ಎಂಬುದೇ ಪ್ರಶ್ನೆಯಾಗಿದೆ.

2014ರ ಲೋಕಸಭೆ ಚುನಾವಣೆ ವೇಳೆ ಒಗ್ಗಟ್ಟು ಪ್ರದರ್ಶಿಸಿದ್ದ ಇಂಡಿ ಕೂಡ, ಅದಾದ ನಂತರದಲ್ಲಿ ಒಂದಾದ ಮೇಲೆ ಒಂದರಂತೆ ರಾಜ್ಯಗಳನ್ನು ಕಳೆದುಕೊಳ್ಳುತ್ತಾ ಬಂದಿತು. ಈಗಂತೂ ತೃಣಮೂಲ ಕಾಂಗ್ರೆಸ್, ಡಿಎಂಕೆ ಮತ್ತು ಎಡಪಕ್ಷಗಳ ಸೋಲು ಇಂಡಿ ಕೂಟದ ಪ್ರಮುಖ ಆಧಾರಸ್ತಂಭಗಳನ್ನೇ ಕದಡಿ ಹಾಕಿದೆ. ಇವು ಲೋಕಸಭೆಯಲ್ಲಿ ಮೈತ್ರಿಯ ಸಂಖ್ಯಾಶಕ್ತಿಗೆ ಮಹತ್ತರ ಕೊಡುಗೆ ನೀಡುತ್ತಿದ್ದ ಪಕ್ಷಗಳಾಗಿದ್ದು, ಇವರ ಸೋಲು ಕೇವಲ ರಾಜ್ಯ ರಾಜಕಾರಣದ ಮಟ್ಟದಲ್ಲೇ ಅಲ್ಲ, ರಾಷ್ಟ್ರೀಯ ಮಟ್ಟದಲ್ಲಿಯೂ ಮನೋಭಾವದ ಕುಸಿತಕ್ಕೆ ಕಾರಣವಾಗಿದೆ. ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಪ್ರವೇಶ ಸಾಧಿಸಿರುವುದು, ಮುಂದಿನ 2029ರ ಲೋಕಸಭೆ ಚುನಾವಣೆಗೆ ದಿಕ್ಕು ತೋರಿಸುವ ಬೆಳವಣಿಗೆ ಎನ್ನಬಹುದು.

ಇದಕ್ಕಿಂತ ಮುಖ್ಯವಾಗಿ, ಇಂಡಿ ಕೂಟದ ಒಳರಾಜಕೀಯದಲ್ಲಿ ಹೊಸ ಸಮೀಕರಣಗಳು ರೂಪುಗೊಳ್ಳುವ ಲಕ್ಷಣಗಳು ಕಾಣಿಸುತ್ತಿವೆ. ಇದುವರೆಗೆ ಪ್ರಾದೇಶಿಕ ಪಕ್ಷಗಳು, ವಿಶೇಷವಾಗಿ ಟಿಎಂಸಿ ತಾವು ಬಿಜೆಪಿಗೆ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದೇವೆ ಎಂಬ ಧೋರಣೆಯನ್ನು ಪ್ರದರ್ಶಿಸುತ್ತಿದ್ದವು. ಆದರೆ ಈಗಿನ ಸೋಲು ಆ ಧ್ವನಿಯನ್ನು ಮಂದಗೊಳಿಸಿದೆ. ಇದರಿಂದ ಕಾಂಗ್ರೆಸ್ ಪ್ರಾಬಲ್ಯವು ಮೈತ್ರಿಯೊಳಗೆ ಮತ್ತೆ ಬಲ ತರುವ ಸಾಧ್ಯತೆ ಇದೆ. ಆದಾಗ್ಯೂ ಕೇರಳ ಹೊರತು ಉಳಿದೆಡೆ ಕಾಂಗ್ರೆಸ್ ನಾಮಾವಶೇಷವಾಗಿದ್ದು ರಾಹುಲ್ ನಾಯಕತ್ವಕ್ಕೂ ದೊಡ್ಡ ಹೊಡೆತ ನೀಡಿದಂತಾಗಿದೆ.

ಇದಲ್ಲದೆ, ಇತ್ತೀಚಿನ ಸಂಸತ್ ರಾಜಕೀಯದಲ್ಲಿ ಕಂಡುಬಂದ ಘಟನೆಗಳು ಈ ಒಳಸಂಘರ್ಷದ ಸೂಚನೆಗಳನ್ನು ಸ್ಪಷ್ಟಪಡಿಸುತ್ತವೆ. ಸಂವಿಧಾನ ತಿದ್ದುಪಡಿ ಮಸೂದೆ ವಿರೋಧಿಸಲು ನಡೆದ ಸಭೆಯಲ್ಲಿ, ಟಿಎಂಸಿ ತನ್ನ ಸಂಸದರನ್ನು ಸಂಪೂರ್ಣವಾಗಿ ಒದಗಿಸಲು ಹಿಂಜರಿದ ಸಂದರ್ಭದಲ್ಲೇ ರಾಹುಲ್ ಗಾಂಧಿ ಕಠಿಣ ನಿಲುವು ತೆಗೆದುಕೊಂಡಿದ್ದರು. ಇದರಿಂದ ಮೈತ್ರಿಯೊಳಗಿನ ಅಸಮಾಧಾನ ಹೊರಹೊಮ್ಮಿದರೂ, ಅಂತಿಮವಾಗಿ ಒಗ್ಗಟ್ಟಿನಿಂದ ಮಸೂದೆ ತಡೆಹಿಡಿಯಲು ಸಾಧ್ಯವಾಯಿತು. ಆದರೆ ಈಗಿನ ಚುನಾವಣಾ ಫಲಿತಾಂಶಗಳು ಆ ಅಸಮಾಧಾನವನ್ನು ಮತ್ತಷ್ಟು ಗಂಭೀರವಾಗಿ ಪರಿವರ್ತಿಸಬಹುದಾಗಿದೆ.

ಕೇರಳದಲ್ಲಿ ಎಡಪಕ್ಷಗಳು ಅಧಿಕಾರ ಕಳೆದುಕೊಂಡಿರುವುದು. ಇದು ಎಡಪಕ್ಷಗಳ ರಾಜಕೀಯ ಇತಿಹಾಸದಲ್ಲೇ ದೊಡ್ಡ ಹಿನ್ನಡೆ. 1977ರಿಂದ ನಿರಂತರವಾಗಿ ಯಾವುದಾದರೂ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಎಡಪಕ್ಷಗಳು ಈಗ ಸಂಪೂರ್ಣವಾಗಿ ಅಧಿಕಾರವಿಲ್ಲದ ಸ್ಥಿತಿಗೆ ತಲುಪಿರುವುದು ಇಂಡಿ ಕೂಟದ ವ್ಯಾಪ್ತಿಯನ್ನು ಕುಗ್ಗಿಸುತ್ತದೆ.

ತಮಿಳುನಾಡಿನ ರಾಜಕೀಯದಲ್ಲಿಯೂ ಕಾಂಗ್ರೆಸ್ ಕೈಗೊಂಡ ತಂತ್ರಗಳು ಫಲಿಸದಿರುವುದು ಗಮನಾರ್ಹ. ಡಿಎಂಕೆ ಜೊತೆಗಿನ ಸಂಬಂಧ ಮತ್ತು ಪರ್ಯಾಯ ಮೈತ್ರಿ ಸಾಧ್ಯತೆಗಳ ನಡುವಿನ ಗೊಂದಲ ಕಾಂಗ್ರೆಸ್‌ಗೆ ಸ್ಪಷ್ಟ ದಿಕ್ಕಿನ ಕೊರತೆಯನ್ನು ತೋರಿಸಿದೆ. ಆದರೆ ಭವಿಷ್ಯದಲ್ಲಿ ಹೊಸ ಮೈತ್ರಿಗಳ ಸಾಧ್ಯತೆಗಳು ತೆರೆದಿರುವುದರಿಂದ, ಕಾಂಗ್ರೆಸ್ ಈಗ ಡಿಎಂಕೆಗೆ ಕೈಕೊಡಲಿದಿಯೇ ಎಂಬ ಪ್ರಶ್ನೆಯನ್ನೂ ಹುಟ್ಟು ಹಾಕಿದೆ.

- ಇಂಡಿ ಕೂಟದಲ್ಲಿ ಪ್ರಮುಖವಾಗಿ ಗುರುತಿಸಿಕೊಂಡಿದ್ದ ಮಮತಾ, ಸ್ಟಾಲಿನ್
- ಎಡಪಕ್ಷಗಳ ಸೋಲೂ ಪ್ರಮುಖ ಹೊಡೆತ



ತುಷ್ಟೀಕರಣ ರಾಜನೀತಿ ತಿರಸ್ಕಾರ: ಬಿಜೆಪಿ

ಹೊಸದಿಲ್ಲಿ: ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಚಾರಿತ್ರಿಕ ವಿಜಯ ದಾಖಲಿಸಿದೆ. ಜನತೆ ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವವನ್ನು ನಿರ್ಣಾಯಕವಾಗಿ ಅನುಮೋದಿಸಿದ್ದಾರೆ ಮತ್ತು ವಿಪಕ್ಷಗಳ ತುಷ್ಟೀಕರಣ ರಾಜನೀತಿಯನ್ನು ನೇರವಾಗಿ ತಿರಸ್ಕರಿಸಿದ್ದಾರೆ ಎಂದು ಬಿಜೆಪಿ ಬಣ್ಣಿಸಿದೆ. ಪ್ರಧಾನಿ ನರೇಂದ್ರ ಮೋದಿ ಆಡಳಿತದಲ್ಲಿ ಸಾಕಾರಗೊಂಡಿರುವ ಪ್ರಗತಿ ಮತ್ತು ಉತ್ತಮ ಆಡಳಿತವನ್ನು ಪ.ಬಂಗಾಳ ಮತ್ತು ಅಸ್ಸಾಂ ಚುನಾವಣಾ ಫಲಿತಾಂಶಗಳು ಪ್ರತಿಫಲಿಸಿವೆ. ಮಹಾನ್ ವ್ಯಕ್ತಿಗಳ ಈ ಪುಣ್ಯಭೂಮಿಯೀಗ ಶಾಂತಿ, ಸಂಪನ್ನತೆ ಮತ್ತು ಉತ್ತಮ ಆಡಳಿತದ ನವ ಯುಗದ ಆರಂಭಕ್ಕೆ ಸಾಕ್ಷಿಯಾಗಲಿದೆ. ಪ.ಬಂಗಾಳದ ಅಸ್ಮಿತೆ, ಮಹಾನ್ ಸಂಸ್ಕೃತಿ ಮತ್ತು ಕಳೆದುಹೋಗಿರುವ ಘನತೆಯನ್ನು ಮರಳಿ ಹೊಂದುವ ಅಚಲ ಸಂಕೇತವಾಗಿದೆ ಐತಿಹಾಸಿಕ ವಿಜಯವೆಂದು ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಹರ್ಷ ವ್ಯಕ್ತಪಡಿಸಿದ್ದಾರೆ. ಪ.ಬಂಗಾಳದಲ್ಲಿ ಬಹುಮತವನ್ನೂ ಮೀರಿ 200ಕ್ಕೂ ಅಧಿಕ ಸೀಟುಗಳನ್ನು ಗೆದ್ದಿರುವ ಬಿಜೆಪಿ ರಾಜ್ಯದಲ್ಲಿ ಪ್ರಪ್ರಥವಾಗಿ ಸರಕಾರ ರಚಿಸಲಿದೆ, ತನ್ಮೂಲಕ ಟಿಎಂಸಿಯ 15ವರ್ಷಗಳ ಅರಾಜಕ ಆಡಳಿತ ಅಂತ್ಯ ಕಾಣಲಿದೆ. ಅಸ್ಸಾಂ, ಪುದುಚೇರಿಗಳಲ್ಲೂ ಬಿಜೆಪಿ ಹ್ಯಾಟ್ರಿಕ್ ವಿಜಯ ಸಾಧಿಸಿದೆ. ತಮ್ಮ ಕುಟುಂಬಗಳು ಟಿಎಂಸಿ ಹಿಂಸಾಚಾರಗಳಿಂದ ಸಂತ್ರಸ್ಥಗೊಂಡಿದ್ದರೂ, ಬಿಜೆಪಿ ಕಾರ್ಯಕರ್ತರ ಹೋರಾಟ ,ತ್ಯಾಗದ ಪರಿಣಾಮವಾಗಿದೆ ಪ.ಬಂಗಾಳದಲ್ಲಿ ಬಿಜೆಪಿಯ ಚಾರಿತ್ರಿಕ ವಿಜಯವೆಂದು ಗೃಹ ಸಚಿವ ಅಮಿತ್ ಶಾ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಬಣ್ಣಿಸಿದ್ದಾರೆ.

ನ್ಯಾಯಾಂಗ ಆದೇಶ ಜಾರಿಗೆ ತರದ ಸಿಬ್ಬಂದಿ ವಿರುದ್ಧ ಅಸಮಾಧಾನ

ತನ್ನದೇ ರಿಜಿಸ್ಟ್ರಿಗೆ ಸುಪ್ರೀಂ ಎಚ್ಚರಿಕೆ

ಹೊಸದಿಲ್ಲಿ: ಸುಮಾರು 37,000 ಕೋಟಿ ರೂ. ಮೊತ್ತದ ಬೃಹತ್ ಆರ್ಥಿಕ ವಂಚನೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯಕ್ಕೆ ಕಡ್ಡಾಯ ನೋಟಿಸ್ ನೀಡುವಲ್ಲಿ ವಿಫಲವಾದ ತನ್ನದೇ ರಿಜಿಸ್ಟ್ರಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತರಾಟೆಗೆ ತೆಗೆದುಕೊಂಡ ಅಪರೂಪದ ಪ್ರಸಂಗ ನಡೆದಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠ, ಮಾರ್ಚ್ 23 ರಂದು ನೀಡಲಾಗಿದ್ದ ನ್ಯಾಯಾಂಗ ಆದೇಶವನ್ನು ಜಾರಿಗೆ ತರದ ಆಡಳಿತಾತ್ಮಕ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದೆ. ರಿಜಿಸ್ಟ್ರಿ ಸಿಬ್ಬಂದಿ ನ್ಯಾಯಾಲಯದ ನಿರ್ದೇಶನಗಳನ್ನು ಮೀರಿ, ತಾವೇ ಸರ್ವೋಚ್ಚ ನ್ಯಾಯಾಲಯದ ಮುಖ್ಯಸ್ಥರಂತೆ ವರ್ತಿಸುತ್ತಿದ್ದಾರೆ, ಎಂದು ಪೀಠ ಅಭಿಪ್ರಾಯಪಟ್ಟಿದೆ.

ಆಂತರಿಕ ವಿಚಾರಣೆಗೆ ಸೂಚನೆ: ನೋಟಿಸ್ ನೀಡದೆ ತಡೆಹಿಡಿದಿರುವ ಆಡಳಿತಾತ್ಮಕ ಲೋಪದ ಬಗ್ಗೆ ತಕ್ಷಣವೇ ಔಪಚಾರಿಕ ತನಿಖೆ ನಡೆಸುವಂತೆ ರಿಜಿಸ್ಟ್ರಾರ್ ಜ್ಯುಡಿಶಿಯಲ್‌ಗೆ ನ್ಯಾಯಾಲಯ ಆದೇಶಿಸಿದೆ. ಜಾರಿ ನಿರ್ದೇಶನಾಲಯದ ನಿರ್ದೇಶಕರಿಗೆ ಪ್ರಸ್ತುತ ಕಾನೂನು ನಡಾವಳಿಗಳ ಬಗ್ಗೆ ತಕ್ಷಣವೇ ಮಾಹಿತಿ ತಲುಪುವುದನ್ನು ಖಚಿತಪಡಿಸಿಕೊಳ್ಳಲು ನ್ಯಾಯಾಲಯ ಈಗ ಹೊಸ ನಿರ್ದೇಶನವನ್ನು ಹೊರಡಿಸಿದೆ. ಬೃಹತ್ ಹೂಡಿಕೆ ಹಗರಣದ ಪ್ರಮುಖ ಆರೋಪಿ ಆಯುಷಿ ಮಿತ್ತಲ್ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಈ ಗಂಭೀರ ಲೋಪ ಬೆಳಕಿಗೆ ಬಂದಿದೆ. ಅರ್ಜಿದಾರರು ತಮ್ಮ ಕುಟುಂಬ ಮತ್ತು ಕಂಪೆನಿಯ ಎಲ್ಲಾ ಆಸ್ತಿಗಳ ಸಂಪೂರ್ಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವವರೆಗೆ ಅವರ ಜಾಮೀನು ಅರ್ಜಿಯನ್ನು ಪರಿಗಣಿಸಲು ನ್ಯಾಯಪೀಠ ಈ ಹಂತದಲ್ಲಿ ನಿರಾಕರಿಸಿದೆ.

ತನಿಖೆಯ ಹಿನ್ನೆಲೆ: ಸದ್ಯಕ್ಕೆ ಸ್ಥಗಿತಗೊಳಿಸಲಾದ ವಿವಿಧ ಬ್ಯಾಂಕ್ ಖಾತೆಗಳಲ್ಲಿರುವ ನೂರಾರು ಕೋಟಿ ರೂಪಾಯಿಗಳಿಗೆ ಸಂಬಂಧಿಸಿದ ವಂಚನೆಯ ಬಗ್ಗೆ ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿವೆ. ಆಂತರಿಕ ಆಡಳಿತಾತ್ಮಕ ವಿಚಾರಣೆಯ ವರದಿ ಸಲ್ಲಿಕೆಯಾದ ನಂತರ, ಮೇ ತಿಂಗಳ ಅಂತ್ಯದಲ್ಲಿ ಈ ಪ್ರಕರಣದ ಮುಂದಿನ ವಿಚಾರಣೆಗಳು ನಡೆಯಲಿವೆ, ಎಂದು ತಿಳಿಸಲಾಗಿದೆ.

ಇರಾನ್ ದಾಳಿ ನಿರಾಕರಿಸಿದ ಅಮೆರಿಕ

ದುಬೈ: ದಿಗ್ಬಂಧನಕ್ಕೊಳಗಾಗಿರುವ ಹಾರ್ಮುಜ್ ಜಲಸಂಧಿಯ ಮೂಲಕ ವಾಣಿಜ್ಯ ಹಡಗುಗಳಿಗೆ ಅಮೆರಿಕ ಪಡೆಗಳು ಮಾರ್ಗದರ್ಶನ ನೀಡಲು ಆರಂಭಿಸುತ್ತಿದ್ದಂತೆ, ತನ್ನ ನೌಕಾಪಡೆಯ ಹಡಗಿನ ಮೇಲೆ ಇರಾನ್ ದಾಳಿ ಮಾಡಿದೆ ಎಂಬ ವಾದವನ್ನು ಅಮೆರಿಕಾ ಸೇನೆ ನಿರಾಕರಿಸಿದೆ. ಅಮೆರಿದ ಹಡಗಿನ ಮೇಲೆ ದಾಳಿ ಮಾಡಲಾಗಿದೆ ಮತ್ತು ಅದು ಹಿಂತಿರುಗುವಂತೆ ಒತ್ತಾಯಿಸಲಾಗಿದೆ ಎಂಬ ಇರಾನ್ ಸುದ್ದಿ ಸಂಸ್ಥೆಗಳ ವರದಿಗಳ ನಡುವೆಯೇ, ಯಾವುದೇ ನೌಕಾ ಹಡಗುಗಳ ಮೇಲೆ ದಾಳಿಯಾಗಿಲ್ಲ, ಎಂದು ಯುಎಸ್ ಸೆಂಟ್ರಲ್ ಕಮಾಂಡ್ ದೃಢಪಡಿಸಿದೆ.

ಪ್ರಾಜೆಕ್ಟ್ ಫ್ರೀಡಂ ಯೋಜನೆ: ಆಹಾರ ಮತ್ತು ನೀರಿನ ಕೊರತೆಯನ್ನು ಎದುರಿಸುತ್ತಿರುವ ನಾವಿಕರಿಗೆ ಸಹಾಯ ಮಾಡಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಈ ಯೋಜನೆ ಘೋಷಿಸಿದ್ದರು. ನೂರಾರು ಹಡಗುಗಳು ಸಿಲುಕಿಕೊಂಡಿರುವ ಈ ಜಲಮಾರ್ಗದಲ್ಲಿ ವಾಣಿಜ್ಯ ಸಂಚಾರವನ್ನು ಪುನಃಸ್ಥಾಪಿಸಲು 15,000 ಸೇನಾ ಸಿಬ್ಬಂದಿ ಮತ್ತು 100 ವಿಮಾನಗಳನ್ನು ಈ ಕಾರ್ಯಾಚರಣೆಯಲ್ಲಿ ಬಳಸಿಕೊಳ್ಳುವ ಸಾಧ್ಯತೆಯಿದೆ.

ಪ್ರಾದೇಶಿಕ ಭದ್ರತಾ ಎಚ್ಚರಿಕೆ ಇದೇ ವೇಳೆ ಯುಎಇ ತನ್ನ ನಿವಾಸಿಗಳಿಗೆ ತುರ್ತು ಕ್ಷಿಪಣಿ ಎಚ್ಚರಿಕೆ ನೀಡಿದೆ. ಏಪ್ರಿಲ್‌ನಲ್ಲಿ ಕದನ ವಿರಾಮ ಜಾರಿಗೆ ಬಂದ ನಂತರ ನೀಡಲಾದ ಮೊದಲ ಎಚ್ಚರಿಕೆ ಇದಾಗಿದೆ. ಇದೇ ವೇಳೆ, ಜಲಸಂಧಿಯ ಮೂಲಕ ಹಾದುಹೋಗುತ್ತಿದ್ದ ಟ್ಯಾಂಕರ್ ಒಂದನ್ನು ಇರಾನ್ ಎರಡು ಡ್ರೋನ್‌ಗಳ ಮೂಲಕ ಗುರಿಪಡಿಸಿದೆ, ಎಂದು ಯುಎಇ ಆರೋಪಿಸಿದೆ.

ಆಧುನಿಕ ತಂತ್ರಜ್ಞಾನದಿಂದ ಸಿಂದೂರ ಯಶ

ಪ್ರಯಾಗ್‌ರಾಜ್: ಭಯೋತ್ಪಾದಕರು ಮತ್ತವರ ಆಶ್ರಯದಾತರಿಗೆ ನಿರ್ಣಾಯಕ ಹೊಡೆತ ನೀಡಲು, ಆಧುನಿಕ ತಂತ್ರಜ್ಞಾನವನ್ನು ಭಾರತೀಯ ಮಿಲಿಟರಿ ಸೂಕ್ತವಾಗಿ ಬಳಸಿಕೊಂಡದ್ದಕ್ಕೆ ವಿಶಿಷ್ಟ ದೃಷ್ಟಾಂತವಾಗಿದೆ, ಅದರ ಹೆಸರು ಆಪರೇಷನ್ ಸಿಂದೂರ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಸೋಮವಾರ ಬಣ್ಣಿಸಿದ್ದಾರೆ. ಆಪರೇಷನ್ ಸಿಂದೂರ ಕಾರ್ಯಾಚರಣೆಯ ಪ್ರಥಮ ವಾರ್ಷಿಕೋತ್ಸವ ದಿನ ಸಮೀಪಿಸುತ್ತಿರುವಂತೆ ಸಚಿವ ಸಿಂಗ್ ಕಾರ್ಯಾಚರಣೆ ನಡೆಸಿದ ಭಾರತೀಯ ಸೇನಾ ಪಡೆಯ ಸ್ಥೈರ್ಯ-ಸಾಮರ್ಥ್ಯಗಳನ್ನು ಕೊಂಡಾಡಿದ್ದಾರೆ. ಆಪರೇಷನ್ ಸಿಂದೂರ ಭಾರತೀಯ ಮಿಲಿಟರಿಯ ಶಕ್ತಿ-ಸಾಮರ್ಥ್ಯಗಳ ಬಗ್ಗೆ ಜಗತ್ತಿಗೇ ಸಂದೇಶ ನೀಡಿದೆ ಎಂದು ಸಚಿವರು ನಾರ್ತ್ ಟೆಕ್ ಸಿಂಪೋಸಿಸಮ್‌ನ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ನುಡಿದರು. ಕಳೆದ ವರ್ಷ ಏ.22ರ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಅನ್ಯಾಯವಾಗಿ ಆಹುತಿಯಾಗಿದ್ದ ಭಾರತೀಯ ಪ್ರವಾಸಿಗರ ಸಾವಿಗೆ ನ್ಯಾಯ ನೀಡುವ ರೂಪದಲ್ಲಿ , ಮೇ 7ರಂದು ಆಪರೇಷನ್ ಸಿಂದೂರ ನಡೆದಿತ್ತು. ಪಾಕ್ ನಿಯಂತ್ರಿತ ಪ್ರದೇಶಗಳಲ್ಲಿದ್ದ ಭಯೋತ್ಪಾದಕರ ಮೂಲಸೌಕರ್ಯ-ಶಿಬಿರಗಳನ್ನು ನಿಖರವಾಗಿ ಗುರಿಯಾಗಿಸಿ ಕಾರ್ಯಾಚರಣೆ ನಡೆದಿತ್ತು.

ಬರೇ ಉಗ್ರರ ನಾಶ ಉತ್ತಮ ಅಂಶ: ನಾಲ್ಕು ದಿನಗಳ ಕಾಲ ಭೀಕರವಾಗಿ ನಡೆದ ಸಂಘರ್ಷವು, ಮಿಲಿಟರಿ ಕಾರ್ಯಾಚರಣೆ ನಿಲ್ಲಿಸುವ ಬಗ್ಗೆ ಮೇ10ರಂದು ಏರ್ಪಟ್ಟ ಒಡಂಬಡಿಕೆಯಿಂದ ಸ್ಥಗಿತಗೊಂಡಿತ್ತು. ಏಕಕಾಲಕ್ಕೆ ಭಯೋತ್ಪಾದಕರು ಮತ್ತವರ ಆಶ್ರಯದಾತರಿಗೆ ನಮ್ಮ ಯೋಧರು ನೀಡಿದ ನಿರ್ಣಾಯಕ ಪ್ರತ್ಯುತ್ತರ ಬಗ್ಗೆ ಇಡೀ ದೇಶಕ್ಕೆ ದೇಶವೇ ಹೆಮ್ಮೆಪಟ್ಟಿದೆ. ನಾವು ಸಂಯಮ ಮೆರೆದು ಭಯೋತ್ಪಾದಕರನ್ನಷ್ಟೆ ನಿರ್ಮೂಲನೆಗೈದದ್ದು ಉತ್ತಮ ವಿಚಾರ ಅಥವಾ ನಮ್ಮ ಯೋಧಪಡೆಯ ಸಾಮರ್ಥ್ಯವೇನೆಂಬುದು ಇಡೀ ಜಗತ್ತಿಗೆ ವೇದ್ಯವಾಗಿದೆ. ತಂತ್ರಜ್ಞಾನ ಬಳಕೆಗೊಂದು ವಿಶಿಷ್ಟ ನಿದರ್ಶನವಾಗಿದೆ ಆಪರೇಶನ್ ಸಿಂದೂರ್ ಎಂದು ಸಚಿವರು ಪುನರುಚ್ಚರಿಸಿದರು.




ಶಸ್ತ್ರಗಳ ಆತ್ಮವಿಶ್ವಾಸದಿಂದ ಬಳಸುವ ಸಾಮರ್ಥ್ಯ: ಆಕಾಶ್, ಬ್ರಹ್ಮೋಸ್‌ನಂತಹ ಘನ ಕ್ಷಿಪಣಿಗಳ ಸಹಿತ ಅತ್ಯಾಧುನಿಕ ಸಖಿತ್ ಶಸ್ತ್ರಾಸ್ತ್ರಗಳು ಕಾರ್ಯಾಚರಣೆಯಲ್ಲಿ ಬಳಕೆಯಾಗಿತ್ತು . ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದಂತೆ ಅತ್ಯಾಧುನಿಕ ತಾಂತ್ರಿಕ ಬದಲಾವಣೆಗಳನ್ನು ಅರಿತುಕೊಂಡು, ಅವನ್ನು ಆತ್ಮವಿಶ್ವಾಸದಿಂದ ಬಳಸಲು ನಮ್ಮ ಯೋಧಪಡೆ ಸಖಿತ್ ಸಮರ್ಥವಿದೆ ಎಂಬುದನ್ನು ಆಪರೇಶನ್ ಸಿಂದೂರ್ ಸಾಬೀತುಪಡಿಸಿದೆ ಎಂದು ಸಚಿವ ಸಿಂಗ್ ಪ್ರಶಂಸಿಸಿದರು.

ಶತ್ರುಗಳ ಊಹೆಗೂ ನಿಲುಕದ ದಾಳಿ ಸಾಮರ್ಥ್ಯ: ಪ್ರಸ್ತುತ ಸನ್ನಿವೇಶದಲ್ಲಿ ತಂತ್ರಜ್ಞಾನಗಳು ಅಸಾಧಾರಣವೆಂಬಂತೆ ಬದಲಾಗುತ್ತಲೇ ಇವೆ. ಆದರೂ ಮಾನವ ಚರಿತ್ರೆಯಲ್ಲಿ ಇಷ್ಟೊಂದು ಸ್ಫೋಟಕ ಸದೃಶ ವಿಕಸನ ಕಂಡದ್ದಿಲ್ಲ. ಡ್ರೋನ್‌ಗಳು , ಸೆನ್ಸರ್‌ಗಳು ಗೇಮ್ ಚೇಂಜಿಂಗ್ ಅಂಶಗಳಾಗಿ ಹೊರಹೊಮ್ಮಿದ್ದಕ್ಕೆ ನಾವು ಸಾಕ್ಷಿಯಾಗಿದ್ದೇವೆ. ಇಂತಹ ಸಮಯದಲ್ಲಿ ಯಾವುದು ಶಸ್ತ್ರವಾಗಿ ಮಾರ್ಪಾಡಾದೀತು ಎಂದು ಲೆಕ್ಕ ಹಾಕುವಂತಿಲ್ಲ. ಪೇಜರ್ ಕೂಡ ಅಸ್ತ್ರವಾದರೂ ಆದೀತು. ಹಾಗಾಗಿ ಭವಿಷ್ಯದಲ್ಲಿ ಯಾವುದೆಲ್ಲ ಶಸ್ತ್ರವಾದೀತೆಂಬುದಕ್ಕೆ ಮಿತಿ ಎಂಬುದೇ ಇರುವುದಿಲ್ಲ. ಇಂತಹ ವಸ್ತುಸ್ಥಿತಿಯಲ್ಲಿ ಶತ್ರು ರಾಷ್ಟ್ರಗಳ ಕಲ್ಪನೆಗೂ ನಿಲುಕದ ತೆರ ದಾಳಿಗಳನ್ನು ನಡೆಸಲು ಪೂರಕ ಸಾಮರ್ಥ್ಯಗಳನ್ನು ಭಾರತ ಅಭಿವೃದ್ಧಿಪಡಿಸಬೇಕು ಎಂದು ಸಚಿವ ಸಿಂಗ್ ಅಭಿಪ್ರಾಯಪಟ್ಟರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5974

ಎಡದಿಂದ ಬಲಕ್ಕೆ
2.ಕೈಗಳಿಂದ ಕೆಲಸ ಮಾಡುವ ನೈಪುಣ್ಯ (5)
5.ಸುದ್ದಿ ಸಂಸ್ಥೆಯ ಮುಖ್ಯಸ್ಥ (4)
7.ಏಕ ಆಶಯವಿಲ್ಲಿ ಚಲನಚಿತ್ರವಾಗಿದೆ (4)
10.ಕೆಟ್ಟ ಸ್ವಭಾವದವನು-ದುಷ್ಟ (3)
11.ತೊಟ್ಟುಕೊಳ್ಳುವ ವಸ್ತ್ರ-ಆಭರಣಗಳು (3)
13.ಅಂದವಾಗಿ ಅಣ್ಣ ಅಲಂಕರಿಸಿದ್ದು ಈ ಪಲ್ಲಕ್ಕಿಯನ್ನು (3)
15.ಸತ್ರವೃತ್ತಿ ಹೊಂದಿದವನು (4)
16.ಹತ್ಯಾಕಾಂಡ-ಹಿಂಸಾಚಾರವಿದು (4)
17.ಕಿಟಕಿ ಬಳಿ ನಿಂತು ಆಡಿದ ಚುಚ್ಚುಮಾತು (3)

ಮೇಲಿನಿಂದ ಕೆಳಕ್ಕೆ
1.ಮನಸ್ಸಿನ ನಿರ್ಧಾರವಿಲ್ಲಿ ತಲೆಕೆಳಗಾಗಿದೆ (3)
2. ಹಂದರದ ಕೆಳಗೆ ಕಂಡ ವ್ಯಾಪಾರಿ (3)
3. ದೇವಸ್ಥಾನವಿಲ್ಲಿ ಉಲ್ಟಾ ಕಾಣುತ್ತಿದೆ (3)
4. ಈ ಕ್ರಾಸ್ ಬಗ್ಗೆ ಮೂಚಂತೆ ಬರೆದಿದ್ದಾರೆ (3)
6. ಕೆಟ್ಟ ಕೆಲಸಕ್ಕೆ ಹೆದರುವವನು (4)
8. ಮಕ್ಕಳು ಮರಳಿನಲ್ಲಿ ಕಟ್ಟಿದ ಸಣ್ಣಮನೆ (4)
9.ಗುಪ್ತವಾದ ಕಾಲುಗಳುಳ್ಳದ್ದು-ಹಾವು (4)
10.ಕೆಟ್ಟ ಕಣ್ಣಿನಿಂದ ನೋಡು (4)
12.ಸ್ನೇಹಬಂಧ-ಮಿತ್ರತ್ವವಿದು (4)
13.ಈ ಮೃತ್ಯುದೇವತೆಯನ್ನು ಕಂಡು ಆತಂಕವಾಯ್ತು (3)
14.ಬೆಳಕಿನ ರಶ್ಮಿ ತಲೆಕೆಳಗಾಗಿದೆ (3)

5973 ಉತ್ತರ

ಎಡದಿಂದ ಬಲಕ್ಕೆ:
2.ಗಾಢಾಂಧಕಾರ
5.ವಿರಾಗ 6.ವಿಚಾರ
7.ಲವಲವಿಕೆ
8.ಲತಾಗೃಹ
11.ಸರಸತಿ 13.ರುಧಿರ
14.ಗಾರಿಗೆ 16.ವಾಸುಕಿ
17.ನರವಾನರ

ಮೇಲಿನಿಂದ ಕೆಳಕ್ಕೆ:
1.ನಾಗಮಂಡಲ
2.ಗಾವಿಲ 3.ರವಿಕೆ
4.ನರಕಗತಿ 9.ತಾಳೆಗರಿ
10.ಹಸಿರು 11.ಸದರ
12.ಸರಳಿಸು 15.ನಗೆ
16.ವಾರ

ಕಿರುಸುದ್ದಿ

ಬಾವಿಗೆ ಬಿದ್ದ ಹಸುವಿನ ರಕ್ಷಣೆ

ಕೈಕಂಬ: ಎಡಪದವು ಸಮೀಪದ ಕಣ್ಣೋರಿ ಎಂಬಲ್ಲಿ ಬಾವಿಗೆ ಬಿದ್ದ ಹಸುವೊಂದನ್ನು ಸ್ಥಳೀಯರು ಸಕಾಲದಲ್ಲಿ ಮೇಲೆತ್ತಿ ರಕ್ಷಿಸಿ ಹಸುವಿನ ಜೀವ ಉಳಿಸಿದ್ದಾರೆ.

ಕಣ್ಣೋರಿಯ ಸದಾನಂದ ಎಂಬವರ ಮೇಯಲು ಬಿಟ್ಟಿದ್ದ ಹಸು ಸೋಮವಾರ ಮದ್ಯಾನ 2 ಗಂಟೆ ಸುಮಾರಿಗೆ ಆಯತಪ್ಪಿ ಸುಮಾರು ಮೂವತ್ತು ಅಡಿ ಆಳದ ಬಾವಿಗೆ ಬಿದ್ದಿತ್ತು. ಅದೃಷ್ಟವಶಾತ್ ಬಾವಿಯಲ್ಲಿ ಅಂದಾಜು ನಾಲ್ಕು ಅಡಿಗಳಷ್ಟು ನೀರು ಇದ್ದ ಕಾರಣ ಹಸುವಿನ ಪ್ರಾಣಕ್ಕೆ ಅಪಾಯವಾಗಿರಲಿಲ್ಲ. ಹಸು ಬಾವಿಗೆ ಬಿದ್ದಿರುವ ವಿಚಾರ ತಿಳಿದ ಸ್ಥಳೀಯರು ಹಾಗೂ ಎಡಪದವಿನ ಯುವಕರು ಸ್ಥಳಕ್ಕೆ ದಾವಿಸಿ, ಬಾವಿಗೆ ಇಳಿದು ಹಸುವಿಗೆ ಹಗ್ಗ ಕಟ್ಟಿ ಹರಸಾಹಸ ಪಟ್ಟು ಸಾಯಂಕಾಲ 6ಗಂಟೆಗೆ ಹಸುವನ್ನು ಮೇಲೆತ್ತಿ ರಕ್ಷಿಸಿದ್ದಾರೆ. ಹಸು ಸದ್ಯ ಆರೋಗ್ಯವಾಗಿದೆ.

ಕಬ್ಬಿಣದ ಕಂಬಕ್ಕೆ ಡಿಕ್ಕಿ ಹೊಡೆದ ಮಿನಿ ಟೆಂಪೋ

ಸುರತ್ಕಲ್: ರಾಷ್ಟ್ರೀಯ ಹೆದ್ದಾರಿ 66ರ ಮುಕ್ಕ ಜಂಕ್ಷನ್ ಬಳಿ ಮಿನಿ ಟೆಂಪೋ ಚಾಲಕನ ನಿಯಂತ್ರಣ ತಪ್ಪಿ, ದಾರಿದೀಪದ ಕಬ್ಬಿಣದ ಕಂಬಕ್ಕೆ ಡಿಕ್ಕಿ ಹೊಡೆದಿದ್ದು, ಚಾಲಕ ಅಲ್ಪ ಸ್ವಲ್ಪ ಗಾಯಗಳೊಂದಿಗೆ ಪವಾಡ ಸದೃಶ ಪಾರಾಗಿದ್ದಾರೆ. ಗಾಯಾಳು ಚಾಲಕನನ್ನು ಮೈಸೂರು ಸಾತಿಗಳ್ಳಿ ನಿವಾಸಿ ವೆಂಕಟೇಶ್ ಎಂದು ಗುರುತಿಸಲಾಗಿದೆ. ಮೈಸೂರಿನಿಂದ ಉಡುಪಿ ಕಡೆಗೆ ಬಾಳೆ ಎಲೆ ಹೇರಿಕೊಂಡು ಬರುತ್ತಿದ್ದ ವೇಳೆ ಸೋಮವಾರ ಮುಂಜಾನೆ ವಾಹನ ಚಾಲಕನ ನಿಯಂತ್ರಣ ತಪ್ಪಿ ಹೆದ್ದಾರಿ ಡಿವೈಡರ್ ನಲ್ಲಿದ್ದ ದಾರಿದೀಪದ ಕಬ್ಬಿಣದ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಅಪಘಾತದಿಂದ ಮಿನಿ ಟೆಂಪೋ ಎದುರು ಭಾಗ ಸಂಪೂರ್ಣ ಹಾನಿಯಾಗಿದೆ. ಅಪಘಾತದಿಂದ ಕೆಲ ಹೊತ್ತು ಹೆದ್ದಾರಿ ಸಂಚಾರ ಅಸ್ತವ್ಯಸ್ತ ಉಂಟಾಗಿದ್ದು ಸ್ಥಳಕ್ಕೆ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಅಪಘಾತಕ್ಕಿಡಾದ ವಾಹನವನ್ನು ಸ್ಥಳದಿಂದ ತೆರವುಗೊಳಿಸಿದ್ದಾರೆ.

ಕಾವೇರಿ ನದಿಯಲ್ಲಿ ಮುಳುಗಿ ಓರ್ವ ಸಾವು

ಮಡಿಕೇರಿ: ಕಾವೇರಿ ನದಿಯಲ್ಲಿ ಮುಳುಗಿ ವ್ಯಕ್ತಿಯೊಬ್ಬರು ಸಾವಿಗೀಡಾಗಿರುವ ಘಟನೆ ಸಿದ್ದಾಪುರ ಸಮೀಪದ ಗುಯ್ಯ ಗ್ರಾಮದಲ್ಲಿ ನಡೆದಿದೆ. ಮೃತರನ್ನು ವೀರಾಜಪೇಟೆಯ ಸುಂಕದಕಟ್ಟೆ ನಿವಾಸಿ ನಾಗರಾಜು (41 ಎಂದು ಗುರುತಿಸಲಾಗಿದೆ. ಗುಯ್ಯ ದೇವಾಲಯ ಸಮೀಪದ ಕಾವೇರಿ ನದಿಗೆ ಸ್ನಾನಕ್ಕೆಂದು ತೆರಳಿದ್ದ ಇಬ್ಬರ ಪೈಕಿ ನಾಗರಾಜು ಬೃಹತ್ ಗುಂಡಿಯಲ್ಲಿ ಸಿಲುಕಿ ಸಾವನ್ನಪ್ಪಿರುವುದಾಗಿ ಹೇಳಲಾಗಿದೆ. ಘಟನೆ ಬಗ್ಗೆ ಮಾಹಿತಿ ತಿಳಿದ ಕೂಡಲೇ ಸ್ಥಳಕ್ಕೆ ಆಗಮಿಸಿದ ಪೊಲೀಸರು ಗ್ರಾಮಸ್ಥರ ನೆರವಿನೊಂದಿಗೆ ಮೃತದೇಹವನ್ನು ಹೊರ ತೆಗೆದಿದ್ದಾರೆ. ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಸರಗೋಡು ಜಿಲ್ಲೆಯ ಐದು ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟ

ನಾಲ್ಕು ಯುಡಿಎಫ್ ತೆಕ್ಕೆಗೆ




ಮಂಜೇಶ್ವರ ಹಾಗೂ ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ವಿಜಯ ಸಾಧಿಸಿದ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು

ಕಾಸರಗೋಡು: ಕೇರಳ ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಕಾಸರಗೋಡು ಜಿಲ್ಲೆಯ ಎಲ್ಲಾ ಐದು ವಿಧಾನಸಭಾ ಕ್ಷೇತ್ರಗಳ ಫಲಿತಾಂಶಗಳನ್ನು ಘೋಷಿಸಲಾಗಿದೆ. ಆದರಂತೆ ಜಿಲ್ಲೆಯ ಐದು ಕ್ಷೇತ್ರಗಳ ಪೈಕಿ ನಾಲ್ಕರಲ್ಲಿ ಯುಡಿಎಫ್ ಜಯಭೇರಿ ಬಾರಿಸಿದ್ದು, ಒಂದರಲ್ಲಿ ಎಲ್ ಡಿಎಫ್ ಗೆಲುವು ಸಾಧಿಸಿದೆ. ಮಂಜೇಶ್ವರ, ಕಾಸರಗೋಡು, ಉದುಮ, ತೃಕ್ಕರೀಪ್ಪುರ ಕ್ಷೇತ್ರಗಳಲ್ಲಿ ಯುಡಿಎಫ್ ಮತ್ತು ಕಾಞಂಗಾಡು ಕ್ಷೇತ್ರದಲ್ಲಿ ಎಲ್‌ಡಿಎಫ್ ವಿಜಯಪತಾಕೆ ಹಾರಿಸಿದೆ.

ಮಂಜೇಶ್ವರ ವಿಧಾನಸಭಾ ಕ್ಷೇತ್ರ

ಮಂಜೇಶ್ವರದಲ್ಲಿ ಹಾಲಿ ಶಾಸಕ, ಮುಸ್ಲಿಂಲೀಗ್‌ನ ಅಭ್ಯರ್ಥಿ ಎ.ಕೆ.ಎಂ.ಅಶ್ರಫ್ 96,948 ಮತಗಳನ್ನು ಪಡೆದಿದ್ದು, 29,252 ಮತಗಳ ಅಂತರದಿಂದ ಗೆಲುವು ಸಾಧಿಸಿದರು. ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ 67,696 ಮತಗಳೊಂದಿಗೆ ಎರಡನೇ ಸ್ಥಾನ ಪಡೆದರು. ಸಿಪಿಎಂ ಅಭ್ಯರ್ಥಿ ಕೆ.ಆರ್ .ಜಯಾನಂದ 21,212 ಮತಗಳನ್ನು ಗಳಿಸಿದರು.

ಬಹುಜನ ಸಮಾಜ ಪಕ್ಷದ ಅಭ್ಯರ್ಥಿ ಸಂಜೀವ್ 212, ಸ್ವತಂತ್ರ ಅಭ್ಯರ್ಥಿಗಳಾದ ಜೀನ್ ಲವೀನಾ ಮೊಂತೆರೋ 523 ಮತ ಗಳನ್ನು ಪಡೆದರು. ಕಣ್ಣೂರು ಅಬ್ದುಲ್ಲ ಮಾಸ್ಟರ್ 285, ಡಿ.ಸುರೇಂದ್ರನ್ ನಾಯರ್ 203, ಅಬ್ದುಲತೀಫ್ 79, ಮೊಹಮ್ಮದ್ ಅಶ್ರಫ್ 78, ಮೊಹಮ್ಮದ್ ಅಶ್ರಫ್ ಕೆ.ಎ. 64 ಹಾಗೂ ಜೋನ್ ಡಿಸೋಜಾ 46 ಮತಗಳನ್ನು ಪಡೆದಿದ್ದು, ನೋಟಾಕ್ಕೆ 455 ಮತಗಳು ಬಿದ್ದಿವೆ.

ವಿಜೇತ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ವಿತರಣೆ

ಕಾಸರಗೋಡು ಜಿಲ್ಲೆಯ ವಿಧಾನಸಭಾ ಚುನಾವಣೆಯಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ ಚುನಾವಣಾ ಅಧಿಕಾರಿಗಳು ಪ್ರಮಾಣ ಪತ್ರಗಳನ್ನು ವಿತರಿಸಿದರು.

ಮಂಜೇಶ್ವರ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ ಎ.ಕೆ.ಎಂ.ಅಶ್ರಫ್ ಅವರಿಗೆ ಮಂಜೇಶ್ವರ ಕ್ಷೇತ್ರದ ಚುನಾವಣಾಧಿಕಾರಿ, ಉಪ ಕಲೆಕ್ಟರ್ (ಎಲ್ ಆರ್) ವಿ.ಪಿ.ರಘುಮಣಿ ಮತ್ತು ಕಾಸರಗೋಡು ಕ್ಷೇತ್ರದಲ್ಲಿ ಜಯ ಗಳಿಸಿದ ಕಲ್ಲಟ್ರ ಮಾಹಿನ್ ಹಾಜಿ ಅವರಿಗೆ ಚುನಾವಣಾಧಿಕಾರಿಯಾದ ಕಾಸರಗೋಡು ಆರ್‌ಡಿಒ ಬಿನು ಜೋಸೆಫ್ ಅವರು ಪ್ರಮಾಣಪತ್ರ ನೀಡಿದರು.

ಉದುಮ ಕ್ಷೇತ್ರದಲ್ಲಿ ಗೆದ್ದಿರುವ ನೀಲಕಂಠನ್ ಅವರಿಗೆ ಚುನಾವಣಾಧಿಕಾರಿ, ಉಪ ಕಲೆಕ್ಟರ್ ಲಿಪು ಎಸ್.ಲಾರೆನ್ಸ್ ಮತ್ತು ಕಾಞಂಗಾಡು ಕ್ಷೇತ್ರದಲ್ಲಿ ವಿಜೇತರಾದ ವಕೀಲ ಗೋವಿಂದನ್ ಪಳ್ಳಿಕ್ಕಾಪಿಲ್ ಅವರಿಗೆ ಚುನಾವಣಾಧಿಕಾರಿ, ಕಾಞಂಗಾಡು ಆರ್‌ಡಿಒ ಆರ್. ಮನೋಜ್ ಹಾಗೂ ತೃಕ್ಕರೀಪ್ಪುರ ಕ್ಷೇತ್ರದಲ್ಲಿ ಗೆಲುವು ಸಾಧಿಸಿರುವ ಸಂದೀಪ್ ವಾರಿಯರ್ ಅವರಿಗೆ ಚುನಾವಣಾಧಿಕಾರಿ, ಉಪ ಕಲೆಕ್ಟರ್ (ಆರ್‌ಆರ್) ವಿ.ಇ.ಶೆರ್ಲಿ ಅವರು ಪ್ರಮಾಣಪತ್ರ ವಿತರಿಸಿದರು.

ಕಾಸರಗೋಡು ವಿಧಾನಸಭಾ ಕ್ಷೇತ್ರ

ಕಾಸರಗೋಡು ಕ್ಷೇತ್ರದಲ್ಲಿ ಮುಸ್ಲಿಂಲೀಗ್‌ನ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ 76,396 ಮತಗಳನ್ನು ಪಡೆದು ಜಯ ಗಳಿಸಿದರು. ಬಹುಮತ 22,698 ಮತಗಳಾಗಿವೆ. ಬಿಜೆಪಿ ಅಭ್ಯರ್ಥಿ ಎಂ.ಎಲ್.ಅಶ್ವಿನಿ 53,698 ಮತಗಳನ್ನು ಪಡೆದು ಎರಡನೇ ಸ್ಥಾನ ಗಳಿಸಿದರು. ಸ್ವತಂತ್ರ ಅಭ್ಯರ್ಥಿಗಳಾದ ಶಾನವಾಸ್ ಪಾದೂರು 36,678, ಶಾನವಾಸ್ ಎ.ಎ. 893, ಮುಹಮ್ಮದ್ ಅಲಿ ಫತ್ತಾಹ್ ಬಿ.ಎಂ. 824 ಮತಗಳು ಮತ್ತು ನೋಟಾಕ್ಕೆ 714 ಮತಗಳು ಸಲ್ಲಿಕೆಯಾಗಿವೆ.

ಉದುಮ ವಿಧಾನಸಭಾ ಕ್ಷೇತ್ರ

ಉದುಮ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ನೀಲಕಂಠನ್ 78,910 ಮತಗಳನ್ನು ಪಡೆದಿದ್ದು, 4,847 ಮತಗಳ ಅಂತರದಿಂದ ಜಯ ದಾಖಲಿಸಿದರು. ಹಾಲಿ ಶಾಸಕ, ಸಿಪಿಎಂ ಅಭ್ಯರ್ಥಿ ಸಿ.ಎಚ್.ಕುಂಞಂಬು 74,063 ಮತಗಳನ್ನು ಗಳಿಸಿ ಎರಡನೇ ಸ್ಥಾನ ಪಡೆದರು. ಬಿಜೆಪಿ ಅಭ್ಯರ್ಥಿ ಮನುಲಾಲ್ ಮೇಲತ್ 26,899, ಸ್ವತಂತ್ರ ಅಭ್ಯರ್ಥಿಗಳಾದ ಕುಂಞಂಬು ಪಿ.ಪಿ. 191, ಕುಂಞರಾಮನ್ 138, ನಜೀರ್ 111 ಮತಗಳನ್ನು ಮತ್ತು ನೋಟಾಕ್ಕೆ 504 ಮತಗಳು ಲಭಿಸಿವೆ.

ಕಾಞಂಗಾಡು ವಿಧಾನಸಭಾ ಕ್ಷೇತ್ರ

ಕಾಞಂಗಾಡು ಕ್ಷೇತ್ರದಲ್ಲಿ ಸಿಪಿಐ ಅಭ್ಯರ್ಥಿ, ವಕೀಲ ಗೋವಿಂದನ್ ಪಳ್ಳಿಕ್ಕಾಪಿಲ್ 79,920 ಮತಗಳನ್ನು ಪಡೆದು 15,316 ಮತಗಳ ಅಂತರದಿಂದ ಜಯಭೇರಿ ಬಾರಿಸಿದರು. ಕೇರಳ ಕಾಂಗ್ರೆಸ್ ಅಭ್ಯರ್ಥಿ ಶೈಜಿ ಒಟ್ಟಪಳ್ಳಿ 64,604 ಮತಗಳನ್ನು ಪಡೆದು ಎರಡನೇ ಸ್ಥಾನ ಗಳಿಸಿದರು. ಬಿಜೆಪಿ ಅಭ್ಯರ್ಥಿ ಎಂ.ಬಾಲರಾಜ್ 27,063, ಬಹುಜನ ಸಮಾಜ ಪಕ್ಷದ ಅಭ್ಯರ್ಥಿ ಬಿ.ವಿಜಯಕುಮಾರ್ 3,132 ಮತಗಳನ್ನು ಗಳಿಸಿದ್ದು, ನೋಟಾಕ್ಕೆ 1,058 ಮತಗಳು ದೊರಕಿವೆ.

ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರ

ತೃಕ್ಕರೀಪ್ಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಂದೀಪ್ ವಾರಿಯರ್ 83,109 ಮತಗಳನ್ನು ಗಳಿಸಿದ್ದು, 4,431 ಮತಗಳ ಅಂತರದಿಂದ ವಿಜಯಪತಾಕೆ ಹಾರಿಸಿದರು. ಸಿಪಿಎಂ ಅಭ್ಯರ್ಥಿ ಡಾ.ವಿ.ಪಿ.ಪಿ.ಮುಸ್ತಾಫ 78,678 ಮತಗಳನ್ನು ಪಡೆದು ಎರಡನೇ ಸ್ಥಾನ ಗಳಿಸಿದರು. ಟ್ವೆಂಟಿ ಟ್ವೆಂಟಿ ಪಕ್ಷದ ಅಭ್ಯರ್ಥಿ ರವಿ ಕುಳಂಗರ 7,837 ಮತಗಳನ್ನು ಪಡೆದರು. ಸ್ವತಂತ್ರ ಅಭ್ಯರ್ಥಿಗಳಾದ ಸಂದೀಪ್ ಎಲಾಟ್ 258, ಮುಸ್ತಾಫ ಪಿ.ಪಿ. 169, ಮುಸ್ತಾಫ ವಿ.ಪಿ. 143 ಮತಗಳನ್ನು ಪಡೆದರು. ನೋಟಾಕ್ಕೆ 710 ಮತಗಳು ಸಲ್ಲಿಕೆಯಾಗಿವೆ.

ವಾಹನ ಚಲಾಯಿಸುವ ಅಪ್ರಾಪ್ತ ಮಕ್ಕಳು ಮೂವರ ವಿರುದ್ಧ ಕೇಸು ದಾಖಲು

ಕುಂಬಳೆ: ಪ್ರಾಯಪೂರ್ತಿಯಾಗದ ಮಕ್ಕಳು ವಾಹನ ಚಲಾಯಿಸುವುದರ ವಿರುದ್ಧ ಕುಂಬಳೆಯಲ್ಲಿ ಪೊಲೀಸರು ಕಠಿಣ ಕ್ರಮ ಕೈಗೊಳ್ಳತೊಡಗಿದ್ದಾರೆ. ಠಾಣಾ ವ್ಯಾಪ್ತಿಯ ವಿವಿಧ ಭಾಗಗಳಲ್ಲಿ ಎಸ್‌ಐ ಅನಂತಕೃಷ್ಣನ್ ಆರ್.ಮೆನೋನ್ ನಡೆಸಿದ ಕಾರ್ಯಾಚರಣೆ ವೇಳೆ ಸ್ಕೂಟರ್ ಚಲಾಯಿಸುತ್ತಿದ್ದ ಮೂವರು ಮಕ್ಕಳನ್ನು ಪತ್ತೆಹಚ್ಚಿದ್ದಾರೆ. ಅವರ ವಾಹನಗಳನ್ನು ಕಸ್ಟಡಿಗೆ ತೆಗೆದು ಆರ್‌ಸಿ ಮಾಲಕರ ವಿರುದ್ಧ ಕೇಸು ದಾಖಲಿಸಲಾಗಿದೆ.

ಪೆರ್ವಾಡು ಜಂಕ್ಷನ್‌ನಲ್ಲಿ ನಡೆಸಿದ ವಾಹನ ತಪಾಸಣೆ ವೇಳೆ ಅಪರಿಮಿತ ವೇಗದಲ್ಲಿ ಸ್ಕೂಟರ್ ಚಲಾಯಿಸುತ್ತಿದ್ದ 15ರ ಹರೆಯದ ಬಾಲಕನನ್ನು ಪೊಲೀಸರು ತಡೆದು ನಿಲ್ಲಿಸಿ ಠಾಣೆಗೆ ತಲುಪಿಸಿದ್ದಾರೆ. ಬಳಿಕ ವಿಚಾರಿಸಿದಾಗ ತಾಯಿ ಸ್ಕೂಟರ್ ಓಡಿಸಲು ನೀಡಿರುವುದಾಗಿ ಬಾಲಕ ತಿಳಿಸಿದ್ದಾನೆ. ಇದರಿಂದ ಕುಂಟಂಗೇರಡ್ಕದ ಶಶಿಕುಮಾರ್‌ರ ಪತ್ನಿ ಪಾರ್ವತಿ ವಿರುದ್ಧ ಕೇಸು ದಾಖಲಿಸಲಾಗಿದೆ. ಬಳಿಕ ಬಾಲಕನನ್ನು ಮನೆಗೆ ಕಳುಹಿಸಲಾಯಿತು.

ಆದೇ ರೀತಿ ಆರಿಕ್ಕಾಡಿ ಅಂಡರ್ ಪಾಸ್ ಬಳಿ ವಾಹನ ತಪಾಸಣೆ ವೇಳೆ ಅಪರಿಮಿತ ವೇಗದಲ್ಲಿ ಸ್ಕೂಟರ್ ಚಲಾಯಿಸಿ ಬರುತ್ತಿದ್ದ 17ರ ಹರೆಯದ ಬಾಲಕನನ್ನು ಪೊಲೀಸರು ತಡೆದು ನಿಲ್ಲಿಸಿ ವಿಚಾರಿಸಿದಾಗ ತನಗೆ ತಾಯಿ ಸ್ಕೂಟರ್ ನೀಡಿರುವುದಾಗಿ ತಿಳಿಸಿದ್ದಾನೆ. ಇದರಿಂದ ಬಂಬ್ರಾಣ ಕಾಮಿಲ್ ಮಂಜಿಲ್‌ನ



ಖಾಲಿದ್‌ರ ಪತ್ನಿ ಬಸ್ ಬಲ್ಕೀಸ್ ಎಂಬವರ ವಿರುದ್ಧ ಕೇಸು ದಾಖಲಿಸಿ ಬಾಲಕನನ್ನು ಮನೆಗೆ ಕಳುಹಿಸಲಾಯಿತು.

ಪೆರ್ವಾಡು ರಾಷ್ಟ್ರೀಯ ಹೆದ್ದಾರಿ ಸರ್ವೀಸ್ ರಸ್ತೆಯ ಬಸ್ ನಿಲ್ದಾಣ ಕೇಂದ್ರ ಶೆಡ್ ಸಮೀಪ ಸ್ಕೂಟರ್ ಚಲಾಯಿಸುತ್ತಿದ್ದ 15ರ ಹರೆಯದ ಬಾಲಕನನ್ನು ಪೊಲೀಸರು ತಡೆದು ನಿಲ್ಲಿಸಿ ವಿಚಾರಿಸಿದಾಗ ಸ್ಕೂಟರ್ ನೀಡಿರುವುದು ಚಿಕ್ಕಪ್ಪನೆಂದು ತಿಳಿಸಿದ್ದಾನೆ. ಆದರಂತೆ ಉಪ್ಪಳ ಕೋರಿಕ್ಕಾರ್ ಅರಾಫತ್ ಮಂಜಿಲ್‌ನ ಅನ್ವರ್ ವಿರುದ್ಧ ಕೇಸು ದಾಖಲಿಸಿ ಬಾಲಕನನ್ನು ಬಿಡುಗಡೆಗೊಳಿಸಲಾಯಿತು.

ಪ್ರಾಯಪೂರ್ತಿಯಾಗದ ಮಕ್ಕಳು ಸಮಾನ ವಯಸ್ಕರಾದ ಮೂರ್ನಾಲ್ಕು ಮಂದಿಯನ್ನು ದ್ವಿಚಕ್ರ ವಾಹನಗಳಲ್ಲಿ ಕುಳ್ಳಿರಿಸಿ ಅಪರಿಮಿತ ವೇಗದಲ್ಲಿ ಸಂಚರಿಸುತ್ತಿರುವುದಾಗಿ ಎಸ್‌ಐ ಅನಂತಕೃಷ್ಣನ್ ಆರ್. ಮೆನೋನ್ ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಮಕ್ಕಳು ಸ್ಕೂಟರ್ ಚಲಾಯಿಸುವದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಸ್‌ಐ ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ



ದಕ್ಷಿಣ ಕನ್ನಡ 34° 27°
ಉಡುಪಿ 34° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಮಂಗಳವಾರ 05, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5
ಕಾಸರಗೋಡು ಜಿಲ್ಲೆಯಲ್ಲಿ ಸುಸೂತ್ರವಾಗಿ ನಡೆದ ಚುನಾವಣೆಯ ಮತ ಎಣಿಕೆ



ಪುಟ 6
ಉಡುಪಿ ಯಕ್ಷಗಾನ ಕಲಾರಂಗದಿಂದ 93ನೇ ಮನೆ ಹಸ್ತಾಂತರ

ಸುದ್ದಿ ಅಪ್ಡೇಟ್‌ಗಾಗಿ Google lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಗೆಲುವಿಗೆ ಮಂಗಳೂರಿನಲ್ಲಿ ವಿಜಯೋತ್ಸವ





ಪಂಚರಾಜ್ಯಗಳ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಬಿಜೆಪಿ ಗೆಲುವಿನ ಹಿನ್ನೆಲೆಯಲ್ಲಿ ನಗರದ ಪಿವಿಎಸ್ ವೃತ್ತ ಬಳಿಯ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಾಲಯ ಮುಂಭಾಗ ಬಿಜೆಪಿ ಕಾರ್ಯಕರ್ತರು ಸೋಮವಾರ ವಿಜಯೋತ್ಸವ ನಡೆಸಿದರು. ಮಹಿಳಾ ಕಾರ್ಯಕರ್ತರು ಕುಣಿದು ಸಂತಸ ಹಂಚಿಕೊಂಡರು. ಬಳಿಕ ಕಾರ್ಯಕರ್ತರಿಗೆ ವಿಶೇಷವಾಗಿ ಚುರುಮುರಿ ಹಂಚಲಾಯಿತು.

20 ವಾರ್ಡ್‌ಗಳಿಗೆ 106 ಪೌರ ಕಾರ್ಮಿಕರು

ಸಿಬ್ಬಂದಿಗಳ ಕೊರತೆ

ಉಡುಪಿ ನಗರದಲ್ಲಿ ಹೆಚ್ಚುತ್ತಿದೆ ತ್ಯಾಜ್ಯ ಸಮಸ್ಯೆ

ಉಡುಪಿ: ಉಡುಪಿ ನಗರವನ್ನು 'ನಿರ್ಮಲ ನಗರ'ವನ್ನಾಗಿಸುವ ನಗರ ಸಭೆಯ ಆಶಯಗಳು ಕೇವಲ ಕಾಗದ ಕ್ಕಷ್ಟೇ ಸೀಮಿತವಾಗುತ್ತಿವೆಯೇ ಎಂಬ ಪ್ರಶ್ನೆ ಈಗ ಸಾರ್ವಜನಿಕ ವಲಯದಲ್ಲಿ ಬಲವಾಗಿ ಕೇಳಿಬರುತ್ತಿದೆ.

ನಗರದಾದ್ಯಂತ ಕಸ ವಿಲೇವಾರಿ ಪ್ರಕ್ರಿಯೆ ಸಂಪೂರ್ಣ ವಿಫಲವಾಗುತ್ತಿದ್ದು, ನಗರಸಭೆಯ ಆಡಳಿತ ವೈಫಲ್ಯದ ವಿರುದ್ಧ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.



ಸಿಬ್ಬಂದಿ ಕೊರತೆಯಿಂದ ಅಡ್ಡಿ

ನಗರಸಭೆ ವ್ಯಾಪ್ತಿಯ ಒಟ್ಟು 35 ವಾರ್ಡ್‌ಗಳ ಪೈಕಿ 20 ವಾರ್ಡ್‌ಗಳ ನೇರ ಜವಾಬ್ದಾರಿಯನ್ನು ನಗರಸಭೆ ಹೊತ್ತುಕೊಂಡಿದೆ. ಆದರೆ, ಈ 20 ವಾರ್ಡ್‌ಗಳ ಸ್ವಚ್ಛತೆಗಾಗಿ ಇರುವುದು ಕೇವಲ 106 ಮಂದಿ ಪೌರಕಾರ್ಮಿಕರು ಮಾತ್ರ! ಸಾವಿರಾರು ಜನಸಂಖ್ಯೆ ಇರುವ ವಾರ್ಡ್‌ಗಳಿಗೆ ಈ ಸಂಖ್ಯೆಯ ಸಿಬ್ಬಂದಿಗಳು ದೈನಂದಿನ ಕಸ ಸಂಗ್ರಹಿಸಲು ಅಕ್ಷರಶಃ ಸಾಲುತ್ತಿಲ್ಲ. ಈ ಸಿಬ್ಬಂದಿ ಕೊರತೆಯೇ ನಗರದಾದ್ಯಂತ ಕಸದ ರಾಶಿ ಬೀಳಲು ಪ್ರಮುಖ ಕಾರಣವಾಗಿದೆ ಎಂಬ ಆರೋಪ ಕೇಳಿಬರುತ್ತಿದೆ.ನಗರಸಭೆ 70 ವಾಹನಗಳ ಪಡೆ ಯನ್ನು ಹೊಂದಿದ್ದೇವೆ ಎಂದುಹೇಳಿಕೊಳ್ಳುತ್ತಿದ್ದರೂ,ವಾಸ್ತವದಲ್ಲಿ ನಗರದ ಅನೇಕ ಒಳರಸ್ತೆಗಳು ಹಾಗೂ ಮನೆ ಮನೆಗಳಿಗೆ ಈ ವಾಹನಗಳು ಸರಿಯಾದ ಸಮಯಕ್ಕೆ ತಲುಪುತ್ತಿಲ್ಲ. ವಾರಕ್ಕೊಮ್ಮೆ ಅಥವಾ ಮೂರ್ನಾಲ್ಕು ದಿನಕ್ಕೊಮ್ಮೆ ವಾಹನ ಬಂದರೆ ನಾವು ಕಸವನ್ನು ಎಲ್ಲಿ ಇಡಬೇಕು? ಎಂಬುದು ಸಾರ್ವಜನಿಕರ ನೇರ ಪ್ರಶ್ನೆ. ಪುಟ 6

ಈವರೆಗೆ 3.06 ಲಕ್ಷ ರೂಪಾಯಿ ದಂಡ

ಒಂದೆಡೆ ವ್ಯವಸ್ಥೆ ಸರಿಪಡಿಸುವಲ್ಲಿ ಸೋಲುತ್ತಿರುವ ನಗರಸಭೆ, ಇನ್ನೊಂದೆಡೆ ಸಿಸಿ ಕೆಮರಾ ಅಳವಡಿಸಿ ದಂಡ ವಸೂಲಿ ಮಾಡುವಲ್ಲಿ ಮಾತ್ರ ಅತೀವ ಆಸಕ್ತಿ ತೋರುತ್ತಿದೆ. 2025ರ ಏಪ್ರಿಲ್‌ನಿಂದ ಈವರೆಗೆ 3.06 ಲ.ರೂ. ದಂಡ ವಸೂಲಿ ಮಾಡಲಾಗಿದೆ. ಆದರೆ, ದಂಡ ವಿಧಿಸುವ ಉತ್ಸಾಹವನ್ನು ಕಸ ಸಂಗ್ರಹಿಸುವ ವ್ಯವಸ್ಥೆ ಸುಗಮಗೊಳಿಸುವಲ್ಲಿ ಅಧಿಕಾರಿಗಳು ತೋರಿಸುತ್ತಿಲ್ಲ ಎನ್ನುವುದು ಕಟು ಸತ್ಯ.

ಕಸದ ಕೂಪ ಆಗುತ್ತಿರುವ ನಗರ

ಸದ್ಯ ನಗರದ ಸುಬ್ರಹ್ಮಣ್ಯ ನಗರ, ಶಿರಿಬೀಡು, ಮಣಿಪಾಲದ ಕಸ್ತೂರ್ಬಾ ನಗರ, ಬೀಡಿನಗುಡ್ಡೆ ಮತ್ತು ಇಂದ್ರಾಳಿ ಪರಿಸರದಲ್ಲಿ ಕಸದ ಸಮಸ್ಯೆ ಬಿಗಡಾಯಿಸಿದೆ. ನಗರಸಭೆ ಸಿಸಿ ಕೆಮರಾ ಕಣ್ಣಿಟ್ಟು ಕಸ ಎಸೆಯುವವರನ್ನು ಹಿಡಿಯಲು ಮುಂದಾಗುತ್ತಿದೆಯೇ ಹೊರತು, ಆ ಭಾಗಗಳಲ್ಲಿ ಯಾಕೆ ಕಸ ಬೀಳುತ್ತಿದೆ? ವಾಹನಗಳು ಪ್ರತಿದಿನ ಅಲ್ಲಿಗೆ ಹೋಗುತ್ತಿದ್ದೆಯೇ? ಎಂಬ ತನಿಖೆ ನಡೆಸುತ್ತಿಲ್ಲ. 15 ವಾರ್ಡ್‌ಗಳನ್ನು ಸ್ವಸಹಾಯ ಸಂಘಗಳಿಗೆ ನೀಡಲಾಗಿದ್ದರೂ, ಅಲ್ಲಿಯೂ ಸಮರ್ಪಕ ನಿರ್ವಹಣೆ ನಡೆಯುತ್ತಿಲ್ಲ ಎಂಬ ದೂರುಗಳು ವ್ಯಾಪಕವಾಗಿವೆ.

ಬರೋಬ್ಬರಿ 1 ತಾಸು ಕಾರ್ಯಾಚರಣೆ

ಸೆಕೆ ತಾಳಲಾರದೇ ಮನೆ ಅಂಗಳಕ್ಕೆ ಬಂದ ಹಾವು!

ಕುಂಬಳೆ ಕಂಚಿಕಟ್ಟೆಯಲ್ಲಿ ಘಟನೆ

ಕುಂಬಳೆ: ಬೇಸಿಗೆಯಲ್ಲಿ ಏರುತ್ತಿರುವ ತಾಪಮಾನದಿಂದ ಉರಗಗಳೂ ತಂಪು ಪ್ರದೇಶವನ್ನು ಅರಸಿಕೊಂಡು ಬರುತ್ತಿದೆ.

ಈ ರೀತಿ ಕುಂಬಳೆಯ ಕಂಚಿಕಟ್ಟೆಯ ಮನೆಯಂಗಳದಲ್ಲಿ ಪಂಪಿಗೆ ಅಳವಡಿಸಿದ್ದ ಕ್ಲಾಂಪ್ ಸಂದಿಯಲ್ಲಿ ನುಸುಳಿ ಕುಳಿತ ಬೃಹತ್ ನಾಗರಹಾವನ್ನು ತಾಸುಗಳ ಕಾಲ ನಡೆಸಿದ ಕಾರ್ಯಾಚರಣೆಯಿಂದ ಕಾಸರಗೋಡಿನ ಸರ್ಪ ಟೀಮ್ ಸದಸ್ಯ ಉರಗತಜ್ಞ, ಪರಿಸರ ಪ್ರೇಮಿ ರಾಜು ಕಿದೂರು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಕ್ಲಾಂಪಿನ ನಡುವೆ ಸಿಲುಕಿ ಬುಸುಗುಡುತ್ತಿದ್ದ ನಾಗರಹಾವಿನ ಸನಿಹ ಹೋಗಲು ಯಾರಿಗೂ ಧೈರ್ಯವಿರಲಿಲ್ಲ. ಉರಗತಜ್ಞ ರಾಜು ಕಿದೂರು ಅವರು ಸ್ಥಳಕ್ಕಾಗಮಿಸಿ, ಪೈಪಿಗೆ ಹೊಂದಿಕೊಂಡಿದ್ದ ಗೋಡೆಯನ್ನು ಒಡೆದು ಗೋಡೆ ಸಂದಿಯಿಂದ ನಾಗರಹಾವನ್ನು ಹೊರಗೆ ಹಾಕಬೇಕಾದರೆ ಸುಸ್ತಾಗಿದ್ದರು. ಭಯ ಹಾಗೂ ಸಿಟ್ಟಿನಿಂದ ಆಕ್ರಮಿಸಲು ಹೆಡೆಯೆತ್ತಿ ಬುಸುಗುಡುತ್ತಿದ್ದ ನಾಗರಹಾವನ್ನು ಕೊನೆಗೂ ರಾಜು ಕಿದೂರು ಅವರು ಚೀಲದೊಳಗೆ ಬಂದಿಯಾಗಿಸುವ ಮೂಲಕ ಮನೆಯವರನ್ನು ನಿಟ್ಟುಸಿರು ಬಿಡುವಂತೆ ಮಾಡಿದ್ದಾರೆ.



ಕ್ಲಾಂಪ್ ಸಂದಿಯಲ್ಲಿ ಸಿಲುಕಿಕೊಂಡಿದ್ದ ನಾಗರಹಾವಿಗೆ ಅಲ್ಪ ಗಾಯಗಳುಂಟಾಗಿದ್ದು ಪ್ರಾಥಮಿಕ ಚಿಕಿತ್ಸೆ ನೀಡಿದ ನಂತರ ಸುರಕ್ಷಿತವಾಗಿ ಕಾಡಿಗೆ ಬಿಡಲಾಯಿತು.

ಬಿಳಿಯೂರು ಡ್ಯಾಂನಲ್ಲಿ 0.2 ಟಿಎಂಸಿ ನೀರು

ತುಂಬೆ ಡ್ಯಾಂನ ಆತಂಕ ದೂರ ಮಾಡಿಕೊಡಲಿದೆ ಈ ಅಣೆಕಟ್ಟು

ಉಪ್ಪಿನಂಗಡಿ: ಎಲ್ಲೆಡೆ ಅತಿಯಾದ ಬಿಸಿ ವಾತಾವರಣ ಜೀವಜಲ ಆವಿಯಾಗಿಸುವ ಭೀತಿ ಮೂಡಿಸುತ್ತಿದ್ದರೆ, ಹಲವೆಡೆ ಅಂತರ್ಜಲ ಕುಸಿತವುಂಟಾಗಿ ನೀರಿಗಾಗಿ ಜನತೆ ಬವಣೆ ಪಡುತ್ತಿದ್ದಾರೆ. ಆದರೆ ನೇತ್ರಾವತಿ ಹಾಗೂ ಕುಮಾರಧಾರಾ ನದಿಗಳೆರಡು ಸಂಗಮಿಸುವ ಉಪ್ಪಿನಂಗಡಿಯಲ್ಲಿ ಬಿಳಿಯೂರು ಅಣೆಕಟ್ಟಿನ ಕಾರಣಕ್ಕೆ 0.2 ಟಿಎಂಸಿ ನೀರು ಸಂಗ್ರಹಗೊಂಡಿದ್ದು ಮಂಗಳೂರಿಗೆ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದರೆ ಈ ನೀರಿನ ಸದ್ಬಳಕೆಯಾಗಲಿದೆ.



ಮುಖ್ಯವಾಗಿ ಮಂಗಳೂರು ಮಹಾನಗರಕ್ಕೆ ಕುಡಿಯುವ ನೀರು ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಾಗಬಾರದೆಂದು ಸಮತೋಲನ ಜಲಾಶಯವಾಗಿ ನೇತ್ರಾವತಿ ನದಿಗೆ ಬಿಳಿಯೂರು ಎಂಬಲ್ಲಿ ಅಣೆಕಟ್ಟನ್ನು ರಚಿಸಲಾಗಿದೆ. ಡಿಸೆಂಬರ್ ತಿಂಗಳ ಆಸುಪಾಸಿನಲ್ಲಿ ಈ ಅಣೆಕಟ್ಟಿಗೆ ಗೇಟು ಅಳವಡಿಸುತ್ತಿರುವುದರಿಂದ ಸರಿ ಸುಮಾರು 6 ತಿಂಗಳು ಹರಿಯುವ ನೀರನ್ನು ತಡೆ ನಿಲ್ಲಿಸಲಾಗುತ್ತದೆ. ಅಣೆಕಟ್ಟಿನಲ್ಲಿ 4 ಮೀಟರ್ ಎತ್ತರದ ಗೇಟು ಅಳವಡಿಕೆಯಾಗಿರುವುದರಿಂದ 6 ಕಿ.ಮೀ. ಉದ್ದಕ್ಕೂ ಹಿನ್ನೀರು ಸಂಗ್ರಹಗೊಳ್ಳುತ್ತಿದೆ. ತತ್‌ಪರಿಣಾಮ ಈ ಭಾಗದುದ್ದಕ್ಕೂ ಅಂತರ್ಜಲ ಮಟ್ಟ ಹೆಚ್ಚಿದೆ.

ಕೃಷಿಕರಿಗೆ ಸಂತಸ

ಬಿಳಿಯೂರು ಅಣೆಕಟ್ಟಿನಲ್ಲಿ ಡಿಸೆಂಬರ್ ತಿಂಗಳಿಂದಲೇ ಗೇಟು ಅಳವಡಿಸಿ ಹಿನ್ನೀರು ಸಂಗ್ರಹಿಸುತ್ತಿರುವುದರಿಂದ ನದಿ ಪಾತ್ರದ ಕೃಷಿಕರಿಗೆ ಸುಲಲಿತ ನೀರಿನ ಸೌಲಭ್ಯ ದೊರೆಯುವಂತಾಗಿದ್ದು ಇದು ಕೃಷಿಕರಲ್ಲಿ ಸಂತಸ ತರಿಸಿದೆ. ಪುಟ 6

ಕಲ್ಮಶದ ಭೀತಿ

ಬೆಳೆಯುತ್ತಿರುವ ಉಪ್ಪಿನಂಗಡಿ ಪಟ್ಟಣದಲ್ಲಿ ದ್ರವ ತ್ಯಾಜ್ಯ ದೊಡ್ಡ ಪ್ರಮಾಣದಲ್ಲಿ ನದಿ ಸೇರುತ್ತಿದೆ. ಇನ್ನು ಕೆಲವು ವಸತಿ ಸಂಕೀರ್ಣಗಳಿಂದ ಶೌಚಾಲಯದ ತ್ಯಾಜ್ಯಗಳೂ ಸೇರುತ್ತಿದೆ ಎಂಬ ಆರೋಪವಿದೆ. ಇದು ಕುಡಿಯುವ ನೀರಿಗಾಗಿ ಬಳಕೆಯಾಗುವ ಈ ನದಿ ನೀರಿನ ಬಗ್ಗೆ ಕಳವಳಕಾರಿ ವಿದ್ಯಾಮಾನವಾಗಿದೆ. ಆದಾಗ್ಯೂ ನದಿಯಲ್ಲಿ ಮೀನಿನ ಸಂತತಿಯೂ ಹೆಚ್ಚುತ್ತಿದೆ.

ಪೈಸಾರಿ ಜಾಗದಲ್ಲಿ ವಸತಿ ರಹಿತ ಕಾರ್ಮಿಕರ ಅಹೋರಾತ್ರಿ ಧರಣಿ

ಪೊಲೀಸರಿಂದ ಸಂಧಾನ ಪ್ರಯತ್ನ ವಿಫಲ


ಸೋಮವಾರಪೇಟೆ: ನಿವೇಶನ ರಹಿತ ಬಡವರಿಗೆ ನಿವೇಶನ ನೀಡುವಂತೆ ಒತ್ತಾಯಿಸಿ, ಕರ್ನಾಟಕ ಬಹುಜನ ಕಾರ್ಮಿಕ ಸಂಘಟನೆಯ ನೇತೃತ್ವದಲ್ಲಿ ಕುಂಬೂರು ಗ್ರಾಮದ ಪೈಸಾರಿ ಜಾಗದಲ್ಲಿ ವಸತಿರಹಿತ ಕಾರ್ಮಿಕರು ನಡೆಸುತ್ತಿರುವ ಅಹೋರಾತ್ರಿ ಧರಣಿ ಸೋಮವಾರವೂ ಮುಂದುವರಿದಿದೆ.

ಮಾದಾಪುರ ಗ್ರಾ.ಪಂ. ವ್ಯಾಪ್ತಿಯ ಕುಂಬೂರು ಸರ್ವೆ ನಂ. 125/1ರಲ್ಲಿ 29 ಎಕರೆ ಸರ್ಕಾರಿ ಜಾಗದಲ್ಲಿ ನಿವೇಶನ ರಹಿತ ಕುಟುಂಬಗಳಿಗೆ ಜಾಗ ಒದಗಿಸುವಂತೆ ಒತ್ತಾಯಿಸಿ, ಧರಣಿ ನಡೆಸುತ್ತಿದ್ದಾರೆ. ಅಲ್ಲಲ್ಲಿ ಶೆಡ್ ನಿರ್ಮಿಸಿಕೊಂಡಿದ್ದಾರೆ. ಅಲ್ಲದೇ ಈ ಜಾಗದಲ್ಲಿ ನಿವೇಶನ ರಹಿತ ಕಾರ್ಮಿಕರಿಗೆ ನಿವೇಶನ ನೀಡುವಂತೆ ಜಿಲ್ಲಾಧಿಕಾರಿ, ಕಂದಾಯ ಸಚಿವರನ್ನು ಒತ್ತಾಯಿಸಿದ್ದಾರೆ. ಈ ಪೈಸಾರಿ ಜಾಗವನ್ನು ಅನೇಕರು ಒತ್ತುವರಿ ಮಾಡಿಕೊಂಡು ಕೃಷಿ ಮಾಡುತ್ತಿದ್ದಾರೆ. ಒತ್ತುವರಿ ತೆರವುಗೊಳಿಸಿ ನಿವೇಶನ ರಹಿತರಿಗೆ ಹಂಚುವಂತೆ ಸಂಬಂಧಪಟ್ಟವರಿಗೆ ಮನವಿ ಪತ್ರ ನೀಡಲಾಗುವುದು ಎಂದು ಕಾರ್ಮಿಕ ಸಂಘಟನೆ ಅಧ್ಯಕ್ಷ ಕೆ.ಮೊಣ್ಣಪ್ಪ ಹೇಳಿದರು. ಸುತ್ತಮುತ್ತಲಿನ ಗ್ರಾಮಗಳ ಸುಮಾರು 290ಕ್ಕೂ ಹೆಚ್ಚು ಕಾರ್ಮಿಕರು ಧರಣಿಯಲ್ಲಿ ಭಾಗವಹಿಸಿದ್ದಾರೆ. ಪುಟ 6

ನೀರು ಕುಡಿಯಲು ಯೋಗ್ಯವಲ್ಲದ ರೀತಿಯಲ್ಲಿ ಮಲಿನಗೊಳ್ಳುತ್ತಿದೆ ನೇತ್ರಾವತಿ ನದಿ | ಮೌನ ವಹಿಸಿದ ಅಧಿಕಾರಿಗಳು

ದ.ಕ. ಜಿಲ್ಲೆಯ ಜೀವನದಿ ಒಡಲಿಗೆ ತ್ಯಾಜ್ಯ, ಕೊಳಚೆ ನೀರು ಸೇರ್ಪಡೆ

ಬಂಟ್ವಾಳ: ಜಿಲ್ಲೆಯ ಜೀವನದಿ ನೇತ್ರಾವತಿ ನದಿ ಒಡಲಿಗೆ ನೇರವಾಗಿ ಕೊಳಚೆ ನೀರು ಹರಿಯುವ ಹಾಗೂ ನದಿ ತೀರದಲ್ಲಿಯೇ ಕೊಳೆತ ತ್ಯಾಜ್ಯ ತಂದು ಸುರಿಯುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿ ಪ್ರಕಟವಾದರೂ ಅಧಿಕಾರಿಗಳು ಮಾತ್ರ ಯಾವುದೇ ದಿಟ್ಟ ಕ್ರಮಕ್ಕೆಗೊಳ್ಳದೇ ಮೌನಕ್ಕೆ ಶರಣಾಗಿದ್ದಾರೆ. ಇದನ್ನೇ ಬಂಡವಾಳವನ್ನಾಗಿಸಿ ಕೆಲ ವ್ಯಕ್ತಿಗಳು ಈಗ ನದಿ ತೀರಕ್ಕೆ ತ್ಯಾಜ್ಯ ವಸ್ತುಗಳನ್ನು ರಾಜಾರೋಷವಾಗಿ ಸುರಿಯುವ ವಿಡಿಯೋ ಒಂದು ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.



ಸಂಗಮ ವಿಶೇಷ

ಮಂಗಳೂರು ಮಹಾ ನಗರ ಪಾಲಿಕೆಯ ಜನತೆ ಬಂಟ್ವಾಳದಿಂದ ಹರಿಯುವ ಇದೇ ಕೊಳಚೆ ನೀರನ್ನು ಕುಡಿಯಲು ಬಳಸುತ್ತಿದ್ದು, ಪದೇ ಪದೇ ಬಂಟ್ವಾಳ, ಬಿ.ಸಿ.ರೋಡು, ಪಾಣೆಮಂಗಳೂರು ಭಾಗದಲ್ಲಿ ವಿವಿಧ ವಸತಿ ಸಂಕೀರ್ಣ, ಮಾಂಸದಂಗಡಿ, ಹೊಟೇಲ್‌ಗಳ ಕೊಳಚೆ ನೀರು ನೇರವಾಗಿ ನೇತ್ರಾವತಿ ನದಿ ನೀರಿಗೆ ಸೇರುವುದರಿಂದ ನೀರು ಕಲುಷಿತವಾಗಿದೆ. ಈ ಹಿಂದೆ ಇದನ್ನು ಪರೀಕ್ಷಿಸಿದ ಪರಿಸರ ಇಲಾಖೆ ಕೂಡ ದೃಢಪಡಿಸಿತ್ತು. ಕೊಳಚೆ ನೀರು ಸೇರುವುದರ ಜತೆಗೆ ಇದೀಗ ತ್ಯಾಜ್ಯ, ಕೊಳೆತ ವಸ್ತುಗಳನ್ನು ಕೂಡ ಕೆಲ ವಿದ್ಯಾವಂತರೆನಿಸಿಕೊಂಡವರು ಮನೆ ಬಾಗಿಲಿಗೆ ಬರುವ ತ್ಯಾಜ್ಯ ಸಂಗ್ರಹ ವಾಹನಕ್ಕೆ ನೀಡುವ ಬದಲು ನದಿ ತೀರದಲ್ಲಿ ಎಸೆದು ವಿಕೃತಿ ಮೆರೆಯುತ್ತಿದ್ದಾರೆ.

ಸಾರ್ವಜನಿಕ ಹಿತದೃಷ್ಟಿಯಿಂದ ಸಂಬಂಧಿಸಿದ ಇಲಾಖೆ ದಿಟ್ಟ ಕ್ರಮ ಕೈಗೊಳ್ಳುತ್ತಿಲ್ಲ, ಇದರ ಪರಿಣಾಮ ಜನ ಬಳಕೆಯ ನದಿ ನೀರಿಗೆ ಕೊಳಚೆ ನೀರು ಹರಿಯಬಿಡುವುದು, ತ್ಯಾಜ್ಯ ಎಸೆಯುವ ಕಾರ್ಯ ಮುಂದುವರಿದೆ. ತ್ಯಾಜ್ಯ ವಸ್ತುಗಳನ್ನು ನೇತ್ರಾವತಿ ನದಿ ನೀರಿಗೆ ಎಸೆಯುವವರ ವಿರುದ್ದ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪಿ. ಗಣೇಶ್ ನಾಯಕ್ ಎಂಬವರು ಬಂಟ್ವಾಳ ಪುರಸಭೆ ಮುಖ್ಯಾಧಿಕಾರಿಯವರಿಗೆ ಮನವಿ ಮಾಡಿದ್ದಾರೆ. 15 ದಿನಗಳ ಹಿಂದೆ ನೇತ್ರಾವತಿ ನದಿ ತೀರದ ಬಳಿ ದಟ್ಟ ಹೊಗೆ ಕಂಡು ಬಂದ ಹಿನ್ನಲೆಯಲ್ಲಿ ಪರಿಶೀಲಿಸಿದಾಗ ಸ್ಥಳೀಯ ಸಿ.ಪಿ ಇಕ್ಬಾಲ್ ಎಂಬವರು ತಮ್ಮ ವಾಹನದಲ್ಲಿ ತಂದ ತ್ಯಾಜ್ಯವನ್ನು ಸುರಿದು ಅದಕ್ಕೆ ಬೆಂಕಿ ಹಾಕಿರುವುದು ತಿಳಿದು ಬಂದಿದೆ. ಬಳಿಕ ಮೇ 2ರಂದು ಇದೇ ವ್ಯಕ್ತಿ ತ್ಯಾಜ್ಯ ತಂದು ನದಿ ತೀರದಲ್ಲಿ ಸುರಿದು ಅದಕ್ಕೆ ಬೆಂಕಿ ಹಾಕಲು ಮುಂದಾದಾಗ ಸಮೀಪದ ವಸತಿ ಸಮುಚ್ಚಯದ ನಿವಾಸಿಗಳು ಆಕ್ಷೇಪಿಸಿದರೂ ತ್ಯಾಜ್ಯವನ್ನು ಅಲ್ಲೇ ಸುರಿಯಾಲಗಿದೆ. ಪುಟ 6

ಆಡಳಿತಕ್ಕಿಲ್ಲ ಗಂಭೀರತೆ

ನೇತ್ರಾವತಿ ನದಿ ನೀರು ಕೊಳಚೆ ಆಗುತ್ತಿರುವ ಬಗ್ಗೆ ಮಾಧ್ಯಮಗಳು ನಿರಂತರ ವರದಿ ಪ್ರಕಟಿಸಿದರೂ ಜಿಲ್ಲಾಡಳಿತ, ಬಂಟ್ವಾಳ ಪುರಸಭೆಯಾಗಲೀ ಇದರ ಗಂಭೀರತೆ ಅರಿತು ಕ್ರಮಕ್ಕೆ ಮುಂದಾಗದಿರುವ ಬಗ್ಗೆ ಸಾರ್ವಜನಿಕರಿಂದ ವ್ಯಾಪಕ ಟೀಕೆಗಳು ವ್ಯಕ್ತವಾಗಿದೆ. ಈಗ ಅಧಿಕಾರಿಗಳು ಕಾರುಬಾರು ನಡೆಸುತ್ತಿದ್ದರೂ ನೇತ್ರಾವತಿ ನದಿಯನ್ನು ಮಲಿನಗೊಳಿಸುವವರ ವಿರುದ್ಧ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ.

ಸುತ್ತ ಮುತ್ತ

ಕರಾವಳಿ ಜಿಲ್ಲೆಗಳಲ್ಲಿ ಅಲ್ಲಲ್ಲಿ ಮೋಡ, ಬಿಸಿಲಿನ ವಾತಾವರಣ

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನ ಅಲ್ಲಲ್ಲಿ ಮೋಡ ಹಾಗೂ ಬಿಸಿಲಿನ ವಾತಾವರಣ ಇರಲಿದ್ದು, ಇಂದು ಸಂಜೆ ಮತ್ತು ರಾತ್ರಿ ದ.ಕ, ಕಾಸರಗೋಡು ಜಿಲ್ಲೆಗಳಲ್ಲಿ ಮೋಡದ ವಾತಾವರಣ ಬರುವ ಸಾಧ್ಯತೆ ಇದೆ. ಸುಳ್ಯ ,ಕಡಬ, ಬೆಳ್ತಂಗಡಿ ತಾಲೂಕುಗಳ ಘಟ್ಟಪ್ರದೇಶಗಳಲ್ಲಿ ಸಣ್ಣ ಮಳೆಯಾಗುವ ಸಾಧ್ಯತೆ ಇದೆ. ಬಂಗಾಳಕೊಲ್ಲಿಯಲ್ಲಿ ಈ ವಾರಾಂತ್ಯದಲ್ಲಿ ಲೋ ಪ್ರೆಶರ್ ಸರ್ಕ್ಯುಲೇಷನ್ ಆರಂಭವಾಗುವ ಸಾಧ್ಯತೆ ಇರುವ ಕಾರಣ ಮೇ ಎರಡನೇ ವಾರದಲ್ಲಿ ದಕ್ಷಿಣ ಭಾರತದಲ್ಲಿ ಮಳೆಯಾಗಿ ಹಗಲಿನ ಗರಿಷ್ಠ ಉಷ್ಣಾಂಶದಲ್ಲಿ ಇಳಿಕೆ ಆಗುವ ಸಂಭವ ಇದೆ. ಆದರೇ ಲೋ ಪ್ರೆಷರ್ ಬಂಗಾಳಕೊಲ್ಲಿಯ ಉತ್ತರಕ್ಕೆ ಚಲಿಸಿದರೆ ಮೇ 14ರ ಅಂದಾಜು ಅಂಡಮಾನ್‌ನಲ್ಲಿ ಆರಂಭವಾಗಲಿರುವ ಮುಂಗಾರಿಗೆ ಪ್ರತಿಕೂಲವಾಗಿ ಕರ್ನಾಟಕಕ್ಕೆ ಮುಂಗಾರು ಆಗಮನ ಬೇಗ ಅಥವಾ ತಡವಾಗುವ ಸಾಧ್ಯತೆ ಇದೆ.

ಅಡಿಕೆ ತೋಟಕ್ಕೆ ತಗುಲಿದ ಬೆಂಕಿ: ಅಗ್ನಿಶಾಮಕ ದಳದಿಂದ ಕಾರ್ಯಾಚರಣೆ

ಬಂಟ್ವಾಳ: ಸಜೀಪ ಮೂಡ ಗ್ರಾಮದ ಪರ್ವ ಸಮೀಪದ ಕೊಯಿಲ ಎಂಬಲ್ಲಿ ಅಡಿಕೆ ತೋಟವೊಂದಕ್ಕೆ ಆಕಸ್ಮಿಕವಾಗಿ ಬೆಂಕಿ ತಗುಲಿದ ಘಟನೆ ನಡೆದಿದೆ. ಭಾನುವಾರ ಮಧ್ಯರಾತ್ರಿ 1 ಗಂಟೆ ಸುಮಾರಿಗೆ ಪರ್ವ ರಸ್ತೆ ಬದಿಯ ಗಿಡಗಂಟಿಗಳಿಗೆ ಆಕಸ್ಮಿಕವಾಗಿ ಹತ್ತಿಕೊಂಡ ಬೆಂಕಿಯ ಜ್ವಾಲೆ ರಸ್ತೆ ಪಕ್ಕದ ಅಡಿಕೆ ತೋಟವನ್ನು ಆವರಿಸಿಕೊಂಡಿದೆ. ಬೆಂಕಿಯ ಕೆನ್ನಾಲಗೆ ಗಮನಿಸಿದ ಸ್ಥಳೀಯರು ಬೆಂಕಿ ನಂದಿಸಲು ಪ್ರಯತ್ನಿಸಿದ್ದಾರೆ. ಇದೇ ವೇಳೆ ರಾತ್ರಿ ಗಸ್ತು ಕಾರ್ಯದಲ್ಲಿ ನಿರತರಾಗಿದ್ದ ಬಂಟ್ವಾಳ ಸಂಚಾರಿ ಠಾಣೆಯ ಪಿಎಸ್ಐ ಅವರು ಅಗ್ನಿ ಶಾಮಕ ಠಾಣೆಗೆ ಕರೆ ಮಾಡಿ ಸಿಬ್ಬಂದಿಗಳನ್ನು ಸ್ಥಳಕ್ಕೆ ಕರೆಸಿದ್ದಾರೆ. ತಕ್ಷಣ ಧಾವಿಸಿ ಬಂದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದು, ಅಡಿಕೆ ಮರಗಳಿಗೆ ಯಾವುದೇ ಹಾನಿ ಸಂಭವಿಸಿಲ್ಲ.

ನಿಲ್ಲಿಸಿದ್ದ ಬೈಕ್ ಕಳವು: ಪಾಂಡೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲು

ಮಂಗಳೂರು: ಇಲ್ಲಿ ಪಾಂಡೇಶ್ವರ ಠಾಣಾ ವ್ಯಾಪ್ತಿಯ ಬೋಳಾರ ಮಾರಿಗುಡಿ ಪಿಂಟೋ ಲೇನ್‌ನಲ್ಲಿ ನಿಲ್ಲಿಸಿದ್ದ ಮಂಜುನಾಥ ಶೆಟ್ಟಿ ಎಂಬವರ ರಾಯಲ್ ಎನ್ ಫೀಲ್ಡ್ ಕಂಪೆನಿಯ ಬೈಕ್ ಕಳವಾಗಿದ್ದು ಈ ಬಗ್ಗೆ ಠಾಣೆಯಲ್ಲಿ ದೂರು ದಾಖಲಾಗಿದೆ.
ಮೇ 1ರಂದು ರಾತ್ರಿ 10.30ಕ್ಕೆ ಬೈಕ್ ಪಾರ್ಕ್ ಮಾಡಿ ಹೋಗಿದ್ದು ರಾತ್ರಿ 11.30ರ ವೇಳೆಗೆ ಬಂದು ನೋಡಿದಾಗ ನಿಲ್ಲಿಸಿದ್ದ ಸ್ಥಳದಲ್ಲಿ ಬೈಕ್ ಇರಲಿಲ್ಲ. ಎಲ್ಲ ಕಡೆ ಹುಡುಕಾಡಿದ್ದು ಎಲ್ಲಿಯೂ ಕಂಡುಬಂದಿಲ್ಲ. ಕಳವಾದ ಬೈಕ್ ಮೌಲ್ಯ 50 ಸಾವಿರ ರೂ. ಆಗಬಹುದು ಎಂದು ಅಂದಾಜಿಸಲಾಗಿದೆ. ಪಾಂಡೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಯಂತ್ರಣ ತಪ್ಪಿ ರಸ್ತೆಗೆ ಬಿದ್ದ ಸ್ಕೂಟರ್: ಗಾಯ

ಮಂಗಳೂರು: ಸ್ಕೂಟರ್ ನಿಯಂತ್ರಣ ತಪ್ಪಿ ರಸ್ತೆಗೆ ಬಿದ್ದ ಪರಿಣಾಮ ಸವಾರ ಗಂಭೀರವಾಗಿ ಗಾಯಗೊಂಡ ಘಟನೆ ನಗರದ ಪಡೀಲ್ ಜಿಲ್ಲಾಧಿಕಾರಿ ಕಚೇರಿ ಬಳಿ ಸಂಭವಿಸಿದೆ. ಬಂಟ್ವಾಳ ಪಾಣೆಮಂಗಳೂರು ನಿವಾಸಿ ದೇವದಾಸ (29) ಗಾಯಗೊಂಡವರು. ಪಡೀಲ್ ಜಂಕ್ಷನ್ ಕಡೆಯಿಂದ ಮಂಗಳೂರು ಕಡೆಗೆ ಸವಾರಿ ಮಾಡಿಕೊಂಡು ಬರುತ್ತಿದ್ದಾಗ ಜಿಲ್ಲಾಧಿಕಾರಿ ಕಚೇರಿ ಬಳಿಯ ಹಂಪ್‌ನಲ್ಲಿ ನಿಯಂತ್ರಣ ಕಳೆದುಕೊಂಡು ಸ್ಕೂಟರ್ ಸಹಿತ ರಸ್ತೆಗೆ ಬಿದ್ದಿದ್ದಾರೆ. ಪರಿಣಾಮ ತಲೆಗೆ ಗಂಭೀರ ಗಾಯವಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ದಕ್ಷಿಣ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೋಮವಾರ ಸಂತೆ ದಿನ ಅಂತೂ ಹರಸಾಹಸ ಪಡಬೇಕಿದೆ ವಾಹನ ಸವಾರರು | ಮತ್ತೊಂದೆಡೆ ಹೆದ್ದಾರಿ ಕಾಮಗಾರಿ

ಬೆಳ್ತಂಗಡಿ ಪೇಟೆಯಲ್ಲಿ ದಿನನಿತ್ಯವೂ ಟ್ರಾಫಿಕ್ ಜಾಮ್ ಕಿರಿಕಿರಿ

ಬೆಳ್ತಂಗಡಿ: ಇತ್ತೀಚಿನ ದಿನಗಳಲ್ಲಿ ಅತೀ ಹೆಚ್ಚು ಟ್ರಾಫಿಕ್ ಜಾಮ್‌ಗೆ ಕುಖ್ಯಾತಿಯಾಗುತ್ತಿರುವ ಪೇಟೆ ಅಂದರೆ ಅದು ಬೆಳ್ತಂಗಡಿ ಪೇಟೆ.

ಇಲ್ಲಿ ಸೋಮವಾರ ಸಂತೆಯ ದಿನ ಸಂತೆ ರಾಷ್ಟ್ರೀಯ ಹೆದ್ದಾರಿಯಲ್ಲಿಯೇ ನಡೆಯುತ್ತಿರುವ ಕಾರಣ ಸೋಮವಾರ ಇನ್ನೂ ಹೆಚ್ಚಿನ ಟ್ರಾಫಿಕ್ ಜಾಮ್ ಆಗುತ್ತಿದೆ. ಆದರೂ ಸಂತೆಯನ್ನು ಬೇರೆಡೆಗೆ ಸ್ಥಳಾಂತರಿಸುವ ಯಾವುದೇ ಕಾರ್ಯ ನಡೆಯುತ್ತಿಲ್ಲ ಎಂಬುದೇ ಆಶ್ಚರ್ಯಕರವಾಗಿದೆ. ಬೆಳ್ತಂಗಡಿ ಸಂತೆಗೆ ಹಲವು ದಶಕಗಳ ಇತಿಹಾಸವಿದೆ. ಈ ಹಿಂದೆ ವಾಹನಗಳ ಸಂಖ್ಯೆ ಕಡಿಮೆಯಾಗಿದ್ದ ಸಂದರ್ಭದಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ, ಈಗ ವಾಹನಗಳ ಸಂಖ್ಯೆ ಹೆಚ್ಚಿರುವ ಕಾರಣ ವಾರದ ಸಂತೆ ಜನತೆಗೆ ಖುಷಿ ಕೊಡುವ ಬದಲಾಗಿ ಸಂಕಷ್ಟಕ್ಕೆ ಎಡೆಮಾಡಿಕೊಟ್ಟಿದೆ.

ರಾಷ್ಟ್ರೀಯ ಹೆದ್ದಾರಿಯಲ್ಲೇ ಸಂತೆ

ಬಿ.ಸಿ ರೋಡ್– ಕಡೂರು ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಗಳಲ್ಲಿ ಬೆಳ್ತಂಗಡಿಯ ವಾರದ ಸಂತೆ ಸಂತೆಕಟ್ಟೆ ಪ್ರದೇಶದಲ್ಲಿ ನಡೆಯುತ್ತದೆ. ಸೋಮವಾರ ಒಂದು ದಿನಕ್ಕೆ ಸೀಮಿತವಾಗಿರುವ ಈ ಸಂತೆಯಲ್ಲಿ ತಾಲೂಕಿನ ಗ್ರಾಮೀಣ ಪ್ರದೇಶದ ರೈತರು ಸೇರಿದಂತೆ ವಿವಿಧ ಜಿಲ್ಲೆಯ ರೈತರು ತರಕಾರಿ, ಸೇರಿದಂತೆ ನಿತ್ಯೋಪಯೋಗಿ ವಸ್ತುಗಳು, ಹಣ್ಣುಹಂಪಲುಗಳನ್ನು ರಸ್ತೆ ಬದಿಯಲ್ಲೇ ಮಾರಾಟ ಮಾಡುತ್ತಾರೆ. ಸಂತೆ ಏಲಂ ಪಡೆದುಕೊಂಡವರು ಪರ್ಯಾಯ ವ್ಯವಸ್ಥೆ ಮಾಡದೇ ಪ್ರತಿ ವಾರ ರೈತರಿಂದ ವಸೂಲಿಗೆ ಮಾತ್ರ ಬರುತ್ತಾರೆ ಎಂಬ ಆರೋಪವಿದೆ.



ವಾರದ ಸಂತೆಗೆ ಪರ್ಯಾಯ ವ್ಯವಸ್ಥೆ ಬೇಕಾಗಿದೆ

ಈ ಹಿಂದೆ 2018 ರಲ್ಲಿ ಅಂದಿನ ತಹಶೀಲ್ದಾರ್ ಆಗಿದ್ದ ಗಣಪತಿ ಶಾಸ್ತ್ರಿ ಹಾಗೂ ಶಾಸಕ ಹರೀಶ್ ಪೂಂಜ ಅವರು ಟ್ರಾಫಿಕ್ ಜಾಮ್ ಆಗುತ್ತಿರುವುದನ್ನು ಮನಗಂಡು ವಾರದ ಸಂತೆಯನ್ನು ವಾಣಿ ಕಾಲೇಜ್ ಸಮೀಪದ ಎಪಿಎಂಸಿ ಪ್ರಾಂಗಣಕ್ಕೆ ಸ್ಥಳಾಂತರಗೊಳಿಸಿದರು. ಅಲ್ಲಿ ವ್ಯಾಪಾರ ವ್ಯವಹಾರ ಅಷ್ಟಕಷ್ಟೇ ಇತ್ತು. ಹೀಗಾಗಿ ಗಣಪತಿ ಶಾಸ್ತ್ರಿ ಅವರು ವರ್ಗಾವಣೆ ಯಾದ ಬಳಿಕ ಏಕಾಏಕಿ ವಾರದ ಸಂತೆ ಮತ್ತೆ ಸಂತೆಕಟ್ಟೆಯ ರಾಷ್ಟ್ರೀಯ ಹೆದ್ದಾರಿ ಬದಿಗಳಲ್ಲಿ ಪ್ರಾರಂಭವಾಯಿತು. ಸಂತೆಕಟ್ಟೆಯ ಸಮೀಪವೇ ಮಾರಿಗುಡಿ ಮೈದಾನವಿದ್ದು ಇಲ್ಲಿಗೆ ವಾರದ ಸಂತೆಯನ್ನು ಸ್ಥಳಾಂತರಗೊಳಿಸಲು ಕ್ರಮ ಕೈಗೊಂಡರೆ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಸಾಧ್ಯವಿದೆಯಾದರೂ ಸ್ಥಳಾಂತರಿಸುವವರು ಯಾರು ಎಂಬ ಪ್ರಶ್ನೆಗೆ ಉತ್ತರ ಇಲ್ಲದಂತಾಗಿದೆ.

ಸಂತೆ ಪ್ರಾಂಗಣದಲ್ಲಿ ಸ್ಥಳವಿಲ್ಲ

ಬೆಳ್ತಂಗಡಿ ಸಂತೆಕಟ್ಟೆಯಲ್ಲಿ ಸಂತೆ ಪ್ರಾಂಗಣವಿದೆ. ಇದು ನಿತ್ಯ ಅಂಗಡಿ ನಡೆಸುವವರು ಏಲಂ ಮೂಲಕ ಪಡೆದುಕೊಂಡು ಅಂಗಡಿ ನಡೆಸುತ್ತಿದ್ದಾರೆ. ಅದು ಬಿಟ್ಟರೆ ವಾರದ ಸಂತೆಯ ದಿನ ನಾಲ್ಕೈದು ಅಂಗಡಿಗಳಿಗೆ ಮಾತ್ರ ಸ್ಥಳಾವಕಾಶ ಇದೆ. ಇದರಿಂದಾಗಿ ಅನಿವಾರ್ಯವಾಗಿ ವಾರದ ಸಂತೆ ಹೆದ್ದಾರಿಯಲ್ಲೇ ನಡೆಯುವಂತಾಗಿದೆ. ಪುಂಜಾಲಕಟ್ಟೆಯಿಂದ ಚಾರ್ಮಾಡಿ ತನಕದ ಹೆದ್ದಾರಿ ಅಭಿವೃದ್ಧಿ ಕಾಮಗಾರಿಯು ಭರದಿಂದ ನಡೆಯುತ್ತಿದ್ದು, ಪ್ರಸ್ತುತ ಬೆಳ್ತಂಗಡಿ ಸಂತೆಕಟ್ಟೆ ಪ್ರದೇಶದಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದ್ದು ಇದೇ ಸಮಯ ವಾರದ ಸಂತೆಯೂ ರಾಷ್ಟ್ರೀಯ ಹೆದ್ದಾರಿಯಲ್ಲೇ ನಡೆಯುತ್ತಿರುವುದು ಇತ್ತ ಟ್ರಾಫಿಕ್ ಜಾಮ್ ಜೊತೆಗೆ ರಸ್ತೆ ಕಾಮಗಾರಿಗೆ ಅಡ್ಡಿಯಾಗಿದೆ.

ತ್ಯಾಜ್ಯ ವಿಲೇವಾರಿಗೆ ಗ್ರಾಮಸ್ಥರಿಂದ ಆಗ್ರಹ | ಆಡಳಿತ ವರ್ಗಕ್ಕೆ ಮನವಿ

ಕೋಡಿಂಬಾಳದಲ್ಲಿ ಮಲತ್ಯಾಜ್ಯ ಘಟಕಕ್ಕೆ ವಿರೋಧ

ಕಡಬ: ಕಡಬ ಪಟ್ಟಣ ಪಂಚಾಯತ್ ವ್ಯಾಪ್ತಿಯ ಕೋಡಿಂಬಾಳ ಗ್ರಾಮದ ಕಕ್ಕೆತ್ತಿಮಾರ್‌ನಲ್ಲಿರುವ ಘನ ತ್ಯಾಜ್ಯ ಘಟಕದ ಅವ್ಯವಸ್ಥೆಯನ್ನು ಕೂಡಲೇ ಸರಿಪಡಿಸಬೇಕು ಹಾಗೂ ಅಲ್ಲಿ ಮಲತ್ಯಾಜ್ಯ ಘಟಕ ನಿರ್ಮಿಸಬಾರದೆಂದು ಆಗ್ರಹಿಸಿ ಕಡಬ ಪಟ್ಟಣ ಪಂಚಾಯತ್ ಮುಂದೆ ಸೋಮವಾರ ಜಮಾಯಿಸಿದ ಸ್ಥಳೀಯರು ಪಂಚಾಯತ್ ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆಯಿತು.



ಈ ವೇಳೆ ಮಾತನಾಡಿದ ಬಿಜೆಪಿ ಮುಂದಾಳು ಅಶೋಕ್ ಕುಮಾರ್ ಪಿ. ಅವರು ಘನ ತ್ಯಾಜ್ಯ ಘಟಕದ ಅವ್ಯವಸ್ಥೆಯ ಬಗ್ಗೆ ಪಟ್ಟಣ ಪಂಚಾಯತ್‌ನ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಘಟಕದಲ್ಲಿ ಕಸದ ರಾಶಿ ಬಿದ್ದು ಪರಿಸರದಲ್ಲಿ ದುರ್ವಾಸನೆ ಬೀರುತ್ತಿದೆ. ಅದು ಸಾಂಕ್ರಾಮಿಕ ರೋಗಕ್ಕೆ ಮೂಲವಾಗುತ್ತಿದೆ. ಈ ಹಿಂದೆ ಕೂಡಾ ಇಲ್ಲಿ ಸಾಂಕ್ರಾಮಿಕ ರೋಗದಿಂದ ಇಬ್ಬರು ಮೃತಪಟ್ಟಿದ್ದರು. ಇದೀಗ ಘಟಕದ ದುರ್ವಾಸನೆಗೆ ಬೀದಿ ನಾಯಿಗಳು ಅಲ್ಲಿ ಬೀಡುಬಿಟ್ಟಿವೆ. ಅದರಿಂದ ಸ್ಥಳೀಯರು ನಾಯಿ ಕಡಿತದ ಭೀತಿಯಲ್ಲಿದ್ದಾರೆ. ಘಟಕದಲ್ಲಿ ರಾಶಿ ಬಿದ್ದಿರುವ ತ್ಯಾಜ್ಯದ ವಿಲೇವಾರಿಗೆ ಕೂಡಲೇ ಕ್ರಮ ಕೈಗೊಳ್ಳಬೇಕು. ಒಂದು ವಾರದೊಳಗೆ ಕಸದ ರಾಶಿಯನ್ನು ತೆರವು ಮಾಡಿ ಶುಚಿತ್ವ ಕಾಪಾಡಬೇಕು ಎಂದು ಆಗ್ರಹಿಸಿದರು.

ಕಳಾರದ ತಿಮರಡ್ಡದಲ್ಲಿ ಕಂದಾಯ ಇಲಾಖೆಯವರು ನಿಗದಿಪಡಿಸಿದ ಜಾಗದಲ್ಲಿ ಮಲತ್ಯಾಜ್ಯ ಘಟಕ ನಿರ್ಮಿಸಲು ಕಾಮಗಾರಿ ಪ್ರಾರಂಭಿಸಿದ ಬಳಿಕ ರಾಜಕೀಯ ಒತ್ತಡಕ್ಕೆ ಮಣಿದು ಈಗ ಅದನ್ನು ಕೋಡಿಂಬಾಳದ ಘನ ತ್ಯಾಜ್ಯ ಘಟಕದ ಬಳಿಗೆ ಸ್ಥಳಾಂತರಿಸುವ ಹುನ್ನಾರ ನಡೆಸಲಾಗುತ್ತಿದೆ. ಅದಕ್ಕೆ ನಾವು ಆಸ್ಪದ ನೀಡುವುದಿಲ್ಲ. ನಿಗದಿಯಾದ ಜಾಗದಲ್ಲಿಯೇ ಅದನ್ನು ನಿರ್ಮಿಸಬೇಕು. ತಪ್ಪಿದಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಅಶೋಕ್ ಕುಮಾರ್ ಪಿ. ಎಚ್ಚರಿಸಿದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ನಾರಾಯಣ ಪೂಜಾರಿ ಪಾಲಪ್ಪೆ ಮಾತನಾಡಿ, ಪ.ಪಂ. ವ್ಯಾಪ್ತಿಯಲ್ಲಿ ಒಟ್ಟು 1 ಸಾವಿರ ಎಕರೆ ಸರಕಾರಿ ಭೂಮಿ ಇದೆ ಎಂದು ಹೇಳಲಾಗುತ್ತಿದೆ. ಕಕ್ಕೆತ್ತಿಮಾರ್‌ನಲ್ಲಿ ಅರಣ್ಯ ನಾಶ ಮಾಡಿ ಘಟಕ ನಿರ್ಮಿಸುವುದು ಬಿಟ್ಟು ಬೇರೆ ಎಲ್ಲಿ ಬೇಕಾದರೂ ಅನುಷ್ಠಾನ ಮಾಡಿ ಎಂದರು. ಪ.ಪಂ. ಮುಖ್ಯಾಧಿಕಾರಿ ಲೀಲಾವತಿ ಇ. ಮಾತನಾಡಿ, ಪೌರ ಕಾರ್ಮಿಕರ ಕೊರತೆಯಿಂದಾಗಿ ತೊಂದರೆಯಾಗಿದೆ. ಹೊಸದಾಗಿ ಪೌರ ಕಾರ್ಮಿಕರ ನೇಮಕ ಮಾಡಿಕೊಳ್ಳಲು ಅನುಮತಿಗಾಗಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ ಎಂದರು. ಪ.ಪಂ. ಅಧ್ಯಕ್ಷೆ ತಮನ್ನಾ ಜಬೀನ್ ಮಾತನಾಡಿ, ಈ ತಿಂಗಳಾಂತ್ಯದೊಳಗೆ ಘನ ತ್ಯಾಜ್ಯ ಘಟಕದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು. ಸದಸ್ಯರಾದ ಅಕ್ಷತಾ ಬಾಲಕೃಷ್ಣ ದಯಾನಂದ ಗೌಡ ಪಿಜಕಳ, ಕುಸುಮ ಅಂಗಡಿಮನೆ, ಗುಣವತಿ, ಸ್ಥಳೀಯ ಪ್ರಮುಖರಾದ ಆದಂ ಕುಂಡೋಳಿ, ಚಾರ್ಲಿ ಫಿಲಿಪ್, ಬಾಲಕೃಷ್ಣ ನೆಲ್ಲಿಪಡ್ಪು, ಶಶಿಧರ್ ರೈ ಬನ್ನೂರು ಕುಂಜತ್ತೋಡಿ, ಲೋಹಿತ್ ಮುಳಿಯ, ರಘುರಾಮ ನಾಯ್ಕ್ ಕುಕ್ಕೆರೆಬೆಟ್ಟು, ದೇವಣ್ಣ ಗೌಡ ಮುಳಿಯ, ಚರಣ್ ಪಾಲಪ್ಪೆ, ರಮೇಶ್ ಹೇರಂಡ, ವಸಂತ ರೈ ಇಚ್ಛಿಮಾರ್, ಚಂದ್ರಶೇಖರ್ ರೈ, ರಮೇಶ್ ಮುಳಿಯ, ಲಿಂಗಪ್ಪ ಜೆ., ಜಯರಾಮ ಗಟ್ಟಿಗಾರ್ ಮತ್ತಿತರರಿದ್ದರು.

ಎಲ್ಯಾರ್‌ಪದವು ಆತ್ಮಶಕ್ತಿ ಸಹಕಾರಿ ಸಂಘದ ವಾರ್ಷಿಕೋತ್ಸವ

ಚಿನ್ನಾಭರಣ ಸಾಲದಲ್ಲಿ ರಿಯಾಯಿತಿ: ಚಿತ್ತರಂಜನ್

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಎಲ್ಯಾರ್‌ಪದವು ಶಾಖೆಯ ದ್ವಿತೀಯ ವಾರ್ಷಿಕೋತ್ಸವ ಹಾಗೂ ಗ್ರಾಹಕರ ಸಭೆ ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಅಧ್ಯಕ್ಷತೆಯಲ್ಲಿ ಎಲ್ಯಾರ್‌ಪದವು ಶಾಖೆಯಲ್ಲಿ ಜರುಗಿತು.

ಸಂಘದ ಗ್ರಾಹಕ ರೋನಾಲ್ಡ್ ಜೆ. ಅಮ್ಮಣ್ಣ ಶಿವಪ್ಪ ಸುಮಲತಾ, ಹಕೀಂ ಹಾಗೂ ವಿಲ್ಫ್ರೆಡ್ ಡಿಸೋಜ ದೀಪ ಪ್ರಜ್ವಲನೆ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.



ಗ್ರಾಹಕರ ಪ್ರೋತ್ಸಾಹದಿಂದ ಸಂಘವು ಇಂದು 35 ಶಾಖೆಯನ್ನು ಹೊಂದಲು ಕಾರಣೀಭೂತವಾಗಿದೆ. ಸಂಘದ ಗ್ರಾಹಕರ ಆರೋಗ್ಯದ ಕಾಳಜಿಯಿಂದ ಆರೋಗ್ಯ ಶಿಬಿರವನ್ನು ನಮ್ಮ ಸಂಘವು ನಿರಂತರವಾಗಿ ಹಮ್ಮಿಕೊಂಡು ಬರುತ್ತಿದೆ. ಸಂಘದಲ್ಲಿ ಹೆಚ್ಚಿನ ಮಹಿಳಾ ಸಿಬ್ಬಂದಿಗಳಿಗೆ ಉದ್ಯೋಗ ನೀಡಿದ್ದು ಇದರಿಂದ ಒಂದು ಮನೆ ಬೆಳಗುವ ಕೆಲಸ ಸಂಘದಿಂದ ಆಗುತ್ತಿದೆ.

● ಚಿತ್ತರಂಜನ್ ಬೋಳಾರ್

ಸಂಘದ ಗ್ರಾಹಕರಾದ ರೋನಾಲ್ಡ್ ಜೆ. ಅಮ್ಮಣ್ಣ ಮಾತನಾಡಿ, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘವು ಗ್ರಾಮೀಣ ಪ್ರದೇಶದಲ್ಲಿ ಶಾಖೆ ತೆರೆದಿರುವುದರಿಂದ ಈ ಭಾಗದ ಜನರಿಗೆ ಉತ್ತಮ ಬ್ಯಾಂಕಿಂಗ್ ಸೌಲಭ್ಯಗಳು ದೊರೆತಂತಾಗಿದೆ ಎಂದರು.

ಸಂಘದ ಸದಸ್ಯ ಶಿವಪ್ಪ ಮಾತನಾಡಿ, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಸಿಬ್ಬಂದಿಗಳು ಅಗತ್ಯ ಸಂದರ್ಭಗಳಲ್ಲಿ ಹಿರಿಯ ಸದಸ್ಯರಿಗೆ ಮನೆಗೆ ಬಂದು ಬ್ಯಾಂಕಿಂಗ್ ಸೇವೆಯನ್ನು ನೀಡುತ್ತಿರುವುದು ಶ್ಲಾಘನೀಯ. ಇದರಿಂದ ಹಿರಿಯ ನಾಗರಿಕರಿಗೆ ಇದರಿಂದ ತುಂಬಾ ಪ್ರಯೋಜನವಾಗುತ್ತಿದೆ ಎಂದರು.

ಸಂಘದ ಸದಸ್ಯೆ ಸುಮಲತಾ ಮಾತನಾಡಿ ಸಂಘವು ಬ್ಯಾಂಕಿಂಗ್ ವ್ಯವಹಾರದ ಜೊತೆಗೆ ಇನ್ನಿತರ ಸೇವಾ ಕಾರ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಜನ ಸಾಮಾನ್ಯರ ಕಾಳಜಿ ವಹಿಸುವುದರ ಜೊತೆಗೆ ಸಂಘವು ನಿರಂತರವಾಗಿ ಹಮ್ಮಿ ಕೊಂಡು ಬರುತ್ತಿರುವ ವೈದ್ಯಕೀಯ ಶಿಬಿರಗಳಿಂದ ಹೆಚ್ಚಿನ ಸಾರ್ವಜನಿಕರಿಗೆ ಪ್ರಯೋಜನ ವಾಗುತ್ತಿದೆ ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಮಾತನಾಡಿ, ಸಂಘವು ಉತ್ತಮ ರೀತಿಯಲ್ಲಿ ನಿರಖು ಠೇವಣಿ ಹಾಗೂ ಆಭರಣ ಸಾಲವು ನೀಡಿದ್ದು ಚಿನ್ನಾಭರಣ ಸಾಲಗಳಿಗೆ ಪ್ರತಿ ಗ್ರಾಂ. ಗೆ ಗರಿಷ್ಠ ಮೌಲ್ಯ ರೂ.12,000 ರವರೆಗೆ ಯಾವುದೇ ಸೇವಾ ಶುಲ್ಕವಿಲ್ಲದೆ ಸಾಲವನ್ನು ಸದಸ್ಯರಿಗೆ ನೀಡಲಾಗುವುದು. ನಮ್ಮ ಎಲ್ಲಾ ಶಾಖೆಗಳಲ್ಲಿ ಇ-ಮುದ್ರಾಂಕ, ನೆಫ್ಟ್, ಆರ್‌ಟಿಜಿಎಸ್ ಸೇವೆಯು ಲಭ್ಯವಿದ್ದು ಅದೇ ರೀತಿ ಸಂಘದಲ್ಲಿ ವಿವಿಧ ರೀತಿಯ ವಿಮಾ ಸೌಲಭ್ಯಗಳು ಲಭ್ಯವಿರುತ್ತದೆ. ಎಲ್ಲಾ ಗ್ರಾಹಕರು ಇದರ ಪ್ರಯೋಜನ ಪಡೆಯಬೇಕೆಂದು ವಿನಂತಿಸಿದರು ಹಾಗೂ ಮೇ ತಿಂಗಳಲ್ಲಿ ಎಲ್ಯಾರ್‌ಪದವು ಶಾಖೆಯಲ್ಲಿ ಆರೋಗ್ಯ ಶಿಬಿರ ನಡೆಯಲಿದ್ದು ಎಲ್ಲಾ ಗ್ರಾಹಕರು ಅದರ ಲಾಭ ಪಡೆಯುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಸೌಮ್ಯ ವಿಜಯ್ ಇದ್ದರು. ಶಾಖೆಯ ಸಿಬ್ಬಂದಿ ಕವಿತಾ ಸ್ವಾಗತಿಸಿ, ಶಾಖೆಯ ಶಾಖಾಧಿಕಾರಿ ಕೌಶಿಕ್ ಕುಮಾರ್ ನಿರೂಪಿಸಿದರು.

ಸುಳ್ಯದಲ್ಲಿ ಮಕ್ಕಳ ಭಜನಾ ತರಬೇತಿ, ಸಂಸ್ಕಾರ ಶಿಬಿರ ಉದ್ಘಾಟನಾ ಕಾರ್ಯಕ್ರಮ



ಸುಳ್ಯ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಸುಳ್ಯ, ಮಂಜುನಾಥೇಶ್ವರ ಭಜನಾ ಪರಿಷತ್ ಸುಳ್ಯ ವಲಯ, ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟ ಸುಳ್ಯ ಇದರ ಸಂಯುಕ್ತ ಆಶ್ರಯದಲ್ಲಿ ಮೇ 4ರಿಂದ 11ರ ತನಕ ನಡೆಯುವ ಮಕ್ಕಳ ಭಜನಾ ಶಿಬಿರ ಉದ್ಘಾಟನಾ ಕಾರ್ಯಕ್ರಮ ಸೋಮವಾರ ನಡೆಯಿತು.

ಸುಳ್ಯ ತಾಲೂಕು ಶ್ರೀ ಮಂಜುನಾಥೇಶ್ವರ ಭಜನಾ ಪರಿಷತ್‌ನ ಅಧ್ಯಕ್ಷ ಸೋಮಶೇಖರ ಪೈಕ ಉದ್ಘಾಟಿಸಿ ಶುಭ ಹಾರೈಸಿದರು. ಶ್ರೀ ಮಂಜುನಾಥೇಶ್ವರ ಭಜನಾ ಪರಿಷತ್‌ನ ನಿರ್ದೇಶಕ ಜಯಪ್ರಕಾಶ್ ಕಲ್ಲಪಳ್ಳಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಯೋಜನಾಧಿಕಾರಿ ಮಾಧವ ಗೌಡ, ಭಜನಾ ಪರಿಷತ್‌ನ ಗೌರವಾಧ್ಯಕ್ಷ ಯತೀಶ್ ರೈ ದುಗಲಡ್ಕ ಕಾರ್ಯದರ್ಶಿ ಟಿ.ಎನ್. ಸತೀಶ್, ಸುಳ್ಯ ವಲಯದ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ವಲಯಾಧ್ಯಕ್ಷ ಮನೋಹರ್ ಕೆ., ಉದ್ಯಮಿ ನಾರಾಯಣ ಕೇಕಡ್ಕ ಶಶಿಕಲಾ ಹರಪ್ರಸಾದ್, ಭಾರತಿ ಅರಂತೋಡು, ನಳಿನಾಕ್ಷಿ ಕಲ್ಲಡ್ಕ ಶುಭ ಹಾರೈಸಿದರು.

ಈ ಸಂದರ್ಭ ಭಜನಾ ಕೈಪಿಡಿಯನ್ನು ಅತಿಥಿಗಳು ಬಿಡುಗಡೆಗೊಳಿಸಿದರು. ವಲಯ ಮೇಲ್ವಿಚಾರಕ ದಿನೇಶ್ ಸ್ವಾಗತಿಸಿ, ಶ್ರೀ ಮಂಜುನಾಥೇಶ್ವರ ಭಜನಾ ಪರಿಷತ್‌ನ ಸುಳ್ಯ ವಲಯದ ಅಧ್ಯಕ್ಷೆ ಸವಿತಾ ಸಂದೇಶ್ ವಂದಿಸಿದರು. ಸೇವಾ ಪ್ರತಿನಿ ಸುರೇಶ್ ಪರಿವಾರಕಾನ ಕಾರ್ಯಕ್ರಮ ನಿರ್ವಹಿಸಿದರು. ಮೇ 11ರ ಸೋಮವಾರ ಚೆನ್ನಕೇಶವ ದೇವಸ್ಥಾನದಲ್ಲಿ ಸಮಾರೋಪ ನಡೆಯಲಿದ್ದು, ಬೆಳಗ್ಗೆ ಮಕ್ಕಳಿಂದ ಮಾತ ಪಿತರ ಪಾದ ಪೂಜನಾ ಕಾರ್ಯಕ್ರಮವು ಈ ಶಿಬಿರದಲ್ಲಿ ನಡೆಯಲಿದೆ.

ಅಕ್ಷಯ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗೂ ಉದ್ಯೋಗ: ಜಯಂತ್



ಪುತ್ತೂರು: ಅಕ್ಷಯ ಪದವಿ ಕಾಲೇಜಿನಲ್ಲಿ ಬಿಹೆಚ್‌ಎಸ್ ವಿಭಾಗದ ವತಿಯಿಂದ ಟೇಸ್ಟ್ ಟ್ರೈ ಫುಡ್ ಫೆಸ್ಟ್ ಅಮೆರಿಕಾದ ರಘುನಾಥ್ ಮೂರ್ತಿಯವರ ಪ್ರಾಯೋಜಕತ್ವದಲ್ಲಿ ಸಂಪನ್ನಗೊಂಡಿತು.

ಮುಖ್ಯ ಅತಿಥಿಯಾಗಿದ್ದ ಮಾಸ್ಟರ್ ಶೆಫ್ ಮಹಮ್ಮದ್ ಆಶಿಕ್ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಅಧ್ಯಕ್ಷ ಜಯಂತ್ ನಡುಬೈಲು, ಅಕ್ಷಯ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ ಮತ್ತು ಶೇ.100 ಪ್ಲೇಸ್ಮೆಂಟ್ ಆಗಿರುವುದು ಅಕ್ಷಯ ಕಾಲೇಜಿನ ಯಶಸ್ಸು ಮತ್ತು ಹೆಮ್ಮೆ ಎಂದರು.

ಮುಖ್ಯ ಅತಿಥಿಯಾಗಿದ್ದ ಖ್ಯಾತ ಉದ್ಯಮಿ ಗೌರಿ ಅಕ್ಷಯ ಶುಭಾಶಂಸನೆಗೈದರು. ವೇದಿಕೆಯಲ್ಲಿ ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕಿ ಕಲಾವತಿ ಜಯಂತ್, ಅಕ್ಷಯ ಪದವಿ ಕಾಲೇಜಿನ ಪ್ರಾಂಶುಪಾಲ ಸಂಪತ್ ಕೆ. ಪಕ್ಕಳ, ಆಡಳಿತ ಅಧಿಕಾರಿ ಅರ್ಪಿತ್ ಟಿ.ಎ., ಶೈಕ್ಷಣಿಕ ಮಾರ್ಗದರ್ಶಕ ಅಭಿಲಾಶ್ ಕ್ಷತ್ರಿಯ, ಕಾಯು ಸಂಘದ ಅಧ್ಯಕ್ಷ ಗಗನ್ ಇದ್ದರು.ಬಿಹೆಚ್‌ಎಸ್ ವಿಭಾಗದ ವಿದ್ಯಾರ್ಥಿ ಅವಿನಾಶ್ ಸ್ವಾಗತಿಸಿ, ಪ್ರಜ್ವಲ್ ವಂದಿಸಿದರು. ಉಪನ್ಯಾಸಕಿ ಶ್ರುತ ನಿರ್ವಹಿಸಿದರು.

ವಿಚಾರ ಗೋಷ್ಠಿ

ಮಂಗಳೂರು ಅಡುಗೆ ಶೈಲಿಯ ಸಾಂಸ್ಕೃತಿಕ ಮಹತ್ವ, ಆಧುನಿಕ ಪ್ರಭಾವಗಳು, ಆಧುನಿಕ ಪದಾರ್ಥಗಳ ತಯಾರಿಕಾ ವಿಧಾನಗಳನ್ನು ಉಳಿಸುವ ಆಗತ್ಯ, ಹಾಗೂ ಈ ಶ್ರೀಮಂತ ಆಹಾರ ಪರಂಪರೆಯನ್ನು ಮುಂದಿನ ಪೀಳಿಗೆ ಯವರು ಹೇಗೆ ಕಾಪಾಡಬಹುದು ಎಂಬ ವಿಚಾರಗಳ ಕುರಿತಾಗಿ ವಿಚಾರ ಗೋಷ್ಠಿ ನಡೆಯಿತು.

ಶ್ರೀ ಮೃತ್ಯುಂಜಯೇಶ್ವರ ದೇವಸ್ಥಾನದ ಪುನರ್ ನಿರ್ಮಾಣ



ಕೈಕಂಬ: ಮಂಗಳೂರು ತಾಲೂಕಿನ ಗಂಜಿಮಠದ ಶ್ರೀ ಮೃತ್ಯುಂಜಯೇಶ್ವರ ದೇವಸ್ಥಾನದ ಪುನರ್ ನಿರ್ಮಾಣದ ಪ್ರಯುಕ್ತ ಶ್ರೀ ದೇವರ ಗರ್ಭಗುಡಿಗೆ ನಿಕುಂಭ ಪೂರ್ವಕ ಷಡಾಧಾರ ಪ್ರತಿಷ್ಠೆ ಸೋಮವಾರ ನೆರವೇರಿತು.

ಬಡಗ ಎಡಪದವು ವೇದಮೂರ್ತಿ ಟಿ. ಮುರಳೀಧರ ತಂತ್ರಿಗಳ ನೇತೃತ್ವದಲ್ಲಿ ವೈದಿಕ ವಿಧಿ ವಿಧಾನಗಳು ನಡೆದು ಬೆಳಿಗ್ಗೆ 9.15ರ ವೃಷಭ ಲಗ್ನ ಸುಮುಹೂರ್ತದಲ್ಲಿ ನಿಕುಂಭ ಪೂರ್ವಕ ಷಡಾಧಾರ ಪ್ರತಿಷ್ಠೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಸಲಾಯಿತು.

ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಉಳಿಪಾಡಿ, ಗುತ್ತು ಪ್ರಮುಖರಾದ ಭಾಸ್ಕರ್ ಭಟ್ ಗಂಜಿಮಠ, ರಮೇಶ್ ಆಚಾರ್ಯ ನಾರಳ,ಸೂರ್ಯ ಭಟ್, ಗಣೇಶ್ ಭಟ್ ಗಂಜಿಮಠ, ಚಂದ್ರಹಾಸ್ ಶೆಟ್ಟಿ ನಾರಳ, ಸೋಹನ್ ಅತಿಕಾರಿ, ಸುರೇಶ್ ನಾಯ್ಕ್ ಹರೀಶ್ ಕಾಮತ್ ಗಂಜಿಮಠ, ಸುನೀಲ್ ಜಿ., ಶೃತಾಂಜನ್ ಜೈನ್, ಸಚಿನ್ ಅಡಪ ಹಾಗೂ ಭಕ್ತರು ಪಾಲ್ಗೊಂಡಿದ್ದರು.

ಸುತ್ತ ಮುತ್ತ

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಉರ್ವಮಾರ್ಕೆಟ್ ಜಿ.ಐ.ಎಸ್ ಉಪಕೇಂದ್ರದಿಂದ ಹೊರಡುವ 11ಕೆವಿ ಡೊಮಿನಿಕ್ ಫೀಡರ್‌ನಲ್ಲಿ ತುರ್ತು ಲೈನ್ ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಶಾಂತಿಲೇನ್, ಕೋಡಿಕಲ್ ಕಟ್ಟೆ, ಎಸ್.ಎನ್.ಡಿ.ಪಿ, ಕಂಚಿಗಾರ ಗುತ್ತು, ನಾಗಬ್ರಹ್ಮ ಸನ್ನಿ ರೋಡ್, ಕೊಟ್ಟಾರ ಚೌಕಿ, ಅಲಗುಡ್ಡ, ವಿವೇಕಾನಂದ ನಗರ, ಶುಭಶ್ರೀ ನಗರ, ಜೋಕಟ್ಟೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 5ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರ ವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಮೂಡುಬಿದಿರೆ ಪರಿಸರ

ಮೂಡಬಿದ್ರೆ, ಗಾಂಧಿನಗರ, ಗಂಟಾಲ್ ಕಟ್ಟೆ ಇರುವೈಲು, ಪುಚ್ಚೆಮೊಗರು, ಕಡಂದಲೆ, ನಿಡ್ಡೋಡಿ ಫೀಡರ್‌ಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೂಡಬಿದ್ರೆ ಪೇಟೆ, ಮಾಸ್ತಿಕಟ್ಟೆ, ನೆಲ್ಲಿಗುಡ್ಡೆ, ಗಾಂಧಿ ನಗರ, ಕಾಡದಬೆಟ್ಟು, ಮಹಾವೀರ ಕಾಲೇಜ್, ವಿವೇಕಾನಂದ ನಗರ, ಸ್ವರಾಜ್ ಮೈದಾನ್, ಒಂಟಿಕಟ್ಟೆ, ಕಡಲಕೆರೆ, ಪಿಲಿಪಂಜರ, ನಾಗರಕಟ್ಟೆ, ಅರಮನೆಬಾಗಿಲು, ಜ್ಯೋತಿನಗರ, ಆಲಂಗಾರು, ಜೈನ್ ಪೇಟೆ, ಕೋಟೆಬಾಗಿಲು, ಸುಭಾಷ್ ನಗರ, ಮರಿಯಾಡಿ, ಲಾಡಿ, ಪ್ರಾಂತ್ಯ, ಪೇಪರ್ ಮಿಲ್, ಬೊಗ್ರುಗುಡ್ಡೆ, ಬಿರಾವು, ತಾಕೊಡೆ, ಪುಚ್ಚೆಮೊಗರು, ಕಲ್ಲಬೆಟ್ಟು, ಗಂಟಾಲ್ ಕಟ್ಟೆ, ಹೊಸಂಗಡಿ, ನೆತ್ತೋಡಿ, ಕೋಟೆಬಾಗಿಲು ದ್ವಾರ, ಕಲ್ಯಾಣಿ ಕೆರೆ, ಮಾರೂರು ಹೊಸಂಗಡಿ, ಶೇಡಿಗುರಿ, ಇರುವೈಲು, ಹೊಸ್ಮಾರ್ ಪದವು, ಕೊನ್ನೆಪದವು, ಮಹಾವೀರ ಕಾಲೇಜ್ ರೋಡ್, ಪುಚ್ಚೆಮೊಗರು ವಾಟರ್ ಸಪ್ಲೈ, ನಿಡ್ಡೋಡಿ, ಸಂಪಿಗೆ, ಕಲ್ಲಮುಂಡ್ಕೂರು, ಕುದ್ರಿಪದವು, ಬೋಂಟ್ರಡ್ಕೆ, ಸ್ತುತಿಲಪದವು, ಅಶ್ವತ್ಥಪುರ, ಮಂಗಬೆಟ್ಟು, ನೀರ್ಕೆರೆ, ಕಾಯರ್ ಮುಗೇರು ಚಕ್ಕುಪಾದೆ, ಕೊಪ್ಪಳ, ಕಳಕಬೈಲು, ಪುತ್ತಿಗೆಪದವು, ಹಂಡೇಲು, ತೋಡಾರು ಪಡೀಲು, ಪುದ್ದರಕೋಡಿ, ತೋಡಾರ್ ಪಲ್ಕೆ, ಮಿಜಾರ್, ಮೈಟ್, ಕೊಪ್ಪದ ಕುಮೇರು, ತೋಡಾರ್ ಗರಡಿ, ಪತ್ತೋಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 5ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ತಿಳಿಸಿದೆ.

ಆಸ್ತಿ ತೆರಿಗೆ ಪಾವತಿ: ಶೇ.5 ರಿಯಾಯಿತಿ

ಉಳ್ಳಾಲ: ಸೋಮೇಶ್ವರ ಪುರಸಭಾ ವ್ಯಾಪ್ತಿಯ ಆಸ್ತಿ ಮಾಲೀಕರಿಗೆ ಹಾಗೂ ಅನುಭೋಗದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸರಕಾರದ ಆದೇಶದಂತೆ 2026-27ನೇ ಸಾಲಿನ ಸ್ವಯಂಘೋಷಿತ ಆಸ್ತಿ ತೆರಿಗೆಯನ್ನು 2026ನೇ ಮೇ ತಿಂಗಳಿನಲ್ಲಿ ಪಾವತಿ ಮಾಡಿದಲ್ಲಿಯೂ ಸಹ ಪ್ರತಿ ಶತ ಶೇ.5ರಷ್ಟು ರಿಯಾಯಿತಿ ನೀಡಲಾಗುತ್ತದೆ. ಆದುದರಿಂದ ಆಸ್ತಿ ಮಾಲೀಕರು ಇದರ ಸುವರ್ಣಾವಕಾಶವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ. 2026-27ನೇ ಸಾಲಿನ ಆಸ್ತಿ ತೆರಿಗೆ ಪಾವತಿಯಲ್ಲಿ ಶೇ.5 ರಷ್ಟು ರಿಯಾಯಿತಿಯು 2026ರ ಮೇ 30ರವರೆಗೂ ಇದ್ದು ಜೂನ್ ತಿಂಗಳಿನಲ್ಲಿ ತೆರಿಗೆ ಪಾವತಿಸಿದ್ದಲ್ಲಿ ಯಾವುದೇ ದಂಡವಿರುವುದಿಲ್ಲ.2026-27ನೇ ಸಾಲಿನ ಆಸ್ತಿ ತೆರಿಗೆಗೆ ಜುಲೈನಿಂದ ಪ್ರತೀ ತಿಂಗಳಿಗೆ ಶೇ.2 ರಷ್ಟು ದಂಡ ವಿಧಿಸಲಾಗುವುದು.ಆಸ್ತಿ ತೆರಿಗೆ ಪಾವತಿಸಲು ಬಾಕಿ ಇದ್ದವರು ಕೂಡಲೇ ಪಾವತಿಸತಕ್ಕದ್ದು. 2026-27ನೇ ಸಾಲಿಗೆ ಉದ್ದಿಮೆ ಪರವಾನಿಗೆಯನ್ನು ನವೀಕರಿಸುವುದು ಹಾಗೂ ನೀರಿನ ಶುಲ್ಕವನ್ನು ಪಾವತಿಸುವುದು ಎಂದು ಸೋಮೇಶ್ವರ ಪುರಸಭಾ ಪ್ರಕಟಣೆ ತಿಳಿಸಿದೆ.

ನಾಳೆ 'ಕನಕ ಸ್ಮೃತಿ'

ಕೊಣಾಜೆ: ಮಂಗಳೂರು ವಿಶ್ವವಿದ್ಯಾನಿಲಯದ ಕನಕದಾಸ ಪೀಠ ಮತ್ತು ಕನಕದಾಸ ಸಂಶೋಧನ ಕೇಂದ್ರದ ವತಿಯಿಂದ 'ಕನಕ ಸ್ಮೃತಿ' ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮ ಹಾಗೂ ಕನಕ ಪುರಸ್ಕಾರ ಪ್ರದಾನ ಸಮಾರಂಭವು ಮೇ 06ರಂದು ಅಪರಾಹ್ನ 2.30 ಗಂಟೆಗೆ ಮಂಗಳಗಂಗೋತ್ರಿಯ ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆಯ ಪ್ರೊ. ಬಿ.ಎ. ವಿವೇಕ ರೈ ವಿಚಾರ ವೇದಿಕೆಯಲ್ಲಿ ನಡೆಯಲಿದೆ.

ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಪಿ.ಎಲ್ ಧರ್ಮ ಇವರು ವಹಿಸಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಸಹ ನಿರ್ದೇಶಕ ಡಾ. ಬಿ.ಎಸ್. ಅನಿಲ ಕುಮಾರ ಬೊಮ್ಮಘಟ್ಟ ವಿಶೇಷ ಉಪನ್ಯಾಸ ನೀಡಲಿರುವರು. ವಿಶ್ವವಿದ್ಯಾನಿಲಯದ ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಪ್ರೊ. ನಾಗಪ್ಪ ಗೌಡ .ಆರ್, ಕನಕದಾಸ ಸಂಶೋಧನ ಕೇಂದ್ರದ ಸಂಯೋಜಕ ಡಾ ಧನಂಜಯ ಕುಂಬ್ಳೆ ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ 16 ಅಭ್ಯರ್ಥಿಗಳಿಗೆ ಮತ್ತು ಆರು ತಂಡಗಳಿಗೆ 'ಕನಕ ಪುರಸ್ಕಾರ ಪ್ರದಾನ ಮತ್ತು ಕನಕ ಕೀರ್ತನ ಪ್ರಸ್ತುತಿ' ನಡೆಯಲಿದೆ ಎಂದು ಕನಕದಾಸ ಸಂಶೋಧನ ಕೇಂದ್ರದ ಪ್ರಕಟಣೆ ತಿಳಿಸಿದೆ.

ಉಪ್ಪಿನಂಗಡಿ ಚಂದ್ರನಾಥ ಸ್ವಾಮಿ ಬಸದಿ ಪುನರ್ ಪ್ರತಿಷ್ಠಾ ಮಹೋತ್ಸವ ಕಾರ್ಯಕ್ರಮಗಳು ಸಂಪನ್ನ | ಆಕರ್ಷಕ ಆಗ್ರೋಧಕ ಮೆರವಣಿಗೆ

ತಾಳ್ಮೆ, ಸಂಯಮ ಗುಣಗಳಿಂದ ಮಾತ್ರ ಧರ್ಮವನ್ನು ಅರಿಯಲು ಸಾಧ್ಯ: ಡಾ. ಚಾರುಕೀರ್ತಿ ಶ್ರೀ

ಉಪ್ಪಿನಂಗಡಿ: ಎಲ್ಲರೂ ಬದುಕಬೇಕೆಂಬ ಜೀವನ ಸೌಂದರ್ಯವನ್ನು ಸವಿಯುವುದೇ ನಿಜವಾದ ಧರ್ಮ. ತನ್ನ ಸ್ವಾರ್ಥಕ್ಕಾಗಿ ಅನ್ಯರ ಮೇಲೆ ಬಾಂಬ್ ಹಾಕುವ ಧರ್ಮವಲ್ಲ. ಧರ್ಮವನ್ನು ವಿವೇಕ, ವೈರಾಗ್ಯ ಚಿತ್ತದಿಂದ ಅನುಭವಿಸಬೇಕು, ತಾಳ್ಮೆ, ಸಂಯಮ ಗುಣವನ್ನು ಹೊಂದಿದಾಗ ಮಾತ್ರ ಧರ್ಮವನ್ನು ಸರಿಯಾಗಿ ಅರಿತುಕೊಂಡು ಅದರ ಹಾದಿಯಲ್ಲಿ ಸಾಗಲು ಸಾಧ್ಯ ಎಂದು ಮೂಡಬಿದ್ರೆ ಜೈನ ಮಠದ ಶ್ರೀ ಭಟ್ಟಾರಕ ಡಾ. ಚಾರುಕೀರ್ತಿ ಪಂಡಿತಾಚಾರ್ಯ ವರ್ಯ ಮಹಾಸ್ವಾಮೀಜಿ ಹೇಳಿದರು.

ಮೇ 3ಕ್ಕೆ ಭಾನುವಾರ ರಾತ್ರಿ ಉಪ್ಪಿನಂಗಡಿ ಗಾಂಧಿ-ಪಾರ್ಕ್ ಎಂಬಲ್ಲಿ ಹೆದ್ದಾರಿ ಪಾರ್ಶ್ವದಲ್ಲಿ ಪುನರ್ ನಿರ್ಮಿತ ಕದಿಕಾರು ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಬಸದಿಯಲ್ಲಿ ಏಕಶಿಲಾ ಚತುರ್ಮುಖ ಮಾನಸ್ತಂಭೋಪರಿ ಶ್ರೀ ಜಿನಬಿಂಬಗಳ ಪಂಚಕಲ್ಯಾಣ ಹಾಗೂ ಧಾಮ ಸಂಪ್ರೋಕ್ಷಣಾಪೂರ್ವಕ ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಹಾಗೂ ಮಹಾಮಾತೆ ಶ್ರೀ ಪದ್ಮಾವತೀ ದೇವಿ ಬಿಂಬಗಳ ಪುನರ್ ಪ್ರತಿಷ್ಠಾ ಮಹೋತ್ಸವದ ಕೊನೆಯ ಹಾಗೂ 5ನೇ ದಿನದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡುತ್ತಿದ್ದರು.



ಅಳದಂಗಡಿ ಅರಮನೆಯ ತಿಮ್ಮಣ್ಣರಸರಾದ ಡಾ. ಪದ್ಮಪ್ರಸಾದ್ ಅಜಿಲ ಮಾತನಾಡಿ, ನಮಗೆ ದೇವರನ್ನು ನೋಡಲು ಸಾಧ್ಯವಿಲ್ಲ, ಆದರೆ ಸತ್ಕಾರ್ಯದ ಮೂಲಕ ದೇವರು ನಮ್ಮನ್ನು ನೋಡಲು ಸಾಧ್ಯ ಇದೆ, ಹಾಗಾಗಿ ನಾವುಗಳು ದೇವರು ನಮ್ಮನ್ನು ನೋಡುವ ಹಾದಿಯಲ್ಲಿ ಸಾಗಬೇಕು, ಆಗ ಮಾತ್ರ ಜೈನ ತತ್ವ ಪಾಲನೆ ಸಾಧ್ಯ ಎಂದರು.

ಮಾಜಿ ಸಂಸದ ನಳಿನ್ ಕುಮಾರ್ ಕಟೀಲು ಮಾತನಾಡಿ, ಜೈನ ಸಮುದಾಯ ತ್ಯಾಗ, ಸಮರ್ಪಣಾ ಭಾವ ಹೊಂದಿರುವವರು, ದ.ಕ. ಜಿಲ್ಲೆಯ ದೇವಸ್ಥಾನ, ಮಂದಿರಗಳ ಅಭಿವೃದ್ಧಿಯ ಹಿಂದೆ ಜೈನ ಸಮುದಾಯದ ಕೊಡುಗೆ ಅಪಾರ ಎಂದರು.

ಕದಿಕಾರು ಭಗವಾನ್ ಚಂದ್ರನಾಥ ಸ್ವಾಮಿ ಬಸದಿಯ ಪಂಚ ಕಲ್ಯಾಣ ಸಮಿತಿ ಅಧ್ಯಕ್ಷ ವಿದ್ಯಾಧರ್ ಜೈನ್ ರವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಸಂಜೀವ ಮಠಂದೂರು, ಉಪ್ಪಿನಂಗಡಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕಿ ಮಲ್ಲಿಕಾ ಜೈನ್, ಗುರುವಾಯನಕೆರೆ ಎಕ್ಸೆಲ್ ವಿದ್ಯಾ ಸಂಸ್ಥೆಯ ಸುಮಂತ್ ಜೈನ್, ಪ್ರವೀಣ್ ಕುಮಾರ್ ಇಂದ್ರ ಮಾತನಾಡಿದರು. ಪುತ್ತೂರು ಡಿವೈಎಸ್ಪಿ ಪ್ರಮೋದ್ ಕುಮಾರ್ ಬೆದ್ರಾಜೆ, ಉದ್ಯಮಿ ರತ್ನಾಕರ ಜೈನ್, ತಣ್ಣೀರುಪಂಥ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಜಯರಾಜ ಹೆಗ್ಡೆ ಪುತ್ತಿಲ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ವಜ್ರಕುಮಾರ್ ಜೈನ್, ಕಾರ್ಯಾಧ್ಯಕ್ಷ ಧನ್ಯಕುಮಾರ್ ರೈ ಬಿಳಿಯೂರುಗುತ್ತು ಉಪಸ್ಥಿತರಿದ್ದರು. ಸ್ಥಳೀಯ ಗಣ್ಯರಾದ ಸುನಿಲ್ ಕುಮಾರ್ ದಡ್ಡು, ಕೆ.ಎಸ್. ರಾಧಾಕೃಷ್ಣ ರಾಜಶೇಖರ್ ಜೈನ್, ಎನ್. ಉಮೇಶ್ ಶೆಣೈ, ಅನಂತರಾಯ ಕಿಣಿ, ರಾಮಕೃಷ್ಣ ಪ್ರಭು, ದಿನಕರ್ ರಾವ್, ಕೈಲಾರ್ ರಾಜ್ ಗೋಪಾಲ್ ಭಟ್, ಸಮಿತಿ ಸದಸ್ಯರಾದ ಪ್ರಶಾಂತ್ ಜೈನ್ ಬಾರ್ಯ, ಅನುದೀಪ್ ರೈ, ನಿತೇಶ್ ಕುಮಾರ್ ಪುತ್ತಿಲ, ಪ್ರಭಾಕರ್ ರೈ, ರಕ್ಷಿತ್ ಕುಮಾರ್ ಪುತ್ತಿಲ, ಜಯರಾಜ್ ಜಾರಳಿಕೆ, ಸುಭಾಷ್ ಜೈನ್, ನಿರಂಜನ್ ಕೊಂಡೆ, ಅರುಣಾ ಡಿ. ರೈ, ಸಮಂತ್ ನೆಲ್ಯಾಡಿ, ಪುನಿತ್ ನೆಲ್ಯಾಡಿ, ಉದಯ ಕುಮಾರ್ ಜೈನ್, ಅಭಯ್ ಜೈನ್, ವಿಜೇತ್ ಜೈನ್, ಸಂಪತ್ ಕುಮಾರ್ ಅಲಂಕಾರು, ಸನ್ಮತಿ ಹೆಗ್ಡೆ ಮಹೇಶ್ ಪಡಿವಾಳ ಮತ್ತಿತರರು ಭಾಗವಹಿಸಿದ್ದರು.

ಕಾರ್ಯಕ್ರಮದ ಅಂಗವಾಗಿ ಸಂಜೆ ಶ್ರೀ ಸಹಸ್ರಲಿಂಗೇಶ್ವರ ದೇವಾಲಯದಿಂದ ಬಸದಿಯವರೆಗೆ ನಡೆದ ಆಗ್ರೋಧಕ ಮೆರವಣಿಗೆಯಲ್ಲಿ ಬಸದಿಯ ಧಾರ್ಮಿಕ ವಿಧಿವಿಧಾನಗಳಲ್ಲಿ ಬಳಕೆಯಾಗುವ ಲಾಲಕಿ, ಪಲ್ಲಕಿಗಳನ್ನು ವಾದ್ಯಗೋಷ್ಠಿಗಳ ಮೆರಗಿನೊಂದಿಗೆ ತರಲಾಯಿತು. ಪಾರ್ಶ್ವನಾಥ ಜೈನ್ ಕಕ್ಕೆಪದವು ಸ್ವಾಗತಿಸಿ, ಶಾಂತಿಪ್ರಕಾಶ್ ನೇರೆಂಕಿ ವಂದಿಸಿದರು. ಮಿತ್ರಸೇನ್ ಜೈನ್ ಕಾರ್ಯಕ್ರಮ ನಿರ್ವಹಿಸಿದರು. ಉಪನ್ಯಾಸಕಿ ಮಲ್ಲಿಕಾ ಜೈನ್ ಇತಿಹಾಸದ ಗರ್ಭದಲ್ಲಿ ಮರೆಯಾಗಿದ್ದ ಉಪ್ಪಿನಂಗಡಿಯ ಮೂಲ ಹೆಸರನ್ನು ಅನಾವರಣಗೊಳಿಸಿದರು.

ಸುತ್ತ ಮುತ್ತ

ಇಂದು ಬಸ್ ನಿಲ್ದಾಣದಲ್ಲಿ ಕನ್ನಡ ರಸಪ್ರಶ್ನೆ

ಪುತ್ತೂರು: ಕನ್ನಡ ಸಾಹಿತ್ಯ ಪರಿಷತ್ ಪುತ್ತೂರು ತಾಲೂಕು ಘಟಕದ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆಯ ಪ್ರಯುಕ್ತ ಒಂದು ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮೇ 5ರಂದು ಸಂಜೆ 4 ಗಂಟೆಗೆ ಪುತ್ತೂರಿನ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಸಂಚರಿಸುವ ಸಾರ್ವಜನಿಕರಿಗಾಗಿ 'ಕನ್ನಡ ರಸಪ್ರಶ್ನೆ' ಹಾಗೂ 'ಪುಸ್ತಕ ಬಹುಮಾನ' ಕಾರ್ಯಕ್ರಮ ಆಯೋಜನೆಯಾಗಿದೆ. ಈ ಬಾರಿ ಜನಸಾಮಾನ್ಯರ ನಡುವೆ ಅಂದರೆ ಬಸ್ ನಿಲ್ದಾಣದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಬಸ್ ನಿಲ್ದಾಣದಲ್ಲಿ ಸಂಚರಿಸುವ ಸಾರ್ವಜನಿಕರಿಗೆ ಹಾಗೂ ಪ್ರಯಾಣಿಕರಿಗೆ ಸ್ಥಳದಲ್ಲೇ ಕನ್ನಡಕ್ಕೆ ಸಂಬಂಧಿಸಿದ ರಸಪ್ರಶ್ನೆಗಳನ್ನು ಕೇಳಲಾಗುವುದು. ಸರಿಯಾದ ಉತ್ತರ ನೀಡಿದವರಿಗೆ ಸ್ಥಳದಲ್ಲೇ ಪುಸ್ತಕಗಳನ್ನು ಬಹುಮಾನವಾಗಿ ನೀಡಿ ಪ್ರೋತ್ಸಾಹಿಸಲಾಗುವುದು. ಕಾರ್ಯಕ್ರಮವನ್ನು ಪುತ್ತೂರು ಕೆ.ಎಸ್.ಆರ್.ಟಿ.ಸಿ. ಮುಖ್ಯ ಪ್ರಬಂಧಕ ಸುಬ್ರಹ್ಮಣ್ಯ ಪ್ರಕಾಶ್ ಉದ್ಘಾಟಿಸಲಿದ್ದಾರೆ. ತಾಲೂಕು ಕ.ಸಾ.ಪ. ಅಧ್ಯಕ್ಷ ಉಮೇಶ್ ನಾಯಕ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಸ್. ಅಬೂಬಕ್ಕರ್ ಆರ್ಲಪದವು ಪಾಲ್ಗೊಳ್ಳಲಿದ್ದು ಆಶಯ ನುಡಿಯನ್ನಾಡಲಿದ್ದಾರೆ, ರಂಗಕರ್ಮಿ ರಂಗಯ್ಯ ಬಲ್ಲಾಳ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ.

ಇಂದು ಕೆಎಸ್‌ಎಸ್ ವಾರ್ಷಿಕೋತ್ಸವ

ಸುಬ್ರಹ್ಮಣ್ಯ: ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯದಲ್ಲಿ ವಾರ್ಷಿಕೋತ್ಸವ ಮೇ 5 ಮತ್ತು ಮೇ 6ರಂದು ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ. ಮೇ 5ರಂದು ನಡೆಯುವ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ ಅಧ್ಯಕ್ಷತೆ ವಹಿಸಲಿರುವರು. ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಹಾಗೂ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕಾಲೇಜಿನ ಕಾರ್ಯದರ್ಶಿ ಅರವಿಂದ ಅಯ್ಯಪ್ಪ ಸುತಗುಂಡಿ ಕಾರ್ಯಕ್ರಮವನ್ನು ಉದ್ಘಾಟಿಸಲಿರುವರು. ಮುಖ್ಯ ಅತಿಥಿಗಳಾಗಿ ಕುಮಾರಸ್ವಾಮಿ ಪಿಯು ಕಾಲೇಜಿನ ಪ್ರಾಂಶುಪಾಲ ಡಾ. ಸಂಕೀರ್ತ್ ಹೆಬ್ಬಾರ್ ಉಪಸ್ಥಿತರಿರುವರು. ಮೇ 6ರಂದು ನಡೆಯುವ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ ಅಧ್ಯಕ್ಷತೆ ವಹಿಸಲಿರುವರು. ಮುಖ್ಯ ಅತಿಥಿಗಳಾಗಿ ಮೂಡಬಿದ್ರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಡಳಿತ ಸಂಚಾಲಕ ವಿವೇಕ್ ಆಳ್ವ, ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷ ಡಾ. ರವಿ ಕಕ್ಕೆಪದವು ಹಾಗೂ ಪ್ರಾಕ್ತನ ವಿದ್ಯಾರ್ಥಿ ಸಂಘದ ಅಧ್ಯಕ್ಷ ಗಣೇಶ್ ಪ್ರಸಾದ್ ನಾಯರ್ ಉಪಸ್ಥಿತರಿರುವರು.

ಕನಕ ಕವನ ಸ್ಪರ್ಧೆ: ಅರ್ಜಿ ಆಹ್ವಾನ

ಉಡುಪಿ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ರಾಜ್ಯ ಮಟ್ಟದ ಕನಕ ಕವನ ಸ್ಪರ್ಧೆ ಏರ್ಪಡಿಸಲು ಉದ್ದೇಶಿಸಿದ್ದು 18 ರಿಂದ 30 ವರ್ಷದೊಳಗಿನವರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಭಾಗವಹಿಸುವ ಸ್ಪರ್ಧಿಗಳು ಸ್ವ-ರಚಿತ ಕವನವನ್ನು ಸಲ್ಲಿಸಲು ಜೂನ್ 22 ಕೊನೆಯ ದಿನ. ಅರ್ಜಿ ಮತ್ತು ಕವನವನ್ನು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560056 ಇಲ್ಲಿಗೆ ಅಂಚೆ, ಕೊರಿಯರ್, ಇ-ಮೇಲ್ ಅಥವಾ ಮುದ್ದಾಂ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://kanakadasaresearchcenter.karnataka.gov.in/ ಅಥವಾ ಮೊಬೈಲ್ ನಂಬರ್ 9743545865 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಸದಸ್ಯ ಕಾರ್ಯದರ್ಶಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಒಂದನೇ ತರಗತಿಗೆ ಪ್ರವೇಶ ಆರಂಭ

ಕಾಸರಗೋಡು: ಕಾಸರಗೋಡು ಜಿಲ್ಲೆಯೂ ಸೇರಿದಂತೆ ಕೇರಳದ ಎಲ್ಲಾ ಜಿಲ್ಲೆಗಳ ಶಾಲೆಗಳಲ್ಲಿ ಒಂದನೇ ತರಗತಿಗೆ ಪ್ರವೇಶಾತಿ ಪ್ರಕ್ರಿಯೆ ನಡೆಯುತ್ತಿದೆ. 2026-27ನೇ ಶೈಕ್ಷಣಿಕ ವರ್ಷದ 1ನೇ ತರಗತಿಗೆ ಪ್ರವೇಶ ಆರಂಭಗೊಂಡಿದೆ. 1ನೇ ತರಗತಿ ಪ್ರವೇಶಕ್ಕೆ ಕನಿಷ್ಠ ಪ್ರಾಯ 5 ವರ್ಷ ಆಗಿದೆ. ಪ್ರವೇಶ ಪರೀಕ್ಷೆ ನಡೆಸದೆ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲಾ ಮಕ್ಕಳಿಗೂ ಪ್ರವೇಶ ಖಚಿತಪಡಿಸಬೇಕೆಂದು ರಾಜ್ಯ ಸರಕಾರವು ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ. 1ರಿಂದ 8ನೇ ತರಗತಿ ವರೆಗಿನ ಮಕ್ಕಳಿಗೆ ಪುಸ್ತಕ ಹಾಗೂ ಸಮವಸ್ತ್ರ ಉಚಿತವಾಗಿದೆ. ಇದರ ಹೆಸರಿನಲ್ಲಿ ಹಣ ವಸೂಲಿ ಮಾಡಬಾರದೆಂದೂ ಸೂಚಿಸಲಾಗಿದೆ.

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಪ್ರತಿಷ್ಠಿತ ಪ್ರಶಸ್ತಿ ಪ್ರದಾನ | ಡಾ. ಎಚ್.ಎಸ್.ಬಲ್ಲಾಳ್ ಹೇಳಿಕೆ

ಆರ್‌ಆರ್‌ಸಿ ಅಪರೂಪ ಯಕ್ಷಗಾನ ದಾಖಲೆ ಯೂಟ್ಯೂಬ್‌ಗೆ

ಉಡುಪಿ: ಮಣಿಪಾಲದ ಜಾನಪದ ರಂಗ ಕಲೆಗಳ ಪ್ರಾದೇಶಿಕ ಸಂಶೋಧನಾ ಕೇಂದ್ರದಲ್ಲಿ(ಆರ್‌ಆರ್‌ಸಿ) ದಶಕಗಳಿಂದಲೂ ಅತ್ಯಂತ ಜಾಗರೂಕತೆಯಿಂದ ಸಂರಕ್ಷಿಸಿಡಲಾಗಿರುವ ಯಕ್ಷಗಾನದ ಅಪರೂಪದ ಧ್ವನಿ ಮತ್ತು ದೃಶ್ಯ ದಾಖಲೆಗಳನ್ನು ಶೀಘ್ರದಲ್ಲೇ ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಲಾಗುವುದು. ಈ ಮೂಲಕ ಸಂಶೋಧಕರಿಗೆ ಮಾತ್ರ ಸೀಮಿತವಾಗಿದ್ದ ಈ ಅಮೂಲ್ಯ ಕಲಾ ಸಂಪತ್ತನ್ನು ಜನಸಾಮಾನ್ಯರಿಗೂ ತಲುಪಿಸುವ ಕಾರ್ಯ ಮಾಡಲಾಗುವುದು ಎಂದು ಮಾಹೆ ಸಹಕುಲಾಧಿಪತಿ ಡಾ. ಎಚ್.ಎಸ್. ಬಲ್ಲಾಳ್ ಘೋಷಿಸಿದರು.

ಕರ್ನಾಟಕ ಯಕ್ಷಗಾನ ಅಕಾಡೆಮಿಯ ವತಿಯಿಂದ ಅಂಬಲಪಾಡಿ ಶ್ರೀ ಜನಾರ್ದನ ಮಹಾಕಾಳಿ ದೇವಸ್ಥಾನದ ಭವಾನಿ ಮಂಟಪದಲ್ಲಿ ಆಯೋಜಿಸಲಾದ 2025ನೇ ಸಾಲಿನ ಪ್ರತಿಷ್ಠಿತ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ಆರ್‌ಆರ್‌ಸಿಯಲ್ಲಿ ಯಕ್ಷಗಾನ ಸೇರಿದಂತೆ ವಿವಿಧ



ಜಾನಪದ ಕಲೆಗಳ ಫೋಟೋಗಳು, ಕ್ಯಾಸೆಟ್‌ಗಳು, ವೀಡಿಯೋಗಳು ಮತ್ತು ಸ್ಲೈಡ್‌ಗಳ ರೂಪದಲ್ಲಿರುವ ದಾಖಲಾತಿಗಳನ್ನು ಡಿಜಿಟಲೀಕರಣಗೊಳಿಸಿ ಸಾರ್ವಜನಿಕ ಮುಕ್ತ ವೀಕ್ಷಣೆಗೆ ಅವಕಾಶ ಕಲ್ಪಿಸುವುದು ನಮ್ಮ ಉದ್ದೇಶ ಎಂದು ಅವರು ತಿಳಿಸಿದರು.

ಇದೇ ವೇಳೆ ಅಕಾಡೆಮಿ ಪ್ರಕಟಿಸಿದ 'ಶೇಣಿ ಭಾರತ' ಸೇರಿದಂತೆ ಎರಡು ಪುಸ್ತಕಗಳನ್ನು ಅವರು ಬಿಡುಗಡೆಗೊಳಿಸಿದರು.

ಯಕ್ಷಗಾನ ಉಳಿಸುವ ಕೆಲಸವಾಗಲಿ

ಕಾರ್ಯಕ್ರಮ ಉದ್ಘಾಟಿಸಿದ ಅಂಬಲಪಾಡಿ ದೇವಸ್ಥಾನದ ಧರ್ಮದರ್ಶಿ ಡಾ. ನಿ.ಬೀ. ವಿಜಯ ಬಲ್ಲಾಳ್ ಅವರು ಸಾಕ್ಷ್ಯಚಿತ್ರ ಬಿಡುಗಡೆಗೊಳಿಸಿದರು. ಕಟೀಲು ಕ್ಷೇತ್ರದ ಹರಿನಾರಾಯಣದಾಸ ಅಸ್ರಣ್ಣ ಮಾತನಾಡಿ, ಇಂದಿನ ಹೊಸ ಕಲ್ಪನೆಗಳು ಯಕ್ಷಗಾನಕ್ಕೆ ಮಾರಕವಾಗುತ್ತಿವೆ. ಆರ್‌ಆರ್‌ಸಿಯಲ್ಲಿರುವ ಅರ್ಧ ಶತಮಾನದ ಹಿಂದಿನ ದಾಖಲೆಗಳನ್ನು ವೀಕ್ಷಿಸುವ ಮೂಲಕ ಜನಸಾಮಾನ್ಯರು ಕಲೆಯ ನೈಜತೆಯ ಬಗ್ಗೆ ಜಾಗೃತರಾಗಬೇಕು ಎಂದು ಕಿವಿಮಾತು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಡಾ. ಬಿ.ಎಸ್. ಮಂಜುನಾಥ ಸ್ವಾಮಿ ಅವರು ಪ್ರಶಸ್ತಿ ಪುರಸ್ಕೃತರ ಕಿರು ಪರಿಚಯದ ಪುಸ್ತಕ ಬಿಡುಗಡೆಗೊಳಿಸಿದರು.

ಗೋವಿಂದ ಭಟ್ ಸಂಸ್ಮರಣೆ

ಕಾರ್ಯಕ್ರಮದಲ್ಲಿ ಇತ್ತೀಚೆಗೆ ನಿಧನರಾದ ಕೆ. ಗೋವಿಂದ ಭಟ್ ಸೇರಿದಂತೆ ಗಣ್ಯ ಕಲಾವಿದರ ಸಂಸ್ಮರಣೆ ಮಾಡಲಾಯಿತು. ಅಕಾಡೆಮಿ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪೂರ್ಣಿಮಾ, ಗೋಪಾಲ್ ಸಿ. ಬಂಗೇರ ಉಪಸ್ಥಿತರಿದ್ದರು. ರಿಜಿಸ್ಟ್ರಾರ್ ನಮ್ರತ ಎನ್. ಸ್ವಾಗತಿಸಿ, ರಾಘವ ಎಚ್. ನಿರೂಪಿಸಿದರು.

ಸಾಧಕರಿಗೆ ಪ್ರಶಸ್ತಿಯ ಗೌರವ

ಕರ್ನಾಟಕ ಯಕ್ಷಗಾನ ಅಕಾಡೆಮಿಯ 2025ನೇ ಸಾಲಿನ ಪ್ರತಿಷ್ಠಿತ ಪಾರ್ತಿಸುಬ್ಬ ಪ್ರಶಸ್ತಿಯನ್ನು ಹಿರಿಯ ಸಂಶೋಧಕ ಹಾಗೂ ವಿದ್ವಾಂಸ ಡಾ. ಕೆ.ಎಂ. ರಾಘವ ನಂಬಿಯಾರ್ ಅವರಿಗೆ ಒಂದು ಲಕ್ಷ ರೂ. ಗೌರವ ಧನದೊಂದಿಗೆ ಪ್ರದಾನ ಮಾಡಲಾಯಿತು. ಇದೇ ಸಂದರ್ಭದಲ್ಲಿ ತಲಾ 50,000 ರೂ. ನಗದು ಒಳಗೊಂಡ ಗೌರವ ಪ್ರಶಸ್ತಿಯನ್ನು ರೆಂಜಾಳ ರಾಮಕೃಷ್ಣ ರಾವ್, ವಿಷ್ಣು ಮಂಜಪ್ಪ ಆಚಾರಿ, ಡಿ. ಮನೋಹರ್ ಕುಮಾರ್, ಮುರಲಿ ಕಡೆಕಾರ್ ಹಾಗೂ ರಮೇಶ್ ಅವರಿಗೆ ನೀಡಿ ಗೌರವಿಸಲಾಯಿತು. ಅಲ್ಲದೆ, ಹತ್ತು ಮಂದಿ ಸಾಧಕ ಕಲಾವಿದರಿಗೆ ಯಕ್ಷಸಿರಿ ಪ್ರಶಸ್ತಿ, ದೇವದಾಸ ರಾವ್ ಕೂಡ್ಲಿ ಅವರಿಗೆ ದತ್ತಿನಿಧಿ ಪ್ರಶಸ್ತಿ ಹಾಗೂ ಮೂವರು ಲೇಖಕರಿಗೆ 2024ನೇ ಸಾಲಿನ ಪುಸ್ತಕ ಬಹುಮಾನವನ್ನು ನೀಡಿ ಸನ್ಮಾನಿಸಲಾಯಿತು.

ಕುಂದಾಪುರ: ಬಾಲಕಿಯರ ನಿಲಯಗಳ ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆ



ಕುಂದಾಪುರ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕುಂದಾಪುರ ವತಿಯಿಂದ ಶ್ರೀ ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿವಿಧ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿನಿಯರು ಹಾಗೂ ಸಿಬಂದಿಗೆ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಯು ರವಿವಾರ ಕುಂದಾಪುರದ ಗಾಂಧಿ ಮೈದಾನದಲ್ಲಿ ನಡೆಯಿತು.

ಬಾಲಕಿಯರ ನಿಲಯ ಕುಂದಾಪುರ ಮೂಲ, ಹಂಗಳೂರು, ಬೈಂದೂರು, ಕೆದೂರು ನಿಲಯಗಳ ವಾರ್ಷಿಕೋತ್ಸವದ ಅಂಗವಾಗಿ ಈ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಪುರಸಭೆಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಪ್ರಭಾಕರ್ ವಿ. ಉದ್ಘಾಟಿಸಿ, ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಎಲ್ಲರೂ ಕೂಡ ಸ್ಪರ್ಧಾತ್ಮಕ ಮನೋಭಾವದಿಂದ ಭಾಗವಹಿಸಿ ಎಂದ ಅವರು, ಈ ಹಾಸ್ಟೆಲ್‌ಗಳ ಪರಿಸರ, ಇಲ್ಲಿನ ಕೈ ತೋಟ ರಚನೆ ಉತ್ತಮವಾಗಿದೆ. ಮಕ್ಕಳ ಆಸಕ್ತಿ, ವಾರ್ಡನ್‌ಗಳ ಮಾರ್ಗದರ್ಶನ ಶ್ಲಾಘನೀಯ ಎಂದವರು ಮೆಚ್ಚುಗೆ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಕುಂದಾಪುರ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಕಲ್ಯಾಣಾಧಿಕಾರಿ ಆಶಾದೇವಿ ನಾಯಕ್ ಮಾತನಾಡಿ, ಕ್ರೀಡೆ ಅಥವಾ ಯಾವುದೇ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಸೋಲು- ಗೆಲುವು ಸಾಮಾನ್ಯ. ಒಳ್ಳೆಯ ರೀತಿಯಲ್ಲಿ ಎಲ್ಲರೂ ಭಾಗವಹಿಸಿ, ಸೋಲು- ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಎಂದವರು ಕರೆ ನೀಡಿದರು.

ಮುಖ್ಯ ಅತಿಥಿ ಹೇರಂಜಾಲು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲೆ ಕಮಲಾ ವಿದ್ಯಾರ್ಥಿನಿಯರಿಗೆ ಶುಭಕೋರಿದರು.

ಹಂಗಳೂರು ಹಾಸ್ಟೆಲ್ ವಿದ್ಯಾರ್ಥಿನಿ ನಿಸರ್ಗ ಸ್ವಾಗತಿಸಿದರು. ಮೆಟ್ರಿಕ್ ನಂತರದ ಕುಂದಾಪುರ ಮೂಲ ಹಾಸ್ಟೆಲ್‌ನ ವಿದ್ಯಾರ್ಥಿನಿಯರಾದ ಅನುಷಾ ನಿರೂಪಿಸಿ, ರಕ್ಷಾ ವಂದಿಸಿದರು.

ವಿವೇಕಾನಂದ ಪಾಲಿಟೆಕ್ನಿಕ್‌ನಲ್ಲಿ ಮೂರು ಹೊಸ ಕೋರ್ಸ್‌ಗಳ ಆರಂಭ



ಪುತ್ತೂರು: ಪುತ್ತೂರಿನ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಯಾಗಿ ಗುರುತಿಸಿಕೊಂಡಿರುವ ವಿವೇಕಾನಂದ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2026-27ನೇ ಶೈಕ್ಷಣಿಕ ವರ್ಷದಿಂದ ಆಧುನಿಕ ವಿದ್ಯಮಾನದಲ್ಲಿ ಬಹುಬೇಡಿಕೆಯ ಮೂರು ಹೊಸ ಕೋರ್ಸ್‌ಗಳನ್ನು ಪರಿಚಯಿಸಲಾಗುತ್ತಿದೆ ಎಂದು ಸಂಸ್ಥೆಯ ಆಡಳಿತ ಸಮಿತಿ ಅಧ್ಯಕ್ಷ ವಿಶ್ವೇಶ್ವರ ಭಟ್ ಬಂಗಾರಡ್ಕ ತಿಳಿಸಿದ್ದಾರೆ.

ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ 4 ದಶಕಗಳಿಂದ ಕಾರ್ಯಾಚರಿಸುತ್ತಿರುವ ವಿವೇಕಾನಂದ ಪಾಲಿಟೆಕ್ನಿಕ್ ಸಂಸ್ಥೆಯು ತಾಂತ್ರಿಕ ಶಿಕ್ಷಣದಲ್ಲಿ ರಾಜ್ಯದ ಅತ್ಯುತ್ತಮ ಶಿಕ್ಷಣ ಸಂಸ್ಥೆ ಎಂದು ಗುರುತಿಸಿಕೊಂಡಿರುವ ಜತೆಗೆ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಉದ್ಯೋಗವೂ ಖಚಿತ ಎಂಬ ಹೆಗ್ಗಳಿಕೆಯನ್ನು ಪಡೆದುಕೊಂಡಿದೆ. ಸಂಸ್ಥೆಯು ಉತ್ತಮ ಶಿಕ್ಷಕ ವೃಂದ, ಕಲಿಕಾ ವಾತಾವರಣವನ್ನೂ ಹೊಂದಿದೆ.

ಸಂಸ್ಥೆಯಲ್ಲಿ ಈಗಾಗಲೇ ಸಿವಿಲ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಶನ್ ಇಂಜಿನಿಯರಿಂಗ್, ಆಟೋಮೊಬೈಲ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ಸೇರಿ 5 ಕೋರ್ಸ್‌ಗಳಿದ್ದು ಪ್ರಸ್ತುತ ಸಾಲಿನಿಂದ ಆಟೋಮೊಬೈಲ್ ಅಂಡ್ ರೊಬೊಟಿಕ್ಸ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಂಡ್ ಮೆಶಿನ್ ಲರ್ನಿಂಗ್, ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಅಂಡ್ ಇಲೆಕ್ಟ್ರಿಕಲ್ ವೆಹಿಕಲ್ ಟೆಕ್ನೋಲಜಿ ಎಂಬ ಹೊಸ ಕೋರ್ಸ್‌ಗಳು ಸೇರ್ಪಡೆಗೊಂಡಿದೆ. ಹೊಸ ಕೋರ್ಸ್‌ಗಳ ಆರಂಭಕ್ಕೆ ಸಂಬಂಧಿಸಿ ತಾಂತ್ರಿಕ ಪರೀಕ್ಷಾ ಮಂಡಳಿ ಬೆಂಗಳೂರು ಹಾಗೂ ಹೊಸದಿಲ್ಲಿಯ ಎಐಸಿಟಿಇನಿಂದ ಅನುಮತಿ ದೊರಕಿದ್ದು ಮೂರು ಕೋರ್ಸ್‌ಗಳಲ್ಲಿ ತಲಾ 30 ಸೀಟುಗಳು ಲಭ್ಯವಿವೆ ಎಂದು ವಿವರಿಸಿದರು.

ಸಂಸ್ಥೆಯ ಸಂಚಾಲಕ ಮಹಾದೇವ ಶಾಸ್ತ್ರಿ ಸಿ., ಪ್ರಾಂಶುಪಾಲ ಮುರಳೀಧರ್ ಎಸ್., ಆಡಳಿತ ಸಮಿತಿ ಸದಸ್ಯರಾದ ರವಿ ಮುಂಗ್ಲಿಮನೆ, ಈಶ್ವರಚಂದ್ರ, ಪ್ರಾಧ್ಯಾಪಕರಾದ ಪುಷ್ಪ ರವಿರಾಮ ಸಿದ್ಧಮೂಲೆ, ಪ್ರಶಾಂತ್ ಉಪಸ್ಥಿತರಿದ್ದರು.

'ಪ್ರಕೃತಿಯ ಮೂಲಕ ಆರೋಗ್ಯ ಮತ್ತು ಚಿಕಿತ್ಸೆ' ಕುರಿತು ಉಪನ್ಯಾಸ



ಕುಂದಾಪುರ: ಕುಂದಾಪುರ ಕೋಟೇಶ್ವರದ ಶ್ರೀ ಕಾಳಾವರ ವರದರಾಜ ಎಂ. ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಆಂತರಿಕ ಗುಣಮಟ್ಟ ಭರವಸಾ ಕೋಶ ಮತ್ತು ಮಹಿಳಾ ವೇದಿಕೆಯ ಜಂಟಿ ಆಶ್ರಯದಲ್ಲಿ ಪ್ರಕೃತಿಯ ಮೂಲಕ ಆರೋಗ್ಯ ಮತ್ತು ಚಿಕಿತ್ಸೆ ಎಂಬ ವಿಷಯದ ಕುರಿತಂತೆ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿದ್ದ ಕುಂದಾಪುರ ಆಯುರ್ವೇದ ಕಾಲೇಜಿನ ಪ್ರಾಧ್ಯಾಪಕಿ ಡಾ. ನಿಶಾ ಕುಮಾರಿ ಉತ್ತಮ ಆರೋಗ್ಯಕ್ಕಾಗಿ ಪ್ರಕೃತಿಯ ಕೊಡುಗೆಗಳನ್ನು ವಿವರಿಸಿದರು. ಆಧುನಿಕ ಜೀವನ ಶೈಲಿಯಿಂದ ಆರೋಗ್ಯದ ಮೇಲಾಗುತ್ತಿರುವ ಪರಿಣಾಮಗಳ ಕುರಿತಾಗಿ ಉಪನ್ಯಾಸ ನೀಡಿದರು. ಅಧ್ಯಕ್ಷತೆಯನ್ನು ಪ್ರಾಂಶುಪಾಲ ರಾಮರಾಯ ಆಚಾರ್ಯ ವಹಿಸಿದ್ದರು. ಕಾಲೇಜಿನ ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ನಾಗರಾಜ ವೈದ್ಯ ಎಂ., ಆಂತರಿಕ ಗುಣಮಟ್ಟ ಭರವಸಾ ಕೋಶದ ಸಂಚಾಲಕ ನಾಗರಾಜ ಯು., ಮಹಿಳಾ ವೇದಿಕೆಯ ಸಂಚಾಲಕಿ ರೋಹಿಣಿ ಉಪಸ್ಥಿತರಿದ್ದರು. ಪ್ರಥಮ ಬಿಎ ವಿದ್ಯಾರ್ಥಿನಿ ನಿಸರ್ಗ ಕಾರ್ಯಕ್ರಮ ನಿರ್ವಹಿಸಿದರು. ಅಂತಿಮ ಬಿ.ಎ. ಕೃತಿಕಾ ವಂದಿಸಿದರು.

ಕುಂದಾಪುರ ಎಂಐಟಿಯಲ್ಲಿ ವಿಶ್ವ ಭೂ ದಿನ: ಸುಸ್ಥಿರ ಕ್ಯಾಂಪಸ್ ಅಭಿಯಾನ



ಕುಂದಾಪುರ: ಎಂಐಟಿ ಕುಂದಾಪುರ ಇದರ ವತಿಯಿಂದ ರಿಸರ್ಚ್ ಹೈಟ್ಸ್ ಫೌಂಡೇಶನ್ ಆಶ್ರಯದಲ್ಲಿ ಹಾಗೂ ಎನ್ವಿರಾನ್ಮೆಂಟ್ ಪ್ರೊಟೆಕ್ಷನ್ ಟ್ರೈನಿಂಗ್ ಅಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸಹಯೋಗದಲ್ಲಿ ವಿಶ್ವ ಭೂ ದಿನದ ಅಂಗವಾಗಿ 'ಭಾರತ ಎನ್ವಿರಾನ್‌ಮೆಂಟ್ ಪ್ರೋಗ್ರಾಂ – ಭಾರತ ಸಸ್ಟೇನಬಲ್ ಕ್ಯಾಂಪಸ್ ಮಿಷನ್ 2026' ಅಭಿಯಾನ ಕಾರ್ಯಕ್ರಮ ಎಂಐಟಿ ಆವರಣದಲ್ಲಿ ಬುಧವಾರ ಜರಗಿತು.

ಕ್ಯಾಂಪಸ್‌ನಲ್ಲಿ ಸುಸ್ಥಿರ ಜೀವನಶೈಲಿ ಮತ್ತು ಪರಿಸರ ಜಾಗೃತಿಯನ್ನು ಉತ್ತೇಜಿಸುವ ಉದ್ದೇಶದಿಂದ ಮತ್ತು ಭಾರತ ಸರ್ಕಾರದ 'ವಿಕಸಿತ ಭಾರತ'ದ ದೃಷ್ಟಿಕೋನ ಹಾಗೂ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಪೂರಕವಾಗಿ ಆಯೋಜಿಸಲಾಗಿದ್ದ ಈ ಅಭಿಯಾನದಲ್ಲಿ ತ್ಯಾಜ್ಯ ನಿರ್ವಹಣೆ, ಹಸಿರು ಅಭ್ಯಾಸಗಳ ಅಳವಡಿಕೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು.

ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸಲು ಮತ್ತು ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳು ಉತ್ಸಾಹದಿಂದ ಪ್ರತಿಜ್ಞೆ ಮಾಡಿದರು.

ಕಾಲೇಜಿನ ಪ್ರಾಂಶುಪಾಲರು, ವಿವಿಧ ವಿಭಾಗಗಳ ಮುಖ್ಯಸ್ಥರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಮಕ್ಕಳಿಗೆ ಧಾರ್ಮಿಕ ಸಂಸ್ಕಾರಗಳನ್ನು ನೀಡಬೇಕಾದುದು ಅಗತ್ಯ: ಶೃಂಗೇರಿ ಶ್ರೀ



ಕುಂದಾಪುರ: ಧಾರ್ಮಿಕ ಸಂಸ್ಕಾರಗಳನ್ನು ಮಕ್ಕಳಿಗೆ ನೀಡಬೇಕಾದುದು ಅತ್ಯಂತ ಆವಶ್ಯಕ. ಗ್ರಂಥಗಳಲ್ಲಿರುವ ವಿಚಾರಗಳನ್ನು ಸರಿಯಾಗಿ ತಿಳಿದುಕೊಂಡಾಗ ಉತ್ತಮ ಸಂಸ್ಕಾರ ಮನುಷ್ಯನಲ್ಲಿ ಉಂಟಾಗುತ್ತದೆ ಎಂದು ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠಾಧೀಶ್ವರ ಶ್ರೀ ವಿಧುಶೇಖರ ಭಾರತೀ ಮಹಾ ಸ್ವಾಮೀಜಿ ಹೇಳಿದರು.

ಆನೆಗುಡ್ಡೆ ಕುಂಭಾಶಿಯ ಶ್ರೀ ಶೃಂಗೇರಿ ಶಂಕರ ಮಠ, ನಾಗಾಚಲ ಶ್ರೀ ಅಯ್ಯಪ್ಪ ಸ್ವಾಮಿ ಮತ್ತು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ಅಯ್ಯಪ್ಪ ಸ್ವಾಮಿ ದೇವರಿಗೆ ಕೃಷ್ಣಮೂರ್ತಿ ಮಂಜರು ಮಾರಣಕಟ್ಟೆ ಕೊಡುಗೆಯಾಗಿ ನೀಡಿದ ನೂತನ ರಥ ಸಮರ್ಪಣೆ, ಗುರುವಂದನೆ ಮತ್ತು ಬಡಾಕೆರೆ ಶ್ರೀ ಶಾರದಾ ಸದ್ವಿದ್ಯಾ ವಸಂತ ವೇದ ಸಮಾರೋಪ ಸಮಾರಂಭದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವಚನ ನೀಡಿದರು.

ಧಾರ್ಮಿಕತೆ ಮತ್ತು ಧಾರ್ಮಿಕ ಸನಾತನ ಧರ್ಮ ನೀಡುವ ಸಂಸ್ಕಾರವನ್ನು ಸರಿಯಾಗಿ ಉಪಯೋಗಿಸಿಕೊಂಡರೆ ಇಡೀ ಪ್ರಪಂಚದಲ್ಲಿ ಎಲ್ಲರಿಗಿಂತಲೂ ಅತ್ಯಂತ ಶ್ರೇಷ್ಠವಾದ ಸ್ಥಾನದಲ್ಲಿ ನಾವಿದ್ದು ಇಡೀ ಪ್ರಪಂಚವು ನಮ್ಮನ್ನು ಗೌರವಿಸುವ ಸ್ಥಾನದವರೆಗೆ ನಾವು ಹೋಗಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ನೂತನ ರಥ ಸಮರ್ಪಣೆಯ ಸೇವಾಕರ್ತ ದಾನಿ ಹೈದರಾಬಾದ್ ಉದ್ಯಮಿ ಮಾರಣಕಟ್ಟೆ ಕೃಷ್ಣಮೂರ್ತಿ ಮಂಜರು ಹಾಗೂ ಶಾಂತಿ ದಂಪತಿ, ಶೃಂಗೇರಿ ಶ್ರೀ ಶಾರದಾ ಪೀಠದ ಪ್ರಾಂತೀಯ ಧರ್ಮಾಧಿಕಾರಿ ಬಡಾಕೆರೆ ಲೋಕೇಶ ಅಡಿಗ, ಶ್ರೀ ಶೃಂಗೇರಿ ಶಂಕರ ಮಠದ ಪ್ರಮುಖರಾದ ಲಕ್ಷ್ಮೀಶ ಅಡಿಗ ಬಡಾಕೆರೆ, ಕೋಟೇಶ್ವರದ ರಥ ಶಿಲ್ಪಿ ರಾಜಗೋಪಾಲ ಆಚಾರ್ಯ ಮತ್ತಿತರರು ಉಪಸ್ಥಿತರಿದ್ದರು.

ಬಡಾಕೆರೆ ಲೋಕೇಶ ಅಡಿಗ ಸ್ವಾಗತಿಸಿದರು. ದಾಮೋದರ ಶರ್ಮಾ ಕಾರ್ಯಕ್ರಮ ನಿರೂಪಿಸಿದರು.



ಅನಾರೋಗ್ಯ ಪೀಡಿತ ಎಲೆಕ್ಟ್ರಿಷಿಯನ್ ಆಗಿದ್ದ ಅಶೋಕ್ ಸಿಂಗಣಿ ಅವರಿಗೆ ವಿಶ್ವ ಹಿಂದೂ ಪರಿಷದ್ ಬಜರಂಗದಳ ಪುತ್ತೂರು ಇದರ ಸೇವಾ ಪ್ರಕಲ್ಪ 'ವಜ್ರ ತೇಜಸ್' ಹಿಂದೂ ಕವಚ್ ವಾಟ್ ಆಪ್ ಗ್ರೂಪ್‌ನಲ್ಲಿ ಸಂಗ್ರಹವಾದ ಮೊತ್ತದಲ್ಲಿ ಸಹಾಯಧನ ನೀಡಲಾಯಿತು. ಈ ಸಂದರ್ಭ ವಜ್ರ ತೇಜಸ್ ಹಿಂದೂ ಕವಚ್ ಅಧ್ಯಕ್ಷ ಮುರಲೀಕೃಷ್ಣ ಹಸಂತಡ್ಕ ಮತ್ತಿತರರು ಉಪಸ್ಥಿತರಿದ್ದರು.



ಕುಂದಾಪುರದ ಮೂಡ್ಲಕಟ್ಟೆ ಎಂ.ಐ.ಟಿ ಕುಂದಾಪುರದ ಸಾವಿಷ್ಕರ್ -2026 ಕಾರ್ಯಕ್ರಮದಲ್ಲಿ ಸಂಗೀತ ನಿರ್ದೇಶಕ ರವಿ ಬಸ್ರೂರು ಅವರನ್ನು ಸನ್ಮಾನಿಸಲಾಯಿತು. ಐಎಂಜೆ ವಿದ್ಯಾಸಂಸ್ಥೆಗಳ ಚೇರ್ಮನ್ ಸಿದ್ದಾರ್ಥ ಜೆ ಶೆಟ್ಟಿ, ಶೈಕ್ಷಣಿಕ ನಿರ್ದೇಶಕ ಡಾ.ಎಸ್.ಎನ್. ಭಟ್, ಎಂಐಟಿ ಪ್ರಾಂಶುಪಾಲ ಡಾ. ರಾಮಕೃಷ್ಣ ಹೆಗಡೆ ಉಪಸ್ಥಿತರಿದ್ದರು.

ಸಂಪ್ಯ ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದಲ್ಲಿ 50ನೇ 'ಉಚಿತ ವೈದ್ಯಕೀಯ ಶಿಬಿರ' | ರೋಗಿಗಳ ಅವಶ್ಯಕತೆಗನುಗುಣವಾಗಿ ಉಚಿತ ಔಷಧಗಳ ವಿತರಣೆ

ಶಿಬಿರದಲ್ಲಿ 31 ಮಂದಿ ನುರಿತ ವೈದ್ಯರ ತಂಡದಿಂದ 15 ಪ್ರತ್ಯೇಕ ವಿಭಾಗಗಳಲ್ಲಿ ತಪಾಸಣೆ

ಪುತ್ತೂರು: ಭಕ್ತರಿಗೆ ದೇವರ ದರ್ಶನ ಸೇವೆಯ ಜೊತೆಗೆ ವೈದ್ಯಕೀಯ ಚಿಕಿತ್ಸೆ ನೀಡುವ ವಿನೂತನ ಚಿಂತನೆಯೊಂದಿಗೆ ಸಂಪ್ಯ ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದಲ್ಲಿ ಕಳೆದ 49 ತಿಂಗಳುಗಳಿಂದ ನಿರಂತರವಾಗಿ ಪ್ರತಿ ತಿಂಗಳು ನಡೆಯುತ್ತಾ ಬಂದಿರುವ 'ಉಚಿತ ವೈದ್ಯಕೀಯ ಶಿಬಿರ'ದ 50ನೇ ಶಿಬಿರ ವಿಶೇಷತೆಗಳೊಂದಿಗೆ ನಡೆಯಿತು.

ಶಿಬಿರದಲ್ಲಿ 31 ಮಂದಿ ನುರಿತ ವೈದ್ಯರ ತಂಡ, 15 ಪ್ರತ್ಯೇಕ ವಿಭಾಗಗಳಲ್ಲಿ ತಪಾಸಣೆ ನಡೆಸುವ ಮೂಲಕ ಒಂದೇ ಸೂರಿನಡಿಯಲ್ಲಿ ಎಲ್ಲಾ ರೀತಿಯ ವೈದ್ಯಕೀಯ ಸೇವೆ ನೀಡಲಾಯಿತು.

ಸಂಪ್ಯ ಆರೋಗ್ಯ ರಕ್ಷಾ ಸಮಿತಿ, ಸಂಪ್ಯ ರಾಮನಗರ ನವಚೇತನಾ ಯುವಕ ಮಂಡಲ, ಮುಕ್ರಂಪಾಡಿ ಶ್ರೀ ಸತ್ಯನಾರಾಯಣ ಪೂಜಾ ಸಮಿತಿ, ಪುತ್ತೂರು



ಐಕ್ಯ ಕಲಾ ಸೇವಾ ಟ್ರಸ್ಟ್ ಸಹಕಾರದೊಂದಿಗೆ ನಡೆದ 50ನೇ ಶಿಬಿರವು ಧನ್ವಂತರಿ ಹವನದೊಂದಿಗೆ ಪ್ರಾರಂಭಗೊಂಡಿತು. ಶಿಬಿರಾರ್ಥಿಗಳ ನೋಂದಣಿ, ನಂತರ ಶಿಬಿರದ ಉದ್ಘಾಟನೆಗೊಂಡು ವೈದ್ಯರಿಂದ ತಪಾಸಣೆ, ಚಿಕಿತ್ಸೆ ನಡೆಯಿತು. ವೈದ್ಯಕೀಯ ವಿಭಾಗದಲ್ಲಿ ಡಾ. ಸುರೇಶ್ ಪುತ್ತೂರಾಯ, ಡಾ.ಜೆ.ಸಿ. ಅಡಿಗ, ಡಾ.ಎಂ.ಎಲ್. ಭಟ್, ಡಾ. ಚೇತನ್ ಸುಬ್ರಹ್ಮಣ್ಯ, ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ಡಾ. ಯಶವಂತ್, ಡಾ. ರವಿಪ್ರಕಾಶ್, ಇಎನ್‌ಟಿ ವಿಭಾಗದಲ್ಲಿ ಡಾ. ಅರ್ಚನಾ, ಡಾ. ಈಶ್ವರ ಪ್ರಕಾಶ್, ಡಾ. ಹರೀಶ್ ಮಡಿವಾಳ್, ಕಣ್ಣಿನ ವಿಭಾಗದಲ್ಲಿ ರೋಟರಿ ಆಸ್ಪತ್ರೆಯ ವೈದ್ಯ ಡಾ. ವಿಷ್ಣು ಪೂಜಾ, ಡಾ. ಆಶಾ ಪುತ್ತೂರಾಯ, ಹೃದ್ರೋಗ ವಿಭಾಗದಲ್ಲಿ ಕೆಎಂಸಿ ಆಸ್ಪತ್ರೆಯ ತಜ್ಞ ವೈದ್ಯರ ತಂಡ, ನರರೋಗ ವಿಭಾಗದಲ್ಲಿ ಕೆಎಂಸಿ ಆಸ್ಪತ್ರೆಯ ತಜ್ಞ ವೈದ್ಯರ ತಂಡ, ಮಕ್ಕಳ ಚಿಕಿತ್ಸಾ ವಿಭಾಗದಲ್ಲಿ ಡಾ.ಎಂ.ಎಸ್. ಶೆಣೈ, ಡಾ. ಅರ್ಚನಾ ಕರಿಕ್ಕಳ, ಸ್ತ್ರೀರೋಗ ವಿಭಾಗದಲ್ಲಿ ಡಾ. ರಾಜೇಶ್ವರಿ ಪಡಿವಾಳ್, ಡಾ. ಅರ್ಚನಾ ಕಾವೇರಿ, ಎಲುಬು ಮತ್ತು ಕೀಲು ವಿಭಾಗದಲ್ಲಿ ಡಾ. ಸಚಿನ್‌ಶಂಕರ್ ಹಾರಕೆರೆ, ಡಾ. ಅಜಿತ್, ಡಾ.ನಾಗಶ್ರೀ ಹಾರಕೆರೆ, ಚರ್ಮರೋಗ ವಿಭಾಗದಲ್ಲಿ ಡಾ. ಬದರಿನಾಥ್, ದಂತ ಚಿಕಿತ್ಸಾ ವಿಭಾಗದಲ್ಲಿ ಡಾ. ಕೃಷ್ಣಪ್ರಸಾದ್, ಡಾ. ಕೃತಿಕಾ, ಹೋಮಿಯೋಪತಿ ವಿಭಾಗದಲ್ಲಿ ಡಾ. ರಮೇಶ್ ಭಟ್, ಶ್ವಾಸಕೋಶ ಚಿಕಿತ್ಸಾ ವಿಭಾಗದಲ್ಲಿ ಡಾ. ಪ್ರೀತಿ ರಾಜ್ ಬಲ್ಲಾಳ್, ಮನೋರೋಗ ವಿಭಾಗದಲ್ಲಿ ಡಾ. ಗಣೇಶ್ ಪ್ರಸಾದ್ ಮುದ್ರಾಜೆ, ಆಯುರ್ವೇದ ವಿಭಾಗದಲ್ಲಿ ಡಾ. ರವಿಶಂಕರ ಪೆರುವಾಜೆ, ಡಾ. ಸಾಯಿ ಪ್ರಕಾಶ್, ಡಾ. ಶಶಿಧರ್ ಕಜೆ, ಡಾ. ರವಿನಾರಾಯಣ ಹಾಗೂ ಡಾ. ಕುಲಕರ್ಣಿ ತಪಾಸಣೆ ನಡೆಸಿದರು. ಜೊತೆಗೆ ರಕ್ತ ಪರೀಕ್ಷೆ, ಥೈರಾಯಿಡ್ ಟೆಸ್ಟ್, ಇಸಿಜಿ, ಮಧುಮೇಹ ರಕ್ತಪರೀಕ್ಷೆಗಳನ್ನು ನಡೆಸಿ ಉಚಿತ ಔಷಧಿಗಳನ್ನು ವಿತರಿಸಲಾಯಿತು.

ಬಂಟ್ವಾಳ ತಾಲೂಕು ಜನಜಾಗೃತಿ ವೇದಿಕೆ ಅಧ್ಯಕ್ಷ ರಾಜಾರಾಮ ಶೆಟ್ಟಿ ಕೋಲ್ಪೆಗುತ್ತು ವೈದ್ಯಕೀಯ ಶಿಬಿರ ಉದ್ಘಾಟಿಸಿ ಶುಭ ಕೋರಿದರು. ವೈದ್ಯಕೀಯ ಶಿಬಿರದ ಕೌಂಟರ್‌ನ್ನು ಪುತ್ತೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಮಾಜಿ ಅಧ್ಯಕ್ಷ ವಾಮನ್ ಪೈ ಉದ್ಘಾಟಿಸಿದರು. ಡಾ. ಗಣೇಶ್ ಪ್ರಸಾದ್ ಮುದ್ರಾಜೆ ಶುಭ ಹಾರೈಸಿದರು. ಡಾ. ಸುರೇಶ್ ಪುತ್ತೂರಾಯ ಅಧ್ಯಕ್ಷತೆ ವಹಿಸಿದ್ದರು. ಆರೋಗ್ಯ ರಕ್ಷಾ ಸಮಿತಿ ಗೌರವ ಸಲಹೆಗಾರ ಅರುಣ್ ಕುಮಾರ್ ಪುತ್ತಿಲ, ಸಂಪ್ಯ ನವಚೇತನ ಯುವಕ ಮಂಡಲದ ಅಧ್ಯಕ್ಷ ಜಯಂತ್ ಶೆಟ್ಟಿ ಕಂಬಳತ್ತಡ್ಡ, ಮುಕ್ರಂಪಾಡಿ ಶ್ರೀ ಸತ್ಯನಾರಾಯಣ ಪೂಜಾ ಸಮಿತಿ ಸದಸ್ಯ ಸಂತೋಷ್ ಕುಮಾರ್ ಕೆ. ಮುಕ್ರಂಪಾಡಿ ಹಾಗೂ ಐಕ್ಯಕಲಾ ಸೇವಾ ಟ್ರಸ್ಟ್‌ನ ಮಾಜಿ ಅಧ್ಯಕ್ಷ ಚೇತನ್ ಮೊಟ್ಟೆತ್ತಡ್ಕ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಬೆಳಗ್ಗೆ ಡಾ. ಗಣೇಶ್‌ಪ್ರಸಾದ್ ಮುದ್ರಾಜೆ ಅವರಿಂದ ಮಾದಕ ವ್ಯಸನ-ದುಷ್ಪರಿಣಾಮ ಹಾಗೂ ಡಾ. ಪ್ರೀತಿ ರಾಜ್ ಬಲ್ಲಾಳ್ ಅವರಿಂದ ಪ್ರಥಮ ಚಿಕಿತ್ಸೆಯ ಪ್ರಾತ್ಯಕ್ಷಿಕೆ ನಡೆಯಿತು. ಆರೋಗ್ಯ ರಕ್ಷಾ ಸಮಿತಿ ಅಧ್ಯಕ್ಷ ಉದಯ್ ಕುಮಾರ್ ರೈ ಸ್ವಾಗತಿಸಿ, ಜೊತೆ ಕಾರ್ಯದರ್ಶಿ ಉಮೇಶ್ ಎಸ್. ಕೆ. ಸಂಪ್ಯ ವಂದಿಸಿದರು. ಗೌರವ ಸದಸ್ಯೆ ಹರಿಣಿ ಪುತ್ತೂರಾಯ ಕಾರ್ಯಕ್ರಮ ನಿರ್ವಹಿಸಿದರು.

ಸುತ್ತಮುತ್ತ

ಇಂದು ಸುಳ್ಯದಲ್ಲಿ ವಿದ್ಯುತ್ ವ್ಯತ್ಯಯ

ಸುಳ್ಯ: ಸುಳ್ಯ ಉಪ ವಿಭಾಗದ ವಿವಿಧ ಭಾಗಗಳಲ್ಲಿ ಇಂದು (ಮೇ 5) ವಿದ್ಯುತ್ ವ್ಯತ್ಯಯವಾಗಲಿದೆ. ಮೆಸ್ಕಾಂ ಸುಳ್ಯ ಉಪವಿಭಾಗ ವ್ಯಾಪ್ತಿಯ 33/11 ಕೆ.ವಿ. ಸುಳ್ಯ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲಾ 11 ಕೆ.ವಿ. ಫೀಡರ್‌ಗಳಲ್ಲಿ ತುರ್ತು ನಿಯತಕಾಲಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ 11 ಕೆ.ವಿ ಸುಳ್ಯ-1 ಕೇರ್ಪಳ, ಸುಳ್ಯ-2 ಶ್ರೀರಾಂ ಪೇಟೆ, ಜಬಳೆ ಡಿಪ್ಪೋ, ಕೊಲ್ಚಾರ್, ತೊಡಿಕಾನ, ಅಜ್ಜಾವರ, ಉಬರಡ್ಕ, ಕಲ್ಲುಗುಂಡಿ, ಮಂಡೆಕೋಲು ಫೀಡರ್‌ಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 6ರ ತನಕ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಮೆಸ್ಕಾಂ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಮೇ 6ರಿಂದ ಶ್ರೀ ಭಗವತಿ ದೇವಾಲಯದ ಪುನರ್ ಪ್ರತಿಷ್ಠಾಪನೆ, ಬ್ರಹ್ಮಕಲಶ

ನಾಪೋಕ್ಲು: ಬಲ್ಲಮಾವಟಿ ಗ್ರಾಮದ ಶ್ರೀ ಭಗವತಿ ದೇವಾಲಯದ ಗರ್ಭಗುಡಿ ಹಾಗೂ ಮುಖ ಮಂಟಪ ಕಾಮಗಾರಿ ಸಂಪೂರ್ಣ ಗೊಂಡಿದ್ದು



ಅಷ್ಟ ಬಂಧ ಬ್ರಹ್ಮಕಲಶೋತ್ಸವ, ದೇವಿಯ ಪುನರ್ ಪ್ರತಿಷ್ಠಾಪನೆ ಹಾಗೂ ವಾರ್ಷಿಕ ಉತ್ಸವ ಮೇ 6 ರಿಂದ 10. ರವರೆಗೆ ನಡೆಯಲಿದೆ.

ತಂತ್ರಿ ದಿವಾಕರ ಭಟ್ಟ ನೇತೃತ್ವದಲ್ಲಿ ಮೇ 6ರಂದು ಸಂಜೆ 5:20ಕ್ಕೆ ಕಾರ್ಯಕ್ರಮ ಆರಂಭಗೊಳ್ಳಲಿದೆ. ಮೇ 7ರಂದು 101 ತೆಂಗಿನಕಾಯಿ ಗಣಪತಿ ಹೋಮ, ಅಷ್ಟ ದಿಕ್ಪಾಲಕ ಹೋಮ, ಚಂಡಿಕಾ ಹೋಮ ನಡೆಯಲಿದೆ. ಮೇ 8ರಂದು ಬೆಳಗ್ಗೆ 6 ಗಂಟೆಗೆ ಗಣಪತಿ ಹೋಮ ಪ್ರತಿಷ್ಠಾ ಹೋಮ ,ದೇವಿಯ ಪ್ರತಿಷ್ಠೆ, ಬ್ರಹ್ಮ ಕಳಸ ಅಭಿಷೇಕ ಮಹಾಪೂಜೆ ನಡೆಯಲಿದೆ. ಮೇ 9ರಂದು ದೇವಿಯ ಅವಭೃತ ಸ್ನಾನ, ನೃತ್ಯ ಬಲಿ ಹಾಗೂ ಮಹಾಪೂಜೆ (ರಾತ್ರಿ ಅನ್ನದಾನ ಇರುತ್ತದೆ) 10ಕ್ಕೆ ದೇವಿಯ ಶುದ್ಧ ಕಳಶ ನಡೆಯಲಿದೆ. ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯ ಭಕ್ತರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಕೊಡಬೇಕಾಗಿ ಭಗವತಿ ದೇವಾಲಯದ ತಕ್ಕ ಮುಖ್ಯಸ್ಥರು ಹಾಗೂ ಆಡಳಿತ ಮಂಡಳಿಯವರು ಕೋರಿದ್ದಾರೆ.

ಎಸ್‌ಡಿಟಿಯು ಆಟೋ ಯೂನಿಯನ್‌ನಿಂದ ಕಾರ್ಮಿಕ ದಿನಾಚರಣೆ

ಪುತ್ತೂರು: ಎಸ್.ಡಿ.ಟಿ.ಯು. ಆಟೋ ಯೂನಿಯನ್ ವತಿಯಿಂದ ಕಾರ್ಮಿಕರ ದಿನಾಚರಣೆಯನ್ನು ನಗರದ ಬೀರಮಲೆಯ ಪ್ರಜ್ಞಾ ಆಶ್ರಮದಲ್ಲಿ ಹಣ್ಣು ಹಂಪಲು ನೀಡುವ ಮೂಲಕ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಆಶ್ರಮದ ಉಸ್ತುವಾರಿಗಳಾದ ಜ್ಯೋತಿ ಹಾಗೂ ಅಣ್ಣಪ್ಪ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಉಪಾಧ್ಯಕ್ಷ ಆಸೀಫ್ ಉಪ್ಪಿನಂಗಡಿ, ಪ್ರಧಾನ ಕಾರ್ಯದರ್ಶಿ ಇಲ್ಯಾಸ್ ಪೋಳ್ಯ, ಜೊತೆ ಕಾರ್ಯದರ್ಶಿ ರಹ್ಮನ್ ಪಡೀಲ್ ಎಸ್‌ಡಿಟಿಯು ಟ್ರೇಡ್ ಯೂನಿಯನ್ ಸದಸ್ಯರಾದ ಮಹಮ್ಮದ್ ಕುಂಞ ಹಾಗೂ ನೌಷದ್ ಸಾಲ್ಮರ, ಮಾಜಿ ಅಧ್ಯಕ್ಷ ಬಾತೀಶ್ ಬಡಕೋಡಿ ಹಾಗೂ ಅಲ್ ನಜಾತ್ ಮುಸ್ಲಿಂ ಯೂತ್ ಫೆಡರೇಶನ್‌ನ ಉಪಾಧ್ಯಕ್ಷ ಇರ್ಷಾದ್ ಸರ್ವೆ ಹಾಗೂ ಆಟೋ ಯೂನಿಯನ್ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಮಂಗಳೂರು: ಕದ್ರಿ ಉಪಕೇಂದ್ರದಿಂದ ಹೊರಡುವ 11 ಕೆವಿ ಲೈಟ್ ಹೌಸ್ ಹಿಲ್ ರೋಡ್ ಫೀಡರ್‌ನಲ್ಲಿ ತುರ್ತು ಲೈನ್ ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿ ರುವುದರಿಂದ, ಬಂಟ್ಸ್ ಹಾಸ್ಟೆಲ್, ವುಡ್ ಲ್ಯಾಂಡ್, ಗೋಲ್ಡ್ ಫಿಂಚ್, ಜ್ಯೋತಿ ಟಾಕೀಸ್, ಲೈಟ್ ಹೌಸ್ ಹಿಲ್, ಲೇಡೀಸ್ ಕ್ಲಬ್, ಸೈಂಟ್ ಅಲೋಶಿಯಸ್ ಕಾಲೇಜ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 6ರಂದು ಬೆಳಿಗ್ಗೆ 10ರಿಂದ ಸಂಜೆ 5ವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಮೇ 9ರಂದು ವಾರ್ಷಿಕೋತ್ಸವ

ಸುಂಟಿಕೊಪ್ಪ: ಗರಗಂದೂರು ಗ್ರಾಮದಲ್ಲಿ ನೆಲೆ ನಿಂತಿರುವ ಅರಮನೆ ಚೌಡಿ ದೇವಿಯ ವಾರ್ಷಿಕೋತ್ಸವ ಮೇ 9 ರಂದು ಬೆಳಗ್ಗೆ 10 ರಿಂದ ಅಪರಾಹ್ನ 3 ಗಂಟೆಯವರೆಗೆ ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿದೆ ಎಂದು ಸಮಿತಿಯ ಅಧ್ಯಕ್ಷ ಜಿ.ಎಸ್.ಪ್ರಕಾಶ್ ತಿಳಿಸಿದ್ದಾರೆ.

ಚಾಮರಾಜನಗರದಲ್ಲಿ 100 ಮೆಟ್ರಿಕ್ ಟನ್ ಕಾಫಿ ಬೀಜ ಮಾರಾಟ | ದ.ಕ.ದಲ್ಲೂ ಹೆಚ್ಚುತ್ತಿದೆ ಕಾಫಿ ಕೃಷಿ

ಸಾಂಪ್ರದಾಯಿಕ ಕಾಫಿ ಉತ್ಪಾದನೆಗೆ ಮತ್ತೊಂದು ಜಿಲ್ಲೆ ಸೇರ್ಪಡೆ

ಮಡಿಕೇರಿ: ಸಾಂಪ್ರದಾಯಿಕ ಕಾಫಿ ಉತ್ಪಾದನೆಗೆ ಹೆಸರಾಗಿರುವ ಕರ್ನಾಟಕದ ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಸಾಲಿಗೆ ಇದೀಗ ನೆರೆಯ ಚಾಮರಾಜನಗರ ಜಿಲ್ಲೆಯೂ ಸೇರ್ಪಡೆಯಾಗಿದೆ.

ಹೌದು, ಚಾಮರಾಜನಗರ ಜಿಲ್ಲೆಯಲ್ಲಿ ಕಾಫಿ ಬೆಳೆ ಮತ್ತು ವ್ಯಾಪಾರ ಹೊಸ ಹಾದಿಯತ್ತ ಸಾಗುತ್ತಿದೆ. ಜಿಲ್ಲೆಯ ಬಿಳಿಗಿರಿ ಬೆಟ್ಟ ಪ್ರದೇಶದ 'ಬಿಳಿಗಿರಿ ಸೋಲಿಗರ ಉತ್ಪಾದಕರ ಕಂಪನಿ' ಈ ವರ್ಷ ಸುಮಾರು 100 ಮೆಟ್ರಿಕ್ ಟನ್ ಗುಣಮಟ್ಟದ ಕಾಫಿ ಬೀಜಗಳನ್ನು ಯಶಸ್ವಿಯಾಗಿ ಮಾರಾಟ ಮಾಡಿದ್ದು ಇದು ಸ್ಥಳೀಯ ರೈತರ ಮಹತ್ವದ ಸಾಧನೆಯಾಗಿದೆ.

ಸೋಲಿಗ ಸಮುದಾಯಕ್ಕೆ ಆರ್ಥಿಕ ಬಲ

ಈ ಸಾಧನೆಯ ಹಿಂದೆ ಸೋಲಿಗ (ಆದಿವಾಸಿ) ಸಮುದಾಯದ ಶ್ರಮ ಮತ್ತು ಸಂಘಟಿತ ಪ್ರಯತ್ನವಿದೆ. ಕಾಡು ಪ್ರದೇಶಗಳಲ್ಲಿ ಕಾಫಿ ಬೆಳೆದು ಅದನ್ನು ಮಾರುಕಟ್ಟೆಗೆ ತಲುಪಿಸುವಲ್ಲಿ ಈ ಕಂಪನಿ ಪ್ರಮುಖ ಪಾತ್ರವಹಿಸಿದೆ. ಇದರಿಂದ ಸಮುದಾಯದ ಆರ್ಥಿಕ ಸ್ಥಿತಿ ಕ್ರಮೇಣ ಸುಧಾರಿಸಲಾರಂಭಿಸಿದೆ.



ಕಾಫಿ ಮಂಡಳಿಯ ಬೆಂಬಲ

ಸೋಲಿಗ ಸಮುದಾಯದ ಈ ಸಾಧನೆಗೆ ಕಾಫಿ ಮಂಡಳಿಯು ಹಲವಾರು ರೀತಿಯ ನೆರವು ಒದಗಿಸಿದೆ. ಸುಮಾರು 3 ಲಕ್ಷ ಕಾಫಿ ಗಿಡಗಳ ವಿತರಣೆ, ಹ್ಯಾಂಡ್ ಪಲ್ಪರ್ ಮತ್ತು ಟಾರ್ಪಾಲಿನ್ ಸೌಲಭ್ಯದ ಜೊತೆಗೆ ವೈಜ್ಞಾನಿಕ ಕೃಷಿ ತರಬೇತಿಯ ನೆರವಿನಿಂದ ರೈತರು ಉತ್ತಮ ಗುಣಮಟ್ಟದ ಕಾಫಿ ಉತ್ಪಾದನೆ ಮಾಡಲು ಸಾಧ್ಯವಾಗಿದೆ.

> **ಕಾಫಿ ಮಂಡಳಿ ಶಿಫಾರಸ್ಸಿನಿಂದ ಮೂಡಿದ ಆಸಕ್ತಿ**
>
> ಪ್ರಸ್ತುತ ಮಾರುಕಟ್ಟೆಯಲ್ಲಿ ಕಾಫಿ ಧಾರಣೆಯೂ ಏರಿಕೆಯಾಗಿದ್ದು ಲಾಭದಾಯಕ ಕೃಷಿಯಾಗಿ ಮಾರ್ಪಾಡಾಗಿದೆ. ಅಲ್ಲದೇ ದ.ಕ. ಜಿಲ್ಲೆಯ ಹವಾಮಾನಕ್ಕೆ ಕಾಫಿ ಸೂಕ್ತವಾಗಬಹುದು ಎಂಬ ಕಾಫಿ ಮಂಡಳಿಯ ಶಿಫಾರಸ್ಸು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಫಿ ಬೆಳೆ ವಿಸ್ತರಿಸಲು ಹಾಗೂ ಆಸಕ್ತಿ ಮೂಡಲು ಸಾಧ್ಯವಾಗಿದೆ. ಒಟ್ಟಾರೆಯಾಗಿ ದ.ಕದಲ್ಲಿ ಕಾಫಿ ಬೆಳೆ ಹೆಚ್ಚುತ್ತಿದೆ.

ಉತ್ಪಾದನೆ ಮತ್ತು ಆದಾಯದಲ್ಲಿ ಏರಿಕೆ

ಸಂಘಟಿತ ಮಾರಾಟ ವ್ಯವಸ್ಥೆ ಮತ್ತು ತರಬೇತಿಯ ಪರಿಣಾಮವಾಗಿ ಕಾಫಿ ಉತ್ಪಾದನೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ರೈತರಿಗೆ ಉತ್ತಮ ಬೆಲೆಯೂ ಸಿಗುತ್ತಿದೆ. ಮಧ್ಯವರ್ತಿಗಳ ಮೇಲೆ ಅವಲಂಬನೆ ಕಡಿಮೆಯಾಗಿದೆ. ಆ ಮೂಲಕ ರಾಜ್ಯದ ಹೊಸ ಕಾಫಿ ಬೆಳೆಯುವ ಜಿಲ್ಲೆಯಾಗಿ ಚಾಮರಾಜನಗರ ಹೊರಹೊಮ್ಮಿದೆ.

ಇದುವರೆಗೆ ಕೊಡಗು, ಚಿಕ್ಕಮಗಳೂರು ಪ್ರದೇಶಗಳು ಕಾಫಿಗೆ ಪ್ರಸಿದ್ಧವಾಗಿದ್ದರೆ, ಈಗ ಚಾಮರಾಜನಗರ ಕೂಡಾ ಹೊಸ ಕಾಫಿ ಉತ್ಪಾದನಾ ಕೇಂದ್ರವಾಗಿ ಬೆಳೆಯುತ್ತಿದೆ. ಇದು ರಾಜ್ಯದ ಕಾಫಿ ವಲಯಕ್ಕೆ ಹೊಸ ದಿಕ್ಕನ್ನು ನೀಡುತ್ತಿದೆ.

ದಕ್ಷಿಣ ಕನ್ನಡವೂ ಸೇರಬಹುದೇ?

ಕಳೆದ ಕೆಲವು ವರ್ಷಗಳಿಂದ ಕಾಫಿ ಮಂಡಳಿಯು ಸಾಂಪ್ರದಾಯಿಕ ಕಾಫಿ ಕೃಷಿಯಿಂದ ಹೊರತಾದ ಜಿಲ್ಲೆಗಳಲ್ಲೂ ಕಾಫಿ ಕೃಷಿ ವಿಸ್ತರಣೆ ಬಗ್ಗೆ ಚಿಂತನೆ ಹರಿಸಿದೆ. ಆ ದಿಸೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು ತಾಲೂಕುಗಳಲ್ಲಿ ವಿಚಾರಸಂಕಿರಣಗಳನ್ನು ನಡೆಸುವ ಮೂಲಕ ಕಾಫಿ ಉತ್ಪಾದನೆಯಲ್ಲಿ ಆಸಕ್ತಿ ಮೂಡುವಂತೆ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ದಕ್ಷಿಣ ಕನ್ನಡದ ಈ ತಾಲೂಕುಗಳೂ ಕಾಫಿ ಉತ್ಪಾದನೆಯಲ್ಲಿ ತೊಡಗುವ ಸಾಧ್ಯತೆಗಳನ್ನೂ ತಳ್ಳಿಹಾಕುವಂತಿಲ್ಲ.

ಮಂಗಳೂರು, ಕೊಣಾಜೆಯ ಫೀಡರ್‌ಗಳಲ್ಲಿ ತುರ್ತು ನಿರ್ವಹಣೆ ಕಾಮಗಾರಿ

ಇಂದು, ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಇಂದು (ಮೇ 5)ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.


ಕುದ್ರೋಳಿ, ಜಾಮಿಯಾ ಮಸೀದಿ, ಕುದ್ರೋಳಿ ಓಲ್ಡ್ ಗೇಟ್ ರೋಡ್, ನಡುಪಳ್ಳಿ, ಮೊಯಿದ್ದೀನ್ ನಗರ, ಕುದ್ರೋಳಿ ಮಂಡಿ, ಅನ್ಸಾರಿ ರೋಡ್, ಅಜೀಜುದ್ದೀನ್ ರೋಡ್, ಜೆ.ಎಂ ರೋಡ್, ಬಸವನಗುಡಿ, ಲೋವರ್ ಕಾರ್‌ಸ್ಟ್ರೀಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಮಣ್ಣಗುಡ್ಡ ಉಪಕೇಂದ

ವೇರ್ ಹೌಸ್ ರೋಡ್, ಮಣ್ಣಗುಡ್ಡ, ಬಳ್ಳಾಲ್ ಭಾಗ್, ಕೊಡಿಯಾಲ್ ಬೈಲ್, ರತ್ನಾಕರ ಲೇಔಟ್, ವಿಶಾಲ್ ನರ್ಸಿಂಗ್ ಹೋಂ, ಟಿ.ಎಂ.ಎ ಪೈ ಹಾಲ್, ಎಂ.ಜಿ ರೋಡ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಕೊಣಾಜೆ ಪರಿಸರ

ಫೀಡರ್‌ಗಳಲ್ಲಿ ವ್ಯವಸ್ಥೆ ಸುಧಾರಣೆ ಹಾಗೂ ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಅರ್ಕಾನ, ಸಾಂಬಾರ್ ತೋಟ, ಕಾಯರ್ ಗೋಳಿ,



ಮಿತ್ತಕೋಡಿ, ಕಂಬ್ಲಪದವು, ಇನ್ಫೋಸಿಸ್, ಕನೀರ್ ತೋಟ, ಬಗಂಬಿಲ, ಚೇತನನಗರ, ಕೊಲ್ಯ, ಶಾಂತಿಭಾಗ್, ಕುಂಪಲ, ಮೂರುಕಟ್ಟೆ ಚಿತ್ರಾಂಜಲಿ ನಗರ, ಆಶ್ರಯ ಕಾಲನಿ, ಕುಜುಮಗುಡ್ಡೆ, ಬಾಬುಕಟ್ಟೆ ಹಿರಾನಗರ, ನಿತ್ಯಾಧರ ನಗರ, ಪ್ರಕಾಶ್ ನಗರ, ಪಂಡಿತ್ ಹೌಸ್, ಶಿವಾಜಿ ನಗರ, ಮುಂಡೋಳಿ, ಸೇವಂತಿಗುಡ್ಡೆ, ಸೇವಂತಿಗುತ್ತು, ಗಾಂಡಿ, ವಿಜೇತನಗರ, ತಾರಿಪಡ್ಪು, ದಾರಂದಬಾಗಿಲು, ಹೊಸಗದ್ದೆ ಪಿಲಾರ್, ಪಿಲಾರ್ ಶಾಲೆ, ಅಂಬಿಕಾರೋಡ್, ಸರಸ್ವತಿ ಕಾಲನಿ, ದ್ವಾರಕಾನಗರ, ಅಬ್ಬಂಜರ, ಅನಿಲ್ ಕಂಪೌಂಡ್, ಕೆರೆ ಬಿಟಿಐ, ಬನ, ಯು.ಟಿ ಕಂಪೌಂಡ್, ಕೆ.ಎಚ್.ಬಿ ಕಾಲೋನಿ, ಮೂಡ ಸೋಮನಾಥ ಲೇಔಟ್, ನೆಹರೂನಗರ, ಪ್ರತಾಪ್ ನಗರ, ಶಿವಶಕ್ತಿನಗರ, ಸೋಮೇಶ್ವರ ಟೆಂಪಲ್, ಸುಲ್ತಾನ್ ನಗರ, ತಲಪಾಡಿ, ಟೋಲ್ ಗೇಟ್, ಮೇಲಿನ ತಲಪಾಡಿ, ನಾರ್ಲ, ತಚ್ಚಾಣಿ, ವಿವೇಕನಂದ ನಗರ, ಸಾಂತ್ಯ, ನೆತ್ತಿಲಪದವು, ಜಲ್ಲಿ ಕ್ರಷರ್,ಉಚ್ಚಿಲ, ಪ್ರವಾಸಿ ಬಂಗ್ಲೆ ಕೆ.ಸಿ ರೋಡ್, ಕೆ.ಸಿ ನಗರ, ಪೂಮಣ್ಣು ಪಿಲಿಕೂರ್, ಬೈದರಪಾಲ್, ಹೊಸನಗರ, ಮಧುಪಾಲ್, ಅಜ್ಜಿನಡ್ಕ ಮುಲ್ಲುಗುಡ್ಡೆ ರಬ್ಬರ್ ಫ್ಯಾಕ್ಟರಿ, ಲಕ್ಷ್ಮಿಗುಡ್ಡೆ ಮೂರುಕಟ್ಟೆ ಕುಂಪಲ, ಕನೀರ್ ತೋಟ, ಸರಳಾಯ ಕಾಲನಿ, ಹನುಮಾನ್ ನಗರ, ಆಶ್ರಯ ಕಾಲನಿ, ಕುಂಪಲ ಶಾಲೆ, ಚೇತನನಗರ, ಅಸೈಗೋಳಿ, ಆರ್.ವಿ ಆರ್ಕೇಡ್, ಮಾನಸ ಫರ್ನಿಚರ್, ಶಾಂತಿಭಾಗ್, ಮುಂಡೋಳಿ, ಕೆ.ಹೆಚ್.ಬಿ, ಮೂರುಕಟ್ಟೆ ಬಳಿ, ನಿಸರ್ಗ ಲೇಔಟ್, ವೈದ್ಯನಾಥ ನಗರ, ಮಡ್ಯಾರ್ ಕ್ರಷರ್, ನೀಲಿಪಾಲು, ಕೊಣಾಜೆ, ಕೋಡಿಜಾಲ್, ಪರಂಡೆ, ಅಡ್ಕರೆಪಡ್ಪು, ಕಲ್ಲಿಮಾರ್, ಪುಲ್ಲಿಂಚಾಡಿ, ಅಡ್ಕ ಕೋಟೆಕಾರ್, ಬೀರಿ, ಮಾಡೂರು, ಕೊಂಡಾಣ, ನಡಾರ್, ಮಡ್ಯಾರ್, ಕಾಯರ್ ಮಜಲ್, ಸಂಕೋಳಿಗೆ, ಉಚ್ಚಿಲ, ನಯಪಟ್ನ, ಬೋವಿಶಾಲೆ, ಅಡಂಕುದ್ರು, ಕಲ್ಲಾಪು, ರಾಣಿಪುರ, ತೊಕ್ಕೊಟ್ಟು ಜಂಕ್ಷನ್, ಕಲ್ಲಾಪು ಪಟ್ಲ, ನಾಗನಕಟ್ಟೆ ಹಿದಾಯತ್ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 6ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ರಾಜ್ಯ ವಿಕೇಂದ್ರೀಕರಣ ಯೋಜನೆ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ

ಗ್ರಾಮ ಅಭಿವೃದ್ಧಿಗೆ ಸ್ಥಳೀಯರ ಸಹಕಾರ ಅಗತ್ಯ

ಮಡಿಕೇರಿ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳಾಗಿದ್ದು ಆ ದಿಸೆಯಲ್ಲಿ ಗ್ರಾ.ಪಂ.ಗಳಿಗೆ ಸರ್ಕಾರ ಹೆಚ್ಚಿನ ಅಧಿಕಾರ ನೀಡಿದೆ. ಅದನ್ನು ನಿಯಮಾನುಸಾರ ಬಳಸುವಂತಾಗಬೇಕು ಎಂದು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್. ಪಾಟೀಲ ಅವರು ತಿಳಿಸಿದ್ದಾರೆ.



ಮಡಿಕೇರಿ ತಾಲೂಕಿನ ಹೊದ್ದೂರು ಗ್ರಾ.ಪಂ. ಸಭಾಂಗಣದಲ್ಲಿ 2026-27 ನೇ ಸಾಲಿನ ವಾರ್ಷಿಕ ಕರಡು ಅಭಿವೃದ್ಧಿ ಯೋಜನೆ ತಯಾರಿ ಬಗ್ಗೆ ಮಾಹಿತಿ ಪಡೆದು ಅವರು ಮಾತನಾಡಿದರು.

ಗ್ರಾ.ಪಂ.ಅಭಿವೃದ್ಧಿಗೆ ಕಾನೂನಿನ ಅಧಿಕಾರ ಚಲಾಯಿಸಬೇಕು. ಸಂವಿಧಾನದ ಆಶಯದಂತೆ ನಡೆದುಕೊಳ್ಳಬೇಕು. ಪಂಚಾಯತ್ ರಾಜ್ ವ್ಯವಸ್ಥೆ ಬಲಿಷ್ಠವಾಗಿರಬೇಕು. ಆ ಮೂಲಕ ಗ್ರಾಮಗಳ ಅಭಿವೃದ್ಧಿ ಆಗಬೇಕು ಎಂದರು.

ಗ್ರಾಮ ಸಭೆ ನಿರ್ಣಯ ಅಂತಿಮ

ಕಾನೂನಿನ ಪ್ರಕಾರ ಅಧಿಕಾರ ಹಸ್ತಾಂತರ ಆಗಬೇಕು. ಗ್ರಾಮ ಸಭೆಯ ನಿರ್ಣಯವೇ ಅಂತಿಮ ಆಗಬೇಕು. ಗ್ರಾಮ ಅಭಿವೃದ್ಧಿಗೆ ಸ್ಥಳೀಯರೇ ಚಿಂತಿಸಬೇಕು ಎಂದು ಡಿ.ಆರ್.ಪಾಟೀಲ ಅವರು ವಿವರಿಸಿದರು.

ಗ್ರಾ.ಪಂ.ಗಳಿಗೆ ಇರುವ ಅಧಿಕಾರ ಮತ್ತು ಕಾನೂನಿನ ಬಗ್ಗೆ ಕೈಪಿಡಿ ಮುದ್ರಿಸಿ ನೀಡುವಂತಾಗಬೇಕು. ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಪಕ್ಷ ರಾಜಕಾರಣ ಇರುವುದಿಲ್ಲ, ಆದ್ದರಿಂದ ಗ್ರಾಮಸ್ಥರೇ ಎಲ್ಲಾ ಬಡಜನರ ಏಳಿಗೆ ಬಯಸಿ ಒಮ್ಮತದ ತೀರ್ಮಾನ ತೆಗೆದುಕೊಳ್ಳಬಹುದಾಗಿದೆ ಎಂದರು.

ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ವಿಶೇಷ ಸಲಹೆಗಾರ ಕೆಂಪೇಗೌಡ ಮಾತನಾಡಿ, ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಚುನಾಯಿತ ಸರ್ಕಾರ ಇರಬೇಕು ಎಂಬುದು ಸರ್ಕಾರದ ಆಶಯವಾಗಿದ್ದು, ಆ ನಿಟ್ಟಿನಲ್ಲಿ ಸ್ಥಳೀಯ ಆಡಳಿತಕ್ಕೆ ವಿಶೇಷವಾದ ಅಧಿಕಾರ ನೀಡಲಾಗಿದೆ ಎಂದರು.

ಜನರ ನಿರೀಕ್ಷೆಗೆ ತಕ್ಕಂತೆ ಅಧಿಕಾರ ನಡೆಸಬೇಕು. ಪಂಚಾಯತ್ ಅಭಿವೃದ್ಧಿ ಸಂಬಂಸಿದಂತೆ ಎಲ್ಲಾ ಮತದಾರರಿಗೂ ಮಾಹಿತಿ ನೀಡಬೇಕು. ಫಲಾನುಭವಿಗಳ ಆಯ್ಕೆ ಮತ್ತು ಕ್ರಿಯಾ ಯೋಜನೆ ರೂಪಿಸುವುದು ಹಾಗೂ ವಾರ್ಡ್ ಸಭೆ ನಡೆಸುವುದು ಸೇರಿದಂತೆ ಪಂಚಾಯತ್ ರಾಜ್ ಆಶಯವನ್ನು ಅರಿತುಕೊಂಡು ಕೆಲಸ ಮಾಡಬೇಕು ಎಂದರು. ಗ್ರಾ.ಪಂ.ನಿಕಟಪೂರ್ವ ಸದಸ್ಯ ಮೊಣ್ಣಪ್ಪ ಅವರು ಮಾತನಾಡಿ, ಗ್ರಾ.ಪಂ.ಗಳಿಗೆ ಅನುದಾನ ಹೆಚ್ಚಿಸಬೇಕು ಎಂದು ಕೋರಿದರು. ಗ್ರಾ.ಪಂ.ನಿಕಟಪೂರ್ವ ಅಧ್ಯಕ್ಷ ಹಂಸ ಅವರು ಮಾತನಾಡಿದರು.

ಐದು ಲಕ್ಷ ರೂ.ಗಳಿಗೆ ಹೆಚ್ಚಿಸಿ

ಸ್ಥಳೀಯರೊಬ್ಬರು ಮಾತನಾಡಿ, ವಸತಿ ಯೋಜನೆಯಡಿ ಸರ್ಕಾರದಿಂದ ನೀಡುವ ಅನುದಾನ ಸಾಲುವುದಿಲ್ಲ, ಆದ್ದರಿಂದ 5 ಲಕ್ಷ ರೂ.ವರೆಗೆ ಹೆಚ್ಚಿಸಬೇಕು ಎಂದು ಅವರು ಕೋರಿದರು.

ಗ್ರಾ.ಪಂ. ಮಾಜಿ ಸದಸ್ಯರಾದ ಕುಸುಮಾವತಿ, ಹಮೀದ್, ಲಕ್ಷ್ಮಿ ಜಿ.ಪಂ. ಸಹಾಯಕ ಕಾರ್ಯದರ್ಶಿ ಅಬ್ದುಲ್ ನಬಿ, ತಾ.ಪಂ. ಇಒ ಶೇಖರ್, ಆಡಳಿತಾಧಿಕಾರಿ ಪಿ.ಪಿ.ಕವಿತಾ, ಪಿಡಿಒ ವತ್ಸಲಾ, ಅಬ್ದುಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳು, ಸ್ಥಳೀಯರು ಇದ್ದರು.

ಜಿಲ್ಲಾಮಟ್ಟದ ಸೌಹಾರ್ದ ಕ್ರೀಡಾಕೂಟ: ಬಂಟ್ವಾಳ ತಾಲೂಕು ತಂಡಕ್ಕೆ ಹಲವು ಪ್ರಶಸ್ತಿ



ಬಂಟ್ವಾಳ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಲ್ಕಿ ತಾಲೂಕು ಘಟಕದ ವತಿಯಿಂದ ಕಾರ್ನಾಡು ಸರ್ಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ನಡೆದ ದ.ಕ. ಜಿಲ್ಲಾಮಟ್ಟದ ಸೌಹಾರ್ದ ಕ್ರೀಡಾಕೂಟ ಪಂಚಾಯತ್ ರಾಜ್ ಟ್ರೋಫಿ – 2026 ರಲ್ಲಿ ಬಂಟ್ವಾಳ ತಾಲೂಕು ತಂಡವು ಗಮನಾರ್ಹ ಸಾಧನೆ ಮಾಡಿದೆ.

ಬಂಟ್ವಾಳ ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಸಚಿನ್ ಕುಮಾರ್ ಅವರ ನೇತೃತ್ವದ 'ಟೀಂ ಬಂಟ್ವಾಳ್' ಕ್ರಿಕೆಟ್ ತಂಡವು ದ್ವಿತೀಯ ಸ್ಥಾನ ಪಡೆದುಕೊಂಡಿದೆ. ಲೀಗ್ ಪಂದ್ಯಗಳಲ್ಲಿ ಕಡೇಶ್ವಾಲ್ಯ ಗ್ರಾಮ ಪಂಚಾಯತ್ ಸಿಬ್ಬಂದಿ ನಾಗರಾಜ್ ಮತ್ತು ವೀರಕಂಭ ಗ್ರಾಮ ಪಂಚಾಯತ್ ಸಿಬ್ಬಂದಿ ಮಿಥುನ್ ಅವರು 'ಪಂದ್ಯಶ್ರೇಷ್ಠ' ಪ್ರಶಸ್ತಿಯನ್ನು ಪಡೆದರೆ,ಬಂಟ್ವಾಳ ತಾಲೂಕು ಪಂಚಾಯತ್ ನರೇಗಾ ಎಂಐಎಸ್ ಸಂಯೋಜಕ ಜೋಯಲ್ ಡಿಸೋಜ ಅವರು 'ಅತ್ಯುತ್ತಮ ಬೌಲರ್' ಪ್ರಶಸ್ತಿ ಮುಡಿಗೇರಿಸಿದರು.

> ■ ಬಂಟ್ವಾಳ ತಾ.ಪಂ. ಇಒ ಸಚಿನ್ ಕುಮಾರ್ ನೇತೃತ್ವದ ತಂಡದ ಸಾಧನೆ
>
> ■ ಹಗ್ಗಜಗ್ಗಾಟ ಸ್ಪರ್ಧೆಯಲ್ಲೂ ಬಂಟ್ವಾಳ ತಂಡಕ್ಕೆ ಪ್ರಶಸ್ತಿ

ಹಗ್ಗಜಗ್ಗಾಟದಲ್ಲಿ ಚಾಂಪಿಯನ್

ಹಗ್ಗಜಗ್ಗಾಟ ಸ್ಪರ್ಧೆಯಲ್ಲಿ ಬಂಟ್ವಾಳ ತಂಡವು ಅಪ್ರತಿಮ ಸಾಮರ್ಥ್ಯ ತೋರಿ ಪ್ರಥಮ ಸ್ಥಾನವನ್ನು ಪಡೆಯಿತು.

ಶಿರ್ವ ಸಂತ ಮೇರಿ ಕಾಲೇಜಿನಲ್ಲಿ ದತ್ತಿ ನಿಧಿ ಪುರಸ್ಕಾರ, ಬಹುಮಾನ ವಿತರಣೆ



ಶಿರ್ವ: ಸಂತ ಮೇರಿ ಕಾಲೇಜು, ಶಿರ್ವ ಇಲ್ಲಿನ ವಿದ್ಯಾರ್ಥಿ ಕ್ಷೇಮ ಪಾಲನಾ ಸಂಘ ಮತ್ತು ಐ.ಕ್ಯೂ.ಎ.ಸಿ. ಇವರ ಸಹಯೋಗದೊಂದಿಗೆ ಕಾಲೇಜು ವಾರ್ಷಿಕೋತ್ಸವ ಸಂಪನ್ನಗೊಂಡಿತು.

ಸಂತ ಆಲೋಶಿಯಸ್ ಸ್ವಾಯತ್ತ ವಿಶ್ವವಿದ್ಯಾನಿಲಯ ಮಂಗಳೂರು ಇಲ್ಲಿನ ನಿವೃತ್ತ ಇತಿಹಾಸ ಸಹ ಪ್ರಾಧ್ಯಾಪಕ ಡಾ. ಡೆನ್ನಿಸ್ ಫೆರ್ನಾಂಡಿಸ್ ಮಾತನಾಡಿ, ನಾನು ಸಂತ ಮೇರಿ ಕಾಲೇಜಿನ ಹಳೆ ವಿದ್ಯಾರ್ಥಿಯಾಗಿರುವುದು ನನಗೆ ಹೆಮ್ಮೆಯ ವಿಚಾರವಾಗಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ. ಹೆರಾಲ್ಡ್ ಐವನ್ ಮೋನಿಸ್ ವಾರ್ಷಿಕ ವರದಿ ವಾಚಿಸಿದರು. ಗೌರವ ಅತಿಥಿಗಳಾಗಿ ಚರ್ಚ್ ಪಾಲನಾ ಮಂಡಳಿ ಉಪಾಧ್ಯಕ್ಷ ಜುಲಿಯನ್ ರೊಡ್ರಿಗಸ್, ಹಳೆ ವಿದ್ಯಾರ್ಥಿ ಸಂಘ ಅಧ್ಯಕ್ಷರು ಉರ್ಬನ್ ನೋವೆಲ್ ಡಿಸೋಜ, ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷ ಅರುಣ್ ಅಂತೋನಿ ಫೆರ್ನಾಂಡಿಸ್ ಉಪಸ್ಥಿತರಿದ್ದು ಶುಭ ಹಾರೈಸಿದರು.ವಿದ್ಯಾರ್ಥಿ ಕ್ಷೇಮ ಪಾಲನಾ ಅಧಿಕಾರಿ ಮೆಲ್ವಿನ್ ಕ್ಯಾಸ್ತಲಿನೊ, ಐ.ಕ್ಯೂ.ಎ.ಸಿ. ಸಂಯೋಜಕ ಜಗದೀಶ್ ಆಚಾರ್ಯ ವೇದಿಕೆಯಲ್ಲಿದ್ದರು.

ಪ್ರತಿಭಾ ಪುರಸ್ಕೃತರು, , ಶೈಕ್ಷಣಿಕ ಸಾಧಕರು, ದತ್ತಿ ನಿಧಿ ಬಹುಮಾನಿತರು, ಕ್ರೀಡಾ ಸಾಧಕರುಗಳ ಪಟ್ಟಿಯನ್ನು ಕ್ರಮವಾಗಿ ಕೆ. ಪ್ರವೀಣ್ ಕುಮಾರ್, ಶ್ರೀಮತಿ ತನುಜಾ ಎನ್. ಸುವರ್ಣ, ಶರ್ಮಿಳಾ, ಸಂಧ್ಯಾ ಕೆ. ಓದಿದರು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಉಪನ್ಯಾಸಕಿ ಡಾ ಗುಲಾಬಿ ಪೂಜಾರಿ, ಗ್ರಂಥಪಾಲಕಿ ತನುಜಾ ಹಾಗೂ ವಿದ್ಯಾರ್ಥಿ ಜೀವನ್ ಕುಮಾರ್ ಪೂಜಾರಿ, ಧನ್ಯ ಸಾಕ್ಷಿ ಶೆಟ್ಟಿ ಅವರನ್ನು ಗೌರವಿಸಲಾಯಿತು. ಸಾಫ್ಟ್ ಸ್ಕಿಲ್ ಸೆಕ್ರೆಟರಿ ಸಂಗೀತಾ ಎಚ್.ಪೂಜಾರಿ ಸ್ವಾಗತಿಸಿ, ಸೀನು ನಾಯಕ್ ಮತ್ತು ದಿಶಾ ಕ್ರಾಸ್ತಾ ನಿರೂಪಿಸಿದರು. ವಿದ್ಯಾರ್ಥಿ ನಾಯಕ ಶಾನ್ ಲೋಬೊ ವಂದಿಸಿದರು.



ಉಡುಪಿ ಜಿಲ್ಲಾ ಭಾರತೀಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದಿಂದ ಕಾರ್ಮಿಕರ ದಿನವನ್ನು ಭಾರತ ಮಾತೆಗೆ ಪೂಜೆ ಸಲ್ಲಿಸಿ ಕಾರ್ಮಿಕರಿಗೆ ಸಿಹಿ ವಿತರಿಸಿ ಆಚರಿಸಲಾಯಿತು ಸಂಘದ ಸಂಚಾಲಕ ಮೋಹನಚಂದ್ರ, ಕಾರ್ಮಿಕರಿಗೆ ಮಾಹಿತಿ, ಸದಸ್ಯರಿಗೆ ಸಂಘದ ಗುರುತಿನ ಚೀಟಿ ನೀಡಿದರು. ಸಂಘದ ಅಧ್ಯಕ್ಷ ಸಂತೋಷ್ ಭಂಡಾರಿ, ಪ್ರಧಾನ ಕಾರ್ಯದರ್ಶಿ ಶಶಿರಾಜ್, ಟ್ರಸ್ಟಿ ಪ್ರಜಲ್ ಹಾಗೂ ಸಂಘದ ಸದಸ್ಯರು ಇದ್ದರು. ಸವಿತಾ ಕಾರ್ಯಕ್ರಮ ನಿರ್ವಹಿಸಿದರು.



ಅನಾರೋಗ್ಯದಿಂದ ಬಳಲುತ್ತಿರುವ ಕಾರ್ಕಳದ ಸಾಣೂರು ಕೇಪುಲು ನಿವಾಸಿ ಸುಧಾಕರ್ ಅವರಿಗೆ ರಾಜ್ಯ ಪ್ರಶಸ್ತಿ ಪುರಸ್ಕೃತ ಯುವಕ ಮಂಡಲ ಸಾಣೂರು ಇದರ ಶಾಶ್ವತ ಆರೋಗ್ಯ ನಿಧಿ ಯೋಜನೆಯಿಂದ ಸಹಾಯಧನ ಚೆಕ್ ಅನ್ನು ಅವರ ಪತ್ನಿಗೆ ವಿತರಿಸಲಾಯಿತು. ಯುವಕ ಮಂಡಲದ ಅಧ್ಯಕ್ಷ ಪ್ರಸಾದ್ ಶೆಟ್ಟಿ, ಉಪಾಧ್ಯಕ್ಷ ಮೋಹನ್ ಶೆಟ್ಟಿ, ಕಾರ್ಯದರ್ಶಿ ರಾಜೇಶ್ ಪೂಜಾರಿ, ಜೊತೆ ಕಾರ್ಯದರ್ಶಿ ಪ್ರಶಾಂತ್ ಆಚಾರ್ಯ ಉಪಸ್ಥಿತರಿದ್ದರು.

ಬಿಳಿನೆಲೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ವಠಾರದಲ್ಲಿ 9ನೇ ವರ್ಷದ ಕಾರ್ಮಿಕರ ದಿನಾಚರಣೆ, ಕ್ರೀಡೋತ್ಸವ

ಕಾರ್ಮಿಕರು ಆಧುನಿಕ ಕೌಶಲಗಳನ್ನು ಮೈಗೂಡಿಸಿಕೊಳ್ಳಬೇಕು: ಪ್ರಮೋದ್ ಕುಮಾರ್ ಕೆ.ಕೆ.

ಕಡಬ: ದೇಶದಲ್ಲಿ 2ನೇ ಅತೀ ಹೆಚ್ಚು ಉದ್ಯೋಗ ನೀಡುವ ಕ್ಷೇತ್ರವೆಂದರೆ ಅದು ನಿರ್ಮಾಣ ಕ್ಷೇತ್ರ. ಯಾವುದೇ ದೇಶ ಅಭಿವೃದ್ಧಿಯಾಗಬೇಕಾದರೆ ಅಲ್ಲಿ ಕಾರ್ಮಿಕರ ಪಾತ್ರ ಅತ್ಯಂತ ದೊಡ್ಡದು. ಆದುದರಿಂದ ಕಾರ್ಮಿಕರು ಕೀಳರಿಮೆ ಬಿಟ್ಟು ಆಧುನಿಕ ತಂತ್ರಜ್ಞಾನದ ಕೌಶಲಗಳನ್ನು ಮೈಗೂಡಿಸಿಕೊಂಡು ಕೆಲಸ ಮಾಡಬೇಕು ಎಂದು ಲೋಕೋಪಯೋಗಿ ಪುತ್ತೂರು ಇಲಾಖೆಯ ಸಹಾಯಕ ಇಂಜಿನಿಯರ್ ಪ್ರಮೋದ್ ಕುಮಾರ್ ಕೆ.ಕೆ. ಹೇಳಿದರು.

ಬಿಳಿನೆಲೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ವಠಾರದಲ್ಲಿ ಮರ್ದಾಳದ ಕೆನ್ಯ ಹಿಲ್‌ಟಾಪ್ ಶ್ರಮಿಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ಹಾಗೂ ಅಸೋಸಿಯೇಶನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ (ಇಂಡಿಯಾ) ಪುತ್ತೂರು ಸೆಂಟರ್‌ನ



ಜಂಟಿ ಆಶ್ರಯದಲ್ಲಿ ಶುಕ್ರವಾರ ಜರಗಿದ 9ನೇ ವರ್ಷದ ಕಾರ್ಮಿಕ ದಿನಾಚರಣೆ ಮತ್ತು ಕ್ರೀಡೋತ್ಸವ 2026-27 ಕಾರ್ಯಕ್ರಮದಲ್ಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

ಕಾರ್ಮಿಕರು ಕೆಲಸದ ವೇಳೆ ಸ್ವ ಸುರಕ್ಷತೆಯ ಕುರಿತು ಗಮನ ನೀಡಬೇಕು. ದುಶ್ಚಟಗಳಿಂದ ದೂರವಿದ್ದು ಆರೋಗ್ಯಕರ ಬದುಕನ್ನು ಕಟ್ಟಿಕೊಂಡಾಗ ಉತ್ತಮ ಜೀವನವನ್ನು ನಡೆಸಲು ಸಾಧ್ಯ. ಕಾರ್ಮಿಕರಿಗಾಗಿ ಸರಕಾರ ಹಲವು ಯೋಜನೆಗಳನ್ನು ಜಾರಿ ತಂದರೂ ಅದನ್ನು ಸಮರ್ಪಕವಾಗಿ ಬಳಸಿಕೊಳ್ಳುವುದಕ್ಕೆ ಹಾಗೂ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಕಾರ್ಮಿಕರು ಸಂಘಟಿತರಾಗಬೇಕು ಎಂದರು.

ಬಿಳಿನೆಲೆಶ್ರೀಗೋಪಾಲಕೃಷ್ಣದೇವಸ್ಥಾನದವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಹರಿಶ್ಚಂದ್ರ ಕಳಿಗೆ ಸಮಾರಂಭವನ್ನು ಉದ್ಘಾಟಿಸಿದರು. ಶ್ರಮಿಕರ ಸಂಘದ ಅಧ್ಯಕ್ಷ ಶಿವಶಂಕರ್ ಅಧ್ಯಕ್ಷತೆ ವಹಿಸಿದ್ದರು. ಅಸೋಸಿಯೇಶನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್(ಇಂಡಿಯಾ) ಪುತ್ತೂರು ಸೆಂಟರ್‌ನ ಅಧ್ಯಕ್ಷ ಶಿವರಾಮ ಎಂ.ಎಸ್. ಮುಖ್ಯ ಅತಿಥಿಯಾಗಿದ್ದರು. ಕಡಬದ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ ಶಾಜಿ ಕೆ. ಜಾನ್, ಬಿಳಿನೆಲೆಯ ರೈಲ್ವೇ ಕಂಟ್ರಾಕ್ಟರ್ ಸಂತೋಷ್‌ಕುಮಾರ್ ಗುಂಡ್ಯ ಹಾಗೂ ಶ್ರಮಿಕರ ಸಂಘದ ಗೌರವಾಧ್ಯಕ್ಷ ಕೆ.ಪಿ. ಮೋಹನ್ ಉಪಸ್ಥಿತರಿದ್ದರು.

ಸನ್ಮಾನದ ಗೌರವ

ನಾಗಪ್ಪ ಕುಂಬಾರ ದೊಡ್ಡಕೊಪ್ಪ ಕಡಬ, ನಾರಾಯಣ ಗೌಡ ಪೂಜಾರಿಮನೆ ಬಳ್ಪ, ನಾರಾಯಣ ಗೌಡ ಅಗರಿಮನೆ ಕೊಂಬಾರು, ವಿಶ್ವನಾಥ ಕೆಳಗಿನ ಕೇರಿ ಚಾರ್ವಾಕ, ಚಂದ್ರಾವತಿ ಕೈಕಂಬ, ಮಾಧವ ಗೌಡ ಉಳಿಪ್ಪು ಸೂರಪ್ಪ ನಿಡ್ಮೇರು ರೆಂಜಿಲಾಡಿ, ರಾಜು ಎ.ಎಸ್. ಬೆತ್ತೋಡಿ ಐತ್ತೂರು, ಕುಶಾಲಪ್ಪ ಎಚ್.ಕೆ. ಹೊಸೊಕ್ಲು ಕೈಕಂಬ, ಬೊಮ್ಮಣ್ಣ ಪೂಜಾರಿ ಕೋಡಿಯಾಲ ಬೆಳ್ಳಾರೆ, ಮೋಹಿನಿ ಎರ್ಮಾಯಿಲ್ ಕೈಕಂಬ, ಸೀತಾರಾಮ ಮಣಿಯಾಣಿ ಬೀದಿಗುಡ್ಡೆ ಬಳ್ಪ, ಜನಾರ್ದನ ಗೌಡ ಕಟ್ಟಮನೆ ಏನೆಕಲ್, ಬೆಳ್ಯಪ್ಪ ಮಿನಾಜೆಮನೆ ಕಾಣಿಯೂರು, ವೀರಪ್ಪ ಗೌಡ ಕಳಿಗೆ ಕೈಕಂಬ, ರಿಚರ್ಡ್ ಡಿ'ಸೋಜ ವಾಲ್ತಾಜೆ ಬಿಳಿನೆಲೆ, ಮೋಹನ್‌ಚಂದ್ರ ಸುಳ್ಳ ಐತ್ತೂರು ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯದರ್ಶಿ ಪುರುಷೋತ್ತಮ ಸಣ್ಣಾರ ವರದಿ ಮಂಡಿಸಿದರು. ಶ್ರಮಿಕರ ಸಂಘದ ಕೋಶಾಧಿಕಾರಿ ಗಿರಿಯಪ್ಪ ಗೌಡ ಸ್ವಾಗತಿಸಿ, ಅನಿಲ್ ಕುಮಾರ್ ಸಿ.ಪಿ. ವಂದಿಸಿದರು. ಉದಯ ಪಿ.ಆರ್. ನಿರ್ವಹಿಸಿದರು. ಕಟ್ಟಡ ಕಾರ್ಮಿಕರ ಮತ್ತು ಕಾರ್ಮಿಕ ಕುಟುಂಬದ ಸದಸ್ಯರಿಗೆ ಅಂಗನವಾಡಿ ಮಕ್ಕಳಿಂದ ಹಿಡಿದು ಹಿರಿಯ ನಾಗರಿಕರವರೆಗಿನ ಎಲ್ಲಾ ವಯೋಮಾನದವರಿಗೂ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ನೃತ್ಯ, ಹಾಡು, ಏಕಪಾತ್ರಾಭಿನಯ, ಭರತನಾಟ್ಯ ಪ್ರದರ್ಶನ ನಡೆದವು. ಸಮಾರೋಪ ಸಮಾರಂಭದಲ್ಲಿ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಕಾಸರಗೋಡು ಜಿಲ್ಲೆಯಲ್ಲಿ ಮೂರು ಮಾಧ್ಯಮ ಕೇಂದ್ರಗಳಲ್ಲಿ ಮತ ಎಣಿಕೆ ಮಾಹಿತಿ ಪ್ರಕಟಿಸುವ ವ್ಯವಸ್ಥೆ

ಸುಸೂತ್ರವಾಗಿ ನಡೆದ ವಿಧಾನಸಭಾ ಚುನಾವಣೆ ಮತ ಎಣಿಕೆ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಸೋಮವಾರ ನಡೆದ ನೈಜ ಸಮಯದ ಮತ ಎಣಿಕೆ ಪ್ರಕ್ರಿಯೆಯ ಸಮಗ್ರ ಮಾಹಿತಿಗಳನ್ನು ಮಾಧ್ಯಮಗಳಿಗೆ ಕಾಲ ಕಾಲಕ್ಕೆ ಒದಗಿಸಲು ಕಾಸರಗೋಡು ಜಿಲ್ಲಾ ಮಾಹಿತಿ ಕಚೇರಿಯ ನೇತೃತ್ವದಲ್ಲಿ ಜಿಲ್ಲೆಯಲ್ಲಿ ಮೂರು ಮಾಧ್ಯಮ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು.

ಕಲೆಕ್ಟರೇಟ್‌ನ ಮಿನಿ ಕಾನ್ಫರೆನ್ಸ್ ಹಾಲ್ ಮತ್ತು ಮತ ಎಣಿಕೆ ಕೇಂದ್ರಗಳಾದ ಕಾಸರಗೋಡು ಸರಕಾರಿ ಕಾಲೇಜು ಹಾಗೂ ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಮಾಧ್ಯಮ ಕೇಂದ್ರಗಳನ್ನು ಅಳವಡಿಸಲಾಗಿತ್ತು. ಪ್ರತಿ ಸುತ್ತಿನ ಮತಗಳ ಮಾಹಿತಿಗಳನ್ನು ಮಾಧ್ಯಮಗಳಿಗೆ ನೀಡಲು ಮಾಧ್ಯಮಕೇಂದ್ರದವ್ಯವಸ್ಥೆಯನ್ನು ಬಳಸಲಾಯಿತು. ಜಿಲ್ಲೆಯ ಮಾಧ್ಯಮ ಪ್ರತಿನಿಧಿಗಳು ಈ ಮಾಧ್ಯಮ ಕೇಂದ್ರಗಳಲ್ಲಿ ಸ್ಥಾಪಿಸಲಾದ ದೊಡ್ಡ ಪರದೆಗಳಲ್ಲಿ ಮತ ಎಣಿಕೆ ಮಾಹಿತಿಗಳನ್ನು ನೇರಪ್ರಸಾರ ಮೂಲಕ ವೀಕ್ಷಿಸಿದರು. ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್, ಸಂಸದ ರಾಜ್ ಮೋಹನ್ ಉಣ್ಣಿತ್ತಾನ್ ಮತ್ತು ಇತರರು ಮಾಧ್ಯಮ ಕೇಂದ್ರಕ್ಕೆ ಭೇಟಿ ನೀಡಿದರು. ಜಿಲ್ಲಾ ಮಾಹಿತಿ ಅಧಿಕಾರಿ ಎಂ. ಮಧುಸೂದನನ್, ಸಹಾಯಕ ಸಂಪಾದಕಿ



ಎ.ಪಿ. ದಿಲ್ನಾ ಮತ್ತು ಸಹಾಯಕ ಮಾಹಿತಿ ಅಧಿಕಾರಿ ಎಸ್.ಚಿಲಂಗಾ ಚಟುವಟಿಕೆಗಳ ನೇತೃತ್ವ ವಹಿಸಿದ್ದರು. ಪಿಆರ್‌ಡಿ ಸಿಬ್ಬಂದಿ ಟಿ.ಕೆ.ಕೃಷ್ಣನ್, ಕೆ.ಸಂತೋಷ್ ಕುಮಾರ್, ಶಮಿತ್ ಮನೋಜ್, ಜಿಶಾ ಸುನೋಜ್, ಮ್ಯಾಥ್ಯೂ ಮಾಲತಿ ಅವರು ಮಾಧ್ಯಮ ಕೇಂದ್ರಗಳಲ್ಲಿ ಮತ್ತು ಪೃಥ್ವಿರಾಜ್ ಆಲಕಾನ, ನಿಹಾರಿಕಾ ರಾಘವನ್, ಶ್ರೀಲಕ್ಷ್ಮಿ, ರಮ್ಯಾ ಅವರು ವಿವಿಧ ಮತ ಎಣಿಕೆ ಕೇಂದ್ರಗಳಲ್ಲಿ ನೈಜ ಸಮಯದ ಮಾಹಿತಿ ಒದಗಿಸಲು ಕರ್ತವ್ಯ ನಿರ್ವಹಿಸಿದರು.

ಮತ ಎಣಿಕೆ ಕಾರ್ಯ ಯಶಸ್ವಿ

ಜಿಲ್ಲೆಯಲ್ಲಿ ವಿಧಾನಸಭಾ ಚುನಾವಣೆಯ ಮತ ಎಣಿಕೆ ಕಾರ್ಯವು ಯಶಸ್ವಿಯಾಗಿ ಪೂರ್ಣಗೊಂಡಿದೆ. ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಮತ ಎಣಿಕೆ ಕೇಂದ್ರಗಳಿಗೆ ಭೇಟಿ ನೀಡಿ ಚಟುವಟಿಕೆಗಳನ್ನು ಪರಿಶೀಲಿಸಿದರು. ವಿವಿಧ ಕ್ಷೇತ್ರಗಳಲ್ಲಿನ ಮತ ಎಣಿಕೆ ಚಟುವಟಿಕೆಗಳ ಬಗ್ಗೆ ವೀಕ್ಷಕರು, ಚುನಾವಣಾಧಿಕಾರಿಗಳು ನೇತೃತ್ವ ವಹಿಸಿದ್ದರು.

ಮತ ಎಣಿಕೆ ಪ್ರಕ್ರಿಯೆಗಾಗಿ ಜಿಲ್ಲೆಯಲ್ಲಿ 540 ಮಂದಿ ಅಧಿಕಾರಿಗಳನ್ನು ನಿಯೋಜಿಸಲಾಗಿತ್ತು. ಇವರಲ್ಲಿ ಆರ್‌ಒಗಳು, ಹೆಚ್ಚುವರಿ ಎಆರ್‌ಒಗಳು, ಮೈಕ್ರೋ ವೀಕ್ಷಕರು, ಎಣಿಕೆ ಮೇಲ್ವಿಚಾರಕರು ಮತ್ತು ಎಣಿಕೆ ಸಹಾಯಕರು ಸೇರಿದ್ದರು. ಇವಿಎಂಗಳಲ್ಲಿನ ಮತಗಳನ್ನು ಎಣಿಸಲು ಎಣಿಕೆ ಕೇಂದ್ರಗಳಲ್ಲಿ ಗರಿಷ್ಠ 14 ಎಣಿಕೆ ಕೋಷ್ಟಕಗಳನ್ನು ಸ್ಥಾಪಿಸಲಾಗಿತ್ತು. ಮೊದಲು ಅಂಚೆ ಮತಪತ್ರಗಳ ಎಣಿಕೆ ಪ್ರಾರಂಭವಾಯಿತು. 500ಕ್ಕಿಂತ ಕಡಿಮೆ ಮತಪತ್ರಗಳಿಗೆ ವಿಶೇಷ ಎಣಿಕೆ ಕೋಷ್ಟಕಗಳನ್ನು ಸ್ಥಾಪಿಸಲಾಗಿತ್ತು. ಪ್ರತಿಯೊಂದಕ್ಕೂ ಒಂದು ಟೇಬಲ್ ನಿಗದಿಪಡಿಸಲಾಗಿತ್ತು. ಈ ಉದ್ದೇಶಕ್ಕಾಗಿ ಎಆರ್‌ಒಗಳನ್ನು ಸಹ ನಿಯೋಜಿಸಲಾಗಿತ್ತು.

ಕಾಞಂಗಾಡು ಮತ್ತು ತೃಕ್ಕರೀಪುರ ಕ್ಷೇತ್ರಗಳ ಮತ ಎಣಿಕೆ ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ನಡೆಯಿತು. ಅಂಚೆ ಮತಪತ್ರಗಳ ಸ್ಟ್ರಾಂಗ್ ರೂಮ್ ಬೆಳಗ್ಗೆ 6.25ಕ್ಕೆ ತೆರೆಯಲಾಯಿತು. ಇವಿಎಂ ಸ್ಟ್ರಾಂಗ್ ರೂಮ್ ಬೆಳಗ್ಗೆ 6.36ಕ್ಕೆ ತೆರೆಯಲಾಯಿತು. ಚುನಾವಣಾಧಿಕಾರಿ ಆರ್. ಮನೋಜ್ ಮತ್ತು ವಿ.ಇ.ಶೆರ್ಲಿ ಅವರು ಮತ ಎಣಿಕೆ ವೀಕ್ಷಕರ ಸಮ್ಮುಖದಲ್ಲಿ ಎಣಿಕೆ ಚಟುವಟಿಕೆಗಳನ್ನು ನಡೆಸಿಕೊಟ್ಟರು. ಅಂಚೆ ಮತಪತ್ರಗಳ ಎಣಿಕೆ ಬೆಳಗ್ಗೆ 8 ಗಂಟೆಗೆ ಪ್ರಾರಂಭವಾಯಿತು. ನಂತರ ಇವಿಎಂ ಯಂತ್ರಗಳ ಎಣಿಕೆ ಬೆಳಗ್ಗೆ 8.30ಕ್ಕೆ ಪ್ರಾರಂಭವಾಯಿತು. ಕಾಞಂಗಾಡು ಕ್ಷೇತ್ರದಲ್ಲಿ ಮತ ಎಣಿಕೆಗಾಗಿ 10 ಅಂಚೆ ಮತಪತ್ರಗಳ ಟೇಬಲ್‌ಗಳು ಮತ್ತು 14 ಇವಿಎಂ ಟೇಬಲ್‌ಗಳನ್ನು ಸ್ಥಾಪಿಸಲಾಗಿತ್ತು. ಪೊಲೀಸ್ ಮತ್ತು ಸೇನೆಯಿಂದ ಭಾರೀ ಭದ್ರತೆ ಒದಗಿಸಲಾಗಿತ್ತು.

ಸರ್ಕಾರಿ ಕಾಲೇಜಿನಲ್ಲಿ ಮತ ಎಣಿಕೆ

ಕಾಸರಗೋಡು, ಉದುಮ ಮತ್ತು ಮಂಜೇಶ್ವರ ಕ್ಷೇತ್ರಗಳ ಮತ ಎಣಿಕೆ ಕಾರ್ಯವು ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ನಡೆಯಿತು. ಅಂಚೆ ಮತಪತ್ರಗಳ ಸ್ಟ್ರಾಂಗ್ ರೂಮ್ ಬೆಳಗ್ಗೆ 7 ಗಂಟೆಗೆ ತೆರೆಯಲಾಯಿತು. ಇವಿಎಂ ಸ್ಟ್ರಾಂಗ್ ರೂಮ್ ಬೆಳಗ್ಗೆ 7.30ಕ್ಕೆ ತೆರೆಯಲಾಯಿತು. ಚುನಾವಣಾಧಿಕಾರಿ ವಿ.ಪಿ.ರಘುಮಣಿ, ಬಿನು ಜೋಸೆಫ್ ಮತ್ತು ಲಿಪು ಎಸ್.ಲಾರೆನ್ಸ್ ಅವರು ಮತ ಎಣಿಕೆ ವೀಕ್ಷಕರ ಸಮ್ಮುಖದಲ್ಲಿ ಎಣಿಕೆ ಚಟುವಟಿಕೆಗಳನ್ನು ನಡೆಸಿಕೊಟ್ಟರು. ಅಂಚೆ ಮತಪತ್ರಗಳ ಎಣಿಕೆ ಬೆಳಗ್ಗೆ 8 ಗಂಟೆಗೆ ಪ್ರಾರಂಭವಾಯಿತು. ನಂತರ ಇವಿಎಂ ಯಂತ್ರಗಳ ಎಣಿಕೆ ಬೆಳಗ್ಗೆ 8.15ರ ಸುಮಾರಿಗೆ ಪ್ರಾರಂಭವಾಯಿತು.

ಎಡರಂಗದ ಮತ ಐಕ್ಯರಂಗಕ್ಕೆ: ಪ್ರಜಾಪ್ರಭುತ್ವಕ್ಕೇ ಅವಮಾನ



ಕಾಸರಗೋಡು: ಈ ಬಾರಿಯ ಕೇರಳ ವಿಧಾನಸಭಾಚುನಾವಣೆಯಲ್ಲಿಮಂಜೇಶ್ವರ ವಿಧಾನಸಭಾಕ್ಷೇತ್ರದಲ್ಲಿಎಡರಂಗ ಒಕ್ಕೂಟದ 20 ಸಾವಿರದಷ್ಟು ಮತಗಳು ಐಕ್ಯರಂಗದ ಅಭ್ಯರ್ಥಿಗೆ ಚಲಾವಣೆಯಾಗಿವೆ. ಇದು ಪ್ರಜಾಪ್ರಭುತ್ವಕ್ಕೆ ಅತ್ಯಂತ ಮಾರಕ ಮತ್ತು ಅವಮಾನವಾಗಿದ್ದು, ಎಡರಂಗ ಒಕ್ಕೂಟಕ್ಕೆ ನಾಚಿಗೇಡು ಎಂದು ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಪಕ್ಷದ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕೆ. ಸುರೇಂದ್ರನ್ ಹೇಳಿದ್ದಾರೆ.

ಬಿಜೆಪಿ ಕಾಸರಗೋಡು ಜಿಲ್ಲಾ ಕಾರ್ಯಾಲಯದಲ್ಲಿ ಸೋಮವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಮತದಾನದ ವೇಳೆ ಮಂಜೇಶ್ವರ ಮಂಡಲದ ಎಡರಂಗ ಒಕ್ಕೂಟದ ನಾಯಕರು ಮತಗಟ್ಟೆಗಳಿಗೆ ಆಗಮಿಸಲೇ ಇಲ್ಲ. ಇದು ಎಡರಂಗವು ಐಕ್ಯರಂಗಕ್ಕೆ ಮತ ಚಲಾಯಿಸಿರುವುದನ್ನು ಸ್ಪಷ್ಟಪಡಿಸುತ್ತದೆ ಎಂದರು.

ಮಂಜೇಶ್ವರ ಮಾತ್ರವಲ್ಲದೆ ಕಾಸರಗೋಡು ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಸಮುದಾಯ ಧ್ರುವೀಕರಣ ನಡೆದಿದೆ. ಮಂಜೇಶ್ವರದಲ್ಲಿ ಎಲ್‌ಡಿಎಫ್‌ಗೆ 20 ಸಾವಿರ ಮತಗಳು ನಷ್ಟವಾಗಿವೆ. ಮುಸ್ಲಿಂಲೀಗ್ ಮತ್ತು ಇತರ ಕೋಮುವಾದಿ ಸಂಘಟನೆಗಳು ಸಮುದಾಯ ಧ್ರುವೀಕರಣಕ್ಕೆ ಷಡ್ಯಂತ್ರ ಹೆಣೆದಿದ್ದವು. ಮತೀಯ ಸಂಘಟನೆಗಳು ಮಂಜೇಶ್ವರದಲ್ಲಿ ಪ್ರಾರಂಭದಿಂದಲೇ ಬಿಜೆಪಿಯನ್ನು ಸೋಲಿಸಲು ಯತ್ನಿಸಿವೆ ಎಂದು ಸಹಿತ ವಿವರಿಸಿದರು.

ಕಾಸರಗೋಡು ಜಿಲ್ಲೆಯ ಎಲ್ಲಾ ಐದು ವಿಧಾನಸಭಾ ಕ್ಷೇತ್ರಗಳಲ್ಲಿಯೂ ಬಿಜೆಪಿಯ ಮತಗಳು ಬಹಳಷ್ಟು ವೃದ್ಧಿಯಾಗಿವೆ. ಮಂಜೇಶ್ವರ ಮತ್ತು ಕಾಸರಗೋಡು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಮತಗಳು ಭಾರೀ ಪ್ರಮಾಣದಲ್ಲಿ ಏರಿಕೆಯಾಗಿವೆ. ವಿಧಾನಸಭಾ ಚುನಾವಣೆಯನ್ನು ಅವಲೋಕಿಸಿದಾಗ ಬಿಜೆಪಿ ಭಾರೀ ಮುನ್ನಡೆ ಸಾಧಿಸಿರುವುದು ಕಂಡುಬರುತ್ತಿದೆ ಎಂದರು.

ಕೇರಳದಲ್ಲಿ ಮತದಾರರು ಮೂರನೇ ಬದಲಿ ಶಕ್ತಿಯನ್ನು ಇಚ್ಛಿಸುತ್ತಿದ್ದಾರೆ. ರಾಜ್ಯದ ಮೂರು ಕಡೆಗಳಲ್ಲಿ ಎನ್‌ಡಿಎ ಮೈತ್ರಿಕೂಟವು ಗೆಲುವು ಸಾಧಿಸಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ರಾಜ್ಯದಲ್ಲಿ ಬಿಜೆಪಿಗೆ ಖಾತೆ ತೆರೆಯಲು ಬಿಡುವುದಿಲ್ಲ ಎಂದು ಎಡರಂಗ ಮತ್ತು ಐಕ್ಯರಂಗ ಒಕ್ಕೂಟಗಳ ಮುಖಂಡರು ಹೇಳಿದ್ದರು. ಆದರೆ ಅವರ ಮಾತುಗಳಿಗೆ ಮತದಾರರು ಕಿಂಚಿತ್ ಬೆಲೆಯನ್ನೂ ನೀಡಲಿಲ್ಲ ಎಂದರು.

ಕೇರಳದಲ್ಲಿ ಮುಂದಿನ ಚುನಾವಣೆಗಳಲ್ಲಿ ಬಿಜೆಪಿ ಹಂತ ಹಂತವಾಗಿ ಹೆಚ್ಚಿನ ಸೀಟು ಪಡೆಯಲಿದೆ. ದೇಶದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಆಡಳಿತಕ್ಕೆ ಜನರು ಮನ್ನಣೆ ನೀಡಿದ್ದಾರೆ. ಪಶ್ಚಿಮ ಬಂಗಾಳ, ತಮಿಳುನಾಡು, ಅಸ್ಸಾಂ, ಪುದುಚ್ಚೇರಿಯಲ್ಲಿ ಭಾರೀ ಬದಲಾವಣೆಯಾಗಿದೆ. ಕೇರಳದಲ್ಲೂ ನರೇಂದ್ರ ಮೋದಿ ಅಭಿವೃದ್ಧಿ ರಾಜಕೀಯಕ್ಕೆ ಜನಬೆಂಬಲ ವ್ಯಕ್ತವಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ, ಕಲ್ಲಿಕೋಟೆ ವಲಯ ಸಮಿತಿ ಉಪಾಧ್ಯಕ್ಷ ಎಂ.ವಿಜಯಕುಮಾರ್ ರೈ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್. ಸುನೀಲ್, ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ ಇದ್ದರು.

ವಿಧಾನಸಭಾ ಚುನಾವಣೆಯ ಮತ ಎಣಿಕೆ ಯಶಸ್ವಿ: ಕೃತಜ್ಞತೆ ಸಲ್ಲಿಸಿದ ಡಿಸಿ

ಕಾಸರಗೋಡು: ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಮತ ಎಣಿಕೆ ಪ್ರಕ್ರಿಯೆಯನ್ನು ಶಾಂತಿಯುತ ಮತ್ತು ಪಾರದರ್ಶಕ ರೀತಿಯಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸುವಲ್ಲಿ ಸಹಕರಿಸಿದ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಮತ ಎಣಿಕೆ ಅಧಿಕಾರಿಗಳು, ವಿವಿಧ ಚುನಾವಣಾ ಕರ್ತವ್ಯಗಳನ್ನು ನಿರ್ವಹಿಸಿದ ಅಧಿಕಾರಿಗಳು, ಭದ್ರತಾ ಪಡೆಗಳು ಮತ್ತು ಸಾರ್ವಜನಿಕರಿಗೆ ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಕೃತಜ್ಞತೆ ಸಲ್ಲಿಸಿದ್ದಾರೆ.



ಪ್ರಜಾಪ್ರಭುತ್ವದ ಮಹಾನ್ ಹಬ್ಬವಾದ ಮತ ಎಣಿಕೆಯ ಅಂತಿಮ ಹಂತದ ಚುನಾವಣಾ ಪ್ರಕ್ರಿಯೆಯನ್ನು ಶಾಂತಿಯುತವಾಗಿ ಪೂರ್ಣಗೊಳಿಸುವಲ್ಲಿ ಎಲ್ಲರೂ ತೋರಿದ ಸಹಕಾರ ಮತ್ತು ಜವಾಬ್ದಾರಿಯ ಪ್ರಜ್ಞೆ ಅನುಕರಣೀಯವಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದರು. ಐದು ವಿಧಾನಸಭಾ ಕ್ಷೇತ್ರಗಳ ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು, ವಿವಿಧ ಇಲಾಖೆಗಳ ನೌಕರರು, ಮತ ಎಣಿಕೆ ಮೇಲ್ವಿಚಾರಕರು ಮತ್ತು ಸೂಕ್ಷ್ಮ ವೀಕ್ಷಕರು ಸೇರಿದಂತೆ ಚುನಾವಣಾ ವ್ಯವಸ್ಥೆಯ ಎಲ್ಲಾ ಅಧಿಕಾರಿಗಳು ಅತ್ಯಂತ ಎಚ್ಚರಿಕೆಯಿಂದ ಮತ್ತು ನಿಖರವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದ್ದಾರೆ ಎಂದು ಅವರು ತಿಳಿಸಿದರು.

ಚುನಾವಣಾ ಪ್ರಕ್ರಿಯೆಯ ಉದ್ದಕ್ಕೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಖಾತರಿಪಡಿಸುವಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ನಿರ್ವಹಿಸಿದ ಸಹಕಾರಿ ಮನೋಭಾವ ಮತ್ತು ಜನರು ತೋರಿಸಿದ ಸಹಿಷ್ಣುತೆ ನಿರ್ಣಾಯಕ ಪಾತ್ರ ವಹಿಸಿದೆ ಎಂದು ಅರ್ಜುನ್ ಪಾಂಡ್ಯನ್ ಗಮನ ಸೆಳೆದರು. ಐದು ವಿಧಾನಸಭಾ ಕ್ಷೇತ್ರಗಳ ಚುನಾವಣಾ ಅಧಿಕಾರಿಗಳು ಚುನಾವಣಾ ಅವಧಿಯಲ್ಲಿ ಅನುಕರಣೀಯ ಕೆಲಸ ನಿರ್ವಹಿಸಿದ್ದಾರೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಎತ್ತಿಹಿಡಿಯುವ ಸೇವೆಯನ್ನು ಸಲ್ಲಿಸಿದ್ದಾರೆ ಎಂದು ಅವರು ಹೇಳಿದರು. ಅವರ ಸಮರ್ಪಣೆ ಮತ್ತು ಕರ್ತವ್ಯ ನಿರ್ವಹಣೆ ವಿಶೇಷ ಮೆಚ್ಚುಗೆಗೆ ಅರ್ಹವಾಗಿದೆ ಎಂದು ಜಿಲ್ಲಾಧಿಕಾರಿ ಉಲ್ಲೇಖಿಸಿದ್ದಾರೆ.

ಮತ ಎಣಿಕೆಗೆ ತಜ್ಞರ ನೆರವು: ಅಧಿಕಾರಿಗಳಿಗೆ ಸಿಬ್ಬಂದಿಗೆ ತರಬೇತಿ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಜಿಲ್ಲೆಯಲ್ಲಿ ಮತ ಎಣಿಕೆಗೆ ತಜ್ಞರ ನೆರವು ಮತ್ತು ಸೇವೆಸಮರ್ಪಕವಾಗಿಲಭ್ಯವಾಯಿತು. ಕಾಸರಗೋಡು ಸರಕಾರಿ ಕಾಲೇಜು ಮತ್ತು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ನಡೆದ ಮತ ಎಣಿಕೆ ಪ್ರಕ್ರಿಯೆಯು ಸುಗಮವಾಗಿ ಮತ್ತು ದೋಷರಹಿತವಾಗಿ ನಡೆಯುವಂತೆ ತಜ್ಞರ ತರಬೇತಿ ತಂಡದ ಸೇವೆಗಳು ಮತ್ತು ಸಹಾಯವು ಬಹಳಷ್ಟು ಪ್ರಯೋಜನಕ್ಕೆ ಕಾರಣವಾದವು.

ಈ ಉದ್ದೇಶಕ್ಕಾಗಿ ಮತ ಎಣಿಕೆ ಪ್ರಕ್ರಿಯೆಯ ಜ್ಞಾನವಿರುವ ತರಬೇತುದಾರರ ತಂಡವನ್ನು ನೇಮಿಸಲಾಯಿತು. ತರಬೇತಿ ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿತ್ತು. ಜಿಲ್ಲಾ ಮಟ್ಟದ ತಜ್ಞರ ಸಮಿತಿ ಮತ್ತು ವಿಧಾನಸಭಾ ಮಟ್ಟದ ತಜ್ಞರ ಸಮಿತಿ ಎಂಬ ಎರಡು ತಂಡಗಳಿದ್ದವು. ಜಿಲ್ಲಾ ಮಟ್ಟದ ತಜ್ಞರ ಸಮಿತಿ ಸದಸ್ಯರು ಮತ್ತು ವಿಧಾನಸಭಾ ಮಟ್ಟದ ತಜ್ಞರ ಸಮಿತಿ ಸದಸ್ಯರು ವಿವಿಧ ಮತಗಟ್ಟೆಗಳಲ್ಲಿ ಚುನಾವಣಾ ಅಧಿಕಾರಿಗಳಿಗೆ ಅಗತ್ಯ ಸಹಾಯ ಮತ್ತು ಸೂಚನೆಗಳನ್ನು ನೀಡಿದರು.

ರಾಜ್ಯ ಮಟ್ಟದ ಮಾಸ್ಟರ್ ತರಬೇತುದಾರರಾದ ಪಿ.ಸಜಿತ್‌ಕುಮಾರ್, ಕೆ.ಮಧು, ಎಂ.ವಲ್ಸನ್, ಜಿಲ್ಲಾ ಮಟ್ಟದ ತರಬೇತುದಾರರಾದ ಬಿ.ಅಜಿತ್ ಕುಮಾರ್, ಎಂ.ಬಿ.ಲೋಕೇಶ್ ಸೇರಿದಂತೆ ಸುಮಾರು 25 ಮಂದಿ ತರಬೇತುದಾರರ ಸಹಾಯ ಮತ್ತು ಮುಹಮ್ಮದ್ ಅನಸ್ ನೇತೃತ್ವದಲ್ಲಿ ತಾಂತ್ರಿಕ ನೆರವು ನೀಡಲಾಯಿತು. ಜಿಲ್ಲೆಯಲ್ಲಿ ಇದುವರೆಗಿನ ತರಬೇತಿ ಕಾರ್ಯಕ್ರಮಗಳಿಗೆ ಚುನಾವಣಾ ತರಬೇತಿಯ ನೋಡಲ್ ಅಧಿಕಾರಿ ಬಿ.ರಾಮು ನೇತೃತ್ವ ವಹಿಸಿದ್ದರು.

ಪೆರಿಯ 'ವೈಶಾಖ ನಟನಂ': ಗೋಕುಲವನ್ನು ವೃಂದಾವನವಾಗಿಸಿದ ಡಾ. ಲತಾ ಸುರೇಂದ್ರನ್





ಕಾಸರಗೋಡು: ಪೆರಿಯ ಬೇಕಲ ಗೋಕುಲಂ ಗೋಶಾಲೆಯಲ್ಲಿ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಮೂರನೇ ವೈಶಾಖ ನಟನಂ ಎಂಬ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಮುಂಬೈನ ಡಾ.ಲತಾ ಸುರೇಂದ್ರನ್ ಮತ್ತು ತಂಡದವರು ಪ್ರಸ್ತುತಪಡಿಸಿದ ರಾಧಾಮಾಧವಂ ನೃತ್ಯ ರೂಪಕವು ವೃಂದಾವನದ ರಾಸಲೀಲೆಯನ್ನು ನೆನಪಿಸುವಂತೆ ಅತ್ಯಂತ ಮನೋಜ್ಞವಾಗಿ ಮೂಡಿಬಂದಿದೆ.

ತಮ್ಮ 72ನೇ ವಯಸ್ಸಿನಲ್ಲೂ ಡಾ.ಲತಾ ಸುರೇಂದ್ರನ್ ಅವರು ಎರಡು ಗಂಟೆಗಳ ಕಾಲ ಸುದೀರ್ಘವಾಗಿ ನಡೆದ ನೃತ್ಯ ನಾಟಕದಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಳ್ಳುವ ಮೂಲಕ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು.

ಮೀನಾಕ್ಷಿ ಚಿತ್ತರಂಜನ್ ನರ್ತನ

ವೈಶಾಖ ನಟನಂ ಉತ್ಸವದ ಮೂರನೇ ದಿನದ ಪ್ರಮುಖ ಆಕರ್ಷಣೆಯಾಗಿ ಧೇನು ಮಂಟಪದಲ್ಲಿ ಪದ್ಮಶ್ರೀ ಮೀನಾಕ್ಷಿ ಚಿತ್ತರಂಜನ್ ಅವರ ಭರತನಾಟ್ಯ ಪ್ರದರ್ಶನ ಜರಗಿತು. ಪಂದನಲ್ಲೂರು ನೃತ್ಯ ಶೈಲಿಯನ್ನು ಪೋಷಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಅವರ ನೃತ್ಯ ಕಲೆಯ ವೈಭವವನ್ನು ಕಣ್ತುಂಬಿಕೊಳ್ಳಲು ನೃತ್ಯ ಕಲಾವಿದರು ಸೇರಿದಂತೆ ಅಪಾರ ಸಂಖ್ಯೆಯ ಕಲಾಭಿಮಾನಿಗಳು ಉಪಸ್ಥಿತರಿದ್ದರು.

ನಾರಂಪಾಡಿ: ವಸಂತಿ ಟೀಚರ್‌ಗೆ ಸನ್ಮಾನ



ಬದಿಯಡ್ಕ: ನಾರಂಪಾಡಿ ಶ್ರೀ ಉಮಾ ಮಹೇಶ್ವರ ಕ್ಷೇತ್ರದಲ್ಲಿ ಹಿರಿಯರಾದ ವಸಂತಿ ಟೀಚರ್ ಅಗಲ್ಪಾಡಿ ಅವರಿಗೆ ಸೇವಾ ಸಮಿತಿ, ಭಜನಾ ಸಮಿತಿ ಹಾಗೂ ಮಾತೃ ಸಮಿತಿಯ ಪರವಾಗಿ ಗೌರವಾರ್ಪಣೆ ನಡೆಯಿತು. ಅಧ್ಯಕ್ಷತೆ ವಹಿಸಿದ್ದ ಬಾಲಕೃಷ್ಣ ಮಾಸ್ಟರ್ ನಾರಂಪಾಡಿ ಮಾತನಾಡಿದರು. ಹರಿನಾರಾಯಣ ಶಿರಂತಡ್ಕ ಸ್ವಾಗತಿಸಿ, ಗೋಪಾಲಕೃಷ್ಣ ಮುಂಡೋಲುಮೂಲೆ ವಂದಿಸಿದರು.

ಮೇ 16ರಂದು ದತ್ತಿನಿಧಿ ಪ್ರಶಸ್ತಿ ಪ್ರದಾನ, ಕನ್ನಡ ಸಂಸ್ಕೃತಿ ಉತ್ಸವ



ಕಾಸರಗೋಡು: ಕಾಸರಗೋಡು ಜಿಲ್ಲಾಕನ್ನಡಪತ್ರಕರ್ತರಕ್ಷೇಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ಮೇ 16ರಂದು ಕುಡಾಲುಮೇರ್ಕಳ ಅನುದಾನಿತ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 5ನೇ ವರ್ಷದ ದತ್ತಿನಿಧಿ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಕನ್ನಡ ಸಂಸ್ಕೃತಿ ಉತ್ಸವ–2026 ಕಾರ್ಯಕ್ರಮ ಜರಗಲಿದೆ. ಇದರ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭ ಹಾಗೂ ಅಂತಿಮ ರೂಪುರೇಷೆ ಸಭೆ ಶನಿವಾರ ಕುಡಾಲುಮೇರ್ಕಳ ಅನುದಾನಿತ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಜರಗಿತು.

ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ (ಒಮಾನ್ ಘಟಕ) ಅಧ್ಯಕ್ಷ ಅಬೂಬಕ್ಕರ್ ರಾಯಲ್ ಬೊಳ್ಳಾರ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆಗೊಳಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯ ಹಾಗೂ ಸ್ವಾಗತ ಸಮಿತಿ ಅಧ್ಯಕ್ಷರಾದ ಸೋಮಶೇಖರ ಜೆ.ಎಸ್. ಅಧ್ಯಕ್ಷತೆ ವಹಿಸಿದ್ದರು. ಶಾಲಾ ವ್ಯವಸ್ಥಾಪಕ ಬಿ.ಎ.ಖಾದರ್ ಹಾಜಿ, ಪ್ರಧಾನ ಸಂಚಾಲಕ ಅಶೋಕ ಭಂಡಾರಿ, ಸಂಘದ ಗೌರವಾಧ್ಯಕ್ಷ ಎ.ಆರ್. ಸುಬ್ಬಯ್ಯಕಟ್ಟೆ, ಸ್ವಾಗತ ಸಮಿತಿ ಉಪಾಧ್ಯಕ್ಷ ಬಿ.ಎ.ಬಶೀರ್, ಸಂಚಾಲಕ ಮುಹಮ್ಮದಲಿ ಬಿ.ಕೆ., ಆಹಾರ ಸಮಿತಿ ಅಧ್ಯಕ್ಷೆ ಶಶಿಕಲಾ ರೈ, ವಕೀಲ ಥೋಮಸ್ ಡಿಸೋಜಾ, ಸಾಂಸ್ಕೃತಿಕ ಸಮಿತಿ ಸಂಚಾಲಕ ಎಸ್.ಕೆ.ಬಾಲಕೃಷ್ಣ, ಗಂಗಾಧರ ಕೆ., ಅಚ್ಯುತ ಚೇವಾರ್, ಮುಹಮ್ಮದ್ ಕುಂಞಿ, ಪುಷ್ಪಾ ಕಮಲಾಕ್ಷ ಸೇರಿದಂತೆ ಹಲವರು ಮಾತನಾಡಿದರು.

ಸಭೆಯಲ್ಲಿ ಉತ್ಸವದ ಅಂತಿಮ ರೂಪುರೇಷೆಗಳ ಬಗ್ಗೆ ಚರ್ಚೆ ನಡೆಯಿತು. ಅನೇಕರು ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಿದರು. ಸಂಘದ ಅಧ್ಯಕ್ಷ ರವಿ ನಾಯ್ಕಾಪು ಸ್ವಾಗತಿಸಿ, ಕೋಶಾಧಿಕಾರಿ ಶ್ರೀಕಾಂತ್ ನೆಟ್ಟಣಿಗೆ ವಂದಿಸಿದರು.

ಇಡೀ ದಿನ ನಡೆಯುವ ಉತ್ಸವದಲ್ಲಿ ಪ್ರಮುಖ ತಂಡಗಳ ಸಾಂಸ್ಕೃತಿಕ ಪ್ರದರ್ಶನ ನಡೆಯಲಿದೆ.

ಸುತ್ತಮುತ್ತ

ಮೇ 9ರಿಂದ ಚಿತ್ತಾರಿ ಉಳ್ಳಾಲ್ತಿ ದೇವಿ ಚಾವಡಿ ಧರ್ಮ ನೇಮ

ಮಂಜೇಶ್ವರ: ವೈಶಕೆ ಅರಮನೆ ಚಿತ್ತಾರಿ ಶ್ರೀ ಉಳ್ಳಾಲ್ತಿ ದೇವಿ ಚಾವಡಿಯಲ್ಲಿ ವಾರ್ಷಿಕ ಧರ್ಮ ನೇಮ ಮೇ 9ರಿಂದ 11ರ ವರೆಗೆ ಜರಗಲಿದೆ. ಮೇ 9ರಂದು ರಾತ್ರಿ 8 ಗಂಟೆಗೆ ಗಣಪತಿಪೂಜೆ, 8.30ಕ್ಕೆ ಅನ್ನ ಸಂತರ್ಪಣೆ ನಡೆಯಲಿದೆ. ಮೇ 10ರಂದು ಮುಂಜಾನೆ 4 ಗಂಟೆಗೆ ಚಿತ್ತಾರಿ ಚಾವಡಿಯಲ್ಲಿ ತಂಬಿಲ, 4.30ಕ್ಕೆ ಅಣ್ಣ ದೈವ ನೇಮ, ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ, ಸಂಜೆ 4ಕ್ಕೆ ತಂಬಿಲ, 4.30ಕ್ಕೆ ಶ್ರೀ ಉಳ್ಳಾಲ್ತಿ ಧರ್ಮನೇಮ ನಡೆಯಲಿದೆ. ಮೇ 11ರಂದು ಸಂಜೆ 4ಕ್ಕೆ ತಂಬಿಲ, 4.30ಕ್ಕೆ ತಮ್ಮ ದೈವದ ನೇಮ ನಡೆಯಲಿದೆ.

9ರಿಂದ ಪಳ್ಳದಕೊಟ್ಯ ಧರ್ಮನೇಮ

ಕಾಸರಗೋಡು: ನೆಲ್ಲಿಕುಂಜೆ ಪಳ್ಳದಕೊಟ್ಯ ಶ್ರೀ ಧೂಮಾವತಿ ದೈವಸ್ಥಾನದಲ್ಲಿ ವಾರ್ಷಿಕೋತ್ಸವ ಹಾಗೂ ಧರ್ಮನೇಮ ಮೇ 9 ಮತ್ತು 10ರಂದು ಜರಗಲಿದೆ. 9ರಂದು ಬೆಳಗ್ಗೆ 8 ಗಂಟೆಗೆ ಗಣಪತಿಹೋಮ, 9ಕ್ಕೆ ನಾಗತಂಬಿಲ, 11 ಗಂಟೆಗೆ ಶ್ರೀ ವೆಂಕಟ್ರಮಣ ದೇವರ ಹರಿಸೇವೆ, ಮಧ್ಯಾಹ್ನ ಅನ್ನ ಸಂತರ್ಪಣೆ, ಸಂಜೆ 5.30ಕ್ಕೆ ಭಂಡಾರ ಇಳಿಯುವುದು, ರಾತ್ರಿ 7ಗಂಟೆಗೆ ಗುಳಿಗನ ಕೋಲ, ಗುರುಹಿರಿಯರಿಗೆ ಬಡಿಸುವುದು, ಅನ್ನಸಂತರ್ಪಣೆ ನಡೆಯಲಿದೆ. 10ರಂದು ಬೆಳಗ್ಗೆ 10 ಗಂಟೆಗೆ ಶ್ರೀ ಧೂಮಾವತಿ ದೈವದ ಧರ್ಮನೇಮ, ಕೊರತಿ ಅಮ್ಮನ ಕೋಲ, ಅನ್ನ ಸಂತರ್ಪಣೆ ನಡೆಯಲಿದೆ.

ಖಾಸಗಿ ಬಸ್‌ಗಳಲ್ಲಿ ಶಟರ್ ಅಳವಡಿಕೆಗೆ ಅನುಮತಿ: ಮನವಿ

ಕಾಸರಗೋಡು: ಕೇಂದ್ರ ಸರ್ಕಾರದ ಬಾಡಿ ಕೋಡ್ ಪ್ರಕಾರ ಪ್ರಸ್ತುತ ಖಾಸಗಿ ಬಸ್‌ಗಳಲ್ಲಿ ಫಿಕ್ಸ್ ಮಾಡಿರುವ ವಿಂಡೋ ಗ್ಲಾಸ್‌ಗಳಿಂದಾಗಿ ಹಾಗೂ ಹವಾಮಾನ ವೈಪರೀತ್ಯದಿಂದ ಸಂಭವಿಸುವ ಅತ್ಯುಷ್ಣದಿಂದಾಗಿ ಪ್ರಯಾಣಿಕರು ಬಹಳಷ್ಟು ಸಮಸ್ಯೆಗೀಡಾಗುತ್ತಿದ್ದಾರೆ. ಇದಕ್ಕೆ ಪರಿಹಾರವಾಗಿ ಇನ್ನು ಸ್ಟೇಜ್ ಕ್ಯಾರೇಜ್ ಬಸ್‌ಗಳಲ್ಲಿ ಬಾಡಿ ನಿರ್ಮಾಣ ವೇಳೆಯಲ್ಲಿಯೇ ಗಾಜಿನ ಬದಲಾಗಿ ಶಟರ್ ಸ್ಥಾಪಿಸಲು ಅನುಮತಿ ನೀಡಬೇಕೆಂದೂ, ಈ ಬಾಡಿ ಮಾಡುವ ವೇಳೆಯಲ್ಲಿ ಅಸಲೀ ಇರುವವರಿಗೆ ಶಟರ್ ಸ್ಥಾಪಿಸಲು ಅನುಮತಿ ನೀಡಬೇಕೆಂದು ಕೇರಳ ಸರ್ಕಾರಿ ಟ್ರಾನ್ಸ್‌ಪೋರ್ಟ್ ಕಮಿಷನರ್ ಮೂಲಕ ಕೇಂದ್ರ ಸರಕಾರಕ್ಕೆ ರಾಜ್ಯ ಫೆಡರೇಷನ್ ಮುಖೇನ ಮನವಿ ನೀಡಲು ಬಸ್ ಆಪರೇಟರ್ಸ್ ಫೆಡರೇಷನ್ ತಾಲೂಕು ಮಹಾಸಭೆ ತೀರ್ಮಾನಿಸಿತು. ಫೆಡರೇಷನ್ ಕಾರ್ಯದರ್ಶಿ ಸಿ.ಎ.ಮುಹಮ್ಮದ್ ಕುಂಞಿ ಸ್ವಾಗತಿಸಿದರು. ಅಧ್ಯಕ್ಷ ಕೆ.ಎನ್.ಬಾಲಕೃಷ್ಣನ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧ್ಯಕ್ಷ ಕೆ.ಗಿರೀಶ್, ಕೋಶಾಧಿಕಾರಿ ಕಾರ್ತಿಕ್‌ರಾಜ್ ಮಾತನಾಡಿದರು.

ಕಾರ್ಮಿಕರ ದಿನಾಚರಣೆ ರ‍್ಯಾಲಿ

ಕಾಸರಗೋಡು: ಅಮೇರಿಕಾದ ಚಿಕಾಗೋದಲ್ಲಿ 8ಗಂಟೆಗಳ ಕೆಲಸ, 8ಗಂಟೆಗಳ ಮನರಂಜನೆ ಮತ್ತು 8ಗಂಟೆಗಳ ವಿಶ್ರಾಂತಿಗಾಗಿ ಒತ್ತಾಯಿಸಿ ನಡೆದ ಕಾರ್ಮಿಕರ ಚಳವಳಿಯ ನೆನಪಿಗಾಗಿ ಮೇ 1ರಂದು ಯುನೈಟೆಡ್ ಟ್ರೇಡ್ ಯೂನಿಯನ್‌ಗಳ ನೇತೃತ್ವದಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕರ ದಿನವನ್ನು ಆಚರಿಸಲಾಗುತ್ತದೆ. ಇದರ ಅಂಗವಾಗಿ ಕಾಸರಗೋಡಿನಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಹೊಸ ಬಸ್ ನಿಲ್ದಾಣದ ತನಕ ಮೇ ಡೇ ರ‍್ಯಾಲಿ ಮತ್ತು ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗಿತ್ತು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮಣಿಮೋಹನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಎಐಟಿಯುಸಿ ಮುಖಂಡ ಮಧುಸೂದನನ್ ನಂಬಿಯಾರ್ ಅಧ್ಯಕ್ಷತೆ ವಹಿಸಿದ್ದರು. ವಿವಿಧ ಸಂಘಟನೆಗಳ ಪ್ರಮುಖರು ಭಾಗವಹಿಸಿದ್ದರು.

ಅಡುಗೆ ಕಾರ್ಮಿಕರ ನೇಮಕಾತಿ

ಕಾಸರಗೋಡು: ಚೆಮ್ನಾಡು ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಅಡುಗೆಯವರ ನೇಮಕಾತಿಗಾಗಿ ಸಂದರ್ಶನವು ಮೇ 6 ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 04994 278221 ಅಥವಾ 9946780801 ಕರೆ ಮಾಡಬಹುದು.

ಮೇ 12: ಮಂಜೇಶ್ವರದಲ್ಲಿ ಸಂಶೋಧನಾ ಕಮ್ಮಟ

ಮಂಜೇಶ್ವರ: ಕನ್ನಡ ಸಂಶೋಧನಾ ಕೇಂದ್ರದ ನೇತೃತ್ವದಲ್ಲಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನ ಕನ್ನಡ ವಿಭಾಗದ ಸಹಯೋಗದಲ್ಲಿ ಒಂದು ದಿನದ ಸಂಶೋಧನಾ ಕಮ್ಮಟವನ್ನು ಮೇ 12ರಂದು ಆಯೋಜಿಸಲಾಗಿದೆ. ಬೆಳಗ್ಗೆ 10 ಗಂಟೆಗೆ ಕಾರ್ಯಕ್ರಮವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕ ಡಾ.ಮೋಹನಕೃಷ್ಣ ರೈ ಉದ್ಘಾಟಿಸುವರು. ಕಾಲೇಜು ಪ್ರಾಂಶುಪಾಲ ಡಾ.ಮೊಹಮ್ಮದಾಲಿ ಅಧ್ಯಕ್ಷತೆ ವಹಿಸುವರು. ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಮೋಹನ ಕುಂಟಾರು ಪ್ರಾಸ್ತಾವಿಕವಾಗಿ ಮಾತನಾಡುವರು. ಕನ್ನಡ ಪ್ರಾಧ್ಯಾಪಕ ಡಾ.ರತ್ನಾಕರ ಮಲ್ಲಮೂಲೆ ಉಪಸ್ಥಿತರಿರುವರು. ಸಂಶೋಧನಾ ವಿಧಾನಕ್ಕೆ ಸಂಬಂಧಿಸಿದ ಪ್ರಾಥಮಿಕ ತಿಳುವಳಿಕೆಯನ್ನು ಪ್ರಸ್ತುತ ಕಮ್ಮಟದಲ್ಲಿ ನೀಡಲಾಗುವುದು. ವಿವಿಧ ಸಂಪನ್ಮೂಲ ವಿದ್ವಾಂಸರು ಉಪನ್ಯಾಸ, ಸಂವಾದಗಳ ಮೂಲಕ ಕಮ್ಮಟವನ್ನು ನಡೆಸಿಕೊಡಲಿದ್ದಾರೆ. ಅಕಾಡೆಮಿಕ್, ನಾನ್ ಅಕಾಡೆಮಿಕ್ ಸಂಶೋಧನಾಸಕ್ತರು ಕಾರ್ಯಕ್ರಮದ ಪ್ರಯೋಜನ ಪಡೆಯಬಹುದಾಗಿದೆ. ಮೇ 10ರ ಮುಂಚಿತವಾಗಿ ಕೇಂದ್ರದ ನಿರ್ದೇಶಕರ 9448997450 ಮೊಬೈಲ್ ಸಂಖ್ಯೆಗೆ ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದು.


ಹವ್ಯಕ ಮಹಾಮಂಡಲ, ಮುಳ್ಳೇರಿಯ ಮಂಡಲ, ಗುಂಪೆ ವಲಯ, ದಾನಿಗಳು, ಸಂಘಟನೆಗಳಿಂದ ಶಿಥಿಲಗೊಂಡಿದ್ದ ಮನೆ ನವೀಕರಣ

ಸೇವಾ ಮನೋಭಾವಕ್ಕೆ ಸಾಕ್ಷಿಯಾಯಿತು ಪುತ್ತಿಗೆಯ ಶ್ರೀ ಗುರುಕಾರುಣ್ಯ ಗೃಹಪ್ರವೇಶ

ಕಾಸರಗೋಡು: ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ದಿವ್ಯಾನುಗ್ರಹದಿಂದ ಮುಳ್ಳೇರಿಯ ಹವ್ಯಕ ಮಂಡಲ ಗುಂಪೆ ವಲಯದ ಪುತ್ತಿಗೆ ಕೃಷ್ಣ ಹೆಬ್ಬಾರ್‌ರ ಶಿಥಿಲಗೊಂಡಿದ್ದ ಮನೆಯನ್ನು ನವೀಕರಿಸಲಾಗಿದ್ದು, ಶನಿವಾರ ನೂತನ ಗೃಹ ಶ್ರೀ ಗುರುಕಾರುಣ್ಯ ನಿವಾಸದ ಪ್ರವೇಶ ನೆರವೇರಿತು.

ಬಳಿಕ ನಡೆದ ಸಭೆಯಲ್ಲಿ ಗುಂಪೆ ವಲಯಾಧ್ಯಕ್ಷ ಕುಮಾರಸುಬ್ರಹ್ಮಣ್ಯ ಕೊಂದಲಕಾಡು ಅಧ್ಯಕ್ಷತೆ ವಹಿಸಿದ್ದರು. ಇ.ಎಸ್. ಮಹಾಬಲೇಶ್ವರ ಭಟ್ ಧ್ವಜಾರೋಹಣ ನೆರವೇರಿಸಿದರು. ಮುಖ್ಯ ಅತಿಥಿ ಹವ್ಯಕ ಮಹಾಮಂಡಲ ಅಧ್ಯಕ್ಷ ಹರಿಪ್ರಸಾದ್ ಪೆರಿಯಪ್ಪು ಮಾತನಾಡಿ, ಗೋಮಾತೆ ಮತ್ತು ಗುರುವಿನ ನಡುವಿನ ಅನುಬಂಧವು ಈ ನಿವಾಸದ





ನವೀಕರಣದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದರು.

ಮಳೆ ನೀರು ಒಳಗೆ ಬರುವಷ್ಟು ಶಿಥಿಲಗೊಂಡ ಮನೆಯಲ್ಲಿ ವಾಸಿಸುತ್ತಿದ್ದ ಹೆಬ್ಬಾರ್‌ರ ಕುಟುಂಬದ ಕಷ್ಟಕ್ಕೆ ಸ್ಪಂದಿಸುವುದು ನಮ್ಮೆಲ್ಲರ ಆದ್ಯತೆಯಾಗಿತ್ತು. ಇದು ನನ್ನ ಮೂರನೇ ಮನೆ ನಿರ್ಮಾಣದ ಅನುಭವ. ನಾಲ್ಕನೆಯ ಮನೆ ನಿರ್ಮಾಣದ ಹಂತದಲ್ಲಿದೆ ಎಂದು ಇ.ಎಸ್.ಮಹಾಬಲೇಶ್ವರ ಭಟ್ ನುಡಿದರು.

ಹವ್ಯಕ ಮಹಾಮಂಡಲದ ಸಹಾಯ ಪ್ರಧಾನರಾದ ವಿದ್ಯಾಲಕ್ಷ್ಮಿ ಕೈಲಂಕಜೆ, ಶ್ರಾವಣಕೆರೆ ಘಟಕದ ಗುರಿಕಾರ ಎಸ್.ಎಲ್.ನಾರಾಯಣ ಹೆಬ್ಬಾರ್, ಮುಳ್ಳೇರಿಯ ಮಂಡಲ ಕಾರ್ಯದರ್ಶಿ ಸುಬ್ರಹ್ಮಣ್ಯ ಭಟ್ ಕೆರೆಮೂಲೆ, ಇಂಜಿನಿಯರ್ ಕೆ. ರಾಮಚಂದ್ರ ಶಾಸ್ತ್ರಿಗಳು, ಗುಂಪೆ ವಲಯ ಮಾತೃ ಪ್ರಧಾನೆ ಕಾವೇರಿ ಅಮ್ಮ ಹಾಗೂ ವಿವಿಧ ಗಣ್ಯರು ಶುಭಹಾರೈಸಿದರು

ಪುತ್ತಿಗೆ ಕೃಷ್ಣ ಹೆಬ್ಬಾರ್ ಕೃತಜ್ಞತೆ ಸಲ್ಲಿಸಿದರು. ದಾನಿ ಇ.ಎಸ್. ಮಹಾಬಲೇಶ್ವರ ಭಟ್ ಅವರನ್ನು ಹವ್ಯಕ ಮಹಾಮಂಡಲ ಅಧ್ಯಕ್ಷ ಹರಿಪ್ರಸಾದ್ ಪೆರಿಯಪ್ಪು ಸನ್ಮಾನಿಸಿ ಗೌರವಿಸಿದರು. ಇಂಜಿನಿಯರ್ ಕೆ. ರಾಮಚಂದ್ರ ಶಾಸ್ತ್ರಿ ಅವರನ್ನು ಗೌರವಿಸಲಾಯಿತು. ಗುಂಪೆ ವಲಯದ ಅಧ್ಯಕ್ಷ ಕುಮಾರಸುಬ್ರಹ್ಮಣ್ಯ ಕೊಂದಲಕಾಡು, ಕಾರ್ಯದರ್ಶಿ ಕೇಶವ ಪ್ರಸಾದ ಎಡಕ್ಕಾನ ಅವರ ಕಾರ್ಯವನ್ನು ಶ್ಲಾಘಿಸಲಾಯಿತು. ಪುತ್ತಿಗೆ ಪಂಚಾಯತ್ ಸದಸ್ಯರಾದ ರೂಪಾ ರೈ, ಮಾಜಿ ಸದಸ್ಯ ಪಾಲಾಕ್ಷ ರೈ ಸಹಕಾರವನ್ನು ಸ್ಮರಿಸಲಾಯಿತು. ಡಾ.ವೈ.ವಿ. ಕೃಷ್ಣಮೂರ್ತಿ, ಬದಿಯಡ್ಕ ಶಾಸನ ತಂತ್ರ ಪದಾಧಿಕಾರಿ ಪ್ರಸನ್ನಾ ವಿ.ಚೆಕ್ಕೆಮನೆ, ಮಂಡಲ ಕೋಶಾಧ್ಯಕ್ಷ ಪರಮೇಶ್ವರ ಪೆರುಮುಂಡ, ಶಿಷ್ಯ ಮಾಧ್ಯಮ ಪ್ರಧಾನ ಮಹೇಶಕೃಷ್ಣ ತೇಜಸ್ವಿ, ಗುಂಪೆ ವಲಯದ ಸಹಾಯ ಪ್ರಧಾನರಾದ ಮರುವಳ ಕೃಷ್ಣ ಭಟ್ ಹಾಗೂ ಲೇಖ ವಿಭಾಗದ ಗೋವಿಂದ ಭಟ್, ಚಕ್ಕಣಿಗೆ ದೇವಸ್ಥಾನದ ಆಡಳಿತ ಮೊಕ್ತೇಸರ ಬಾಲಸುಬ್ರಹ್ಮಣ್ಯ ಭಟ್ ಇದ್ದರು. ಈ ಸಂದರ್ಭದಲ್ಲಿ ಸಹೋದರರಾದ ಕೃಷ್ಣ ಹೆಬ್ಬಾರ್, ನಾರಾಯಣ ಹೆಬ್ಬಾರ್, ಸಹೋದರಿ ಪಾರ್ವತಿ ಅವರಿಗೆ ನೂತನ ನಿವಾಸದ ಕೀಲಿ ಕೈಯನು ಹಸ್ತಾಂತರಿಸಲಾಯಿತು. ಪುತ್ತಿಗೆ ನಾರಾಯಣ ಹೆಬ್ಬಾರ್ ಪ್ರಾಸ್ತಾವಿಕ ಮಾತನಾಡಿದರು. ಕೇಶವ ಪ್ರಸಾದ ಎಡಕ್ಕಾನ ಸ್ವಾಗತಿಸಿ, ಗೋವಿಂದ ಭಟ್ ಹಳ್ಳಕೋಡ್ಲು ವಂದಿಸಿದರು.

ಸುತ್ತಮುತ್ತ

ಆಚ್ಲಾಡಿ ದೇವಸ್ಥಾನ, ಬ್ರಹ್ಮಕಲಶೋತ್ಸವ, ವಿಶೇಷ ಯಾಗ

ಕೋಟ: ಆಚ್ಲಾಡಿ ಶ್ರೀ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಅಷ್ಟಬಂಧ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಹಾಗೂ ಸಹಸ್ರ ನಾಳಿಕೇರ ಗಣಪತಿ ಯಾಗವು ಮೇ 3ರಿಂದ 6ರ ವರೆಗೆ ನಡೆಯಲಿದೆ. ಆಗಮ ಬಾಯರಿ ವಿದ್ವಾನ್ ಹೃಷೀಕೇಶ ಬಾರ್ಕೂರು ಅವರ ಪ್ರಧಾನ ಪೌರೋಹಿತ್ಯದಲ್ಲಿ ಧಾರ್ಮಿಕ ವಿಧಿವಿಧಾನಗಳು ನೆರವೇರಲಿವೆ. ಈ ಪ್ರಯುಕ್ತ ಮೇ 4ರಂದು ವಿವಿಧ ಹೋಮ, ಸಂಜೆ ಬ್ರಹ್ಮಕಲಶ ಸ್ಥಾಪನೆ ನೆರವೇರಲಿದೆ. ಮೇ 5ರಂದು ಅಧಿವಾಸ ಹೋಮ, ಬ್ರಹ್ಮಕಲಶಾಭಿಷೇಕ, ಮಹಾಪೂಜೆ ಹಾಗೂ ಮಹಾ ಅನ್ನಪ್ರಸಾದ ವಿತರಣೆ, ರಾತ್ರಿ ಸಹಸ್ರ ನಾಳಿಕೇರ ಯಾಗದ ಅಂಗವಾಗಿ ಅಗ್ನಿಜನನ ಹೋಮ ಹಾಗೂ ಇತರ ಪೂಜೆಗಳು ನಡೆಯಲಿವೆ. ಈ ಸಂದರ್ಭ ನಡೆಯುವ ಧಾರ್ಮಿಕ ಸಭೆಯ ಅಧ್ಯಕ್ಷತೆಯನ್ನು ದೇವಸ್ಥಾನದ ಅಧ್ಯಕ್ಷ ಎ. ಬಾಲಕೃಷ್ಣ ಶೆಟ್ಟಿ ವಹಿಸಲಿದ್ದು, ಆಗಮ ವಿದ್ವಾನ್ ಹೃಷೀಕೇಶ ಬಾಯರಿ ಆಶೀರ್ವಚನ ನೀಡಲಿದ್ದಾರೆ. ಸಾಹಿತಿ ಡಾ. ಎನ್. ಶ್ರೀನಿವಾಸ ಶೆಟ್ಟಿ ಧಾರ್ಮಿಕ ಉಪನ್ಯಾಸ ನೀಡ ಲಿದ್ದಾರೆ.ಕೊಲ್ಲೂರು ದೇಗುಲದ ಅಧ್ಯಕ್ಷ ಬಾಬು ಹೆಗ್ಡೆ ಅಮೃತೇಶ್ವರೀ ದೇಗುಲದ ಅಧ್ಯಕ್ಷ ಆನಂದ ಸಿ. ಕುಂದರ್, ಸಿದ್ಧಿವಿನಾ ಯಕ ದೇಗುಲದ ವ್ಯವಸ್ಥಾಪನ ಸಮಿತಿ ಮಾಜಿ ಅಧ್ಯಕ್ಷ ಚಂದ್ರಶೇಖರ ಶೆಟ್ಟಿ ಆಚ್ಲಾಡಿ, ಉದ್ಯಮಿ ವಸಂತ್ ಶೆಟ್ಟಿ ಸೂರಿಬೆಟ್ಟು, ಬ್ರಹ್ಮಕಲಶೋತ್ಸವಸಮಿತಿ ಅಧ್ಯಕ್ಷಸಂತೋಷ್ ಶೆಟ್ಟಿ ಆಚಾರ್‌ಮನೆ, ಕಾರ್ಯದರ್ಶಿ ಜಯಕರ ಹೆಗ್ಡೆ ಆಡಾರ್‌ಮನೆ ಉಪಸ್ಥಿತರಿರುವರು. ಸಾಂಸ್ಕೃತಿಕ ಕಾರ್ಯಕ್ರಮ ಅಂಗವಾಗಿ ಭಜನೆ, ರಾಘವೇಂದ್ರ ಆಚಾರ್ಯ ಜನ್ಸಾಲೆ ಭಾಗವತಿಕೆಯಲ್ಲಿ ತಾಳಮದ್ದಲೆ ನಡೆಯಲಿದೆ. ಮೇ 6ರಂದು ಸಹಸ್ರ ನಾಳಿಕೇರ ಮಹಾಗಣಪತಿ ಯಾಗ, ಪೂರ್ಣಾಹುತಿ ಹಾಗೂ ತೀರ್ಥ ಪ್ರಸಾದ ವಿತರಣೆ ನಡೆಯಲಿದೆ. ಮಧುವನ ವಿವೇಕ ಯಕ್ಷರಂಗ ದಿಂದ ಯಕ್ಷಗಾನ ನಡೆಯಲಿದೆ ಎಂದು ಪ್ರಕಟನೆ ತಿಳಿಸಿದೆ.

ಆಸ್ತಿ ತೆರಿಗೆ: ಶೇ.5ರ ರಿಯಾಯಿತಿ

ಉಡುಪಿ: ಸರಕಾರದ ಆದೇಶದಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿನ ಆಸ್ತಿ ತೆರಿಗೆಯನ್ನು ಪೂರ್ಣವಾಗಿ ಪಾವತಿಸುವ ತೆರಿಗೆದಾರರಿಗೆ ಶೇ.5ರ ರಿಯಾಯಿತಿ ನೀಡಲು ಕಲ್ಪಿಸಿರುವ ಅವಕಾಶದ ಅವಧಿಯನ್ನು 2026–27ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ಮೇ 31ರವರೆಗೆ ವಿಸ್ತರಿಸಲಾಗಿದೆ.

ಮೊದಲನೇ ಪುಟದಿಂದ

ಕೊಳಚೆ ನೀರು

ಬಂಟ್ವಾಳ, ಬಿ.ಸಿ.ರೋಡು,ಪಾಣೆಮಂಗಳೂರು ಪರಿಸರದ ಒಟ್ಟು 10ಕ್ಕೂ ಹೆಚ್ಚುಕಡೆಗಳಲ್ಲಿ ವಸತಿ ಸಂಕೀರ್ಣ, ಮಾಂಸದಂಗಡಿಯ ಕೊಳಕು ನೀರು ನೇರವಾಗಿ ನೇತ್ರಾವತಿ ನದಿಯ ಒಡಲಿಗೆ ಸೇರುತ್ತಿದೆ. ಕೆಲವರು ನದಿ ತೀರದಲ್ಲಿ ತ್ಯಾಜ್ಯವಸ್ತುಗಳನ್ನು ಎಸೆಯುತ್ತಿರುವುದು ಕಂಡು ಬರುತ್ತಿದೆ.ಇದೆಲ್ಲಾ ದೃಶ್ಯ ಕಣ್ಣಿಗೆ ಕಾಣುವಂತಿದ್ದರೂ ಪುರಸಭೆ ಸಂಬಂಧಿಸಿದವರಿಗೆ ನೋಟಿಸ್ ಜಾರಿಗಷ್ಟೇ ಸೀಮಿತಗೊಳಿಸಿ ಬಳಿಕ ರಾಜಕೀಯ ಒತ್ತಡಕ್ಕೆ ಮಣಿದ ಅಲ್ಲಿಗೆ ಕಡತ ಮುಚ್ಚಿ ಹಾಕಲಾಗುತ್ತದೆ.ಅದರ ಪರಿಣಾಮ ಸಾರ್ವಜನಿಕರು ಇದೇ ಕೊಳಚೆ ನೀರು ಸೇವಿಸಬೇಕಾಗಿದೆ. ಪುರಸಭೆ, ಪಾಲಿಕೆಯೇನೋ ಈ ನೀರನ್ನು ಶುದ್ಧೀಕರಣಗೊಳಿಸಲಾಗುತ್ತದೆ ಎಂಬ ಉತ್ತರ ನೀಡುತ್ತಿದೆ. ಆದರೆ ಕೊಳಚೆ ನೀರು ನೇತ್ರಾವತಿಗೆ ಹರಿಯುವ ದೃಶ್ಯ ಕಂಡರೆ ಮನುಷ್ಯನಾದವ ನೀರು ಕುಡಿಯುವಂತಿಲ್ಲ. ಬಂಟ್ವಾಳ ಪುರಸಭಾ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಇನ್ನೂ ಅನುಷ್ಠಾನಕ್ಕೆ ಬಾರದಿರುವುದು ಕೂಡ ತ್ಯಾಜ್ಯ ,ಕೊಳಚೆ ನೀರು ನೇತ್ರಾವತಿ ಒಡಲಿಗೆ ಸೇರಲು ಕಾರಣವಾಗಿದೆ. ಅನುದಾನ ಮಂಜೂರಾದರೂ ಜಮೀನಿನ ವಿವಾದದಿಂದಾಗಿ ಈ ಯೋಜನೆ ಇನ್ನು ಕಾರ್ಯಗತವಾಗಿಲ್ಲ.ಅಧಿಕಾರಿಗಳು ಕುಳಿತು ಈ ಸಮಸ್ಯೆ ಬಗೆಹರಿಸಲು ಮುಂದಾದರೆ ಒಳಚರಂಡಿ ಯೋಜನೆ ಜಾರಿಯಾಗಿ ನೇತ್ರಾವತಿಯು ಸ್ವಚ್ಛವಾಗಿ ಹರಿಯಬಹುದು.

ನೀರು

ಆದರೆ ನೇತ್ರಾವತಿ ನದಿ ಗರ್ಭದಲ್ಲಿರುವ ಶಿವನ ಉದ್ಭವ ಲಿಂಗಕ್ಕೆ ಸನಾತನ ಕಾಲದಿಂದ ನಡೆದುಕೊಂಡು ಬರಲಾಗುತ್ತಿದ್ದ ಶಿವರಾತ್ರಿ ವಿಶೇಷ ಪೂಜೆಯು ನಡೆಯದಂತಾಗಿ ಭಕ್ತರಿಗೆ ನೋವು ಮತ್ತು ನಿರಾಸೆ ಆಗಿದೆ. ಗೇಟಿನ ಗಾತ್ರವನ್ನು ತಗ್ಗಿಸಿ ಮಾರ್ಚ್ ತಿಂಗಳ ನಂತರ ಗೇಟಿನ ಗಾತ್ರವನ್ನು ಹೆಚ್ಚಿಸಲು ತನ್ಮೂಲಕ ಪರಂಪರಾಗತವಾಗಿ ನಡೆಯುತ್ತಿದ್ದ ಪೂಜಾ ವಿಧಿ ವಿಧಾನವನ್ನು ನಡೆಸುವಂತಾಗಲು ಅವಕಾಶ ಕಲ್ಪಿಸಬೇಕೆಂಬ ಭಕ್ತರ ಮನವಿಗೆ ಈವರೆಗಿನ ಮೂರು ವರ್ಷಗಳಲ್ಲಿ ಮಾನ್ಯತೆ ದೊರಕಿಲ್ಲ.

ಕೊರತೆ

ಹೀಗೆ ಕಸ ಸಂಗ್ರಹದ ವಾಹನಗಳು ಬಾರದ ಕಾರಣ ಅನಿವಾರ್ಯವಾಗಿ ಜನರು ರಸ್ತೆ ಬದಿ ಅಥವಾ ಖಾಲಿ ಜಾಗಗಳಲ್ಲಿ ಕಸ ಎಸೆಯುವಂತಾಗಿದೆ. ಕಸ ವಿಲೇವಾರಿಯಲ್ಲಿನ ಈ ವ್ಯವಸ್ಥಿತ ವೈಫಲ್ಯ ಮುಚ್ಚಿಕೊಳ್ಳಲು ನಗರಸಭೆ ಜನರ ಮೇಲೆ ದಂಡ ಹೇರುತ್ತಿದೆ ಎಂಬ ಟೀಕೆಗಳು ವ್ಯಕ್ತವಾಗಿವೆ.

ಧರಣಿ

ಸೂರಿನ ನಿರೀಕ್ಷೆಯಲ್ಲಿ ಹೆಚ್ಚಿನ ಮಹಿಳೆಯರು ಧರಣಿಯಲ್ಲಿ ಪಾಲ್ಗೊಂಡಿದ್ದಾರೆ. ಸೋಮವಾರ ಕಂದಾಯ ಇಲಾಖೆಯ ಅಧಿಕಾರಿಗಳಾಗಲಿ, ಜನಪ್ರತಿನಿಗಳಾಗಲಿ ಧರಣಿ ಸ್ಥಳಕ್ಕೆ ಭೇಟಿ ನೀಡಿಲ್ಲ, ತಮ್ಮ ಸಮಸ್ಯೆಯನ್ನು ಆಲಿಸಿಲ್ಲ ಎಂದು ಪ್ರತಿಭಟನೆಗಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸುಂಟಿಕೊಪ್ಪ ಮತ್ತು ಮಾದಾಪುರ ಪೊಲೀಸ್ ಸಿಬ್ಬಂದಿಗಳು ಧರಣಿ ಸ್ಥಳಕ್ಕೆ ಭೇಟಿ ಮಾತುಕತೆ ನಡೆಸಿದರು. ಧರಣಿಯಲ್ಲಿ ಶಿವಪ್ಪ, ಸೋಮು, ಪಿ.ಕೆ. ಆನಂದ, ಬಿ.ಆರ್. ಸುದೀಪ್, ದಿವ್ಯ, ರವಿ, ಅಣ್ಣು, ಗೀತಾಮಣಿ, ಗೀತಾ, ಸೇರಿದಂತೆ ವಯಸ್ಸಾದ ಮಹಿಳೆಯರು ಧರಣಿಯಲ್ಲಿ ಭಾಗವಹಿಸಿದ್ದಾರೆ.

ಪ್ರತಿಭಾವಂತ ವಿದ್ಯಾರ್ಥಿನಿ ಸಜನಿಗೆ ನೆರವು | ವಡ್ಡರ್ಸೆಯಲ್ಲಿ 'ಪ್ರತಿಭಾ ನಿಲಯ' ಲೋಕಾರ್ಪಣೆ

ಉಡುಪಿ ಯಕ್ಷಗಾನ ಕಲಾರಂಗದಿಂದ 93ನೇ ಮನೆ ಹಸ್ತಾಂತರ




ಉಡುಪಿ: ಕಲೆ ಮತ್ತು ಸಮಾಜಸೇವೆಯ ಅಪೂರ್ವ ಸಂಗಮವಾಗಿರುವ ಯಕ್ಷಗಾನ ಕಲಾರಂಗವು ತನ್ನ 93ನೇ ಆಸರೆಯ ಮನೆಯನ್ನು ಬ್ರಹ್ಮಾವರ ತಾಲೂಕಿನ ವಡ್ಡರ್ಸೆಯಲ್ಲಿ ವಿದ್ಯಾರ್ಥಿನಿ ಸಜನಿಗೆ ಹಸ್ತಾಂತರಿಸುವ ಮೂಲಕ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದೆ.

ವಿದ್ಯಾಪೋಷಕ್ ಯೋಜನೆಯಡಿ ದ್ವಿತೀಯ ಪಿಯುಸಿಯ ಪ್ರತಿಭಾವಂತ ವಿದ್ಯಾರ್ಥಿನಿ ಸಜನಿ (ಸರಸ್ವತಿ ಮತ್ತು ಬಸವ ಪೂಜಾರಿ ದಂಪತಿ ಪುತ್ರಿ) ಕುಟುಂಬಕ್ಕಾಗಿ ಈ ಮನೆಯನ್ನು ನಿರ್ಮಿಸಲಾಗಿದೆ. ಮುಂಬೈಯ ವಿಂಡ್ಸರ್ ರೆಫ್ರೆಕ್ಟರೀಸ್ ಪ್ರೈ.ಲಿ. ಸಂಸ್ಥೆಯ ಸಿಇಒ ಪ್ರಜ್ಞಾ ಶೆಟ್ಟಿ ಅವರು ದಯಾಶಂಕರ ಶೆಟ್ಟಿ ಮತ್ತು ಪ್ರತಿಭಾ ಶೆಟ್ಟಿ ಅವರ ಗೌರವಾರ್ಥವಾಗಿ ಸಂಸ್ಥೆಯ ಸಿಎಸ್‌ಆರ್ ನಿಧಿಯಡಿ ಈ 'ಪ್ರತಿಭಾ ನಿಲಯ'ವನ್ನು ಪ್ರಾಯೋಜಿಸಿದ್ದಾರೆ.

ಪಾರದರ್ಶಕತೆಗೆ ಹೆಸರುವಾಸಿ

ನೂತನ ಮನೆಯನ್ನು ಉದ್ಘಾಟಿಸಿ ಮಾತನಾಡಿದ ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರು, 'ಯಕ್ಷಗಾನ ಕಲಾರಂಗದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮತ್ತು ಶಿಸ್ತು ಅತ್ಯಂತ ಪಾರದರ್ಶಕವಾಗಿದೆ. ಇಲ್ಲಿ ಯಾವುದೇ ಪ್ರಭಾವಗಳು ಕೆಲಸ ಮಾಡದು. ಅವರ ಸಮಯಪ್ರಜ್ಞೆ ಎಷ್ಟಿದೆಯೆಂದರೆ, ಕಾರ್ಯಕ್ರಮಕ್ಕೆ ಸ್ವಲ್ಪ ವಿಳಂಬವಾಗಿ ಬಂದರೂ ನಮಗೆ ಅಪರಾಧಿ ಪ್ರಜ್ಞೆ ಕಾಡುವಂತೆ ಮಾಡುತ್ತದೆ ಎಂದು ಸಂಸ್ಥೆಯ ಕಾರ್ಯವೈಖರಿಯನ್ನು ಶ್ಲಾಘಿಸಿದರು.

ನಿವೃತ್ತ ಪ್ರಾಧ್ಯಾಪಕ ಉಪೇಂದ್ರ ಸೋಮಯಾಜಿ ಮಾತನಾಡಿ, ಇಂದಿನ ಕಾಲದಲ್ಲಿ ಇಂತಹ ಸಮಾಜಮುಖಿ ಸಂಘಟನೆ ಇರುವುದೇ ನಾಡಿನ ಹೆಮ್ಮೆ ಎಂದರು. ಅಧ್ಯಕ್ಷತೆ ವಹಿಸಿದ್ದ ಮಾಜಿ ಲಯನ್ಸ್ ಗವರ್ನರ್ ವಿ.ಜಿ. ಶೆಟ್ಟಿ ಅವರು ಪ್ರಾಯೋಜಕತ್ವ ವಹಿಸಿದ ಪ್ರಜ್ಞಾ ಶೆಟ್ಟಿಯವರಿಗೆ ಕೃತಜ್ಞತೆ ಸಲ್ಲಿಸಿದರು.

ಗಣ್ಯರ ಉಪಸ್ಥಿತಿ

ವೇದಿಕೆಯಲ್ಲಿ ಚನ್ನರಾಯಪಟ್ಟಣದ ಹಿರಿಯ ನ್ಯಾಯಾಧೀಶ ಅರುಣಾ ಸೋಮನಾಥ ಹೆಗ್ಡೆ ವಕೀಲ ಬನ್ನಾಡಿ ಸೋಮನಾಥ ಹೆಗ್ಡೆ, ಪ್ರಾಂಶುಪಾಲ ಜಗದೀಶ ನಾವುಡ, ಡಾ. ಬಿ. ಜಗದೀಶ ಶೆಟ್ಟಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಪಿ. ಕಿಶನ್ ಹೆಗ್ಡೆ, ವಿಶ್ವನಾಥ ಶೆಣೈ ಹಾಗೂ ಇತರ ಪದಾಧಿಕಾರಿಗಳು ಭಾಗವಹಿಸಿದ್ದರು.

ಸಂಸ್ಥೆಯ ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ನಾರಾಯಣ ಎಂ. ಹೆಗಡೆ ವಂದಿಸಿದರು. ಕಾರ್ಯದರ್ಶಿ ಮುರಲಿ ಕಡೆಕಾರ್ ಕಾರ್ಯಕ್ರಮ ನಿರೂಪಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಲಾ ಸೇವೆ ಜೊತೆ ವಿದ್ಯಾರ್ಥಿಗಳ ಬದುಕಿಗೆ ಬೆಳಕು

ಎಸ್ಸೆಸ್ಸೆಲ್ಸಿಯಲ್ಲಿ ಶೇ. 98 ಹಾಗೂ ಪ್ರಥಮ ಪಿಯುಸಿಯಲ್ಲಿ ಶೇ. 97 ಅಂಕ ಗಳಿಸಿ ಸಾಧನೆ ಮಾಡಿರುವ ಸಜನಿ ಅವರ ಶೈಕ್ಷಣಿಕ ಸಾಧನೆಯನ್ನು ಗುರುತಿಸಿ ಯಕ್ಷಗಾನ ಕಲಾರಂಗ ಈ ಆಸರೆಯ ಯೋಜನೆಯನ್ನು ಕೈಗೆತ್ತಿಕೊಂಡಿತ್ತು. ಕೇವಲ ಕಲೆ ಮಾತ್ರವಲ್ಲದೆ, ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಬದುಕಿಗೆ ಬೆಳಕಾಗುವ ಕಲಾರಂಗದ ಸೇವೆಗೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

ಶೃಂಗೇರಿ ಶಂಕರ ಮಠ, ನಾಗಾಚಲ ಶ್ರೀ ಅಯ್ಯಪ್ಪಸ್ವಾಮಿ, ಶ್ರೀ ದುರ್ಗಾಪರಮೇಶ್ವರಿ ದೇಗುಲ

17 ಅಡಿ ಎತ್ತರದ ನೂತನ ರಥ ಸಮರ್ಪಣೆ



ಕುಂದಾಪುರ: ಆನೆಗುಡ್ಡೆ ಕುಂಭಕಾಶಿಯ ಶ್ರೀ ಶೃಂಗೇರಿ ಶಂಕರ ಮಠ, ನಾಗಾಚಲ ಶ್ರೀ ಅಯ್ಯಪ್ಪ ಸ್ವಾಮಿ ಮತ್ತು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ಅಯ್ಯಪ್ಪ ಸ್ವಾಮಿ ದೇವರಿಗೆ ಕೃಷ್ಣಮೂರ್ತಿ ಮಂಜರು ಮಾರಣಕಟ್ಟೆ ಕೊಡುಗೆಯಾಗಿ ನೀಡಿದ ನೂತನ ರಥವನ್ನು ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠಾಧೀಶ್ವರ ಶ್ರೀ ಶ್ರೀವಿಧುಶೇಖರ ಭಾರತೀ ಮಹಾಸ್ವಾಮಿಗಳವರ ಅಮೃತಹಸ್ತದಿಂದ ಶ್ರೀ ದೇವರಿಗೆ ವಿಶೇಷಪೂಜೆ ಸಲ್ಲಿಸಿ ಸಮರ್ಪಿಸಲಾಯಿತು.

ಸುಮಾರು 17 ಅಡಿ ಎತ್ತರದ 20 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ರಥಶಿಲ್ಪಿ ರಾಜಗೋಪಾಲ ಆಚಾರ್ಯ ಅವರು ರಥವನ್ನು ನಿರ್ಮಿಸಿದ್ದಾರೆ.

ಈ ಸಂದರ್ಭದಲ್ಲಿ ಶ್ರೀಕೃಷ್ಣ ಅಡಿಗರು ನೀಲಾವರ, ನೂತನ ರಥ ಸಮರ್ಪಣೆಯ ಸೇವಾಕರ್ತ ದಾನಿ ಹೈದರಾಬಾದ್ ಉದ್ಯಮಿ ಮಾರಣಕಟ್ಟೆ ಕೃಷ್ಣಮೂರ್ತಿ ಮಂಜರು ಹಾಗೂ ಶಾಂತಿ ದಂಪತಿ, ಶೃಂಗೇರಿ ಶ್ರೀ ಶಾರದಾ ಪೀಠದ ಪ್ರಾಂತೀಯ ಧರ್ಮಾಧಿಕಾರಿ ಬಡಾಕೆರೆ ಲೋಕೇಶ ಅಡಿಗ, ಕೋಟೇಶ್ವರದ ರಥ ಶಿಲ್ಪಿ ರಾಜಗೋಪಾಲ ಆಚಾರ್ಯ, ಕುಂಭಾಶಿ ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನದ ವಿಶ್ರಾಂತ ಆಡಳಿತ ಧರ್ಮದರ್ಶಿ ಕೆ. ಸೂರ್ಯನಾರಾಯಣ ಉಪಾಧ್ಯಾಯ, ಕುಂಭಾಶಿ ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನದ ಆಡಳಿತ ಧರ್ಮದರ್ಶಿ ಕೆ. ಶ್ರೀರಮಣಉಪಾಧ್ಯಾಯ,ಧರ್ಮದರ್ಶಿ ಕೆ.ಪದ್ಮನಾಭ ಉಪಾಧ್ಯಾಯ, ಡಾ.ರಾಮ ಪ್ರಕಾಶ್ ಕಲ್ಲುಗುಡ್ಡೆ, ಹಟ್ಟಿಯಂಗಡಿ ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದ ಆಡಳಿತ ಧರ್ಮದರ್ಶಿ ಬಾಲಚಂದ್ರ ಭಟ್, ಬೀಜಾಡಿ ದೊಡ್ಮನೆ ಶ್ರೀ ಮುಖ್ಯಪ್ರಾಣ ದೇವಸ್ಥಾನದಅರ್ಚಕರವೈ.ಎನ್.ವೆಂಕಟೇಶ ಭಟ್, ಹಿರಿಯ ಸಾಹಿತಿ ಪ್ರೊ. ಶಂಕರ ರಾವ್ ಕಾಳಾವರ, ಶ್ರೀ ಶೃಂಗೇರಿ ಶಂಕರ ಮಠದ ಪ್ರಮುಖರಾದ ಲಕ್ಷ್ಮೀಶ ಅಡಿಗ ಬಡಾಕೆರೆ, ನಾಗೇಂದ್ರ ಅಡಿಗ ಬಡಾಕೆರೆ, ಕೋಟೇಶ್ವರ ಶ್ರೀ ಕೋಟಿಲಿಂಗೇಶ್ವರ ದೇಗುಲ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಕೃಷ್ಣದೇವ ಕಾರಂತ್ ಕೋಣಿ, ಕೋಟೇಶ್ವರ ಶ್ರೀ ಕೋಟಿಲಿಂಗೇಶ್ವರ ದೇಗುಲದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಮಾರ್ಕೋಡು ಗೋಪಾಲಕೃಷ್ಣ ಶೆಟ್ಟಿ, ಮಣಿಪಾಲ ಫೆಡರೇಶನ್ ಮಾಜಿ ಅಧ್ಯಕ್ಷ ಹರಿಯಣ್ಣ ಚಾತ್ರಬೆಟ್ಟು, ಧಾರ್ಮಿಕ ಮುಖಂಡ ಸುಬ್ರಹ್ಮಣ್ಯ ಶೆಟ್ಟಿ ದಾಮೋದರ ಶರ್ಮ ಬಾರಕೂರು, ಹಿರಿಯ ಪರಿಸರವಾದಿ ಕೊರ್ಗಿ ವಿಠಲ ಶೆಟ್ಟಿ ನಿವೃತ್ತ ಮೆಸ್ಕಾಂ ಅಧಿಕಾರಿ ಬಾಬಣ್ಣ ಪೂಜಾರಿ, ಪ್ರಭಾಕರ ಕುಂಭಾಶಿ, ದೇವರ ನಾನಾ ಸಮಿತಿಯ ಪ್ರಮುಖರು, ಮಠದ ಭಕ್ತರು ಉಪಸ್ಥಿತರಿದ್ದರು.

ಕೊಕ್ಕರ್ಣೆ ಸಿಂಡಿಕೇಟ್ ರೈತರ ಸೇವಾ ಸಹಕಾರಿ ಸಂಘ ನಿಯಮಿತದ ಸಾಧನೆ

ರೂ. 1290 ಕೋಟಿ ವ್ಯವಹಾರ, 5.29 ಕೋಟಿ ಲಾಭ

ಬ್ರಹ್ಮಾವರ: ತಾಲೂಕಿನ ಪ್ರತಿಷ್ಠಿತ ಸಹಕಾರಿ ಸಂಘ ಸಿಂಡಿಕೇಟ್ ರೈತರ ಸೇವಾ ಸಹಕಾರಿ ಸಂಘ ನಿಯಮಿತ ಕೊಕ್ಕರ್ಣೆಯು 2025–26ನೇ ಸಾಲಿನಲ್ಲಿ 1290 ಕೋಟಿ ರೂ. ವಾರ್ಷಿಕ ವ್ಯವಹಾರ ನಡೆಸಿ 5.29 ಕೋಟಿ ರೂ. ಲಾಭಗಳಿಸಿದೆ ಎಂದು ಅಧ್ಯಕ್ಷ ಬಿ. ಅಶೋಕ್ ಕುಮಾರ್ ಶೆಟ್ಟಿ ಮೈರ್ಮಾಡಿ ಕರ್ಜೆ ತಿಳಿಸಿದ್ದಾರೆ.



ಸುವರ್ಣ ಮಹೋತ್ಸವದ ಹೊಸ್ತಿಲಲ್ಲಿರುವ ಸಂಘವು ಆರ್ಥಿಕ ವರ್ಷಾಂತ್ಯಕ್ಕೆ ಒಟ್ಟು 28006 ಸದಸ್ಯರನ್ನು ಹೊಂದಿದ್ದು ವರದಿ ವರ್ಷಾಂತ್ಯಕ್ಕೆ 186.84 ಕೋಟಿ ಠೇವಣಿ ಸಂಗ್ರಹಿಸಿದೆ. ಕಳೆದ ಬಾರಿ ಶೇ.18ಡಿವಿಡೆಂಡ್ ಅನ್ನುಘೋಷಿಸಲಾಗಿದೆ.

ಸಂಘವು ಶೂನ್ಯ ಬಡ್ಡಿದರದ ಬೆಳೆ ಸಾಲ ಮತ್ತು ಪಶುಸಂಗೋಪನಾ ಸಾಲವನ್ನು ಬ್ರಹ್ಮಾವರ ತಾಲೂಕಿನಲ್ಲಿಯೇ ಅತೀ ಹೆಚ್ಚು ವಿತರಣೆ ಮಾಡಿರುವ ಹೆಮ್ಮೆಯ ರೈತ ಸೇವಾ ಸಹಕಾರಿ ಸಂಘವಾಗಿದೆ. ಅಲ್ಲದೆ ಗ್ರಾಹಕರ ಅನುಕೂಲಕ್ಕಾಗಿ ಚಿನ್ನಾಭರಣ ಈಡಿನ ಸಾಲ, ಗೃಹ ನಿರ್ಮಾಣ, ವಾಹನ ಖರೀದಿ ಸ್ವಸಹಾಯ ಗುಂಪು ಸಾಲ, ಉಚಾಪತಿ ಸಾಲ, ಉತ್ಪತ್ತಿ ಈಡಿನ ಸಾಲ, ಸೇರಿದಂತೆ ವಿವಿಧ ರೀತಿಯ ಸಾಲ ಸೌಲಭ್ಯವನ್ನು ಸದಸ್ಯರಿಗೆ ನೀಡುತ್ತಿದ್ದು, 2025–26ನೇ ಸಾಲಿನ ವರ್ಷಾಂತ್ಯಕ್ಕೆ 169.35 ಕೋಟಿ ರೂ ಒಟ್ಟು ಸಾಲ ಹೊರಬಾಕಿಯನ್ನು ಹೊಂದಿ 97.39 ಶೇ ವಸೂಲಾತಿಯನ್ನು ದಾಖಲಿಸಿದೆ. ಸಂಘವು ಒಟ್ಟು 13.16 ಕೋಟಿ ರೂ ನಿಧಿ ಹಾಗೂ 62.92 ಕೋಟಿ ರೂ ಹೂಡಿಕೆ ಹೊಂದಿದ್ದು, ಒಟ್ಟು236.18 ಕೋಟಿ ರೂ ದುಡಿಯುವ ಬಂಡವಾಳವನ್ನು ಹೊಂದಿದೆ. ಸಂಘವು ಏಳು ಶಾಖೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಪ್ರಧಾನ ಕಚೇರಿ ಮತ್ತು ಕೊಕ್ಕರ್ಣೆ ಶಾಖೆಗೆ ಗೋದಾಮು–ಒಳಗೊಂಡಂತೆ ನೂತನ ಸುಸಜ್ಜಿತ ಕಟ್ಟಡ ನಿರ್ಮಾಣದ ರೂಪುರೇಷೆ ಸಿದ್ಧಗೊಂಡಿದ್ದು ಶಿಲಾನ್ಯಾಸಕ್ಕೆ ದಿನಾಂಕ ನಿಗದಿ ಪಡಿಸಲಾಗಿದೆ. ಸಂಘವು ಬ್ಯಾಂಕಿಂಗ್ ವ್ಯವಹಾರ ಅಲ್ಲದೇ ಅತೀಕಡಿಮೆಬೆಲೆಯಲ್ಲಿ ರಾಸಾಯನಿಕ ರಸಗೊಬ್ಬರ, ಸಾವಯವ ಗೊಬ್ಬರ, ಕೃಷಿ ಉಪಕರಣ, ಬಿತ್ತನೆ ಬೀಜ, ಗೃಹೋಪಯೋಗಿ ವಸ್ತುಗಳು, ಸಿಮೆಂಟ್, ಮತ್ತು ಕಟ್ಟಡ ನಿರ್ಮಾಣ ಸಾಮಾಗ್ರಿಗಳ ಮಾರಾಟ ಮಳಿಗೆಯನ್ನು ಹೊಂದಿದೆ.

ಸಂಘವು ಸರ್ಕಾರದ ಮಹತ್ವಾಕಾಂಕ್ಷೆಯ ಬೆಳೆ ವಿಮೆ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯವ್ಯಾಪ್ತಿಯ ರೈತರಿಗೆ 2016ರಿಂದಲೂ ಅಳವಡಿಸಿದ್ದು ಬ್ರಹ್ಮಾವರ ತಾಲೂಕಿನಲ್ಲಿಯೇ ಅತೀ ಹೆಚ್ಚು ಬೆಳೆ ವಿಮೆ ದೊರಕಿಸಿ ಕೊಟ್ಟ ಸಹಕಾರಿ ಸಂಘವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಯಶಸ್ವಿನಿ ಯೋಜನೆಯಲ್ಲಿಯೂ ಕೂಡ ಸಂಘದ ಹೆಚ್ಚು ಸದಸ್ಯರನ್ನು ಅಳವಡಿಸಲಾಗಿದೆ.

ಸೇವೆಗಳು

ಇ-ಸ್ಟಾಂಪಿಂಗ್, ಆರ್.ಟಿ.ಜಿ.ಎಸ್/ನೆಫ್ಟ್ ಸೇಫ್ ಡೆಪಾಸಿಟ್ ಲಾಕರ್,ಉಚಿತ ಶವ ಶಿಥಿಲೀಕರಣ ಪೆಟ್ಟಿಗೆ,ಕೃಷಿ ಉತ್ಪನ್ನ ಶೇಖರಣಾ ಗೋದಾಮು ರೈತರ ವಿಚಾರಣಾ ಸಂಕಿರಣ ಕಾರ್ಯಕ್ರಮ ಬೆಳೆ ಸಮೀಕ್ಷೆ ಬಗ್ಗೆ ವಿಶೇಷ ಕಾಳಜಿ ಮತ್ತು ರೈತರಿಗೆ ಮಾಹಿತಿ ಮುಂತಾದ ಸೇವೆಗಳು ಲಭ್ಯವಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಜಮುಖಿ ಕಾರ್ಯ

ಸಾಮಾಜಿಕ ಜವಾಬ್ದಾರಿ ಹಾಗೂ ಹಲವಾರು ಸಮಾಜಮುಖಿ ಕಾರ್ಯಗಳೊಂದಿಗೆ ಮುಂಚೂಣಿಯಲ್ಲಿರುವ ಸಹಕಾರಿ ಸಂಘವು ಕಾರ್ಯವ್ಯಾಪ್ತಿಯ ವಿದ್ಯಾರ್ಥಿಗಳ ಶಿಕ್ಷಣಕ್ಕೆ 12 ಲಕ್ಷಕ್ಕೂ ಅಧಿಕ ಪ್ರೋತ್ಸಾಹ ಧನ ವಿತರಿಸಿದ್ದು, ಸಾರ್ವಜನಿಕ ಉಪಕಾರ ನಿಧಿ, ಸಂಘ ಸಂಸ್ಥೆ ಮತ್ತು ಧಾರ್ಮಿಕ ದೇಣಿಗೆ ನಿಧಿ, ರೈತರ ಕಲ್ಯಾಣ ನಿಧಿಯಿಂದ ಸಹಾಯ ಹಸ್ತವನ್ನು ನೀಡುತ್ತಾ ಬಂದಿರುತ್ತದೆ. ಮರಣೋತ್ತರ ನಿಧಿಯ ಮೂಲಕ ಸಾಲಗಾರ ಸದಸ್ಯರು ಮರಣ ಹೊಂದಿದ ಸಂದರ್ಭದಲ್ಲಿ ಸದಸ್ಯರ ಅವಲಂಬಿತರನ್ನು ಋಣ ಮುಕ್ತಗೊಳಿಸಲಾಗುತ್ತಿದೆ ಎಂದು ಬಿ. ಅಶೋಕ್ ಕುಮಾರ್ ತಿಳಿಸಿದ್ದಾರೆ.

ಪ್ರತಿಭೆ ಅನಾವರಣಗೊಳ್ಳಲು ಬೇಸಿಗೆ ಶಿಬಿರ ಸಹಕಾರಿ: ವಂದನಾ



ಕೋಟ: ದೈಹಿಕ ಕ್ಷಮತೆ, ಮಾನಸಿಕ ನೆಮ್ಮದಿಗೆ ಶಿಬಿರಗಳು ಸಹಕಾರಿ. ಈ ನಿಟ್ಟಿನಲ್ಲಿ ಇಲ್ಲಿನ ಈ ಶಿಬಿರವನ್ನು ಅರ್ಥಪೂರ್ಣಗೊಳಿಸಿಕೊಳ್ಳಿ ಎಂದು ಪಾಂಡೇಶ್ವರ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವಂದನಾ ಹೇಳಿದರು.

ಸೋಮವಾರ ಪಂಚಾಯತ್ ಸಭಾಂಗಣದಲ್ಲಿ ಪಾಂಡೇಶ್ವರ ಗ್ರಾಮ ಪಂಚಾಯತ್ ಹಾಗೂ ಅರಿವು ಕೇಂದ್ರ ಡಿಜಿಟಲ್ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ಪಾಂಡೇಶ್ವರ ಇವರ ಆಶ್ರಯದಲ್ಲಿ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ ಕಲರವ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳಲ್ಲಿ ಸಾಕಷ್ಟು ಪ್ರತಿಭೆಗಳಿವೆ ಅದನ್ನು ಹೊರಗೆಳೆಯಲು ಇಂತಹ ಬೇಸಿಗೆ ಶಿಬಿರಗಳು ಸಹಕಾರಿ ಎಂದರು.

ಮಾಜಿ ಪಂಚಾಯತ್ ಪ್ರತಿನಿಧಿ ಚಂದ್ರಮೋಹನ್ ಪೂಜಾರಿ ಮಾತನಾಡಿ, ಪ್ರಸ್ತುತ ಮೊಬೈಲ್, ಟಿವಿ ಯುಗದಲ್ಲಿ ಜ್ಞಾನವೃದ್ಧಿಗೆ ಗ್ರಂಥಾಲಯಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ಪುಸ್ತಕ ಪತ್ರಿಕೆ ಓದುವುದರಿಂದ ಈ ಸಮಾಜದಲ್ಲಿ ನಮ್ಮನ್ನು ವ್ಯಕ್ತಿಯಾಗಿ ರೂಪಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ಸಂಪನ್ಮೂಲ ವ್ಯಕ್ತಿಯಾಗಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಗುಂಡ್ಮಿ ರಾಮಚಂದ್ರ ಐತಾಳ್ ಶಿಬಿರವನ್ನು ಉದ್ಘಾಟಿಸಿ, ಶಿಬಿರಾರ್ಥಿಗಳಿಗೆ ಸಮಗ್ರ ಮಾಹಿತಿಯನ್ನು ನೀಡಿದರು. ಪಾಂಡೇಶ್ವರ ಪಂಚಾಯತ್ ಗ್ರಂಥಪಾಲಕಿ ಜ್ಯೋತಿ ಸ್ವಾಗತಿಸಿದರು. ಉಷಾ ಗಣೇಶ್ ನಿರೂಪಿಸಿ ವಂದಿಸಿದರು.

ಬೈಂದೂರು: ಜೀರ್ಣೋದ್ಧಾರಗೊಂಡ ನಾಕಟ್ಟೆಮನೆ ಹೆಬ್ಬಾಗಿಲು ಉದ್ಘಾಟನೆ



ಬೈಂದೂರು: ಬೈಂದೂರಿನ ನಾಕಟ್ಟೆ ಕುಟುಂಬ ಇಂತಹ ಹಿರಿತನವನ್ನು ಮುಂದುವರಿಸಿರುವುದು ಊರಿಗೆ ಕೀರ್ತಿ ಎಂದು ಪೇಜಾವರ ಮಠಾಧೀಶ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಹೇಳಿದರು.

ಬೈಂದೂರಿನಲ್ಲಿ ಶತಮಾನದ ಹೊಸ್ತಿಲಲ್ಲಿರುವ, ಪ್ರಸ್ತುತ ಜೀರ್ಣೋದ್ಧಾರಗೊಂಡ ನೂತನ ನಾಕಟ್ಟೆಮನೆ ಹೆಬ್ಬಾಗಿಲನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು.

ವತ್ತಿನಣೆ ರಾಘವೇಂದ್ರ ಸ್ವಾಮಿ ಮಠದ (ಕಿರುಮಂತ್ರಾಲಯ) ಅಧ್ಯಕ್ಷ ಸೂಲಿಯಣ್ಣ ಶೆಟ್ಟಿ ಯಡ್ತರೆಯ ಕೋಟಿ ಚೆನ್ನಯ್ಯ ಗರಡಿಯ ಅಧ್ಯಕ್ಷ ಎಸ್. ರಾಜು ಪೂಜಾರಿ, ಶ್ರೀ ಸೇನೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗಿರೀಶ್ ಬೈಂದೂರು, ಬೈಂದೂರು ಬಂಟರ ಸಂಘದ ಮಾಜಿ ಅಧ್ಯಕ್ಷ ಜಗನ್ನಾಥ ಶೆಟ್ಟಿ ನಾಕಟ್ಟೆ, ವತ್ತಿನಕಟ್ಟೆ ಮಹಾಸತಿ ಅಮ್ಮನವರ ದೇವಸ್ಥಾನದ ಸೇವ ಸಮಿತಿ ಅಧ್ಯಕ್ಷ ನಾಗರಾಜ ಶೆಟ್ಟಿ ನಾಕಟ್ಟೆ ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಅಧಿಕಾರಿ ಸುಧಾಕರ ಶೆಟ್ಟಿ ಇಂದ್ರಾಳಿ, ಡಿಯರ್ ಕನೆಕ್ಷನ್ ಹುಬ್ಬಳ್ಳಿ ಕೆ. ಆರ್. ಶೆಟ್ಟಿ ಆರ್. ಎನ್.ಶೆಟ್ಟಿ ಕಂಪನಿ ನಿರ್ದೇಶಕ ಕೆ. ಆನಂದ ಶೆಟ್ಟಿ ನಾಕಟ್ಟೆ ಹೆಬ್ಬಾಗಿಲು ಮನೆ ಕುಟುಂಬದ ಪ್ರಮುಖರಾದ ರಘುರಾಮ ಶೆಟ್ಟಿ ದುಗ್ಗಪ್ಪ ಶೆಟ್ಟಿ ಗೋಪಾಲ ಶೆಟ್ಟಿ ಗಿರಿಜಾ ಶೆಟ್ಟಿ ನಾಗಮ್ಮ ಶೆಟ್ಟಿ ಹಾಗೂ ನಾಕಟ್ಟೆಮನೆಯ ಕುಟುಂಬಸ್ಥರು ಇದ್ದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಾಕಟ್ಟೆ ಕುಟುಂಬದ ನಯನಾ ಆನಂದ ಶೆಟ್ಟಿ ಅವರ ಮಗ ಮಂದಾರ ಎ. ಶೆಟ್ಟಿ ಅವರನ್ನು ಸ್ವಾಮೀಜಿ ಗೌರವಿಸಿದರು. ಆನಂದ ಎನ್. ಶೆಟ್ಟಿ ಪ್ರಾಸ್ತಾವಿಸಿದರು. ನಾಗರಾಜ್ ಎನ್. ಶೆಟ್ಟಿ ಸ್ವಾಗತಿಸಿದರು. ಶಿಕ್ಷಕ ಸುಧಾಕರ್ ಪಿ. ಬೈಂದೂರು ನಿರೂಪಿಸಿದರು. ಪ್ರದೀಪ್ ಕುಮಾರ್ ಶೆಟ್ಟಿ ಕಾರಿಕಟ್ಟೆ ವಂದಿಸಿದರು.

ಟಿಸಿಎಸ್ ಟೆಕ್ ಬೈಟ್ಸ್‌ನಲ್ಲಿ ನಿಟ್ಟೆ ವಿದ್ಯಾರ್ಥಿಗಳು ರನ್ನರ್ ಅಪ್ ಪ್ರಶಸ್ತಿ



ಕಾರ್ಕಳ: ಮಂಗಳೂರಿನಲ್ಲಿ ಐಟಿ ಶಿಕ್ಷಣ ಮಾನದಂಡಗಳ ಮಂಡಳಿಯ ಸಹಯೋಗದೊಂದಿಗೆ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಸಂಸ್ಥೆ ನಡೆಸಿದ ಟಿಸಿಎಸ್ ಟೆಕ್ ಬೈಟ್ಸ್‌ನ 17ನೇ ಆವೃತ್ತಿಯ ಮಂಗಳೂರು ಪ್ರಾದೇಶಿಕ ಫೈನಲ್ಸ್‌ನಲ್ಲಿ ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ ಸೈಬರ್ ಸೆಕ್ಯೂರಿಟಿ ವಿಭಾಗದ 3ನೇ ವರ್ಷದ ಬಿಟೆಕ್ ವಿದ್ಯಾರ್ಥಿಗಳಾದ ಸುಜ್ಞಾನ್ ಡಿ. ದೇವಾಡಿಗ, ಆದಿತ್ಯ ಭಟ್ ಕೆ. ರನ್ನರ್ ಅಪ್ ಪ್ರಶಸ್ತಿ ಪಡೆದಿದ್ದಾರೆ.



ಉಡುಪಿ ಜಿ.ಪಂ. ಸ್ವಚ್ಛ ಶನಿವಾರ ಯೋಜನೆಯ ಅಂಗವಾಗಿ ಇಲ್ಲಿನ ಕೋಟ ಗ್ರಾ.ಪಂ. ವ್ಯಾಪ್ತಿಯ ವಿವಿಧ ಹೆದ್ದಾರಿ ರಸ್ತೆಗಳ ಸ್ವಚ್ಛಗೊಳಿಸುವ ನಡೆಯಿತು. ಪಿಡಿಒ ಉಮೇಶ್,ಲೆಕ್ಕಾಧಿಕಾರಿ ಶೇಖರ್ ಮರವಂತೆ, ಎಸ್‌ಎಲ್‌ಆರ್‌ಎಂ ಘಟಕದ ಮುಖ್ಯಸ್ಥೆ ಭವ್ಯಾ, ಮಾಲತಿ ಶೇಖರ್, ಪಂಚವರ್ಣ ಸಂಘಟನೆಯ ಪರವಾಗಿ ಲಲಿತಾ ಪೂಜಾರಿ ಇದ್ದರು.

ಕೋಟದ ಕಾರಂತ ಥೀಂ ಪಾರ್ಕಿನಲ್ಲಿ ಕೆ.ಸಿ ಕುಂದರ್ ಸ್ಮರಣೆ | ಆರನೇ ಕುಂದಾಪ್ರ ಕನ್ನಡ ಸಾಹಿತ್ಯ ಸಮ್ಮೇಳನ 'ಕಾಂಬ'

ಕುಂದಾಪ್ರದವರ ಬೆಲೆ ಗೊತ್ತಾಗುವುದು ಬೇರೆ ಊರಿನಲ್ಲಿದ್ದಾಗ: ಅಣ್ಣಯ್ಯ ಕುಲಾಲ್



ಕೋಟ: ಕುಂದಾಪ್ರ ಭಾಗದವರ ಬೆಲೆ ತಿಳಿಯುವುದು ಅವರು ಬೇರೆ ಊರಿನಲ್ಲಿದ್ದಾಗ. ಅವರು ಊರಿನಲ್ಲಿ ಇದ್ದಾಗ ಸಾಮಾನ್ಯರಲ್ಲಿ ಸಾಮಾನ್ಯರಂತೆ ಬದುಕುತ್ತಾರೆ. ಅವರ ಸಾಧನೆಗಳು ತಿಳಿಯುವುದೇ ಬೇರೆ ಊರಿನಲ್ಲಿ ಎಂದು ಮಂಗಳೂರಿನ ಖ್ಯಾತ ವೈದ್ಯ ಅಣ್ಣಯ್ಯ ಕುಲಾಲ್ ಹೇಳಿದರು.

ಅವರು ಕೋಟದ ಡಾ. ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ ಪ್ರತಿಷ್ಠಾನ, ಕೋಟತಟ್ಟು ಗ್ರಾಮಪಂಚಾಯತ್, ಗೀತಾನಂದ ಫೌಂಡೇಶನ್, ಬ್ರಹ್ಮಾವರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ಕುಂದಾಪ್ರ ಕನ್ನಡ ಸಾಹಿತ್ಯ ಪರಿಷತ್ತು ಉಡುಪಿ ಜಿಲ್ಲೆ, ಮಂಗಳೂರಿನ ಪುಟ್ಟಣ ಕುಲಾಲ್ ಪ್ರತಿಷ್ಠಾನ ಮತ್ತು ಅರಿವು ಕೇಂದ್ರ ಡಿಜಿಟಲ್ ಗ್ರಂಥಾಲಯ ಮಾಹಿತಿ ಕೇಂದ್ರ ಕೋಟತಟ್ಟು ಸಂಯುಕ್ತ ಆಶ್ರಯದಲ್ಲಿ ಕೋಟದ ಕಾರಂತ ಥೀಂ ಪಾರ್ಕಿನಲ್ಲಿ ಕೆ.ಸಿ ಕುಂದರ್ ಸ್ಮರಣೆಯಲ್ಲಿ ನಡೆದ ಆರನೇ ಕುಂದಾಪ್ರ ಕನ್ನಡ ಸಾಹಿತ್ಯ ಸಮ್ಮೇಳನ ಕಾಂಬವನ್ನು ದೀಪಬೆಳಗಿಸಿ ಉದ್ಘಾಟಿಸಿ ಮಾತನಾಡಿ, ಮಂಗಳೂರಿನಲ್ಲಿ ಮುಂಚೂಣಿಯಲ್ಲಿ ಇರುವವರು ಕುಂದಾಪ್ರದವರು. ಅಲ್ಲಿನ ದೊಡ್ಡ ದೊಡ್ಡ ವೈದ್ಯರು, ಲೆಕ್ಕಪರಿಶೋಧಕರು ಇನ್ನುಳಿದ ಉನ್ನತ ಹುದ್ದೆಯಲ್ಲಿರುವವರು ಮೂಲತಃ ಕುಂದಾಪ್ರದವರು. ಕುಂದಾಪ್ರದವರ ಮುಖ್ಯ ಗುಣವೆಂದರೆ ತಮ್ಮೊಂದಿಗೆ ಬಂದವರನ್ನು ಎಂದಿಗೂ ಕೈ ಬಿಡುವುದಿಲ್ಲ, ನಂಬಿ ಬಂದವರನ್ನು ಬೆಳೆಸುವುದೇ ಕುಂದಾಪ್ರದವರ ಯಶಸ್ಸಿನ ಗುಟ್ಟು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಮಾತನಾಡಿ, ತಮಾಷೆಗಾಗಿ ಕುಂದಾಪ್ರ ಭಾಷೆ ಸೀಮಿತವಾಗಬಾರದು. ಕುಂದಾಪ್ರ ಭಾಷೆಯಲ್ಲಿದೆ ಅದ್ಭುತ ಜ್ಞಾನ ಭಂಡಾರ. ನಾವಾಡುವ ಭಾಷೆಯನ್ನು ಸಹಜವಾಗಿ ಬಳಸಿದರೆ ಭಾಷೆಯು ಉಳಿಯುತ್ತದೆ ಎಂದರು.

ಕಸಾಪ ತಾಲೂಕು ಅಧ್ಯಕ್ಷ ರಾಮಚಂದ್ರ ಐತಾಳ್ ಮಾತನಾಡಿ, ಪೋಷಕರು ಮಕ್ಕಳಿಗೆ ಕುಂದಾಪ್ರ ಕನ್ನಡ ಮಾತನಾಡಲು ಪ್ರೇರೆಪಿಸಬೇಕು ಎಂದರು.

ಸಮ್ಮೇಳನಾಧ್ಯಕ್ಷತೆಯನ್ನು ಚೇತನ್ ನೈಲಾಡಿ ವಹಿಸಿದ್ದರು. ಈ ಸಂದರ್ಭ ವೇದಿಕೆಯಲ್ಲಿ ಸುಬ್ರಾಯ ಆಚಾರ್ ಇದ್ದರು. ಶಿಕ್ಷಕ ನರೇಂದ್ರ ಕುಮಾರ್ ಕೋಟ ಸ್ವಾಗತಿಸಿದರು, ಸೃಷ್ಟಿ ಸಮೀಕ್ಷಾ ನಿರೂಪಿಸಿದರು. ಶಾಶ್ವತ್ ವಂದಿಸಿದರು. ಸತೀಶ್ ವಡ್ಡರ್ಸೆ ಸಂಯೋಜಿಸಿದರು.

ಸಂವಾದ

ಸಭಾ ಕಾರ್ಯಕ್ರಮದ ಬಳಿಕ ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ ಕಾರ್ಯಕ್ರಮ ಜರಗಿತು. ಸಂವಾದದಲ್ಲಿ ಕುಂದಾಪ್ರ ಕನ್ನಡ ಆಚರಣೆಗಳ ಬಗ್ಗೆ, ಪ್ರತಿ ಆಚರಣೆಗೂ ಬಳಸುತ್ತಿದ್ದ ಹಾಡುಗಳ ಬಗ್ಗೆ ಸಮ್ಮೇಳನಾಧ್ಯಕ್ಷರು ಮಾತನಾಡಿದರು. ಎಎಷ್ಟೇ ದೇಶ ಸುತ್ತಿದರೂ ತಾಯಿ ಭಾಷೆ ಮಾತನಾಡಿದರೆ ಮಾತ್ರ ನೆಮ್ಮದಿ ಸಿಗುತ್ತದೆ ಎಂದರು. ಈ ಸಂವಾದದಲ್ಲಿ ಜ್ಯೋತಿ ಸಾಲಿಗ್ರಾಮ, ರವಿ ತಂತ್ರಾಡಿ, ಮಂಜುಳಾ ತೆಕ್ಕಟ್ಟೆ ಸಂಕೇತ ಕುಲಾಲ್ ಸಮನ್ವಯಕಾರರಾಗಿದ್ದರು.